www.prajavani.net

prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮಹಿಳಾ ಮೀಸಲಾತಿ– ಆಡಳಿತದಲ್ಲಿ ಹೆಣ್ನೋಟ

ಚರ್ಚೆ
ಜಾತ್ಯತೀತ, ಸಮಾಜವಾದ, ಸಮಗ್ರತೆ– ಪದಗಳನ್ನು ಸಂವಿಧಾನದ ಪ್ರಸ್ತಾವನೆಯಿಂದ ಕೈಬಿಡುವುದು ಸರಿಯೇ?

ಇಂದಿನಿಂದ ಏಷ್ಯನ್ ಕ್ರೀಡಾಕೂಟ 13

‘ಸ್ಥಿರ ಸರ್ಕಾರದಿಂದಾಗಿ ಮಸೂದೆ ಅಂಗೀಕಾರ’ 12

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 66,009 ▼ | 19,674 ▼ | 82.94 ▲ |

## ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಆಸ್ತಿ ನೋಂದಣಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಎಲ್ಲ ಉಪ ನೋಂದಣಾಧಿಕಾರಿ ಕಚೇರಿಗಳು ಶನಿವಾರದಿಂದ (ಸೆ.23) ಇದೇ 30ರವರೆಗೆ ಪ್ರತಿದಿನ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸಲಿವೆ.

ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ದರಗಳು ಅ.1ರಿಂದಲೇ ಜಾರಿಯಾಗುತ್ತಿದ್ದು, ಹಳೆಯ ಮಾರ್ಗಸೂಚಿ ದರದಲ್ಲೇ ನೋಂದಣಿ ಮಾಡಿಸಲು ಹಾಜರು ಪಡಿಸುವ ದಸ್ತಾವೇಜುಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ, ಉಪ ನೋಂದಣಾಧಿಕಾರಿ ಕಚೇರಿಗಳ ಕೆಲಸದ ಸಮಯವನ್ನು ವಿಸ್ತರಿಸಲಾಗಿದೆ.

ಸೆ.23ರಂದು ನಾಲ್ಕನೇ ಶನಿವಾರವಾದರೂ ಕಚೇರಿಗಳು ಕೆಲಸ ಮಾಡಲಿವೆ. ಈ ಸೌಲಭ್ಯ ಸೆ.30ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ ಎಂದು ನೋಂದಣಿ ಮಹಾಪರಿವೀಕ್ಷಕಿ ಮತ್ತು ಮುದ್ರಾಂಕಗಳ ಆಯುಕ್ತೆ ಬಿ.ಆರ್. ಮಮತಾ ತಿಳಿಸಿದ್ದಾರೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ ಎರಡು ಹಂತಗಳಲ್ಲಿ ಸ್ಥಿರಾಸ್ತಿ ದರ ಪರಿಷ್ಕರಣೆ ಮಾಡಿದೆ.

### ಮೈತ್ರಿಯ ಎರಡನೇ ಇನಿಂಗ್ಸ್ ಆರಂಭಿಸಲು ನಡ್ಡಾ–ಕುಮಾರಸ್ವಾಮಿ ನಿರ್ಧಾರ

# ಕಮಲ ಮುಡಿದ ದಳ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಲೋಕಸಭಾ ಚುನಾವಣೆಯನ್ನು ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡು ಎದುರಿಸಲು ನಿರ್ಧರಿಸಿರುವ ಜಾತ್ಯತೀತ ಜನತಾ ದಳವು (ಜೆಡಿಎಸ್), ಬಿಜೆಪಿ ನೇತೃತ್ವದ ಎನ್‌ಡಿಎಗೆ ಶುಕ್ರವಾರ ಅಧಿಕೃತವಾಗಿ ಸೇರ್ಪಡೆಯಾಗಿದೆ. ಲೋಕಸಭಾ ಚುನಾವಣೆಯ ಸೀಟು ಹಂಚಿಕೆಯ ಪ್ರಕ್ರಿಯೆಯನ್ನು ದಸರಾ ಹಬ್ಬದ ನಂತರ ನಡೆಸಲು ಉಭಯ ಪಕ್ಷಗಳ ಉನ್ನತ ನಾಯಕರು ನಿರ್ಧರಿಸಿದ್ದಾರೆ.

ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡು ರಾಜ್ಯದಲ್ಲಿ 2006–07ರಲ್ಲಿ ಅಧಿಕಾರ ನಡೆಸಿದ್ದವು. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸ್ಥಾನವನ್ನು ವಾಗ್ದಾನದಂತೆ 20 ತಿಂಗಳ ಬಳಿಕ ಬಿಟ್ಟುಕೊಟ್ಟಿಲ್ಲ ಎಂಬ ಕಾರಣಕ್ಕೆ ‘ಮೈತ್ರಿ’ ಸರ್ಕಾರ ಪತನಗೊಂಡಿತ್ತು. ಇದೀಗ ಎರಡೂ ಪಕ್ಷಗಳು ಎರಡನೇ ಇನಿಂಗ್ಸ್ ಆರಂಭಿಸಿವೆ.

10ನೇ ಪುಟ ನೋಡಿ

ಬಿಜೆಪಿ–ಜೆಡಿಎಸ್ ಮೈತ್ರಿ ಕುರಿತು ಎಚ್‌.ಡಿ.ಕುಮಾರಸ್ವಾಮಿ ಅವರೊಂದಿಗೆ ಜೆ.ಪಿ. ನಡ್ಡಾ, ಅಮಿತ್ ಶಾ ಮಾತುಕತೆ ನಡೆಸಿದರು. ಈ ವೇಳೆ ಕುಪೇಂದ್ರ ರೆಡ್ಡಿ, ನಿಖಿಲ್ ಕುಮಾರಸ್ವಾಮಿ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಇದ್ದರು

### ಸೀಟು ಹಂಚಿಕೆ ಪ್ರಸ್ತಾಪವಿಲ್ಲ

2008ರಿಂದ 2023ರ ವರೆಗೆ ನಡೆದ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಉಭಯ ಪಕ್ಷಗಳು ಗೆದ್ದ ಸ್ಥಾನಗಳು, ಮತ ಪ್ರಮಾಣ ಹಾಗೂ ರಾಜ್ಯದಲ್ಲಿ ಯಾವ ಭಾಗದಲ್ಲಿ ಯಾವ ಪಕ್ಷ ಬಲಿಷ್ಠವಾಗಿದೆ, ಮೈತ್ರಿಯಿಂದ ಆಗುವ ಸಾಧಕ ಬಾಧಕಗಳೇನು ಎಂಬ ವಿಷಯಗಳ ಕುರಿತು ಬಿಜೆಪಿ ವರಿಷ್ಠರಿಗೆ ಕುಮಾರಸ್ವಾಮಿ ಮನವರಿಕೆ ಮಾಡಿಕೊಟ್ಟರು. ಶುಕ್ರವಾರದ ಸಭೆಯ ವೇಳೆ ಸೀಟು ಹಂಚಿಕೆಯ ಕುರಿತು ಪ್ರಸ್ತಾಪವಾಗಲಿಲ್ಲ. ಎನ್‌ಡಿಎ ಒಕ್ಕೂಟಕ್ಕೆ ಸೇರಲು ಬಿಜೆಪಿ ತಿಂಗಳುಗಳ ಹಿಂದೆಯೇ ಆಹ್ವಾನ ನೀಡಿತ್ತು. ಇದೀಗ ಆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಎನ್‌ಡಿಎ ಕುಟುಂಬಕ್ಕೆ ಜೆಡಿಎಸ್ ಪಕ್ಷವನ್ನು ಸ್ವಾಗತಿಸುತ್ತೇನೆ. ಜೆಡಿಎಸ್ ಸಹಯೋಗವು ಕರ್ನಾಟಕವನ್ನು ಅಭಿವೃದ್ಧಿಯ ಪಥದತ್ತ ಮುನ್ನಡೆಸಲು, ಬಲಿಷ್ಠ ಭಾರತ ಹಾಗೂ ಬಲಿಷ್ಠ ಎನ್‌ಡಿಎ ನಿರ್ಮಾಣಕ್ಕೆ ದಾರಿ ಮಾಡಿಕೊಡಲಿದೆ

**ಅಮಿತ್ ಶಾ,** ಕೇಂದ್ರ ಗೃಹ ಸಚಿವ, ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ

ಮೈತ್ರಿ ಬಗ್ಗೆ ಮಾತನಾಡುವುದಿಲ್ಲ. 20 ದಿನಗಳ ಹಿಂದೆ ಅಮಿತ್ ಶಾ ಅವರನ್ನು ಭೇಟಿಯಾದ ಸಂದರ್ಭದಲ್ಲೇ ಈ ವಿಷಯವನ್ನು ಸ್ಪಷ್ಟಪಡಿಸಿದ್ದೆ. ಈ ಬಗ್ಗೆ ಮಾತನಾಡಲು ಕುಮಾರಸ್ವಾಮಿ ಇದ್ದಾರೆ. ಪಕ್ಷ ಉಳಿಸಲು ಕುಮಾರಸ್ವಾಮಿ ಹೋರಾಡುತ್ತಿದ್ದಾರೆ. ನನಗೆ ಈ ವಿಷಯ ಮಾತನಾಡುವ ಮನಸ್ಸಿಲ್ಲ

**ಎಚ್‌.ಡಿ.ದೇವೇಗೌಡ,** ಜೆಡಿಎಸ್ ವರಿಷ್ಠ

ಬೆಂಗಳೂರಿಗೆ ನೀರು ಪೂರೈಸುವ ಹಲಗೂರು ಬಳಿಯ ತೊರೆಕಾಡನಹಳ್ಳಿ ಪಂಪ್‌ಹೌಸ್‌ಗೆ ವಿವಿಧ ಸಂಘಟನೆಗಳ ಮುಖಂಡರು ಶುಕ್ರವಾರ ಮುತ್ತಿಗೆ ಹಾಕಲು ಯತ್ನಿಸಿದರು —ಪ್ರಜಾವಾಣಿ ಚಿತ್ರ

### ತಮಿಳುನಾಡಿಗೆ ಕಾವೇರಿ ನೀರು ಹರಿಸುವುದಕ್ಕೆ ಖಂಡನೆ

# ಮಂಡ್ಯ, ಮದ್ದೂರು ಬಂದ್ ಇಂದು

ಪ್ರಜಾವಾಣಿ ವಾರ್ತೆ

**ಮಂಡ್ಯ:** ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ಶನಿವಾರ ಮಂಡ್ಯ, ಮದ್ದೂರು ಬಂದ್‌ಗೆ ಕರೆ ನೀಡಿವೆ.

ಬಸ್, ಆಟೊ, ಲಾರಿ ಮಾಲೀಕರ ಸಂಘಟನೆಗಳು, ಬೀದಿಬದಿ ವ್ಯಾಪಾರಿಗಳ ಸಂಘದ ಸದಸ್ಯರು, ಪೆಟ್ರೋಲ್ ಬಂಕ್, ಚಿತ್ರಮಂದಿರಗಳ ಮಾಲೀಕರು, ವರ್ತಕರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ.

‘ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಶಾಂತಿಯುತವಾಗಿ ಹೋರಾಟ ನಡೆಯಲಿದ್ದು ಮಂಡ್ಯ, ಮದ್ದೂರು ಸ್ತಬ್ಧವಾಗಲಿವೆ. ವಿವಿಧೆಡೆ ಮೆರವಣಿಗೆ, ಬೈಕ್ ರ್‍ಯಾಲಿ ನಡೆಸಲಾಗುವುದು’ ಎಂದು ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ತಿಳಿಸಿದರು.

‘ಕೆಆರ್‌ಎಸ್ ಜಲಾಶಯ ಸೇರಿದಂತೆ ವಿವಿಧೆಡೆ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಕ್ಷಿಪ್ರ ಕಾರ್ಯಾಚರಣೆ ಪಡೆಯನ್ನು (ಆರ್‌ಎಎಫ್) ನಿಯೋಜಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್‌.ಯತೀಶ್ ತಿಳಿಸಿದರು.

**ಪಂಪ್‌ಹೌಸ್‌ಗೆ ಮುತ್ತಿಗೆ:** ಬೆಂಗಳೂರಿಗೆ ಕಾವೇರಿ ನದಿಯಿಂದ ಕುಡಿಯುವ ನೀರು ಪೂರೈಸಲು ಬೆಂಗಳೂರು ಜಲಮಂಡಳಿಯು ಮಳವಳ್ಳಿ ತಾಲ್ಲೂಕು ತೊರೆಕಾಡನಹಳ್ಳಿ ಬಳಿ ನಿರ್ಮಿಸಿರುವ ಪಂಪ್‌ಹೌಸ್‌ಗೆ ವಿವಿಧ ಸಂಘಟನೆಗಳ ಮುಖಂಡರು ಮುತ್ತಿಗೆ ಹಾಕಲು ಯತ್ನಿಸಿದರು. ಪೊಲೀಸರು ಅವರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಿದರು. ‘ಕಾವೇರಿ ನೀರು ಬಳಸುವ ಬೆಂಗಳೂರಿಗರು ಗಂಭೀರವಾಗಿ ಪ್ರತಿಭಟಿಸಿಲ್ಲ. ಚಿತ್ರರಂಗದ ಗಣ್ಯರೂ ಹೋರಾಡದಿದ್ದರೆ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿ ಎದುರು ಪ್ರತಿಭಟಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಪಂಪ್‌ಹೌಸ್ ಗೇಟ್ ತೆರೆದು ಒಳನುಗ್ಗಲು ಯತ್ನಿಸಿದಾಗ ಪೊಲೀಸರು ಅವರನ್ನು ತಡೆದರು. ಆ ವೇಳೆ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಪೊಲೀಸರು ಪ್ರತಿಭಟನಕಾರರನ್ನು ಎಳೆದು ವಾಹನಕ್ಕೆ ತುಂಬಿಕೊಂಡು ಹಲಗೂರು ಸಮೀಪದ ಕಲ್ಯಾಣ ಮಂಟಪವೊಂದಕ್ಕೆ ಕರೆದೊಯ್ದರು, ನಂತರ ಬಿಡುಗಡೆ ಮಾಡಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

### ಸದನದಲ್ಲಿ ‘ಆಕ್ಷೇಪಾರ್ಹ’ ಹೇಳಿಕೆ ನೀಡಿದ ರಮೇಶ್ ಬಿಧೂಢಿ

# ಸಂಸತ್ ತೊರೆಯುವೆ: ಡ್ಯಾನಿಶ್

**ನವದೆಹಲಿ (ಪಿಟಿಐ):** ‘ಲೋಕಸಭೆಯಲ್ಲಿ ನನ್ನ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಬಿಜೆಪಿಯ ರಮೇಶ್ ಬಿಧೂಢಿ ಮೇಲೆ ಯಾವುದೇ ಕ್ರಮ ಕೈಗೊಳ್ಳದಿದ್ದರೆ, ಸಂಸತ್ ಸದಸ್ಯತ್ವ ತ್ಯಜಿಸುವ ಬಗ್ಗೆ ಆಲೋಚಿಸುತ್ತೇನೆ’ ಎಂದು ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ಶುಕ್ರವಾರ ಹೇಳಿದ್ದಾರೆ.



‘ದ್ವೇಷ ಭಾಷಣಗಳನ್ನು ಕೇಳಲು ಜನರು ನನ್ನನ್ನು ಆಯ್ಕೆ ಮಾಡಿಲ್ಲ. ಇದು ದ್ವೇಷ ಭಾಷಣಕ್ಕಿಂತ ಕಡಿಮೆಯೇನಿಲ್ಲ. ಸಂಸತ್ತಿನ ಹೊರಗೆ ದ್ವೇಷ ಭಾಷಣ ಮಾಡಲಾಗುತ್ತಿತ್ತು. ಆದರೆ, ಈಗ ಬಿಜೆಪಿ ಸಂಸದರು ಸದನದಲ್ಲಿ ದ್ವೇಷ ಭಾಷಣ ಮಾಡಿದ್ದಾರೆ’ ಎಂದು ದೂರಿದ್ದಾರೆ.

ದೇಶವೇ ತಲೆತಗ್ಗಿಸುವಂತೆ ಮಾಡಿದ್ದಾರೆ. ಅವರನ್ನು ಅಮಾನತುಗೊಳಿಸಬೇಕು. ಬಿಜೆಪಿಯವರ ಮಾತು ಮತ್ತು ನಡೆ ನಡುವೆ ವ್ಯತ್ಯಾಸವಿದೆ. ಬಿಜೆಪಿ ಸಂಸದರು ಆರ್‌ಎಸ್‌ಎಸ್ ಶಾಖೆಗಳಲ್ಲಿ ದ್ವೇಷ ಭಾಷಣಗಳನ್ನು ಕಲಿಯುತ್ತಿದ್ದಾರೆಯೇ ಅಥವಾ ಪ್ರಧಾನಿ ಮೋದಿ ಅವರ ನವ ಭಾರತದ ಹೊಸ ಪ್ರಯೋಗಾಲಯದಲ್ಲಿ ಕಲಿಯುತ್ತಿದ್ದಾರೆಯೇ ಎಂದೂ ಪ್ರಶ್ನಿಸಿದರು.

ಬಿಧೂಢಿ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಏನು ಮಾಡುತ್ತೀರಿ ಎಂಬ ಪ್ರಶ್ನೆಗೆ, ‘ಸ್ಪೀಕರ್ ಕ್ರಮ ಕೈಗೊಳ್ಳುತ್ತಾರೆ ಎಂಬ ಭರವಸೆ ಇದೆ. ಕ್ರಮ ಕೈಗೊಳದಿದ್ದರೆ ದ್ವೇಷ ಭಾಷಣ ಕೇಳಲು ಜನರು ನನ್ನನ್ನು ಸಂಸತ್ತಿಗೆ ಕಳುಹಿಸಿಲ್ಲ. ಹೀಗಾಗಿ, ಭಾರವಾದ ಹೃದಯದಿಂದ ಸಂಸತ್ ಸದಸ್ಯತ್ವ ತ್ಯಜಿಸಲು ಯೋಚಿಸಬಹುದು’ ಎಂದು ಉತ್ತರಿಸಿದರು.

ಬಿಧೂಢಿ ಹೇಳಿಕೆಯಿಂದ ತೀವ್ರ ಆಘಾತಕ್ಕೆ ಒಳಗಾಗಿದ್ದ ಅಲಿ ‘ನನಗೆ ಈ ರೀತಿಯಾದರೆ, ಸಾಮಾನ್ಯ ಪ್ರಜೆಯ ಗತಿ ಏನು? ರಾತ್ರಿಯಿಡೀ ನಿದ್ರೆ ಮಾಡಲು ಸಾಧ್ಯವಾಗಲಿಲ್ಲ’ ಎಂದು ಎನ್‌ಡಿ ಟಿ.ವಿಗೆ ಸಂದರ್ಶನ ನೀಡುವ ವೇಳೆ ಕಣ್ಣೀರಿಟ್ಟರು.

### ಸ್ಪೀಕರ್ ಎಚ್ಚರಿಕೆ

ಡ್ಯಾನಿಶ್ ಅಲಿ ಬಗ್ಗೆ ಬಿಜೆಪಿಯ ಬಿಧೂಢಿ ನೀಡಿರುವ ಹೇಳಿಕೆಯು ಕೋಲಾಹಲ ಎಬ್ಬಿಸಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಕಠಿಣ ಕ್ರಮದ ಎಚ್ಚರಿಕೆ ನೀಡಿ, ಬಿಧೂಢಿ ಹೇಳಿಕೆಗಳನ್ನು ದಾಖಲೆಗಳಿಂದ ತೆಗೆಸಿದ್ದಾರೆ.

ಇನ್ನಷ್ಟು ವಿವರ 12

# ಕೇಂದ್ರದ ಒಬಿಸಿ ಪಟ್ಟಿಗೆ ಕುಂಚಿಟಿಗರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರದ ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಬೇಕು ಎಂಬ ಕುಂಚಿಟಿಗ ಸಮುದಾಯದವರ ಬೇಡಿಕೆಗೆ ರಾಜ್ಯ ಸರ್ಕಾರ ಸ್ಪಂದಿಸಿದೆ.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕುಂಚಿಟಿಗ ಸಮುದಾಯದವನ್ನು ಕೇಂದ್ರ ಸರ್ಕಾರದ ‘ಇತರೆ ಹಿಂದುಳಿದ ವರ್ಗಗಳ ಜಾತಿ’ ಪಟ್ಟಿಗೆ ಸೇರಿಸುವಂತೆ ಶಿಫಾರಸು ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

**‘ಕೊಡವ’ರಿಗೆ ಮಾನ್ಯತೆ:** ಕರ್ನಾಟಕದ ಒಬಿಸಿ ಪಟ್ಟಿಯಲ್ಲಿನ ಕೊಡವ ಸಮುದಾಯದವರನ್ನು ‘ಕೊಡಗರು’ ಎಂದು ನಮೂದಿಸಲಾಗಿತ್ತು. ‘ಕೊಡಗ’ರನ್ನು ‘ಕೊಡವ’ ಎಂದು ಬದಲಾಯಿಸಲು ಸಭೆ ಒಪ್ಪಿಗೆ ನೀಡಿತು.

## ಮತೀಯ ಗೂಂಡಾಗಿರಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

**ಉಡುಪಿ:** ಎರಡು ಪ್ರತ್ಯೇಕ ಧರ್ಮಗಳಿಗೆ ಸೇರಿದ ಯುವಕ, ಯುವತಿಯನ್ನು ತಡೆದು ಮತೀಯ ಗೂಂಡಾಗಿರಿ ಪ್ರದರ್ಶಿಸಿದ ಆರೋಪದ ಮೇಲೆ ಕಾಪು ಠಾಣೆಯಲ್ಲಿ ಯುವಕರ ತಂಡದ ವಿರುದ್ಧ ಪ್ರಕರಣ ದಾಖಲಾಗಿದೆ.

ತಿಂಗಳ ಹಿಂದೆ ಶೃಂಗೇರಿಯ ಸಿರಿಮನೆ ಫಾಲ್ಸ್ ವೀಕ್ಷಣೆಗೆ ತೆರಳಿದ್ದ ಯುವಕ ಹಾಗೂ ಯುವತಿ ಬೈಕ್‌ನಲ್ಲಿ ಹಿಂದಿರುಗುವಾಗ ಆಗುಂಬೆ ಬಳಿ ಅಡ್ಡಗಟ್ಟಿದ್ದ ಗುಂಪು ಮತೀಯ ಗೂಂಡಾಗಿರಿ ನಡೆಸಿ ವಿಡಿಯೊ ಚಿತ್ರೀಕರಣ ಮಾಡಿತ್ತು. ಈ ಗೂಂಡಾಗಿರಿಯ ವಿಡಿಯೊ ಇದೀಗ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸುದ್ದಿಯಾಗುತ್ತಿದ್ದು ಯುವತಿಯ ಸಹೋದರ ನೀಡಿದ ದೂರಿನಂತೆ ಕಾಪು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

‘ಮತೀಯ ಗೂಂಡಾಗಿರಿ ನಡೆಸಿದವರ ಮಾಹಿತಿಯನ್ನು ವಿಡಿಯೊ ಆಧಾರದಲ್ಲಿ ಕಲೆ ಹಾಕಲಾಗುತ್ತಿದ್ದು ಕಾನೂನಿನ ಪ್ರಕಾರ ಕ್ರಮ ಜರುಗಿಸಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಅರುಣ್ ಮಾಹಿತಿ ನೀಡಿದರು.

## ಕಾರವಾರ ಶಾಸಕ ಸೈಲ್ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು

ಪ್ರಜಾವಾಣಿ ವಾರ್ತೆ

**ಕಾರವಾರ:** ‘ಕಾರವಾರ ಕ್ಷೇತ್ರದ ಶಾಸಕ ಸತೀಶ ಸೈಲ್ ವಿಧಾನಸಭೆ ಚುನಾವಣೆ ನಾಮಪತ್ರ ಸಲ್ಲಿಕೆ ವೇಳೆ ಘೋಷಿಸಿದ ಪ್ರಮಾಣಪತ್ರದಲ್ಲಿ ಕೆಲ ಆಸ್ತಿ ವಿವರಗಳನ್ನು ಮರೆಮಾಚಿದ್ದಾರೆ’ ಎಂದು ಬೆಂಗಳೂರಿನ ಶೇಷಾದ್ರಿಪುರಂ ನಿವಾಸಿ ಶ್ರೀನಿವಾಸ್ ಎಂಬವರು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಸೆಪ್ಟೆಂಬರ್ 20ರಂದು ಲಿಖಿತ ದೂರು ಸಲ್ಲಿಸಿದ್ದಾರೆ.

‘ಸತೀಶ ಸೈಲ್ ಮತ್ತು ಅವರ ಪತ್ನಿ ಕಲ್ಪನಾ ಒಡೆತನದಲ್ಲಿರುವ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿ. ಕಂಪನಿಯ ಕುರಿತು ಯಾವುದೇ ಮಾಹಿತಿ ಉಲ್ಲೇಖಿಸಿಲ್ಲ. ಕಂಪನಿಯ ಹೆಸರಿನಲ್ಲಿ ಆಕ್ಸಿಸ್ ಬ್ಯಾಂಕ್‌ನ ಮುಂಬೈ ವರ್ಲಿ ಶಾಖೆಯಲ್ಲಿ ಪಡೆದ ₹63.90 ಕೋಟಿ ಸಾಲವನ್ನೂ ಉಲ್ಲೇಖಿಸಿಲ್ಲ’ ಎಂದು ದೂರಿದ್ದಾರೆ.

# ಕೆನಡಾ-ಭಾರತ ನಡುವಿನ ಬಿಕ್ಕಟ್ಟು ವಿದ್ಯಾರ್ಥಿಗಳಿಗೆ ತಟ್ಟದು: ಲೆಂಟನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆನಡಾ ಮತ್ತು ಭಾರತದ ಮಧ್ಯೆ ಸೃಷ್ಟಿಯಾಗಿರುವ ಬಿಕ್ಕಟ್ಟು ಕೆನಡಾದಲ್ಲಿರುವ ಭಾರತೀಯ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಯಾರ್ಕ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ರೋಡಾ ಎಲ್ ಲೆಂಟನ್ ಹೇಳಿದರು.

ಕೆನಡಾದ ಯಾರ್ಕ್ ವಿಶ್ವವಿದ್ಯಾಲಯ ಹಾಗೂ ಭಾರತದ ಒಪಿ ಜಿಂದಾಲ್ ವಿಶ್ವವಿದ್ಯಾಲಯಗಳು ಶೈಕ್ಷಣಿಕ ಸಹಯೋಗ ಒಪ್ಪಂದಕ್ಕೆ ಶುಕ್ರವಾರ ಸಹಿ ಹಾಕಿದ ನಂತರ ಅವರು ಮಾತನಾಡಿದರು.

ವಿಶ್ವವಿದ್ಯಾಲಯದಲ್ಲಿ 54 ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಅವರಲ್ಲಿ ಭಾರತದ ಎರಡು ಸಾವಿರ ಸೇರಿದಂತೆ ವಿವಿಧ ದೇಶಗಳ 10 ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಎಲ್ಲ ದೇಶದ ವಿದ್ಯಾರ್ಥಿಗಳ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಭಾರತದ ಜತೆಗಿನ ರಾಜತಾಂತ್ರಿಕ ಸಂಬಂಧಗಳ ಬಿರುಕು ಶೈಕ್ಷಣಿಕ ವಲಯದ ಮೇಲೆ ಪರಿಣಾಮ ಬೀರುವುದಿಲ್ಲ ಎಂದರು.

ರಾಜತಾಂತ್ರಿಕ ಸಮಸ್ಯೆಗಳನ್ನು ರಾಯಭಾರ ಕಚೇರಿಗಳ ಮಟ್ಟದಲ್ಲಿ ನಿರ್ವಹಿಸುತ್ತಾರೆ. ಭಾರತದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯ ಮುಕ್ತವಾಗಿ ಸ್ವಾಗತಿಸುತ್ತದೆ ಎಂದು ಹೇಳಿದರು.

ಒಪಿ ಜಿಂದಾಲ್ ವಿಶ್ವವಿದ್ಯಾನಿಲಯದ ಸಂಸ್ಥಾಪಕ ಕುಲಪತಿ ಪ್ರೊ. ಸಿ.ರಾಜ್‌ಕುಮಾರ್, ಎರಡೂ ದೇಶಗಳ ನಡುವೆ ವಿದ್ಯಾರ್ಥಿಗಳ ಚಲನಶೀಲತೆ ಬೆಂಬಲಿಸಲು, ಶೈಕ್ಷಣಿಕ ಸಹಯೋಗಕ್ಕಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಜ್ಞಾನ ವಿನಿಮಯ ಮತ್ತು ಅವಕಾಶಗಳ ಜಾಗತಿಕ ರಂಗವನ್ನು ರಚಿಸುವ ಅನ್ವೇಷಣೆಯಲ್ಲಿ ಕೆನಡಾವು ಭಾರತದ ಪ್ರಮುಖ ಪಾಲುದಾರ ದೇಶವಾಗಿದೆ. ಯಾರ್ಕ್ ವಿಶ್ವವಿದ್ಯಾಲಯದ ಸಹಯೋಗ ನಮಗೆ ಮಹತ್ವದ್ದಾಗಿದೆ. ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ವಿನಿಮಯ, ವಿದೇಶದಲ್ಲಿ ಅಲ್ಪಾವಧಿಯ ಅಧ್ಯಯನ ಹಾಗೂ ಸಂಶೋಧನೆಗೆ ಒತ್ತು ನೀಡಲಾಗುವುದು ಎಂದರು.

ಪಿಒಪಿ ಮೂರ್ತಿ ನಿಷೇಧ ಆದೇಶ ಉಲ್ಲಂಘನೆ: ವಿಸರ್ಜನೆಯಾದರೂ ಕ್ರಮ ಇಲ್ಲ

# ಮಾಹಿತಿ ಮುಚ್ಚಿಟ್ಟ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ನೀರಿನಲ್ಲಿ ಕರಗದೇ ಉಳಿದ ಗಣೇಶ ಮೂರ್ತಿಗಳನ್ನು ಹೆಬ್ಬಾಳದಲ್ಲಿ ಬಿಬಿಎಂಪಿ ಸಿಬ್ಬಂದಿ ಕೆರೆಯಿಂದ ತೆರವುಗೊಳಿಸಿರುವುದು

**ಬೆಂಗಳೂರು:** ನಿಷೇಧಿತ ಪಿಒಪಿ (ಪ್ಲಾಸ್ಟರ್ ಆಫ್ ಪ್ಯಾರಿಸ್) ಗಣೇಶ ಮೂರ್ತಿಗಳ ಬಳಕೆ ಹಾಗೂ ವಿಸರ್ಜನೆ ಅಧಿಕಾರಿಗಳ ಮುಂದೆಯೇ ನಡೆಯುತ್ತಿದ್ದರೂ, ಈ ಬಗ್ಗೆ ಒಂದು ಪ್ರಕರಣವನ್ನೂ ದಾಖಲಿಸಿಲ್ಲ. ಬದಲಿಗೆ, ಅಂತಹ ಮೂರ್ತಿಗಳು ವಿಸರ್ಜನೆಯಾದ ಮಾಹಿತಿಯನ್ನೂ ಇದೀಗ ಮುಚ್ಚಿಡಲಾಗುತ್ತಿದೆ.

ಗಣೇಶ ಹಬ್ಬದ ಮೊದಲನೇ ದಿನ 10 ಸಾವಿರಕ್ಕೂ ಹೆಚ್ಚು ಪಿಒಪಿ ಮೂರ್ತಿಗಳು ವಿಸರ್ಜನೆಯಾಗಿವೆ ಎಂದು ಬಿಬಿಎಂಪಿ ಅಧಿಕೃತವಾಗಿ ಮಾಹಿತಿ ನೀಡಿತ್ತು. ‘ನಿಷೇಧವಿದ್ದರೂ ಹೇಗೆ ವಿಸರ್ಜನೆ ಮಾಡಿಕೊಡಲಾಯಿತು’ ಎಂಬ ಪ್ರಶ್ನೆ ನಾಗರಿಕರಿಂದ ವ್ಯಕ್ತವಾಗಿತ್ತು.

ಪಿಒಪಿ, ಭಾರಲೋಹ ಮಿಶ್ರಿತ ರಾಸಾಯನಿಕಯುಕ್ತ ಬಣ್ಣದಿಂದ ಅಲಂಕಾರ ಮಾಡಿದ ಗಣೇಶ ಸೇರಿದಂತೆ ಇಂಥ ಯಾವುದೇ ವಿಗ್ರಹಗಳ ತಯಾರಿಕೆ, ಮಾರಾಟ ಹಾಗೂ ನೀರಿನಲ್ಲಿ ವಿಸರ್ಜಿಸುವುದನ್ನು ನಿಷೇಧಿಸಿ ಅರಣ್ಯ ಮತ್ತು ಪರಿಸರ ಇಲಾಖೆ ಆದೇಶ ಹೊರಡಿಸಿತ್ತು. ಈ ಆದೇಶ ಉಲ್ಲಂಘಿಸಿದರೆ ಅದನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಈ ಅಪರಾಧಕ್ಕೆ ಕನಿಷ್ಠ ಒಂದೂವರೆ ವರ್ಷ, ಗರಿಷ್ಠ ಆರು ವರ್ಷಗಳ ಕಾರಾಗೃಹವಾಸ ಶಿಕ್ಷೆ ವಿಧಿಸಲಾಗುತ್ತದೆ ಎಂದು ಆದೇಶದಲ್ಲಿ ಹೇಳಲಾಗಿತ್ತು.

ಗಣೇಶ ಹಬ್ಬದ ದಿನದಂದು 10 ಸಾವಿರಕ್ಕೂ ಹೆಚ್ಚು ಪಿಒಪಿ ಮೂರ್ತಿಗಳು ಬಿಬಿಎಂಪಿ ವ್ಯಾಪ್ತಿಯಲ್ಲೇ ವಿಸರ್ಜನೆಯಾಗಿದ್ದರೂ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಒಂದು ಪ್ರಕರಣವನ್ನೂ ದಾಖಲಿಸಿರಲಿಲ್ಲ. ಇದನ್ನು ಪರಿಸರ ಕಾರ್ಯಕರ್ತರು, ನಾಗರಿಕರು ಪ್ರಶ್ನಿಸಿದ್ದರು.

ಬುಧವಾರ 1.19 ಲಕ್ಷ ಮೂರ್ತಿಗಳು ವಿಸರ್ಜನೆಯಾಗಿವೆ ಎಂದು ಬಿಬಿಎಂಪಿ ತಿಳಿಸಿದೆ. ಆದರೆ, ಇದರಲ್ಲಿ ಪಿಒಪಿ ಮೂರ್ತಿಗಳ ವಿವರ ಇಲ್ಲ. ವಿಸರ್ಜನೆಯಾದವೆಲ್ಲ ಮಣ್ಣಿನ ಮೂರ್ತಿ ಎಂದು ಬಿಂಬಿಸಲಾಗಿದೆ. ಈ ರೀತಿ ಮಾಡುವಂತೆ ಅರಣ್ಯ ಸಚಿವರ ಕಚೇರಿಯಿಂದ ಮೌಖಿಕ ಸೂಚನೆ ಬಂದಿದೆ ಎಂದು ಅಧಿಕಾರಿಗಳು ಹೇಳಿದರು.

ಯಡಿಯೂರು ಕೆರೆಯ ಕಲ್ಯಾಣಿಯಲ್ಲಿ ಸೆ.23ರಂದು ಸ್ವಚ್ಛತಾ ಕಾರ್ಯ ಕೈಗೊಂಡಿರುವುದರಿಂದ ಗಣೇಶ ಮೂರ್ತಿ ವಿಸರ್ಜನೆಗೆ ನಿರ್ಬಂಧಿಸಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

## 28,397 ಗಣೇಶ ಮೂರ್ತಿಗಳ ವಿಸರ್ಜನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಸೆ.21ರಂದು 28,397 ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ.

ಪೂರ್ವ ವಲಯದಲ್ಲಿ 3,878, ಪಶ್ಚಿಮ– 3,953, ದಕ್ಷಿಣ– 14,000, ಬೊಮ್ಮನಹಳ್ಳಿ– 277, ದಾಸರಹಳ್ಳಿ– 987, ಮಹದೇವಪುರ– 2,058, ಆರ್.ಆರ್.ನಗರ– 1,887, ಯಲಹಂಕ ವಲಯದಲ್ಲಿ 1,357 ಮೂರ್ತಿಗಳನ್ನು ಸಂಚಾರಿ/ ಮೊಬೈಲ್ ಟ್ಯಾಂಕರ್ ಹಾಗೂ ಕೆರೆ ಅಂಗಳ/ತಾತ್ಕಾಲಿಕ ಕಲ್ಯಾಣಿಗಳಲ್ಲಿ ವಿಸರ್ಜನೆ ಮಾಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

# ಹೆಲ್ಮೆಟ್ ಮಹತ್ವ: ಜಾಗೃತಿ ಮೂಡಿಸಿದ ‘ಗಣೇಶ’ ವೇಷಧಾರಿ

**ಬೆಂಗಳೂರು:** ಹೆಲ್ಮೆಟ್ ಇಲ್ಲದೇ ದ್ವಿಚಕ್ರ ವಾಹನ ಸವಾರಿ ಮಾಡುವವರನ್ನು ತಡೆದು ನಿಲ್ಲಿಸಿದ ‘ಗಣೇಶ’ ವೇಷಧಾರಿ, ರಸ್ತೆ ಸಂಚಾರ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಿದರು.

ನಗರದಲ್ಲಿ ‘ಎರಡನೇ ಅವಕಾಶ ಮತ್ತೆ ಸಿಗದು’ ಹೆಸರಿನಲ್ಲಿ ವಿಶೇಷ ಜಾಗೃತಿ ಅಭಿಯಾನ ಹಮ್ಮಿಕೊಂಡಿದ್ದ ರೆಡ್ ಎಫ್.ಎಂ ಸಿಬ್ಬಂದಿ ಹಾಗೂ ಸಂಚಾರ ಪೊಲೀಸರು, ಹಲವು ರಸ್ತೆಗಳಲ್ಲಿ ಸಂಚರಿಸಿ ಜನರಿಗೆ ಸುರಕ್ಷತಾ ನಿಯಮಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.

‘ಗಣೇಶ’ ರೀತಿಯಲ್ಲಿ ವೇಷಭೂಷಣ ತೊಟ್ಟಿದ್ದ ಕಲಾವಿದರೊಬ್ಬರು, ಹೆಲ್ಮೆಟ್ ಇಲ್ಲದೇ ದ್ವಿಚಕ್ರ ವಾಹನಗಳಲ್ಲಿ ಹೊರಟಿದ್ದವರನ್ನು ತಡೆದು ನಿಲ್ಲಿಸಿದರು. ‘ಹೆಲ್ಮೆಟ್ ಏಕೆ ಧರಿಸಬೇಕು. ಅದರಿಂದ ಉಪಯೋಗವೇನು’ ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆ ಸಹಿತ ವಿವರಣೆ ನೀಡಿದರು.

ಅಭಿಯಾನದಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿ ಹಾಗೂ ಪೊಲೀಸರು, ಜಾಗೃತಿ ಫಲಕಗಳನ್ನು ಪ್ರದರ್ಶಿಸಿದರು. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಇಂದಿರಾನಗರ, ಮುರುಗೇಶಪಾಳ್ಯ, ಕುಂದಲಹಳ್ಳಿ ಸಿಗ್ನಲ್, ಕಾರ್ಪೊರೇಷನ್ ವೃತ್ತ, ಚಾಲುಕ್ಯ ವೃತ್ತ, ಸೌತ್ ಎಂಡ್ ವೃತ್ತ, ಬಾಣಸವಾಡಿ ಹಾಗೂ ಕೋರಮಂಗಲ ಸೋನಿ ಸಿಗ್ನಲ್ ಹಾಗೂ ಸುತ್ತಮುತ್ತ ಅಭಿಯಾನ ನಡೆಯಿತು. ಸೆ. 14ರಿಂದ ಅಭಿಯಾನ ಆರಂಭವಾಗಿದ್ದು, ಸೆ. 23ರಂದು ಸಮಾಪ್ತಗೊಳ್ಳಲಿದೆ.

ರೆಡ್ ಎಫ್‌ಎಂ ಸಿಬ್ಬಂದಿ ಹಾಗೂ ಸಂಚಾರ ಪೊಲೀಸರು ಹೆಲ್ಮೆಟ್ ಕುರಿತು ಜಾಗೃತಿ ಮೂಡಿಸಿದರು

# ಬಂಟರ ಸಂಘದಲ್ಲಿ ನಾಳೆ ‘ಅಷ್ಟಮಿದ ಐಸಿರಿ’

**ಬೆಂಗಳೂರು:** ತುಳುನಾಡ ಜವನೆರ್ ಬೆಂಗಳೂರು ಸಂಘವು ತುಳುನಾಡಿನ ಸಂಸ್ಕೃತಿ ಅನಾವರಣಗೊಳಿಸುವ ‘ಅಷ್ಟಮಿದ ಐಸಿರಿ’ ಕಾರ್ಯಕ್ರಮವನ್ನು ಇದೇ ಭಾನುವಾರ ಬೆಳಿಗ್ಗೆ 10 ಗಂಟೆಗೆ ವಿಜಯನಗರದ ಬಂಟರ ಸಂಘದಲ್ಲಿ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮಹೇಶ್ ಶೆಟ್ಟಿ, ‘ಕಾರ್ಯಕ್ರಮದಲ್ಲಿ ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಕನ್ನಡ–ತುಳು ಚಿತ್ರಗಳ ಕಲಾವಿದರು, ಉದ್ಯಮಿಗಳು, ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ತುಳುನಾಡಿನ ಸಂಸ್ಕೃತಿ ಆಧಾರಿತ ವಿಚಾರ ವಿನಿಮಯ, ಜನಪದ ಕುಣಿತ, ಆಹಾರ ಮೇಳ, ಯಕ್ಷಗಾನ, ಹುಲಿಕುಣಿತ ಸೇರಿದಂತೆ ಹಲವು ವೈಶಿಷ್ಟ್ಯತೆ ಇರಲಿದೆ’ ಎಂದು ತಿಳಿಸಿದರು.

‘ಕೃಷ್ಣ ಜನ್ಮಾಷ್ಟಮಿ ಕರಾವಳಿ ಭಾಗದಲ್ಲಿ ವಿಜೃಂಭಣೆಯಿಂದ ಆಚರಿಸುವಂತೆ ಬೆಂಗಳೂರಿನಲ್ಲಿಯೂ ಹಲವು ಆಟೋಟಗಳನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳಿಗಾಗಿ ಕೃಷ್ಣ ವೇಷ ಸ್ಪರ್ಧೆ, ಹಲಸಿನ ಬೀಜ ಹೆಕ್ಕುವ ಸ್ಪರ್ಧೆ, ಮಡಕೆ ಒಡೆಯುವ ಸ್ಪರ್ಧೆ, ಮಹಿಳೆಯರಿಗಾಗಿ ಲಿಂಬೆ ಚಮಚ, ಟೊಂಕ ಓಟ, ಪೊರಕೆ ಮಾಡುವುದು, ಮಡಕೆ ಒಡೆಯುವ ಸ್ಪರ್ಧೆಗಳಿವೆ. ಪುರುಷರಿಗಾಗಿ ಕಪ್ಪೆ ಜಿಗಿತ, ಅಡ್ಕಕಂಬ ದೀಪ ಸ್ಪರ್ಧೆ, ಗೋಣಿ ಚೀಲ ಓಟ ಮತ್ತು ಮಡಕೆ ಒಡೆಯುವ ಸ್ಪರ್ಧೆಗಳಿವೆ’ ಎಂದು ಹೇಳಿದರು.

‘ಆಹಾರ ಪ್ರಿಯರಿಗೆ ಕರಾವಳಿಯ ನೀರುದೋಸೆ, ಪತ್ರೊಡೆ, ಮೂಡೆ, ತೊಜಂಕ್ ವಡೆ, ಕಡುಬಸಳೆ ಗಸಿ ಸೇರಿದಂತೆ ಹಲವು ಖಾದ್ಯಗಳು ಇರಲಿವೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ತಿಳಿಸಿದರು.

# ಕೋಳಿ ಸಾಕಣೆಗೆ ತೆರಿಗೆ ಸಲ್ಲದು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೋಳಿ ಸಾಕಣೆ ಕೃಷಿ ಚಟುವಟಿಕೆಯಾಗಿದ್ದು, ಇದನ್ನು ವಾಣಿಜ್ಯ ಚಟುವಟಿಕೆ ಎಂದು ಪರಿಗಣಿಸಿ ಯಾವುದೇ ರೀತಿಯ ತೆರಿಗೆ ವಿಧಿಸಲು ಗ್ರಾಮ ಪಂಚಾಯಿತಿಗೆ ಅಧಿಕಾರವಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಸೊಂಡೆಕೊಪ್ಪ ಗ್ರಾಮ ಪಂಚಾಯಿತಿ ಜಾರಿಗೊಳಿಸಿದ್ದ ನೋಟಿಸ್ ಪ್ರಶ್ನಿಸಿ ಕೆ.ನರಸಿಂಹ ಮೂರ್ತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಕೃಷಿ ಜಮೀನಿನಲ್ಲಿ ಕೋಳಿ ಸಾಕಣೆ ಕೇಂದ್ರ ಕಟ್ಟಡ ನಿರ್ಮಿಸಿದ ನಂತರವೂ ಅದು ಕೃಷಿ ಭೂಮಿಯಾಗಿಯೇ ಮುಂದುವರೆಯಲಿದೆ. ಅದನ್ನು ವಾಣಿಜ್ಯ ಭೂಮಿಯಾಗಿ ಪರಿಗಣಿಸಿ ತೆರಿಗೆ ವಿಧಿಸಲು ಸಾಧ್ಯವಿಲ್ಲ. ಕೃಷಿ ಭೂಮಿಯನ್ನು ವಾಣಿಜ್ಯ ಬಳಕೆಗೆ ಪರಿವರ್ತಿಸುವ ಅಗತ್ಯವೂ ಇಲ್ಲ. ಇದನ್ನು ವಾಣಿಜ್ಯ ಕಟ್ಟಡ ಎಂದು ಪರಿಗಣಿಸಿ ಕರ್ನಾಟಕ ಗ್ರಾಮ ಸ್ವರಾಜ್ ಕಾಯ್ದೆ ಶೆಡ್ಯೂಲ್ 4ರ (ಎ) (2) ಅಡಿಯಲ್ಲಿ ತೆರಿಗೆ ವಿಧಿಸಲು ಅವಕಾಶವಿಲ್ಲ‘ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಇದೇ ವೇಳೆ ನ್ಯಾಯಪೀಠವು, ಕೋಳಿ ಸಾಕಣೆ ಕೇಂದ್ರಕ್ಕೆ ತೆರಿಗೆ ಪಾವತಿಸಲು ಸೂಚಿಸಿ ಗ್ರಾಮ ಪಂಚಾಯತಿ ಜಾರಿಗೊಳಿಸಿದ್ದ ನೋಟಿಸ್ ಅನ್ನು ರದ್ದುಪಡಿಸಿದೆ. ಅಂತೆಯೇ, ಅರ್ಜಿದಾರರಿಂದ ಈಗಾಗಲೇ ತೆರಿಗೆ ರೂಪದಲ್ಲಿ ಸಂಗ್ರಹಿಸಿರುವ ₹ 59,551 ಮೊತ್ತವನ್ನು ಹಿಂದಿರುಗಿಸುವಂತೆ ಪಂಚಾಯಿತಿಗೆ ನಿರ್ದೇಶಿಸಿದೆ.

# ಎಚ್‌ಎಸ್‌ಆರ್‌ಪಿ: ಗಡುವು ನಿಗದಿಪಡಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತಿ ಸುರಕ್ಷಿತ ನೋಂದಣಿ ಫಲಕ (ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್-ಎಚ್‌ಎಸ್‌ಆರ್‌ಪಿ) ಉತ್ಪಾದಕರಿಗೆ ಒಪ್ಪಿಗೆ ನೀಡುವ ನಿಟ್ಟಿನಲ್ಲಿ ವಾಹನ ತಯಾರಕರಿಗೆ ಕಾಲಮಿತಿ ನಿಗದಿಪಡಿಸಿ‘ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತ ಅಧಿಸೂಚನೆಗೆ ತಡೆ ನೀಡಬೇಕೆಂದು ಕೋರಿ, ‘ಅತಿ ಸುರಕ್ಷಿತ ನೋಂದಣಿ ಫಲಕಗಳ ಭಾರತೀಯ ಉತ್ಪಾದಕರ ಒಕ್ಕೂಟ‘ ಸೇರಿ, ಕೆಲ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿ ಆದೇಶಿಸಿದೆ.

‘2019ರ ಏಪ್ರಿಲ್ 1ಕ್ಕಿಂತ ಮೊದಲು ನೋಂದಣಿಯಾಗಿರುವ ವಾಹನಗಳು 90 ದಿನಗಳ ಒಳಗಾಗಿ ಹೊಸ ಪರವಾನಗಿ ನೋಂದಣಿ ಫಲಕ ಹೊಂದಬೇಕು ಎಂದು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿರುವ ಕಾರಣ ಈ ನಿಟ್ಟಿನಲ್ಲಿನ ಒಪ್ಪಿಗೆ ಪ್ರಕ್ರಿಯೆಯು ಕಾಲಮಿತಿಯಲ್ಲಿ ನಡೆಯಬೇಕು‘ ಎಂದು ನ್ಯಾಯಪೀಠ ಹೇಳಿದೆ. ಏತನ್ಮಧ್ಯೆ, ರಾಜ್ಯ ಸರ್ಕಾರದ ಅಧಿಸೂಚನೆಗೆ ತಡೆ ನೀಡಬೇಕು ಎಂಬ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸಿದೆ.

‘ಕೇಂದ್ರ ಮೋಟಾರು ವಾಹನಗಳ ನಿಯಮಗಳನ್ನು ಮೀರಿ ನಮ್ಮ ಸಂಸ್ಥೆಗಳನ್ನು ಅಧಿಸೂಚನೆಯಿಂದ ಹೊರಗಿಡಲಾಗಿದೆ. ಪ್ರಭಾವಿ ಸಂಸ್ಥೆಗಳಿಗಷ್ಟೇ ಎಚ್‌ಎಸ್‌ಆರ್‌ಪಿ ಅಳವಡಿಕೆಗೆ ಅವಕಾಶ ಮಾಡಿಕೊಡಲಾಗಿದೆ‘ ಎಂಬುದು ಅರ್ಜಿದಾರರ ವಾದ.

# ಸರ್ವ ಸದಸ್ಯರ ಸಭೆ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ 2022-23ನೇ ಸಾಲಿನ ಸರ್ವ ಸದಸ್ಯರ ಸಭೆಯು ಇದೇ ಭಾನುವಾರ ಬೆಳಿಗ್ಗೆ 11 ಗಂಟೆಗೆ ಕ್ವೀನ್ಸ್ ರಸ್ತೆಯ ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಂಘದ ಪ್ರಭಾರ ಕಾರ್ಯದರ್ಶಿ ಎಚ್.ಎಸ್. ಕೆಂಪರಾಜು ತಿಳಿಸಿದ್ದಾರೆ.

ಮೈಸೂರ್ ಸ್ಯಾರಿ ಸೆಂಟರ್
MYSORE SAREE CENTRE
SGRR Complex, No. 26, Corporation Circle, S.R. Nagar, Bangalore-560027

ಮೈಸೂರು ಸಿಲ್ಕ್ ಸೀರೆಗಳು ಈಗ ಬೆಂಗಳೂರಿನಲ್ಲಿ
ಶುದ್ಧ ರೇಷ್ಮೆ ಸೀರೆಗಳ ಸೌಂದರ್ಯವನ್ನು ಆಹ್ಲಾದಿಸಿ ಅತ್ಯುತ್ತಮ ಹಾಗೂ ನೈಜ ರೇಷ್ಮೆ ಸೀರೆಗಳನ್ನು ಖರೀದಿಸಿ, ಆನಂದಿಸಿ..
ಹೋಲ್‌ಸೆಲ್ ದರದಲ್ಲಿ ಈಗ (ಶುದ್ಧ ಮೈಸೂರು ಸಿಲ್ಕ್) 50% ರಿಯಾಯಿತಿ
ನಮ್ಮಲ್ಲಿ ಎಲ್ಲಾ ಬಗೆಯ ಧರ್ಮಾವರಂ ಸಿಲ್ಕ್ಸ್, ಕ್ರೇಪ್ ಸಿಲ್ಕ್, ಸಾಫ್ಟ್ ಸಿಲ್ಕ್, ಬನಾರಸ್ ಸಿಲ್ಕ್, ಕಾಟನ್ ಮತ್ತು ಫ್ಯಾನ್ಸಿ ಸೀರೆಗಳು ಲಭ್ಯವಿರುತ್ತದೆ.
ನೇಕಾರರಿಂದ ನೇರ ಮಾರಾಟ
SRI MANJUNATHA SILK UDYOG
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 9880604443 / 9964615002 / 9880751001

ನೈಋತ್ಯ ರೈಲ್ವೆ
South Western Railway

ದಿನಾಂಕ 24 ಸೆಪ್ಟೆಂಬರ್ 2023 ರಂದು
ನೂತನವಾಗಿ ಚಾಲನೆಗೊಳ್ಳಲಿರುವ ಹೈದರಾಬಾದ್ (ಕಾಚಿಗುಡ) – ಬೆಂಗಳೂರು (ಯಶವಂತಪುರ) ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಉದ್ಘಾಟನಾ ಓಟವನ್ನು ಸೆರೆಹಿಡಿಯಿರಿ ಮತ್ತು ನೈಋತ್ಯ ರೈಲ್ವೆಯ ವಂದೇ ಭಾರತ್ ವಿಡಿಯೋ ಸ್ಪರ್ಧೆಯಲ್ಲಿ ಗೆಲ್ಲಿರಿ
• ಪಾಲ್ಗೊಳ್ಳುವ ವಿಧಾನ •
ಬೆರಗುಗೊಳಿಸುವ ವೀಡಿಯೊಗಳನ್ನು ಸೆರೆಹಿಡಿಯಿರಿ: ಭವ್ಯವಾದ ಉದ್ಘಾಟನಾ ಓಟ, ಹೈದರಾಬಾದ್ (ಕಾಚಿಗುಡ) ನಿಂದ ಬೆಂಗಳೂರಿನ (ಯಶವಂತಪುರ) ನಡುವಿನ ಸುಂದರವಾದ ಮಾರ್ಗ ಅಥವಾ ರೈಲನ್ನು ಸ್ವಾಗತಿಸುವಾಗ ಜನರ ಹೃದಯಸ್ಪರ್ಶಿ ಭಾವನೆಗಳನ್ನು ಚಿತ್ರೀಕರಿಸಿ.
ಪ್ರಯಾಣಿಕರ ಸಂದರ್ಶನ: ಪ್ರಯಾಣಿಕರ ಸಂದರ್ಶನ ಅಥವಾ ವಂದೇ ಭಾರತ್ ಎಕ್ಸ್‌ಪ್ರೆಸ್‌ನ ಅದ್ಭುತ ವೈಶಿಷ್ಟ್ಯಗಳನ್ನು ಪ್ರದರ್ಶಿಸುವ ವೀಡಿಯೊ ಅನ್ನು ಚಿತ್ರೀಕರಿಸಿ.
ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಿ: ನಿಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ನಿಮ್ಮ ವೀಡಿಯೊಗಳನ್ನು ಹಂಚಿಕೊಳ್ಳಿ ಮತ್ತು ಹ್ಯಾಶ್ ಟ್ಯಾಗ್ #VandeBharat ಬಳಸಿ ನಮ್ಮ ಸಾಮಾಜಿಕ ಜಾಲತಾಣ southwesternrailway_swr, South Western Railway - SWR, SWRRLY ಗೆ ಟ್ಯಾಗ್ ಮಾಡಿ
ನಿಮ್ಮ ಪೋಸ್ಟ್ ಅನ್ನು ಹೆಚ್ಚು ಆಕರ್ಷಕವಾಗಿಸಲು ಮತ್ತು ಹೆಚ್ಚು ಜನರನ್ನು ತಲುಪಲು #Yesvantpur, #Yelahanka, #Hindupur ನಂತಹ ನಿಮ್ಮ ಸ್ಟೇಷನ್‌ಗಳ ಹ್ಯಾಶ್ ಟ್ಯಾಗ್‌ಅನ್ನು ಸಹ ಬಳಸಿ! ಅತ್ಯಾಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶವನ್ನು ಪಡೆಯಿರಿ!
ಸ್ಪರ್ಧೆಯ ವಿವರಗಳು
ಸ್ಪರ್ಧೆಯು ಉದ್ಘಾಟನಾ ಸಮಯದಲ್ಲಿ ಪ್ರಾರಂಭವಾಗುತ್ತದೆ ಮತ್ತು 24 ಗಂಟೆಗಳ ಕಾಲ ತೆರೆದಿರುತ್ತದೆ! ನಾವು ಪ್ರತಿ ನಿಲ್ದಾಣಕ್ಕೆ (ಯಶವಂತಪುರ, ಯಲಹಂಕ & ಹಿಂದೂಪುರ) ಒಬ್ಬ ವಿಜೇತರನ್ನು ಆಯ್ಕೆ ಮಾಡುತ್ತೇವೆ. ನೀವು ಹೆಚ್ಚು ವೀಡಿಯೊಗಳನ್ನು ಪೋಸ್ಟ್ ಮಾಡಿದಷ್ಟೂ, ಗೆಲ್ಲುವ ಸಾಧ್ಯತೆಗಳು ಹೆಚ್ಚು. ಪೋಸ್ಟ್‌ಗಳ ಸಂಖ್ಯೆ, ವಿಷಯದ ಗುಣಮಟ್ಟ, ಶೇರ್‌ಗಳು ಮತ್ತು ಲೈಕ್‌ಗಳ ಆಧಾರದ ಮೇಲೆ ವಿಜೇತರನ್ನು ನಿರ್ಣಯಿಸಲಾಗುತ್ತದೆ.
ಸೆಪ್ಟೆಂಬರ್ 24, 2023 ರಂದು ಬೆಳಗ್ಗೆ 10 ಗಂಟೆಯಿಂದ ಈ ಮರೆಯಲಾಗದ ಪ್ರಯಾಣದಲ್ಲಿ ನಮ್ಮೊಂದಿಗೆ ಪಯಣಿಸಲು ಸಿದ್ಧರಾಗಿ
PUB/400/AAD/PRB/SWR/2023-24
www.swr.indianrailways.gov.in | South Western Railway - SWR | @SWRRLY | SWRRLY | southwesternrailway_swr | southwesternrailway

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರಗಳು ಕಳೆದಿವೆ ಎಂದು ಷೇರುದಾರರು ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರಗಳನ್ನು ನೀಡುವಂತೆ ಷೇರುದಾರರು ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

| ಖಾತೆಪುಟ ಸಂಖ್ಯೆ | ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2) | ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ಷೇರುಗಳ ಸಂಖ್ಯೆ | ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು: ವಿಶಿಷ್ಟ ಸಂಖ್ಯೆಗಳು | ಷೇರುದಾರರ ಹೆಸರು |
|---|---|---|---|---|
| S005328 | 250 | 934 | 13854216-13854465 | ಶಶಿಕಲಾ ಎಸ್ ಮೋಖಾಶಿ |
| P000140 | 1000 | 1430 | 14117611-14118610 | ಪಿ ಇ ಶಂಕರ್ |

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ದೃಢಿಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಮಾನಸ. ಆರ್
ಕಂಪನಿ ಸೆಕ್ರಟರಿ
ಸ್ಥಳ: ಬೆಂಗಳೂರು
ದಿನಾಂಕ: 22.09.2023

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಪ್ರಾಜೇಕ್ಟ್ ಸೆಂಟ್ರಲ್–3), ಅನೆಕ್ಸ್–2 ಬಿಲ್ಡಿಂಗ್, ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ: ಕಾಅ/ಪ್ರಾಸೆಂ–3/ಟೆಂಡರ್/01/2023–24 ದಿನಾಂಕ: 22–09–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಪ್ರಾಜೇಕ್ಟ್ ಸೆಂಟ್ರಲ್–3), ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ಸಮಾಲೋಚಕರನ್ನು ನೇಮಿಸಿಕೊಳ್ಳಲು ಅಲ್ಪಾವಧಿ ಪ್ರಸ್ತಾವನೆಗಳನ್ನು (ತಾಂತ್ರಿಕ ಮತ್ತು ಆರ್ಥಿಕ) ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಇ.ಎಂ.ಡಿ (ರೂ. ಗಳಲ್ಲಿ) | ಬಿಡ್ ದಸ್ತಾವೇಜಿನ ಮೊತ್ತ (ರೂ. ಗಳಲ್ಲಿ) |
|---|---|---|---|
| 1 | “ಕೃಷ್ಣರಾವ್ ಪಾರ್ಕ್‌ನಿಂದ ಬನಶಂಕರಿ ದೇವಸ್ಥಾನ, ಕನಕಪುರ ರಸ್ತೆ ಇಲ್ಲಿಗೆ ಸಮಗ್ರ ಮೇಲುಸೇತುವೆ ನಿರ್ಮಿಸಲು ಮತ್ತು ಬನಶಂಕರಿ ಮಾರ್ಕೇಟ್‌ನಿಂದ ಸಾರಕ್ಕಿ ಜಂಕ್ಷನ್, ಬೆಂಗಳೂರು ಇಲ್ಲಿಗೆ ಅಂಡರ್‌ಪಾಸ್ ನಿರ್ಮಿಸಲು ಸಾಧ್ಯತಾ ವರದಿ ಮತ್ತು ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುವುದಕ್ಕಾಗಿ ಸಮಾಲೋಚನೆ ಸೇವೆಗಳು” | 2,00,000/- | ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನುಸಾರ |

ಟೆಂಡರ್ ವೇಳಾಪಟ್ಟಿ: 1) ಪ್ರಸ್ತಾವನೆಗಾಗಿ ಮನವಿ (ಆರ್‌ಎಫ್‌ಪಿ) ದಸ್ತಾವೇಜುನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: 25–09–2023 ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 03–10–2023 ರಂದು 17.30 ಗಂಟೆವರೆಗೆ ಇ–ಪೋರ್ಟಲ್‌ನಲ್ಲಿ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: 04–10–2023 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ಪ್ರಾಜೇಕ್ಟ್ ಸೆಂಟ್ರಲ್) ಇಲ್ಲಿ ನಡೆಯುತ್ತದೆ. 4) ಪ್ರಸ್ತಾವನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 06–10–2023 ರಂದು 17.30 ಗಂಟೆಗೆ. 5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: 09–10–2023 ರಂದು 11.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪ್ರಾಜೇಕ್ಟ್ ಸೆಂಟ್ರಲ್–3, ಬಿಬಿಎಂಪಿ.

PUBLIC NOTICE

Public are hereby informed that our client intends to purchase the property described in the Schedule hereunder (“**Schedule Property**”) and it has been represented to our client that the Schedule Property is owned by **Mr. Saif Ebrahim, son of Late Mr. Aiyaz Ebrahim.** Our client intends to purchase the Schedule Property from the aforesaid owner, based on the representation that the aforesaid person is the sole and absolute owner with uninhibited rights of alienation over the same.

Any person claiming to have any manner of right, title, claim or interest in the Schedule Property is hereby called upon to notify the undersigned with supporting documents thereof **within Fourteen (14) days** from the date of this notice, after which period, our client shall proceed with the purchase thereof on the basis that there are no claims of whatsoever nature with regard to the Schedule Property or any part thereof nor any objections for sale thereof by the said person to our client.

SCHEDULE
(*Description of the Schedule Property*)

All that piece and parcel of immovable property being a three bedroom apartment unit bearing No. 308, Khata No. 55/38 (PID No. 86-63-55/38), having super built-up area of 2,135 Square Feet (inclusive of balconies and proportionate share in the common areas and walls between the apartments) together with exclusive right to use terrace area of 1,645 square feet, situated on the third floor of the Apartment building known as “Purva Carnation”, along with exclusive right to use two covered car parking spaces, along with 2.50% (equivalent to 1,360 Square Feet) of undivided share, right, title, interest and ownership in the land bearing Municipal No. 55, Madras Sapper Officers' Colony (M.S.O. Colony), Cox Town, Ward No. 86 (old Division No. 74), Bangalore, earlier portion of Sy. No. 101 of Doddigunta Village, Kasaba Hobli, Bangalore Taluk, on which the apartment building is developed.

Date: 23/09/2023
Place: Bangalore

Sd./-
**Prashant Shenoi,** Partner
CrestLaw Partners
No. 33, Xavier Layout, 1 st Cross,
Victoria Road, Bengaluru – 560047.

ಭಾರತ ಸರ್ಕಾರ
ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (ಎಂಇಐಟಿವೈ)
ಭಾರತದ ವಿಶಿಷ್ಠ ಗುರುತ ಪ್ರಾಧಿಕಾರ (ಯುಐಡಿಎಐ)
4ನೇ ಮಹಡಿ, ಬಾಂಗ್ಲಾ ಸಾಹಿಬ್ ರೋಡ್, ಕಾಳಿ ಮಂದಿರ ಹಿಂಭಾಗ, ಗೋಲಿ ಮಾರ್ಕೆಟ್, ನವದೆಹಲಿ – 110001
AADHAAR

ಯುಐಡಿಎಐ, ಪ್ರಾದೇಶಿಕ ಕಚೇರಿ, ಬೆಂಗಳೂರು ಇಲ್ಲಿ ಖಾಲಿ ಇರುವ ನಿರ್ದೇಶಕ ಹುದ್ದೆಯನ್ನು ಡೆಪ್ಯುಟೇಶನ್ (ಫಾರೆನ್ ಸರ್ವೀಸ್ ಆಧಾರದಲ್ಲಿ) ವಿಧಾನದಲ್ಲಿ ಭರ್ತಿ ಮಾಡಿಕೊಳ್ಳಲು ಹೊರಡಿಸಲಾದ ಖಾಲಿಹುದ್ದೆ ಸುತ್ತೋಲೆ.

ಯುಐಡಿಎಐ ಇವರು, ಬೆಂಗಳೂರಿನಲ್ಲಿರುವ ತಮ್ಮ ಪ್ರಾದೇಶಿಕ ಕಚೇರಿಯಲ್ಲಿನ 01 ನಿರ್ದೇಶಕ ಹುದ್ದೆಯನ್ನು ಡೆಪ್ಯುಟೇಶನ್ (ಫಾರೆನ್ ಸರ್ವೀಸ್ ಆಧಾರದಲ್ಲಿ) ವಿಧಾನದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಿದ್ದಾರೆ. ನಿಗದಿತ ಅರ್ಜಿ ನಮೂನೆಯನ್ನು ಸಂಪೂರ್ಣ ಭರ್ತಿ ಮಾಡಿ ನಿರ್ದೇಶಕರು (ಹೆಚ್‌ಆರ್), 4ನೇ ಮಹಡಿ, ಬಾಂಗ್ಲಾ ಸಾಹಿಬ್ ರೋಡ್, ಕಾಳಿ ಮಂದಿರ ಹಿಂಭಾಗ, ಗೋಲಿ ಮಾರ್ಕೆಟ್, ನವದೆಹಲಿ – 110001 ವಿಳಾಸಕ್ಕೆ ಸಲ್ಲಿಸುವುದು. ಸಂಪೂರ್ಣ ಭರ್ತಿ ಮಾಡಲಾಗಿರುವ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 30.10.2023. ಅರ್ಜಿಯನ್ನು deputation@uidai.net.in ವಿಳಾಸಕ್ಕೆ ಇಮೇಲ್ ಮುಖಾಂತರ ಕೂಡ ಸಲ್ಲಿಸಬಹುದು. ಈ ಹುದ್ದೆಯನ್ನು ಡೆಪ್ಯುಟೇಶನ್ ಆಧಾರದಲ್ಲಿ ಭರ್ತಿ ಮಾಡಲಾಗುತ್ತಿದ್ದು, ಖಾಸಗಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ. ಕೊನೆಯ ದಿನಾಂಕದ ಬಳಿಕ ಸಂದಾಯವಾಗುವ ಅಥವಾ ಸಂಪೂರ್ಣ ಭರ್ತಿ ಆಗಿಲ್ಲದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು www.uidai.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ನಿರ್ದೇಶಕರು (ಹೆಚ್‌ಆರ್)

ಇದೀಗ ಆಧಾರ್ ಸೇವಾ ಕೇಂದ್ರ (ಎಎಸ್‌ಕೆ) ಗಳಲ್ಲಿ ಕೂಡ ಆಧಾರ್ ನೋಂದಣಿ ಮತ್ತು ಅಪ್‌ಡೇಶನ್ ಸೌಲಭ್ಯಗಳು ದೊರೆಯುತ್ತವೆ. ನಿಮ್ಮ ಸಮೀಪದ ಕೇಂದ್ರ ತಿಳಿದುಕೊಳ್ಳಲು ಭೇಟಿ ಕೊಡಿ UIDAI.GOV.IN ಅಥವಾ 1947 ಸಂಖ್ಯೆಗೆ ಕರೆ ಮಾಡಿ
CBC 54103/12/0033/2324

‘ಅನಂತ ನಮನ’ದಲ್ಲಿ ಒಡನಾಟ ಸ್ಮರಿಸಿದ ಶಾಸಕ ಬಸವರಾಜ ಬೊಮ್ಮಾಯಿ

# ‘ಆಪದ್ಬಾಂಧವರಾಗಿದ್ದ ಅನಂತ್’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೇಂದ್ರ ಸರ್ಕಾರದ ಮಟ್ಟದಲ್ಲಿ ಕರ್ನಾಟಕದ ವಿಚಾರ ಬಂದಾಗ ಅನಂತಕುಮಾರ್ ಅವರು ಆಪದ್ಬಾಂಧವರಾಗಿದ್ದರು. ಈಗ ರಾಜ್ಯಕ್ಕೆ ಮತ್ತು ಬಿಜೆಪಿಗೆ ಅವರ ಅಗತ್ಯವಿತ್ತು’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಸ್ಮರಿಸಿಕೊಂಡರು.

ಅನಂತಕುಮಾರ್ ಅವರ ಜನ್ಮ ದಿನದ ಪ್ರಯುಕ್ತ ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನ ಫೌಂಡೇಶನ್ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಅನಂತ ನಮನ-64’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕೇಂದ್ರದ ಯಾವುದೇ ವಿಚಾರ ಬಂದಾಗ ನಾವು ಅನಂತಕುಮಾರ್ ಅವರ ಮೇಲೆ ಅವಲಂಬನೆಯಾಗುತ್ತಿದ್ದೆವು. ಇತ್ತೀಚೆಗೆ ಕಾವೇರಿ ನದಿ ನೀರು ವಿಚಾರವಾಗಿ ನಡೆದ ಸರ್ವ ಪಕ್ಷಗಳ ಸಭೆಯಲ್ಲಿಯೂ ಅವರನ್ನು ಎಲ್ಲರೂ ನೆನಪಿಸಿಕೊಂಡರು’ ಎಂದರು.

‘ಈ ಹಿಂದೆ ಒಮ್ಮೆ ಕೃಷ್ಣಾನದಿ ನೀರಿನ ವಿಚಾರದಲ್ಲಿ ರಾಜ್ಯಕ್ಕೆ ಆತಂಕ ಎದುರಾಗಿತ್ತು. ಆಂಧ್ರಪ್ರದೇಶ, ತೆಲಂಗಾಣಕ್ಕೆ ಪ್ರತ್ಯೇಕವಾಗಿ ನೀರು ಹಂಚಿಕೆ ಮಾಡುವಂತೆ ಆಗ್ರಹ ವ್ಯಕ್ತವಾಗಿತ್ತು. ಆ ಸಂದರ್ಭದಲ್ಲಿ ಅನಂತಕುಮಾರ್ ಅವರು ರಾಜ್ಯದ ಪರ ನಿಂತು, ಸಮಸ್ಯೆ ಬಗೆಹರಿಸಿದರು’ ಎಂದು ಸ್ಮರಿಸಿದರು.

‘ಅನಂತಕುಮಾರ್ ಒತ್ತಾಯಕ್ಕೆ ನಾನು ಬಿಜೆಪಿಗೆ ಬಂದೆ. ನನ್ನನ್ನು ಅವರು ಗೌರವದಿಂದ ನೋಡಿಕೊಂಡರು’ ಎಂದು ಹಳೆಯ ನೆನಪುಗಳನ್ನು ಅವರು ಮೆಲುಕು ಹಾಕಿದರು.

ಅನಂತಕುಮಾರ್ ಭಾವಚಿತ್ರಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪುಷ್ಪ ನಮನ ಸಲ್ಲಿಸಿದರು. ತೇಜಸ್ವಿನಿ ಅನಂತಕುಮಾರ್, ಪಿ.ವಿ. ಕೃಷ್ಣ ಭಟ್ ಹಾಗೂ ಎನ್. ಕುಮಾರ್ ಇದ್ದಾರೆ.

**ಸ್ಫೂರ್ತಿದಾಯಕ:** ರಾಜ್ಯಪಾಲ ಥಾವರ ಚಂದ್ ಗೆಹಲೋತ್, ‘ಅನಂತಕುಮಾರ್ ಅವರ ಚಿಂತನೆ, ಆಲೋಚನೆ, ದೂರ ದೃಷ್ಟಿ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿದ ಕೆಲಸಗಳು ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕ. ಅವರ ಜತೆಗೆ 25 ವರ್ಷಕ್ಕೂ ಹೆಚ್ಚು ಅವಧಿ ಒಡನಾಟ ಹೊಂದಿದ್ದೆ. ತವರು ರಾಜ್ಯ ಮಧ್ಯಪ್ರದೇಶದಲ್ಲಿ ಮತ್ತು ಕೇಂದ್ರ ಸಚಿವ ಸಂಪುಟದಲ್ಲಿ ಅವರೊಂದಿಗೆ ಕೆಲಸ ಮಾಡುವ ಅವಕಾಶಗಳು ದೊರೆತಿದ್ದವು. ಅವರು ಜೀವನದ ಕೊನೆಯ ಕ್ಷಣದವರೆಗೂ ದಣಿವರಿಯದೆ ಕೆಲಸ ಮಾಡಿದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪಿ.ವಿ. ಕೃಷ್ಣಭಟ್, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಬಿಜೆಪಿ ಮುಖಂಡರಾದ ಸಿ.ಟಿ.ರವಿ, ವಿಶ್ವೇಶ್ವರ ಹೆಗಡೆ ಕಾಗೇರಿ ಇದ್ದರು.

## ಕೇಂದ್ರ ಅನಾವರಣ

ಅನಂತ ಚೇತನ ಭಾರತೀಯ ಜ್ಞಾನ ಪ್ರಶಿಕ್ಷಣ ಕೇಂದ್ರವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನಾವಣರಗೊಳಿಸಿದರು. ಕೇಂದ್ರದ ಬಗ್ಗೆ ವಿವರಿಸಿದ ಅದಮ್ಯ ಚೇತನ ಫೌಂಡೇಶನ್ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ‘ಈ ಕೇಂದ್ರದ ಮೂಲಕ ಭಾರತೀಯ ಇತಿಹಾಸ, ಗಣಿತ, ವಾಸ್ತುಶಿಲ್ಪ, ಪುರಾಣದ ಬಗ್ಗೆ ನಮ್ಮ ಹಿರಿಯರು ಹೊಂದಿದ್ದ ದೃಷ್ಟಿಕೋನವನ್ನು ಇಂದಿನ ಪೀಳಿಗೆಗೆ ತಿಳಿಸಲಾಗುತ್ತದೆ. ಪಠ್ಯಕ್ರಮದಲ್ಲಿ ಅಳವಡಿಸುವ ಉದ್ದೇಶವನ್ನೂ ಹೊಂದಿದ್ದೇವೆ. ಅನಂತಕುಮಾರ್ ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗುತ್ತಿದ್ದೇವೆ. ಅವರ ಒಡನಾಡಿಗಳ ಆತ್ಮೀಯ ಬರಹಗಳನ್ನು ಒಳಗೊಂಡ ‘ಅನಂತ ನಮನ’ ಕೃತಿಯು ಇದೇ ಶನಿವಾರ ಲೋಕಾರ್ಪಣೆಯಾಗಲಿದೆ’ ಎಂದು ತಿಳಿಸಿದರು.

# ನಾಲ್ವರು ಐಪಿಎಸ್ ಅಧಿಕಾರಿಗಳಿಗೆ ಹುದ್ದೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ಥಳ ನಿರೀಕ್ಷೆಯಲ್ಲಿದ್ದ ನಾಲ್ವರು ಐಪಿಎಸ್ ಅಧಿಕಾರಿಗಳಿಗೆ ಹುದ್ದೆ ತೋರಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಒಬ್ಬ ಐಪಿಎಸ್ ಅಧಿಕಾರಿಯನ್ನು ವರ್ಗಾವಣೆ ಮಾಡಿದೆ.

ಸುಧೀರ್‌ಕುಮಾರ್ ರೆಡ್ಡಿ-ಎಸ್‌ಪಿ, ಅರಣ್ಯ ಘಟಕ,ಸಿಐಡಿ. ಸಿ.ಬಿ. ವೇದಮೂರ್ತಿ-ಎಸ್‌ಪಿ, ಗುಪ್ತದಳ ವಿಭಾಗ. ಹಾಕೆ ಅಕ್ಷಯ್ ಮಚ್ಚಿಂದ್ರ-ಡೆಪ್ಯುಟಿ ಕಮಾಂಡೆಂಟ್ ಜನರಲ್, ಗೃಹ ರಕ್ಷಕ ದಳ. ಕ್ಷಮಾ ಮಿಶ್ರ-ಡಿಸಿಪಿ, ಕಮ್ಯಾಂಡ್ ಸೆಂಟರ್, ಬೆಂಗಳೂರು. ಇವರೆಲ್ಲರೂ ಸ್ಥಳ ನಿರೀಕ್ಷೆಯಲ್ಲಿದ್ದವರು. ರವೀಂದ್ರ ಕಾಶಿನಾಥ್ ಗಡಾದಿ-ಎಸ್‌ಪಿ, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ.

# ಜನವರಿಯಲ್ಲಿ ಆರೋಗ್ಯ ಸಮೀಕ್ಷೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯು (ಎನ್‌ಎಫ್‌ಎಚ್‌ಎಸ್-6) ಮುಂಬರುವ ಜನವರಿಯಿಂದ ಮಾರ್ಚ್ ತಿಂಗಳವರೆಗೆ ನಡೆಯಲಿದೆ.

ಆರೋಗ್ಯ ಇಲಾಖೆಯ ನೇತೃತ್ವದಲ್ಲಿ ಇಲ್ಲಿ ಸಮೀಕ್ಷೆ ನಡೆಯಲಿದ್ದು, ಮುಂಬೈನ ಐಐಪಿಎಸ್ ಹಾಗೂ ಇಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ (ಐಎಸ್‌ಇಸಿ) ಜನಸಂಖ್ಯಾ ಸಂಶೋಧನಾ ಕೇಂದ್ರ ಮಾಹಿತಿ ಕಲೆಹಾಕಲಿವೆ. ಇದೇ ಮೊದಲ ಬಾರಿಗೆ ಕರ್ನಾಟಕವನ್ನು ಉತ್ತರ ಮತ್ತು ದಕ್ಷಿಣವೆಂದು ವಿಂಗಡಿಸಿ, ಸಮೀಕ್ಷೆ ನಡೆಸಲಾಗುತ್ತಿದೆ. ಉತ್ತರ ಭಾಗವನ್ನು ಗೋವಾಕ್ಕೆ ಸೇರ್ಪಡೆ ಮಾಡಲಾಗಿದೆ.

**ಮುಖ್ಯಾಂಶಗಳು**

- ಆರೋಗ್ಯ ಇಲಾಖೆ ನೇತೃತ್ವದಲ್ಲಿ ಸಮೀಕ್ಷೆ
- ಸರ್ವೆಗೆ ಒಳಪಡಲಿರುವ 26,400 ಕುಟುಂಬಗಳು
- ಕೋವಿಡ್ ಬಗ್ಗೆಯೂ ಮಾಹಿತಿ ಕಲೆ

ಈಗಾಗಲೇ ಸಮೀಕ್ಷೆಯ ನಕ್ಷೆಯನ್ನು ಸಿದ್ಧಪಡಿಸಿ, ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.

‘ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸಲು ಈ ಸಮೀಕ್ಷೆ ಸಹಕಾರಿಯಾಗಲಿದೆ. ರಾಜ್ಯದಲ್ಲಿ 26,400 ಕುಟುಂಬಗಳು ಸಮೀಕ್ಷೆಗೆ ಒಳಪಡಲಿವೆ. ಈವರೆಗೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5 ಸುತ್ತುಗಳಲ್ಲಿ ನಡೆದಿದೆ. 6ನೇ ಸುತ್ತಿನ ಸಮೀಕ್ಷೆಯಲ್ಲಿ ಕೋವಿಡ್ ಕಾಯಿಲೆ ಪರಿಣಾಮದ ಬಗ್ಗೆಯೂ ಮಾಹಿತಿ ಕಲೆ-ಹಾಕಲಾಗುತ್ತದೆ. ನೀರು, ನೈರ್ಮಲ್ಯ, ಅಡುಗೆ ಎಣ್ಣೆ, ಕೈತೊಳೆಯುವ ವ್ಯವಸ್ಥೆ ಸೇರಿ ಕುಟುಂಬಕ್ಕೆ ಸಂಬಂಧಿಸಿದ ವಿವಿಧ ಮಾಹಿತಿ ಹಾಗೂ ವೈಯಕ್ತಿಕ ಆರೋಗ್ಯ ಮಾಹಿತಿ ಸಂಗ್ರಹಿಸಲಾಗುತ್ತದೆ. ಮೇ ಅಥವಾ ಜೂನ್ ತಿಂಗಳ ವೇಳೆಗೆ ವರದಿ ಸಿದ್ಧವಾಗುತ್ತದೆ’ ಎಂದು ಇಲಾಖೆಯ ಜಂಟಿ ನಿರ್ದೇಶಕಿ ಪ್ರಮೀಳಾ ತಿಳಿಸಿದರು.

‘ತಾಯಂದಿರ ಹಾಗೂ ಶಿಶು ಮರಣ, ಅಪೌಷ್ಟಿಕತೆ ಮತ್ತು ರಕ್ತ ಹೀನತೆ ತಗ್ಗಿಸಲು ಸಹ ಈ ಸಮೀಕ್ಷೆ ಪೂರಕವಾಗಲಿದೆ. ಈ ಸಮೀಕ್ಷೆಯು ರಾಜ್ಯದ ಜನರ ಆರೋಗ್ಯ ಸ್ಥಿತಿಗತಿಯನ್ನು ಸೂಚಿಸಲಿದೆ. ಆದ್ದರಿಂದ ಜನರು ಅಗತ್ಯ ಮಾಹಿತಿ ಒದಗಿಸಬೇಕು’ ಎಂದು ಹೇಳಿದ್ದಾರೆ.

ನಿಮ್ಮ ಹತ್ತಿರದ Philips Smart light hub ಗೆ ಭೇಟಿ ನೀಡಿ

To know more: www.lighting.philips.co.in

**Bengaluru:** • Yatarayanapura, 9008302595 • Basavanagudi, 9448073200 • Jayanagar, 9900044811 • Sarjapur Road, 9900044811 • Koramangala, 9845037524 Chickpet, 8904704006 • Whitefield, 8431524072 • Rajajinagar, 9845535374 • Electronic City, 9886033866 • Kanakpura Main Road, 9880448537 • Sahakar Nagar, 8861814844 • Kalyan Nagar, 8861814844 • Nyanappanahalli, 9845538756 / 8884511498 / 8043753148 • Doddakallasandra, 8722204874 / 9606484234 • TC Palya Main Road, 9844944662 / 9606484234 • Infantry Road, 9731099336 / 9606484234 • Near IKEA, Nagasandra, 8861814844 **Mysore** • Panchavati Circle, Kalidasa Road-V V Mohalla, 9035515353 **Hubli:** • Shiva Ganga Complex, Ground Floor, Pendar Galli, New Hubli, Near Noorani Masjid, Bengaluru - 580020, 9886872289 **Mangalore** • Ground Floor, 2-7-439/14, 2-7-439/15, Pushpa, Bejai Kapikad, Katlerigudda Bejai, 9980185609 **Belgaum:** • Bogarves Circle,, Kirloskar Road, 9663760105

9/2023 -purplefocus

TANISHQ
TATA ಉತ್ಪಾದನೆ

ಈಗ ಮತ್ತಷ್ಟು ವಿಸ್ತಾರವಾದ ಮತ್ತು ಉತ್ತಮವಾದ ಮಳಿಗೆಯನ್ನು
ನಿಮಗಾಗಿ ಪ್ರಸ್ತುತ ಪಡಿಸುತ್ತಿದ್ದೇವೆ.

ನಮ್ಮ ಸ್ಥಳಾಂತರಗೊಂಡ ಶೋರೂಮ್ ಅನ್ನು ಈಗ ಜಯನಗರದ, 9ನೇ ಮೇನ್‌ನಲ್ಲಿ (ಪೈ ವೈಸೆರಾಯ್ ಎದುರು) ತೆರೆಯಲಾಗಿದೆ ಎಂದು ಘೋಷಿಸಲು ತನಿಷ್ಕ್ ಸಂತೋಷಪಡುತ್ತದೆ.

22ನೇ ಸೆಪ್ಟೆಂಬರ್, 2023, ಶುಕ್ರವಾರದಂದು, ಬೆಳಿಗ್ಗೆ 11:00 ಗಂಟೆಯಿಂದ ಪ್ರಾರಂಭಿಸಲಾಗುವ ಜಯನಗರದಲ್ಲಿ ನಮ್ಮ ಹೊಸ ಶೋರೂಮ್‌ನ ಪ್ರಾರಂಭೋತ್ಸವಕ್ಕೆ ನಿಮ್ಮನ್ನು ಆಹ್ವಾನಿಸಲು ಅಪಾರ ಸಂತೋಷವನ್ನು ನೀಡುತ್ತಿದೆ.

FINE GOLD 22 KARAT TANISHQ

ಉಚಿತ ಚಿನ್ನದ ನಾಣ್ಯ*
ಪ್ರತಿ ಆಭರಣದ ಖರೀದಿಯೊಂದಿಗೆ
22 ರಿಂದ 24 ಸೆಪ್ಟೆಂಬರ್ 2023ರ ವರೆಗೆ

Buy online at tanishq.co.in | *Conditions apply • Check tanishq.co.in/offers for further details • Follow us on: YouTube

ಶೋರೂಮ್: ನಂ.3 (ಹಳೆಯ ನಂ.18), 9ನೇ ಮೇನ್, ಡೈಯಗ್ನಲೀ ಪೈ ವೈಸೆರಾಯ್ ಹೊಟೇಲ್ ಎದುರು, 3ನೇ ಬ್ಲಾಕ್, ಜಯನಗರ, ಬೆಂಗಳೂರು. ದೂರವಾಣಿ: 08026655115, 9886333665

ಬರ ಪರಿಸ್ಥಿತಿ: ಕುಡಿಯುವ ನೀರು ಪೂರೈಕೆಗೆ ₹ 497 ಕೋಟಿ ನೀಡಲು ಸಂಪುಟ ಸಭೆ ಒಪ್ಪಿಗೆ

# ₹ 4,860 ಕೋಟಿ ಪರಿಹಾರ ಕೋರಲು ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ 195 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇರುವುದರಿಂದ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಅಡಿಯಲ್ಲಿ ₹ 4,860 ಕೋಟಿ ನೆರವು ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲು ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಎನ್‌ಡಿಆರ್‌ಎಫ್ ಅಡಿ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕಂದಾಯ ಇಲಾಖೆ ಸಿದ್ಧಪಡಿಸಿರುವ ವರದಿಯನ್ನು ಸಂಪುಟ ಸಭೆಯಲ್ಲಿ ಮಂಡಿಸಿ, ಚರ್ಚಿಸಲಾಗಿದೆ. ವರದಿಗೆ ಅನುಮೋದನೆ ನೀಡಿದ್ದು, ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಎರಡು– ಮೂರು ದಿನಗಳಲ್ಲಿ ದೆಹಲಿಗೆ ತೆರಳಿ ಮನವಿ ಸಲ್ಲಿಸಲಿದ್ದಾರೆ.

ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಎಚ್‌.ಕೆ. ಪಾಟೀಲ, ‘ರಾಜ್ಯದಲ್ಲಿ ಬರದಿಂದ ಒಟ್ಟು ₹ 30,432 ಕೋಟಿಯಷ್ಟು ಹಾನಿಯಾಗಿದೆ ಎಂದು ಅಂದಾಜು ಮಾಡಲಾಗಿದೆ. ಇದಕ್ಕಾಗಿ ₹ 4,860 ಕೋಟಿ ನೆರವು ಕೋರಲು ನಿರ್ಧರಿಸಲಾಗಿದೆ’ ಎಂದರು.

39.74 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳಿಗೆ ಹಾನಿಯಾಗಿದ್ದು, ₹ 27,867.17 ಕೋಟಿ ನಷ್ಟವಾಗಿದೆ. ಇದಕ್ಕೆ ₹ 3,824.67 ಕೋಟಿ ನೆರವು ಕೋರಲು ತೀರ್ಮಾನಿಸಲಾಗಿದೆ. 1.82 ಲಕ್ಷ ಹೆಕ್ಟೇರ್‌ನಲ್ಲಿ ತೋಟಗಾರಿಕಾ ಬೆಳೆಗೆ ಹಾನಿಯಾಗಿದ್ದು, ₹ 2,565 ಕೋಟಿ ನಷ್ಟವಾಗಿದೆ. ಈ ಬಾಬ್ತು ₹ 200.39 ಕೋಟಿ ಪರಿಹಾರ ಕೋರಲಾಗುವುದು ಎಂದು ತಿಳಿಸಿದರು.

195 ಪಶು ಶಿಬಿರಗಳಿಗೆ ₹ 104.33 ಕೋಟಿ, 624 ಮೇವು ಬ್ಯಾಂಕ್‌ಗಳಿಗೆ ₹ 126.36 ಕೋಟಿ, ಔಷಧಿಗಾಗಿ ₹ 25 ಕೋಟಿ, ಪೌಷ್ಟಿಕ ಆಹಾರ ಪೂರೈಕೆಗೆ ₹ 25 ಕೋಟಿ, ಮೇವಿನ ಬೀಜಗಳ ಪೂರೈಕೆಗೆ ₹ 50 ಕೋಟಿ ನೆರವು ಕೋರಲು ನಿರ್ಧರಿಸಲಾಗಿದೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ 180 ದಿನ ಕುಡಿಯುವ ನೀರು ಪೂರೈಸಲು ₹ 283.04 ಕೋಟಿ ಮತ್ತು ನಗರ ಪ್ರದೇಶಗಳಲ್ಲಿ 180 ದಿನ ಕುಡಿಯುವ ನೀರು ಪೂರೈಕೆಗೆ ₹ 213.98 ಕೋಟಿ ನೆರವು ಕೋರಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

## ಅಕ್ರಮ ಪಂಪ್‌ಸೆಟ್ ಸಕ್ರಮ: ₹ 6,099 ಕೋಟಿ ವೆಚ್ಚ

ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 2015 ರಿಂದ ಈಚೆಗೆ ರೈತರು ಕೃಷಿ ನೀರಾವರಿಗಾಗಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಸಂಪುಟ ನಿರ್ಧರಿಸಿದೆ.

‘ಈ ಯೋಜನೆಗೆ ₹ 6,099 ಕೋಟಿ ವೆಚ್ಚವಾಗಲಿದೆ. ಸುಮಾರು 1.5 ಲಕ್ಷ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗುವುದು. ವಿದ್ಯುತ್ ಜಾಲದಿಂದ 500 ಮೀಟರ್‌ಗಿಂತ ಹೆಚ್ಚು ದೂರದಲ್ಲಿರುವ ಪಂಪ್‌ಸೆಟ್‌ಗಳಿಗೆ ಸೌರ ವಿದ್ಯುತ್ ಪೂರೈಕೆಗೆ ವ್ಯವಸ್ಥೆ ಮಾಡಲಾಗುವುದು. ಇದಕ್ಕೆ ರಾಜ್ಯ ಸರ್ಕಾರ ಶೇಕಡ 50ರಷ್ಟು, ರೈತರು ಶೇ 320ರಷ್ಟು ವೆಚ್ಚ ಭರಿಸಲಿದ್ದು, ಶೇ 30ರಷ್ಟನ್ನು ಕೇಂದ್ರ ಸರ್ಕಾರ ಸಹಾಯಧನ ನೀಡಲಿದೆ’ ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

‘2023ರ ಸೆ.23ರವರೆಗಿನ ಅವಧಿಗೆ ಸೀಮಿತವಾಗಿ ಈ ಅಕ್ರಮ–ಸಕ್ರಮ ಯೋಜನೆ ಜಾರಿಗೆ ಬರಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

## ಸರ್ಕಾರದ 15,295 ವಾಹನ ಗುಜರಿಗೆ

ಸರ್ಕಾರದ ವಿವಿಧ ಇಲಾಖೆ ಹಾಗೂ ನಿಗಮ ಮಂಡಳಿಗಳಲ್ಲಿ 15 ವರ್ಷ ಮೀರಿರುವ 15,295 ವಾಹನಗಳನ್ನು ಗುಜರಿಗೆ ಹಾಕಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇದಕ್ಕೆ ಬದಲಾಗಿ ವಾಹನ ಖರೀದಿಸಲು ₹500 ಕೋಟಿ ವೆಚ್ಚವಾಗಲಿದ್ದು, ಕೇಂದ್ರ ಸರ್ಕಾರದಿಂದ ₹100 ಕೋಟಿ ನೆರವು ಸಿಗಲಿದೆ. ಮೊದಲ ಹಂತದಲ್ಲಿ ಈ ವರ್ಷ ಐದು ಸಾವಿರ ವಾಹನಗಳನ್ನು ಹರಾಜಿನ ಮೂಲಕ ಗುಜರಿಗೆ ಹಾಕಲು ‘ನೋಂದಾಯಿತ ವಾಹನಗಳ ಗುಜರಿ ನೀತಿ’ಗೆ ಸಚಿವ ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ.

## ಚಿತ್ತಾಪುರದಲ್ಲಿ ಕೈಗಾರಿಕಾ ವಸಾಹತು

- ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆ ಹೆಚ್ಚಿಸಲು ಹಾಗೂ ರೈತರು ನವೋದ್ಯಮಿಗಳಾಗಲು ಸಹಾಯ ನೀಡಲು ₹ 10 ಕೋಟಿ ವೆಚ್ಚದಲ್ಲಿ ‘ಕೃಷಿ ನವೋದ್ಯಮ ಯೋಜನೆ’ ಜಾರಿ.
- ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಕಲಬುರಗಿ ಜಿಲ್ಲೆಯ ಚಿತ್ತಾಪುರ, ಉತ್ತರ ಕನ್ನಡದ ಕೋಡ್ಕಣಿ, ಬೆಳಗಾವಿಯ ಕಣಗಲಾ, ಚಾಮರಾಜನಗರದ ಬದನಗುಪ್ಪೆ, ವಿಜಯಪುರದ ಇಂಡಿಯಲ್ಲಿ ₹ 166.43 ಕೋಟಿ ವೆಚ್ಚದಲ್ಲಿ ಹೊಸ ಕೈಗಾರಿಕಾ ವಸಾಹತು ಹಾಗೂ ಎರಡನೇ ಹಂತದಲ್ಲಿ ಹುಬ್ಬಳ್ಳಿ ಹಾಗೂ ಶಹಪೂರದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮುಗಿದ ನಂತರ ಕೈಗಾರಿಕಾ ವಸಾಹತು ಸ್ಥಾಪಿಸಲು ಅನುಮೋದನೆ.
- ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ವಿಸ್ತರಣೆ ಯೋಜನೆಯ ಉಳಿಕೆ ಕಾಮಗಾರಿ ಕೈಗೊಳ್ಳಲು ₹ 49.50 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ.
- ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್‌ನಿಂದ ಸಿಂಧನೂರು ಬಳಿಯ ಬಳ್ಳಾರಿ-ಲಿಂಗಸುಗೂರು ರಸ್ತೆ ವೃತ್ತದವರೆಗಿನ 78.45 ಕಿ.ಮೀ. ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ₹ 1,695.85 ಕೋಟಿ ವೆಚ್ಚದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಕೈಗೆತ್ತಿಕೊಳ್ಳಲು ಒಪ್ಪಿಗೆ.
- ಪೊಲೀಸ್ ಮೊಬಿಲಿಟಿ ಯೋಜನೆಯಡಿ ಪೊಲೀಸ್ ಇಲಾಖೆಗೆ 1,682 ವಾಹನಗಳನ್ನು ₹ 83.38 ಕೋಟಿ ಮೊತ್ತದಲ್ಲಿ ಖರೀದಿಸಲು ಅನುಮೋದನೆ.
- ಆಶಾಕಿರಣ ಯೋಜನೆ ಅಡಿ ಚಿತ್ರದುರ್ಗ, ರಾಯಚೂರು, ಉತ್ತರ ಕನ್ನಡ, ಮಂಡ್ಯ ಜಿಲ್ಲೆಗಳಲ್ಲಿ ಉಚಿತವಾಗಿ ಸಮಗ್ರ ನೇತ್ರ ತಪಾಸಣೆ ಮತ್ತು ಕಣ್ಣಿನ ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕಗಳನ್ನು ವಿತರಿಸಲು ₹ 29.14 ಕೋಟಿ ಮೊತ್ತಕ್ಕೆ ಅನುಮೋದನೆ.
- ಧಾರವಾಡ ಕೃಷಿ ವಿಶ್ವವಿದ್ಯಾಲಯದ 49 ಎಕರೆ 15 ಗುಂಟೆ ಜಮೀನನ್ನು ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆಗೆ ನೀಡಲು ಒಪ್ಪಿಗೆ.

**ಧಾರಾಕಾರ ಮಳೆ** ನಗರದಲ್ಲಿ ಶುಕ್ರವಾರ ರಾತ್ರಿ ಧಾರಾಕಾರ ಮಳೆಯಾಗಿದ್ದು, ಹೊಸೂರು ರಸ್ತೆಯಲ್ಲಿ ನೀರಲ್ಲೇ ವಾಹನಗಳು ಸಾಗಿದವು - ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

# ‘ಸುಪ್ರೀಂ’ ಆದೇಶ ಪಾಲನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತಮಿಳುನಾಡಿಗೆ ಕಾವೇರಿ ನದಿಯಿಂದ ನೀರು ಹರಿಸುವ ವಿಚಾರದಲ್ಲಿ ಇದೇ 26ರವರೆಗೂ ಸುಪ್ರೀಂ ಕೋರ್ಟ್ ಆದೇಶ ಪಾಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಇದೇ 27ರವರೆಗೂ ಕಾಲಾವಕಾಶ ಇದೆ. ಆ ಬಳಿಕ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ನ್ಯಾಯಾಲಯದ ಆದೇಶವನ್ನೂ ಪಾಲಿಸಿ, ರಾಜ್ಯದ ರೈತರ ಹಿತ ರಕ್ಷಿಸಲಾಗುವುದು’ ಎಂದರು.

ರಾಜ್ಯದ ಅಡ್ವೊಕೇಟ್ ಜನರಲ್ ಮತ್ತು ಹಿರಿಯ ವಕೀಲರ ಜತೆ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ. ಕೆಆರ್‌ಎಸ್ ಜಲಾಶಯಕ್ಕೆ 8,000 ಕ್ಯೂಸೆಕ್ ಒಳಹರಿವು ಇದೆ. ಸುಮಾರು 3,500 ಕ್ಯೂಸೆಕ್ ನಷ್ಟು ಹೊರ ಹರಿವು ಇದೆ. ಈವರೆಗೆ ತಮಿಳುನಾಡಿಗೆ ಬಿಡಬೇಕಿದ್ದ ನೀರಿನಲ್ಲಿ ಶೇಕಡ 35ರಷ್ಟನ್ನು ಮಾತ್ರ ಬಿಟ್ಟಂತಾಗಿದೆ ಎಂದು ವಿವರಿಸಿದರು.

ರಾಜ್ಯದ ಮೇಕೆದಾಟು ಜಲಾಶಯ ನಿರ್ಮಾಣ ಯೋಜನೆ ಕುರಿತು ಸುಪ್ರೀಂ ಕೋರ್ಟ್ ಸಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿದೆ. ಅಧಿಕೃತವಾಗಿ ನ್ಯಾಯಾಲಯದ ಮುಂದೆ ಈ ಕುರಿತು ದಾಖಲೆ ಸಲ್ಲಿಸಲಾಗುವುದು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದಲ್ಲಿ ಬಾಕಿ ಇರುವ ನಿರಾಕ್ಷೇಪಣಾ ಪತ್ರಗಳನ್ನು ತ್ವರಿತವಾಗಿ ನೀಡುವಂತೆ ಕೋರಲಾಗುವುದು ಎಂದರು.

ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಸೌಹಾರ್ದಯುತವಾಗಿ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಲು ಮಧ್ಯಸ್ಥಿಕೆ ವಹಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಹೇಳಿದರು.

# ಇಂದಿನಿಂದ ಅನುಭವ ಮಂಟಪ ಸಮಾವೇಶ

**ಬೆಂಗಳೂರು:** ಜನಾಂದೋಲನಗಳ ಮಹಾಮೈತ್ರಿ (ಜೆಎಂಎಂ), ಸಿಟಿಜನ್ಸ್ ಫಾರ್ ಡೆಮಾಕ್ರಸಿ (ಸಿಎಫ್‌ಡಿ) ಹಾಗೂ ಮಹಾರಾಷ್ಟ್ರದ ಕೆಲವು ಪ್ರಗತಿಪರ ಸಂಘಟನೆಗಳು ಜಂಟಿಯಾಗಿ ನಗರದ ಗಾಂಧಿಭವನದಲ್ಲಿ ಇದೇ ಶನಿವಾರ ಹಾಗೂ ಭಾನುವಾರ ‘ಅಖಿಲ ಭಾರತ ಅನುಭವ ಮಂಟಪ ಸಮಾವೇಶ’ ಆಯೋಜಿಸಿವೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಎಫ್‌ಡಿ ಅಧ್ಯಕ್ಷ ಎಸ್‌.ಆರ್. ಹಿರೇಮಠ್, ‘ಮುಂದಿನ ವರ್ಷದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವುದು, ಕೋಮು ಸಾಮರಸ್ಯ, ದ್ವೇಷ ರಾಜಕೀಯ ಹಾಗೂ ಕೇಂದ್ರದ ಜನವಿರೋಧಿ ನೀತಿಗಳನ್ನು ವಿರೋಧಿಸುವ ಉದ್ದೇಶಗಳೊಂದಿಗೆ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಎರಡು ದಿನಗಳ ಈ ಸಮಾವೇಶವನ್ನು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನ್‌ದಾಸ್‌ಉದ್ಘಾಟಿಸಲಿದ್ದಾರೆ. ಚಿಂತಕ ರಾಜೇಂದ್ರ ಚೆನ್ನಿ ಆಶಯ ಭಾಷಣ ಮಾಡಲಿದ್ದಾರೆ. ಮಹಾರಾಷ್ಟ್ರದ ನಾಗಪುರದ ದಲಿತ ಮಾನವ ಹಕ್ಕುಗಳ ರಾಷ್ಟ್ರೀಯ ಆಂದೋಲನದ ಸಂಸ್ಥಾಪಕ ವಿಮಲ್ ತೋರಟ್ ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ’ ಎಂದು ಹೇಳಿದರು.

# ಸದನ ಸಮಿತಿ: 27ರಿಂದ ನರ್ಸಿಂಗ್ ಕಾಲೇಜುಗಳಿಗೆ ಭೇಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನರ್ಸಿಂಗ್ ಕಾಲೇಜುಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ತನಿಖೆ ನಡೆಸಲು ಸರ್ಕಾರ ರಚಿಸಿರುವ ಜಂಟಿ ಸದನ ಸಮಿತಿ ಸೆ.27ರಿಂದ ಕಾಲೇಜುಗಳಿಗೆ ಭೇಟಿ ನೀಡಲಿದೆ.

ನರ್ಸಿಂಗ್ ಕಾಲೇಜುಗಳಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ 2021ರಲ್ಲಿ ನಡೆದ ವಿಧಾನಮಂಡಲ ಕಲಾಪದಲ್ಲಿ ದೊಡ್ಡ ಮಟ್ಟದ ಚರ್ಚೆ ನಡೆದಿತ್ತು. ಈ ಬಗ್ಗೆ ಸಮಗ್ರ ತನಿಖೆ ನಡೆಸಲು ಜಂಟಿ ಸದನ ಸಮಿತಿ ರಚಿಸುವಂತೆ ಜೆಡಿಎಸ್ ಸದಸ್ಯರು ಸದನದೊಳಗೆ ಪ್ರತಿಭಟನೆ ನಡೆಸಿದ್ದರು. ಅಂದು ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಜಂಟಿ ಸದನ ಸಮಿತಿ ರಚಿಸಲು ಒಪ್ಪಿಗೆ ನೀಡಿದ್ದರು.

‘ಪರಿಶೀಲನಾ ಪಟ್ಟಿ ಸಿದ್ಧಪಡಿಸಲಾಗಿದೆ. ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿಯೇ ವರದಿ ಸಲ್ಲಿಸಲು ಚಿಂತನೆ ನಡೆಸಿದ್ದೇವೆ’ ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಮಾಹಿತಿ ನೀಡಿದರು.

## ಸುದ್ದಿ 2 ನಿಮಿಷ

### ಲ್ಯಾಂಡರ್ ಜತೆ ಸಂಪರ್ಕ ಸಾಧಿಸಲು ಇಸ್ರೊ ಯತ್ನ

**ಬೆಂಗಳೂರು:** ಚಂದ್ರಯಾನ–3 ರ ‘ವಿಕ್ರಮ್’ ಲ್ಯಾಂಡರ್ ಮತ್ತು ‘ಪ್ರಜ್ಞಾನ್’ ರೋವರ್ ಜಾಗೃತಗೊಂಡಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವರೆಡರ ಜತೆ ಸಂಪರ್ಕ ಸಾಧಿಸುವ ಪ್ರಯತ್ನವನ್ನು ಇಸ್ರೊ ನಡೆಸಿದೆ.

ಆದರೆ, ಲ್ಯಾಂಡರ್ ಮತ್ತು ರೋವರ್‌ಗಳಿಂದ ಈವರೆಗೆ ಯಾವುದೇ ಸಂಕೇತಗಳು ಬಂದಿಲ್ಲ ಎಂದು ಇಸ್ರೊ ಹೇಳಿದೆ.

ಶುಕ್ರವಾರ ಬೆಳಿಗ್ಗೆ ಸೂರ್ಯೋದಯದ ಬಳಿಕ ನಿದ್ರಾವಸ್ಥೆಯಲ್ಲಿದ್ದ ಇವೆರಡನ್ನೂ ಸಕ್ರಿಯಗೊಳಿಸುವ ಪ್ರಯತ್ನ ನಡೆಸುವುದಾಗಿ ಇಸ್ರೊ ಹೇಳಿತ್ತು. ಈ ಕುರಿತು ‘ಎಕ್ಸ್’ ಮೂಲಕ ಮಾಹಿತಿ ಹಂಚಿಕೊಂಡಿರುವ ಇಸ್ರೊ, ಲ್ಯಾಂಡರ್ ಜತೆ ಸಂಪರ್ಕ ಸಾಧಿಸುವ ಪ್ರಯತ್ನ ಮುಂದುವರಿಸಲಾಗಿದೆ ಎಂದು ತಿಳಿಸಿದೆ.

### ಈಡಿಗ ಸಮುದಾಯ ಒಡೆಯುವ ಹೇಳಿಕೆ: ಆರೋಪ

**ಬೆಂಗಳೂರು:** ‘ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಮತ್ತು ಪದಾಧಿಕಾರಿಗಳು ಬಾಹ್ಯಶಕ್ತಿಗಳ ಒತ್ತಡಕ್ಕೆ ಮಣಿದು ಸಮುದಾಯವನ್ನೇ ಒಡೆಯುವಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಚ್‌.ಆರ್. ಶ್ರೀನಾಥ್ ಆರೋಪಿಸಿದ್ದಾರೆ.

‘ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಮಧಾರಿಗಳ ಸಂಘ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ದೀವರು ಪ್ರತ್ಯೇಕ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಗುರುತಿಸಿಕೊಂಡಿದ್ದಾರೆ. ಹೀಗಾಗಿ, ಸಮುದಾಯದ ಸ್ವಾಮೀಜಿ ಯಾರು ಎಂಬುದನ್ನು ನಿರ್ಧರಿಸುವ ಯಾವ ಅಧಿಕಾರವೂ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘಕ್ಕೆ ಇಲ್ಲ’ ಎಂದಿದ್ದಾರೆ.

‘ಈಡಿಗ, ಬಿಲ್ಲವ, ನಾಮಧಾರಿ, ದೀವರು ಸೇರಿದಂತೆ 26 ಉಪ ಪಂಗಡಗಳ ನೇತೃತ್ವದಲ್ಲಿ ಸೆ.9ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಸಮಾನ ಮನಸ್ಕರ ಪೂರ್ವಭಾವಿ ಸಭೆ ಯಶಸ್ಸು ಕಂಡಿದೆ. ಇದರಿಂದ ವಿಚಲಿತರಾಗಿರುವ ಕೆಲವರು ಸಭೆಯ ನೇತೃತ್ವ ವಹಿಸಿದ್ದವರ ವಿರುದ್ಧ ಅಪಪ್ರಚಾರಕ್ಕೆ ಇಳಿದಿದ್ದಾರೆ. ಪ್ರಣವಾನಂದ ಸ್ವಾಮೀಜಿ ವಿರುದ್ಧ ಹೇಳಿಕೆ ನೀಡಿರುವುದೂ ಇದರ ಭಾಗ’ ಎಂದು ಅವರು ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ‘ವಿಸು ಸಮಾನ ಮನಸ್ಕರು’ ಆಯೋಜಿಸಿದ್ದ ಸಮಾರಂಭದಲ್ಲಿ ‘ಬಿಎಂಶ್ರೀ ಪ್ರತಿಷ್ಠಾನ’ದ ಗೌರವಾಧ್ಯಕ್ಷ ಪಿ.ವಿ. ನಾರಾಯಣ (ಎಡದಿಂದ ಮೂರನೆಯವರು) ಲೇಖಕಿ ವಿಜಯಾ ಸುಬ್ಬರಾಜ್ (ಎಡದಿಂದ ಎರಡನೆಯವರು) ಅವರ ‘1984’, ‘ಕುರುಡು’ ಮತ್ತು ‘ಲೇಖನ ಸಂಕೀರ್ಣ’ ಎಂಬ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಗೃಹ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕಿ ಎಸ್‌. ಶಾಂಭವಿ, ಎಪಿಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸುರೇಶ್ ಪಾಟೀಲ್ ಇದ್ದರು. – ಪ್ರಜಾವಾಣಿ ಚಿತ್ರ


सत्यमेव जयते
ಭಾರತ ಸರಕಾರ

आज़ादी का अमृत महोत्सव

G20 भारत 2023 INDIA
वसुधैव कुटुम्बकम्
ONE EARTH • ONE FAMILY • ONE FUTURE

ನಾರಿಶಕ್ತಿಗೆ ದೇಶದ ನಮನಗಳು

ನಾರಿ ಶಕ್ತಿ ವಂದನ ಅಧಿನಿಯಮ ಸ್ವೀಕಾರಗೊಂಡಿದೆ

ನಾರಿಶಕ್ತಿಯ ನೇತೃತ್ವದಲ್ಲಿ ಅಭಿವೃದ್ಧಿ ಸಂಕಲ್ಪ ಇನ್ನಷ್ಟು ಬಲಿಷ್ಠವಾಗಿದೆ

ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರಿಗಾಗಿ 33% ಸ್ಥಾನಗಳ ಮೀಸಲಾತಿ



“ಮಹಿಳೆಯರಿಗೆ ಅಧಿಕಾರ ನೀಡಬಲ್ಲ ಈ ಕಾರ್ಯಸಾಧನೆಗಾಗಿ ದೇವರು ನನ್ನನ್ನು ಆಯ್ಕೆ ಮಾಡಿದ್ದಾನೆ. ನಾರಿಶಕ್ತಿ ವಂದನ ಅಧಿನಿಯಮದಿಂದ ನಮ್ಮ ದೇಶದ ನಾರಿಶಕ್ತಿಗೆ ಹೊಸ ಚೇತನ ದೊರೆಯಲಿದೆ, ಆ ಅದಮ್ಯ ಚೇತನವೇ ದೇಶದ ಉಜ್ವಲ ಭವಿಷ್ಯಕ್ಕೆ ಗ್ಯಾರಂಟಿ ಆಗಲಿದೆ”
ನರೇಂದ್ರ ಮೋದಿ, ಪ್ರಧಾನಮಂತ್ರಿ

cbc 22201/13/0055/2324

# ಕಂಪನಿಗಳಿಂದ ವಂಚನೆ: ಹಣಕ್ಕಾಗಿ ಸಂತ್ರಸ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಲಾಭದ ಆಮಿಷವೊಡ್ಡಿ ವಂಚನೆ ಮಾಡಿರುವ ಕಂಪನಿಗಳಿಂದ ಹಣ ವಾಪಸು ಕೊಡಿಸಬೇಕು' ಎಂದು ಆಗ್ರಹಿಸಿ ಸಂತ್ರಸ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ನೂರಕ್ಕೂ ಹೆಚ್ಚು ಸಂತ್ರಸ್ತರು ಪಾಲ್ಗೊಂಡಿದ್ದರು. ವೃದ್ಧರ ಸಂಖ್ಯೆಯೂ ಹೆಚ್ಚಿತ್ತು. 'ನಮ್ಮ ಹಣ ನಮಗೆ ಕೊಡಿ', 'ಬೇಕೇ ಬೇಕು ನ್ಯಾಯ ಬೇಕು', 'ಮುಂದಿನ ಚುನಾವಣೆಯಲ್ಲಿ ನೋಟಾ ಬಟನ್ ಒತ್ತುತ್ತೇವೆ' ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

'ಸಹರ, ಸಾಯಿ ಪ್ರಸಾದ್, ಪರ್ಲ್ಸ್, ಸಮೃದ್ಧಿ ಜೀವನ್, ಮೈತ್ರಿ, ಜನಸ್ನೇಹಿ, ಕಲ್ಪತರು, ಗರಿಮಾ, ಹಿಂದೂಸ್ತಾನ್ ಹಾಗೂ ಇತರೆ ಕಂಪನಿಗಳು ಜನರಿಂದ ಹಣ ಪಡೆದು ವಂಚಿಸಿವೆ. ಕಂಪನಿಗಳ ವಿರುದ್ಧ ಹಲವು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ' ಎಂದು ಪ್ರತಿಭಟನಕಾರರು ದೂರಿದರು.

'ಪ್ರಕರಣ ದಾಖಲಾಗಿ ಹಲವು ತಿಂಗಳಾದರೂ ಸಂತ್ರಸ್ತರಿಗೆ ಹಣ ಸಿಕ್ಕಿಲ್ಲ. ಹೂಡಿಕೆ ಮಾಡಿದ್ದ ಹಣವನ್ನು ಕಂಪನಿಗೆ ಕಟ್ಟಿದ್ದ ಜನ, ಇಂದು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅನಿಯಂತ್ರಿತ ಉಳಿತಾಯ ಯೋಜನೆಗಳ ನಿಷೇಧ (ಬಿಯುಡಿಎಸ್) ಕಾಯ್ದೆ (ಬಡ್ಸ್) ಅಡಿ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ' ಎಂದು ಹೇಳಿದರು.

'ಕಂಪನಿಗಳ ವಂಚನೆ ಪ್ರಕರಣವನ್ನು ಮುಖ್ಯಮಂತ್ರಿಯರು ಗಂಭೀರವಾಗಿ ಪರಿಗಣಿಸಬೇಕು. ಸಂತ್ರಸ್ತರಿಗೆ ಸೂಕ್ತ ನ್ಯಾಯ ಒದಗಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಂತ್ರಸ್ತರು, ನ್ಯಾಯಕ್ಕೆ ಆಗ್ರಹಿಸಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

# ಜಾಲಿರೈಡ್: ಇಬ್ಬರು ಯುವಕರು ಸಾವು

## ತಂದೆ–ತಾಯಿ ಜೊತೆಗೂಡಿ ಕೇಕ್ ಕತ್ತರಿಸಿ ಜನ್ಮದಿನ ಆಚರಿಸಿದ್ದ ಕುಲಪತಿ ಮಗ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜನ್ಮದಿನದಂದು ಬಿಎಂಡಬ್ಲ್ಯು ಬೈಕ್‌ನಲ್ಲಿ ಜಾಲಿರೈಡ್ ಹೊರಟಿದ್ದ ವೇಳೆ ಅಪಘಾತ ಸಂಭವಿಸಿದ್ದು, ಖಾಸಗಿ ವಿಶ್ವವಿದ್ಯಾಲಯವೊಂದರ ಕುಲಪತಿಯ ಮಗ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

'ಆರ್‌ಎಂಸಿ ಯಾರ್ಡ್ ಬಳಿ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ ಹೊಡೆದು ಉರುಳಿಬಿದ್ದು ಶುಕ್ರವಾರ ನಸುಕಿನ 3.20ರ ಸುಮಾರಿಗೆ ಅಪಘಾತ ಸಂಭವಿಸಿದೆ. ಬೈಕ್ ಚಲಾಯಿಸುತ್ತಿದ್ದ ನಿಖಿಲ್ (25) ಹಾಗೂ ಹಿಂಬದಿ ಸವಾರ ಮನಮೋಹನ್ (31) ಮೃತಪಟ್ಟಿದ್ದಾರೆ' ಎಂದು ಯಶವಂತಪುರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಅವಘಡ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸವಾರ ನಿಖಿಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

**ತಂದೆ-ತಾಯಿ ಜೊತೆ ಕೇಕ್ ಕತ್ತರಿಸಿದ್ದ:** 'ಆರ್‌ಎಂವಿ ಎಕ್ಸ್‌ಟೆನ್ಶನ್ ನಿವಾಸಿ ನಿಖಿಲ್,

**ಅಪರಾಧ ಸುದ್ದಿ**

ಖಾಸಗಿ ವಿಶ್ವವಿದ್ಯಾಲಯವೊಂದರ ಕುಲಪತಿಯ ಮಗ. ಸೆ. 22ರಂದು ನಿಖಿಲ್ ಅವರ ಜನ್ಮದಿನವಿತ್ತು. ತಡರಾತ್ರಿ 12 ಗಂಟೆಗೆ ತಂದೆ-ತಾಯಿ ಜೊತೆ ನಿಖಿಲ್ ಕೇಕ್ ಕತ್ತರಿಸಿ ಜನ್ಮದಿನ ಆಚರಿಸಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಬಸ್ ಚಾಲಕರೊಬ್ಬರ ಮಗ ಮನಮೋಹನ್, ನಿಖಿಲ್ ಅವರನ್ನು ತಡರಾತ್ರಿ ಭೇಟಿಯಾಗಿ ಹುಟ್ಟುಹಬ್ಬದ ಶುಭಾಶಯ ಕೋರಿದ್ದರು. ಎಂ.ಜಿ. ರಸ್ತೆ ಹಾಗೂ ಸುತ್ತಮುತ್ತ ಹೋಗಿ ಬರುತ್ತೇನೆ' ಎಂದು ತಂದೆ–ತಾಯಿಗೆ ಹೇಳಿದ್ದ ನಿಖಿಲ್, ಸ್ನೇಹಿತ ಮನಮೋಹನ್ ಜೊತೆ ಬಿಎಂಡಬ್ಲ್ಯು ಬೈಕ್‌ನಲ್ಲಿ ಮನೆಯಿಂದ ಹೊರಟಿದ್ದರು' ಎಂದು ತಿಳಿಸಿದರು.

'ನಿಖಿಲ್ ಅವರು ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿದ್ದರು. ಆರ್.ಎಂ.ಸಿ ಯಾರ್ಡ್ ಬಳಿ ನಿಯಂತ್ರಣ ತಪ್ಪಿದ್ದ ಬೈಕ್, ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು. ತೀವ್ರ ಗಾಯಗೊಂಡು ಇಬ್ಬರೂ ಮೃತಪಟ್ಟಿದ್ದಾರೆ' ಎಂದು ಹೇಳಿದರು.

'ಮದ್ಯ ಕುಡಿದು ಬೈಕ್ ಚಲಾಯಿಸಿದ್ದರಿಂದ ಅಪಘಡ ಸಂಭವಿಸಿರುವ ಅನುಮಾನವಿದೆ. ರಕ್ತದ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಅದರ ವರದಿ ಬರಬೇಕಿದೆ. ಜೊತೆಗೆ, ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲವೆಂಬುದು ಗೊತ್ತಾಗಿದೆ' ಎಂದು ತಿಳಿಸಿದರು.

## 9ನೇ ಮಹಡಿಯಿಂದ ಬಿದ್ದು ಬಾಲಕಿ ಸಾವು

**ಬೆಂಗಳೂರು:** ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ 9ನೇ ಮಹಡಿಯಿಂದ ಬಿದ್ದು ವಿಜಯಲಕ್ಷ್ಮಿ (17) ಎನ್ನುವವರು ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಜ್ಞಾನಭಾರತಿ ಬಳಿಯ ಜ್ಞಾನಜ್ಯೋತಿ ನಗರದಲ್ಲಿ ತಾಯಿ ಜೊತೆ ವಾಸವಿದ್ದ ವಿಜಯಲಕ್ಷ್ಮಿ, ಪಿಯು ಕಾಲೇಜೊಂದರಲ್ಲಿ ಓದುತ್ತಿದ್ದಳು. ಸೆ. 19ರಂದು ಮನೆಯಿಂದ ನಾಪತ್ತೆಯಾಗಿದ್ದ ಬಾಲಕಿ, ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ 9ನೇ ಮಹಡಿಯಿಂದ ಬಿದ್ದು ಗುರುವಾರ ಮೃತಪಟ್ಟಿದ್ದಾಳೆ' ಎಂದು ಪೊಲೀಸರು ತಿಳಿಸಿದರು.

'ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಬಾಲಕಿ ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ನಿಖರ ಕಾರಣ ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ಹೇಳಿದರು.

'ಬಾಲಕಿಯ ತಂದೆ–ತಾಯಿ, ಕೌಟುಂಬಿಕ ಕಲಹದಿಂದಾಗಿ ವಿಚ್ಛೇದನ ಪಡೆದಿದ್ದರು. ಪ್ರತ್ಯೇಕವಾಗಿ ವಾಸವಿದ್ದರು. ತಾಯಿ ಜೊತೆ ಬಾಲಕಿ ನೆಲೆಸಿದ್ದಳು. ಮಾನಸಿಕ ಖಿನ್ನತೆಗೆ ಒಳಗಾಗಿದ್ದಳು ಎನ್ನಲಾದ ಬಾಲಕಿ, ಕಾಲೇಜಿಗೆ ಹೋಗುವುದಾಗಿ ಹೇಳಿ ಸೆ. 19ರಂದು ಮನೆಯಿಂದ ಹೊರಗೆ ಬಂದಿದ್ದಳು. ಆದರೆ, ವಾಪಸು ಮನೆಗೆ ಹೋಗಿರಲಿಲ್ಲ.'

'ಮಂಗಳೂರಿಗೆ ಹೋಗಿದ್ದ ಬಾಲಕಿ, ವ್ಯಕ್ತಿಯೊಬ್ಬರನ್ನು ಭೇಟಿಯಾಗಿ ವಾಪಸು ನಗರಕ್ಕೆ ಬಂದಿದ್ದಳು. ಆದರೆ, ತಾಯಿ ಮನೆಗೆ ಹೋಗಿರಲಿಲ್ಲ. ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಹೋಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮಂಗಳೂರಿನ ಆ ವ್ಯಕ್ತಿ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

# ನೀರು ಕೇಳುವ ನೆಪದಲ್ಲಿ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕುಡಿಯುವ ನೀರು ಕೇಳುವ ನೆಪದಲ್ಲಿ ಮನೆಯೊಂದಕ್ಕೆ ನುಗ್ಗಿ ಮಹಿಳೆಯನ್ನು ಬೆದರಿಸಿ ಚಿನ್ನಾಭರಣ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಜಯ್‌ಕುಮಾರ್ ಅಲಿಯಾಸ್ ಡಿಯೊ ಪುಟ್ಟ, ಚಿರಾಗ್ ಗೌಡ ಅಲಿಯಾಸ್ ರಿಚಿ ಹಾಗೂ ರವಿಕುಮಾರ್ ಬಂಧಿತರು. ಇವರಿಂದ 15 ಗ್ರಾಂ ತೂಕದ ಚಿನ್ನದ ಸರ, 3 ಮೊಬೈಲ್ ಹಾಗೂ ಡ್ಯಾಗರ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ಇತ್ತೀಚೆಗೆ ನುಗ್ಗಿದ್ದ ಆರೋಪಿಗಳು, ಮಹಿಳೆಗೆ ಡ್ಯಾಗರ್ ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು. ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಸುಲಿಗೆ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು.

'ಮೂವರು ಆರೋಪಿಗಳು ಅಪರಾಧ ಹಿನ್ನೆಲೆಯುಳ್ಳವರು. ಮತ್ತಷ್ಟು ಕಡೆ ಸುಲಿಗೆ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

## ಕ್ಲಬ್‌ಗಳ ಮೇಲೆ ಪೊಲೀಸರ ದಾಳಿ

**ಬೆಂಗಳೂರು:** ಸದಸ್ಯರಲ್ಲದವರಿಗೆ ಪ್ರವೇಶ ನೀಡಿ ಅಕ್ರಮವಾಗಿ ಜೂಜು ಆಡಿಸುತ್ತಿದ್ದ ಕ್ಲಬ್‌ಗಳ ಮೇಲೆ ಪಶ್ಚಿಮ ವಿಭಾಗದ ಪೊಲೀಸರು ದಾಳಿ ಮಾಡಿದ್ದು, 95 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

'ಅಗ್ರಹಾರ ದಾಸರಹಳ್ಳಿಯಲ್ಲಿರುವ ಸಿಲಿಕಾನ್ ಸ್ಪೋರ್ಟ್ಸ್ ಆ್ಯಂಡ್ ಕಲ್ಚರಲ್ ಇನ್‌ಸ್ಟಿಟ್ಯೂಟ್ ಕ್ಲಬ್ ಹಾಗೂ ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಅಸೋಸಿಯೇಷನ್ ಕ್ಲಬ್ ಮೇಲೆ ದಾಳಿ ಮಾಡಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ತಿಳಿಸಿದರು.

'ಜೂಜಾಟದಲ್ಲಿ ತೊಡಗಿದ್ದ 95 ಮಂದಿಯನ್ನು ವಶಕ್ಕೆ ಪಡೆದು, ಅವರಿಂದ ₹ 2.50 ಲಕ್ಷ ಜಪ್ತಿ ಮಾಡಲಾಗಿದೆ. ಬಹುತೇಕರು, ಕ್ಲಬ್ ಸದಸ್ಯರಲ್ಲ. ಅಕ್ರಮವಾಗಿ ಕ್ಲಬ್‌ಗೆ ಬಂದು ಜೂಜು ಆಡುತ್ತಿದ್ದರು. ಕ್ಲಬ್ ಆಡಳಿತ ಮಂಡಳಿ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಹೇಳಿದರು.

## ಮನೆ ಮುಂದೆ ಜಗಳ: ಕೊಲೆ

**ಬೆಂಗಳೂರು:** ಬಸವನಗುಡಿ ಠಾಣೆ ವ್ಯಾಪ್ತಿಯ ಖಾಜಿ ಸ್ಟ್ರೀಟ್‌ನಲ್ಲಿ ಅರ್ಬಾಜ್ (26) ಅವರನ್ನು ಕೊಲೆ ಮಾಡಲಾಗಿದ್ದು, ಮೂವರು ಆರೋಪಿಗಳು ಕೃತ್ಯ ಎಸಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿ ಅರ್ಬಾಜ್ ಅವರು ಶುಕ್ರವಾರ ಮಧ್ಯಾಹ್ನ ಮನೆಯಲ್ಲಿದ್ದರು. ಬೈಕ್‌ನಲ್ಲಿ ಬಂದಿದ್ದ ಮೂವರು, ಮನೆ ಎದುರು ಅರ್ಬಾಜ್ ಜೊತೆ ಜಗಳ ತೆಗೆದು ಹಲ್ಲೆ ಮಾಡಿದ್ದರು. ತೀವ್ರ ಗಾಯಗೊಂಡು ಅರ್ಬಾಜ್ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಟಿಪ್ಪುನಗರದ ಮೊಸೀನ್ ಸೇರಿ ಮೂವರು ಕೃತ್ಯ ಎಸಗಿರುವ ಮಾಹಿತಿ ಇದೆ. ವೈಯಕ್ತಿಕ ವೈಷಮ್ಯದಿಂದ ಕೊಲೆ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸದ್ಯ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿವೆ.

## ವಂಚನೆ: ಕಾಶ್ಮೀರ ಟೆಕಿ ಬಂಧನ

**ಆನೇಕಲ್:** ಮದುವೆಯಾಗುವುದಾಗಿ ನಂಬಿಸಿ, ಮಹಿಳೆಯೊಬ್ಬರ ಜೊತೆ ಸಹಜೀವನ ನಡೆಸಿ ವಂಚಿಸಿದ ಆರೋಪದ ಮೇಲೆ ಜಮ್ಮು–ಕಾಶ್ಮೀರದ ಟೆಕ್ಕಿಯೊಬ್ಬರನ್ನು ಹೆಬ್ಬಗೋಡಿ ಪೊಲೀಸರು ಶ್ರೀನಗರದಲ್ಲಿ ಬಂಧಿಸಿದ್ದಾರೆ.

ಆರೋಪಿ ಮೋಜಿಫ್ ಆಶ್ರಫ್ ಬೇಗ್ (32) ಎಂಬಾತನನ್ನು ಹೆಬ್ಬಗೋಡಿ ಪೊಲಿಸರು ಕಾಶ್ಮೀರದ ಶ್ರೀನಗರದಲ್ಲಿ ಬಂಧಿಸಿ, ಕರೆತಂದಿದ್ದಾರೆ. ಆರೋಪಿ ಎಲೆಕ್ಟ್ರಾನಿಕ್‌ಸಿಟಿಯ ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಬೆಂಗಳೂರಿನ ಶಿಕಾರಿಪಾಳ್ಯದಲ್ಲಿ ವಾಸವಾಗಿದ್ದ.

ಒತ್ತಾಯಪೂರ್ವಕ ಮತ್ತು ಅಸ್ವಾಭಾವಿಕ ಲೈಂಗಿಕ ಕ್ರಿಯೆ ನಡೆಸಿದ್ದಾನೆ. ಮದುವೆಯಾಗಲು ಒತ್ತಾಯಿಸಿದರೆ ಮತಾಂತರವಾಗುವ ಷರತ್ತು ಒಡ್ಡಿದ್ದು, ಜೀವ ಬೆದರಿಕೆ ಒಡ್ಡುತ್ತಿದ್ದಾನೆ ಎಂದು ಮಹಿಳೆ ಹೆಬ್ಬಗೋಡಿ ಪೊಲೀಸರಿಗೆ ದೂರು ಸಲ್ಲಿಸಿದ್ದಳು.

ಆರೋಪಿ ಆಶ್ರಫ್ ಬೇಗ್ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ 38 ವರ್ಷದ ಮಹಿಳೆಯ ಪರಿಚಯವಾಗಿತ್ತು. 2018ರಿಂದಲೂ ಮಹಿಳೆಯು ಮೋಜಿಫ್ ಆಶ್ರಫ್ ಬೇಗ್‌ನೊಂದಿಗೆ ಸಹಜೀವನ ನಡೆಸುತ್ತಿದ್ದರು. ಆರೋಪಿಯ ಅಣ್ಣ ಮೋರಿಫ್ ಆಶ್ರಫ್ ಬೇಗ್ ದೂರವಾಣಿ ಕರೆ ಮಾಡಿ ತನ್ನ ತಮ್ಮನಿಂದ ದೂರವಾಗುವಂತೆ ಬೆದರಿಕೆ ಒಡ್ಡುತ್ತಿದ್ದಾನೆ ಎಂದು ಸಂತ್ರಸ್ತ ಮಹಿಳೆ ದೂರು ನೀಡಿದ್ದರು.

## ನಗರದಲ್ಲಿ ಇಂದು

**ವಿಶ್ವ ಅಲ್ಝೈಮರ್ ತಿಂಗಳ ಪ್ರಯುಕ್ತ ಜಾಗೃತಿ:** ಮುಖ್ಯ ಅತಿಥಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸುರಭಿ ಸಂತೋಷ್, ಆಯೋಜನೆ: ಡಿಮೆನ್ಶಿಯಾ ಇಂಡಿಯಾ ಅಲೈನ್ಸ್, ಸ್ಥಳ: ಸ್ಯಾಂಕಿ ಟ್ಯಾಂಕ್, ಮಲ್ಲೇಶ್ವರ ಗೇಟ್, ಬೆಳಿಗ್ಗೆ 8

**ಶುಭ ಸಂಗೀತ:** ಉದ್ಘಾಟನೆ: ನಿರಂಜನ ವಾನಳ್ಳಿ, ಗಾಯನ: ಸಹನಾ ಹೆಗಡೆ, ತಬಲಾ: ಪ್ರಮೋದ್ ಗಬ್ಬೂರ್, ಹಾರ್ಮೋನಿಯಂ: ಗೌರವ್ ಗಡಿಯಾರ್, ಕೊಳಲು: ಶಕ್ತಿಧರ್, ತಬಲಾ: ಉದಯರಾಜ್ ಕರ್ಪೂರ್, ಆಯೋಜನೆ: ಸಪ್ತಕ, ಸ್ಥಳ: ಎಸ್‌ಇಎ ವಿಜ್ಞಾನ, ಗಣಿತ ಮತ್ತು ಕಲಾ ಕಾಲೇಜು, ಕೆ.ಆರ್.ಪುರ, ಬೆಳಿಗ್ಗೆ 10

**ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣೆ:** ಆಯೋಜನೆ: ದಿಶಾ ಭಾರತ್, ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಡೆಂಟಲ್ ಸೈನ್ಸ್, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 10.30

**3ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಸಾಧಕರಿಗೆ ಅಭಿನಂದನಾ ಸಮಾರಂಭ:** ಸಾನ್ನಿಧ್ಯ: ಸಿದ್ದಲಿಂಗ ಸ್ವಾಮೀಜಿ, ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ,



ಚಂದ್ರಶೇಖರ ಕಂಬಾರ

**ಗುರುವಂದನಾ ಕಾರ್ಯಕ್ರಮ:** ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಪುಟ್ಟಣ್ಣ, ಆಯೋಜನೆ: ಕ್ಯಾಮ್ಸ್ ಕರ್ನಾಟಕ, ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘದ ಆವರಣ, ಕೆ.ಆರ್. ರಸ್ತೆ, ಬೆಳಿಗ್ಗೆ 10

ಉಪಸ್ಥಿತಿ: ಭಗವಂತ ಖೂಬ, ಬಸವರಾಜ ಹೊರಟ್ಟಿ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಸುರೇಶ್ ಗೌಡ, ಆಯೋಜನೆ: ಕೆ.ವಿ.ಎಲ್. (ಕರ್ನಾಟಕ ವೀರಶೈವ ಲಿಂಗಾಯಿತ) ಎಂಪ್ಲಾಯೀಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

**'ಶ್ರೀ ತೇನ್ಮೊಳಿ ಕೈಸನ್' ಕೃತಿ ಬಿಡುಗಡೆ:** ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ, ಮುಖ್ಯ ಅತಿಥಿಗಳು: ಕೆ. ಚಂದ್ರಣ್ಣ, ರಾ.ನಂ. ಚಂದ್ರಶೇಖರ, ಸಿ.ವಿ. ಗೀತಾ, ಆಯೋಜನೆ: ಸ್ನೇಹಾ ಬುಕ್ ಹೌಸ್, ಸ್ಥಳ: ಶೇಷಾದ್ರಿಪುರ ಕಾಲೇಜು ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 11

**'ಇಸ್ರೊ–ಎ ಪರ್ಸನಲ್ ಹಿಸ್ಟರಿ' ಪುಸ್ತಕದ ಬಗ್ಗೆ ಚರ್ಚೆ:** ಗೀತಾ ಅರವಮುದನ್, ಟಿ.ಎನ್. ಹರಿ, ಆಯೋಜನೆ ಹಾಗೂ ಸ್ಥಳ: ಮಿನರ್ವಾ, ಆರ್.ವಿ. ಟೀಚರ್ಸ್ ಕಾಲೇಜ್, ಜಯನಗರ, ಮಧ್ಯಾಹ್ನ 3.30

**'ಕನ್ನಡದ ಧ್ರುವತಾರೆ' ಸಾಧಕರೊಂದಿಗೆ ಮಾತು–ಕತೆ:** ಸಾಧಕರು: ಕ್ಯಾಪ್ಟನ್ ಗೋಪಿನಾಥ್, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಕ್ಯಾಪ್ಟನ್ ಗೋಪಿನಾಥ್

**ಮಹಿಳಾ ಮೀಸಲಾತಿ ವಿಚಾರ ಸಂಕಿರಣ:** ಉದ್ಘಾಟನೆ: ಸಿದ್ದರಾಮಯ್ಯ, ವಿಷಯ ಮಂಡನೆ: ರವಿವರ್ಮ ಕುಮಾರ್, ಪ್ರತಿಕ್ರಿಯಿಸುವವರು: ನಯನಾ ಮೋಟಮ್ಮ, ಅಶ್ವಿನಿ ಓಬಳೇಶ್, ಉಪಸ್ಥಿತಿ: ಕೆ.ಎಂ. ರಾಮಚಂದ್ರಪ್ಪ, ಮಾವಳ್ಳಿ ಶಂಕರ್, ಅನಂತ ನಾಯಕ, ಅಧ್ಯಕ್ಷತೆ: ಮುಜಾಫರ್ ಅಸಾದಿ, ಆಯೋಜನೆ: ಡಾ.ರಾಮ ಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಸ್ಥಳ: ಗಾಂಧಿ ಭವನ, ಕುಮಾರಪಾರ್ಕ್, ಸಂಜೆ 4.30

**ಜಿಡಬ್ಲ್ಯುಎಫ್ ಫೆಡರೇಷನ್ ಪ್ರಶಸ್ತಿ ಪ್ರದಾನ:** ಮುಖ್ಯ ಅತಿಥಿಗಳು: ನೂರುದ್ದೀನ್ ಸೇವ್ವಾಲ್, ಗೌರವ ಅತಿಥಿ: ನಾ. ಸೋಮೇಶ್ವರ್, ಅಧ್ಯಕ್ಷತೆ: ಜಿ.ಎಸ್. ನಾಯಕ್, ಎಚ್. ವೆಂಕಟೇಶ್, ವಿವೇಕಾನಂದ ಕಿಣಿ, ಆಯೋಜನೆ: ಜಯಂಟ್ಸ್ ಗ್ರೂಪ್ ಆಫ್ ಗಾರ್ಡನ್ ಸಿಟಿ ಬೆಂಗಳೂರು, ಸ್ಥಳ: ಶ್ರೀ ಕೃಷ್ಣದೇವರಾಯ ಕಲಾಮಂದಿರ, ವೈಯಾಲಿಕಾವಲ್, ಸಂಜೆ 5.45

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

### ಇಂಧನ ಇಲಾಖೆ ಪ್ರಗತಿ ಪರಿಶೀಲನಾ ಸಭೆ

# ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಕುಸಿತ: ಸಿದ್ದರಾಮಯ್ಯ ಕಳವಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ 32,009 ಮೆಗಾ ವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವಿದೆ. ನಾಲ್ಕು ವರ್ಷಗಳಲ್ಲಿ ಉತ್ಪಾದನೆ ಕುಸಿತವಾಗಿದ್ದು, ಇದಕ್ಕೆ ಕಾರಣಗಳೇನು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳನ್ನು ಪ್ರಶ್ನಿಸಿದರು.

ನಮ್ಮ ಮೊದಲ ಅವಧಿಯ ಸರ್ಕಾರದಲ್ಲಿ ಎಲ್ಲಾ ಸಮಸ್ಯೆಗಳ ನಡುವೆಯೂ ವಿದ್ಯುತ್ ಉತ್ಪಾದನೆ ದುಪ್ಪಟ್ಟಾಗಿತ್ತು. 2013–14 ರಲ್ಲಿ 14,048 ಮೆಗಾ ವಾಟ್ ಉತ್ಪಾದನೆ ಆಗುತ್ತಿತ್ತು. 2017–18 ರ ವೇಳೆಗೆ 27,780 ಮೆಗಾ ವಾಟ್‌ಗೆ ಉತ್ಪಾದನೆ ಏರಿಕೆಯಾಗಿತ್ತು. ಆದರೆ ಈಗ ಕುಸಿದಿದೆ ಎಂದು ಅವರು ಶುಕ್ರವಾರ ನಡೆದ ಇಂಧನ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು, ‘ಕೇಂದ್ರದಿಂದ ರಾಜ್ಯಕ್ಕೆ ಹಂಚಿಕೆಯಾಗಿರುವ ಕಲ್ಲಿದ್ದಲಿನ ಗುಣಮಟ್ಟ ಉತ್ತಮವಾಗಿರಲಿಲ್ಲ. ಅಗತ್ಯ ಗುಣಮಟ್ಟ ಇಲ್ಲದ ಕಾರಣ, ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತಿದೆ. ಈ ವಿಚಾರವನ್ನು ಕೇಂದ್ರದ ಗಮನಕ್ಕೆ ತರಲಾಗಿದೆ. ಪ್ರತಿ ದಿನ ಎರಡು ರೇಕುಗಳಷ್ಟು ಹೆಚ್ಚುವರಿ ಕಲ್ಲಿದ್ದಲು ಹಂಚಿಕೆಗೆ ಕೋರಿದ್ದೇವೆ. ಇದಲ್ಲದೆ ಕಲ್ಲಿದ್ದಲು ಆಮದು ಮಾಡಿಕೊಳ್ಳಲು ಟೆಂಡರ್ ಕರೆಯಲಾಗಿದೆ’ ಎಂದರು.

**ಮುಖ್ಯಾಂಶಗಳು**

- **ಉಷ್ಣವಿದ್ಯುತ್ ಸ್ಥಾವರಗಳಲ್ಲಿ ತೇವಗೊಂಡ ಕಲ್ಲಿದ್ದಲು ಬಳಕೆ ಮಾಡದಿರಲು ಸೂಚನೆ**
- **ನೀರಾವರಿಗೆ ಸೌರ ವಿದ್ಯುತ್ ಪಂಪ್‌ಸೆಟ್ ಬಳಕೆಯನ್ನು ಉತ್ತೇಜಿಸುವ ಕುರಿತು ಚರ್ಚೆ**

ರಾಜ್ಯದ ಸ್ಥಾಪಿತ ಸಾಮರ್ಥ್ಯಕ್ಕೆ ಅನುಸಾರವಾಗಿ ವಿದ್ಯುತ್ ಉತ್ಪಾದನೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ಉಷ್ಣವಿದ್ಯುತ್ ಸ್ಥಾವರಗಳಲ್ಲಿ ತೇವಗೊಂಡ ಕಲ್ಲಿದ್ದಲನ್ನು ಯಾವುದೇ ಕಾರಣಕ್ಕೂ ಬಳಕೆ ಮಾಡಬಾರದು ಸಿದ್ದರಾಮಯ್ಯ ಸೂಚಿಸಿದರು.

ನೀರಾವರಿಗೆ ಸೌರ ವಿದ್ಯುತ್ ಪಂಪ್‌ಸೆಟ್‌ಗಳ ಬಳಕೆಯನ್ನು ಉತ್ತೇಜಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಇದರಿಂದ ಅಕ್ರಮ ನೀರಾವರಿ ಪಂಪ್‌ಸೆಟ್ ಹಾವಳಿ ಹಾಗೂ ವಿದ್ಯುತ್ ಪ್ರಸರಣ ಸೋರಿಕೆ ತಡೆಗಟ್ಟಲು ಸಾಧ್ಯ ಎಂಬ ಅಂಶಗಳ ಕುರಿತು ಅಧಿಕಾರಿಗಳು ಮುಖ್ಯಮಂತ್ರಿ ಗಮನಕ್ಕೆ ತಂದರು.

ಗೃಹಜ್ಯೋತಿ ಯೋಜನೆಯಡಿ ಆಗಸ್ಟ್‌ನಲ್ಲಿ 1.26 ಕೋಟಿ ಗ್ರಾಹಕರಿಗೆ ಮತ್ತು ಸೆಪ್ಟೆಂಬರ್‌ನಲ್ಲಿ 1.35 ಕೋಟಿ ಗ್ರಾಹಕರಿಗೆ ಶೂನ್ಯ ಮೊತ್ತದ ವಿದ್ಯುತ್ ಬಿಲ್ ನೀಡಲಾಗಿದೆ. ಇದಕ್ಕಾಗಿ ₹1,400 ಕೋಟಿ ಒದಗಿಸಲಾಗಿದೆ ಎಂದೂ ಅಧಿಕಾರಿಗಳು ಹೇಳಿದರು.

ಎಸ್ಕಾಂಗಳ ಆರ್ಥಿಕ ಸ್ಥಿತಿಗತಿ ಕುರಿತೂ ಸಭೆಯಲ್ಲಿ ಚರ್ಚಿಸಲಾಯಿತು. ವಿದ್ಯುತ್ ಸೋರಿಕೆ ಕುರಿತಂತೆ ರಾಜ್ಯದ ಎಲ್ಲ ಎಸ್ಕಾಂಗಳೂ ಹೆಚ್ಚಿನ ಗಮನಹರಿಸುವಂತೆ ಸಿದ್ದರಾಮಯ್ಯ ಸೂಚಿಸಿದರು. ಅಲ್ಲದೆ, ಅಗತ್ಯವಿರುವಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಕೆ ಹಾಗೂ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಕ್ರಮ ವಹಿಸಬೇಕು ಎಂದರು.

ಪ್ರಸಕ್ತ ವರ್ಷದಲ್ಲಿ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗಾಗಿ ₹2,500 ಕೋಟಿ ಒದಗಿಸಲಾಗಿದೆ. ರಾಜ್ಯ ಪ್ರಸಕ್ತ ವಿದ್ಯುತ್ ಪರಿಸ್ಥಿತಿ ಕುರಿತು ಹಾಗೂ ಆರ್ಥಿಕ ಸ್ಥಿತಿಗತಿ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸುವುದು ಸೂಕ್ತ ಎಂದು ಮುಖ್ಯಮಂತ್ರಿ ಸಲಹೆ ನೀಡಿದರು. ಸಭೆಯಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ಮತ್ತು ಹಿರಿಯ ಅಧಿಕಾರಿಗಳು ಇದ್ದರು.

### ದೊಡ್ಡ ಬಿದರಕಲ್ಲು, ಹೇರೋಹಳ್ಳಿ ಭಾಗದ ಜನರಿಗೆ ತೊಂದರೆ

# ಕುಡಿಯುವ ನೀರಿನ ಸಮಸ್ಯೆ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿನಗರ:** ‘ದೊಡ್ಡ ಬಿದರಕಲ್ಲು, ಹೇರೋಹಳ್ಳಿ ಭಾಗದ ಜನರಿಗೆ ಕುಡಿಯುವ ನೀರು ಪೂರೈಸದೇ ದ್ವೇಷದ ರಾಜಕಾರಣ ಮಾಡುತ್ತಿರುವುದು ಸರಿಯಲ್ಲ. ಇದು ಮುಂದುವರಿದರೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಶಾಸಕ ಎಸ್.ಟಿ.ಸೋಮಶೇಖರ್ ವಿರುದ್ಧ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಜೆಡಿಎಸ್ ಮುಖಂಡ ಟಿ.ಎನ್.ಜವರಾಯಿಗೌಡ ಎಚ್ಚರಿಸಿದರು.

ದೊಡ್ಡಬಿದರಕಲ್ಲು, ಹೇರೋಹಳ್ಳಿ ವ್ಯಾಪ್ತಿಯ ಜನರಿಗೆ ಕುಡಿಯುವ ನೀರು ಪೂರೈಸಲು ಆಗ್ರಹಿಸಿ ಜೆಡಿಎಸ್ ಮುಖಂಡ ಟಿ.ಎನ್.ಜವರಾಯಿಗೌಡ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಬಿಇಎಲ್ ಬಡಾವಣೆಯ ಶಾಸಕರ ಕಚೇರಿ ಮುಂಭಾಗದಿಂದ ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿವರೆಗೆ ವಿವಿಧ ಬಡಾವಣೆಗಳಿಂದ ಬಂದಿದ್ದ ನಾಗರಿಕರ ಜೊತೆಗೂಡಿ ಪಾದಯಾತ್ರೆ ಮೂಲಕ ತೆರಳಿ ಮನವಿ ಸಲ್ಲಿಸಿದ ಬಳಿಕ ಅವರು ಮಾತನಾಡಿದರು.

‘ಈ ವ್ಯಾಪ್ತಿಯ ಮತದಾರರು ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸಿದ್ದಾರೆ ಎನ್ನುವ ಕಾರಣಕ್ಕೆ ಕುಡಿಯುವ ನೀರು ಪೂರೈಸುತ್ತಿಲ್ಲ’ ಎಂದು ಆಪಾದಿಸಿದರು.

‘ಸಾರ್ವಜನಿಕರು ಕೂಲಿ ಮಾಡಿ ತೆರಿಗೆ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡುತ್ತಿದ್ದಾರೆ. ಆ ಹಣದಲ್ಲಿ ಜನರಿಗೆ ಬೇಕಾಗಿರುವ ಕುಡಿಯುವ ನೀರು, ರಸ್ತೆ, ವಿದ್ಯುತ್ ವ್ಯವಸ್ಥೆ ಕಲ್ಪಿಸಿ. ನಮ್ಮ ತೆರಿಗೆ ಹಣದಲ್ಲಿ ಸವಲತ್ತು ನೀಡಿ’ ಎಂದು ಆಗ್ರಹಿಸಿದರು.

‘ಎಸ್.ಟಿ.ಸೋಮಶೇಖರ್ ಬಿಜೆಪಿಯವರಿಗೆ ಮಾತ್ರ ಶಾಸಕರಲ್ಲ. ಈ ಕ್ಷೇತ್ರದ ಮತದಾರನಾದ ನನಗೂ ಶಾಸಕರು ಎಂಬುದನ್ನು ಮರೆಯಬಾರದು. ಚುನಾವಣೆಗೆ ಮಾತ್ರ ರಾಜಕೀಯ ಮಾಡಬೇಕು. ಗೆದ್ದ ನಂತರ ಎಲ್ಲರಿಗೂ ಶಾಸಕರು. ಪಕ್ಷದ ಶಾಸಕರಲ್ಲ’ ಎಂದರು.

‘ಬಿಜೆಪಿ ಕಾರ್ಯಕರ್ತರು ವಾಸಿಸುವ ಮನೆಗಳ ವ್ಯಾಪ್ತಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಪೂರೈಸಲಾಗುತ್ತಿದೆ. ಉಳಿದವರು ಮನುಷ್ಯರಲ್ಲವೇ’ ಎಂದರು.

> **ದೊಡ್ಡ ಬಿದರಕಲ್ಲು ವ್ಯಾಪ್ತಿಯಲ್ಲಿ ನಿತ್ಯ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ಕೊಳವೆಬಾವಿ ಕೊರೆಸಲು ಕರೆದಿದ್ದ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದೆ. ನೀರು ಸಿಗುವ ಪ್ರದೇಶದಲ್ಲಿ ಕೊಳವೆ ಬಾವಿ ತೊಡಿಸಲಾಗುವುದು.**
>
> **ಬಿ.ರಮೇಶ್**
> ಸಹಾಯಕ ಕಾರ್ಯಪಾಲಕ ಎಂಜಿನಿಯರ್

# ಘರ್ಷಣೆ; ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

**ಖಾನಾಪುರ (ಬೆಳಗಾವಿ ಜಿಲ್ಲೆ):** ತಾಲ್ಲೂಕಿನ ತೋಪಿನಕಟ್ಟಿ ಗ್ರಾಮದಲ್ಲಿ ಶುಕ್ರವಾರ ಮರಾಠಾ ಮತ್ತು ಪರಿಶಿಷ್ಟ ಸಮುದಾಯದ ಯುವಕರ ಮಧ್ಯೆ ಘರ್ಷಣೆ, ಕಲ್ಲು ತೂರಾಟ ನಡೆದಿದೆ. ಕೆಲವರಿಗೆ ಗಾಯಗಳಾಗಿದ್ದು, ಪೊಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ಶಾಸಕ ವಿಠ್ಠಲ ಹಲಗೇಕರ ಅವರಿಗೂ ಸಣ್ಣಪುಟ್ಟ ಗಾಯಗಳಾಗಿವೆ.

‘ಎರಡೂ ಗುಂಪುಗಳ ತಲಾ 40 ಯುವಕರ ವಿರುದ್ಧ ಖಾನಾಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಎರಡು ಕಡೆಯವರು ಶಾಸಕರನ್ನು ಎಳೆದಾಡಿದರು. ಮೈಕೈ ನೋವಾಗಿದ್ದು, ಪ್ರಾಥಮಿಕ ಚಿಕಿತ್ಸೆ ಪಡೆದಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಗಣೇಶ ಚತುರ್ಥಿ ಪ್ರಯುಕ್ತ ಪರಿಶಿಷ್ಟ ಸಮುದಾಯದ ಯುವಕರು ಬುಧವಾರ ಹುಂದರಿ ಹಬ್ಬ (ಇಲಿ ಹಬ್ಬ) ಆಚರಿಸಿದ ಬಳಿಕ, ರಾತ್ರಿ ಮರಾಠಾ ಸಮುದಾಯದ ಸ್ಮಶಾನದ ಬಳಿ ಸೇರಿದ್ದರು. ಅಲ್ಲಿಗೆ ಬಂದಿದ್ದ ಮರಾಠಾ ಯುವಕರು ‘ನಮ್ಮ ಸ್ಮಶಾನದ ಬಳಿ ಏಕೆ ನಿಂತಿದ್ದೀರಿ’ ಎಂದು ತಕರಾರು ತೆಗೆದರು. ಆಗ ಎರಡೂ ಗುಂಪಿನ ಮಧ್ಯೆ ವಾಗ್ವಾದ ನಡೆಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

> **ನನ್ನ ಮಾತಿಗೆ ಸ್ಪಂದಿಸಿ ಮರಾಠಾ ಸಮುದಾಯದವರು ಸ್ಪಂದಿಸಿ, ಮೌನವಾಗಿದ್ದಾರೆ. ಪರಿಶಿಷ್ಟರ ಹೋರಾಟ ಮುಂದುವರಿದಿದೆ. ಶಾಂತಿ ಕಾಪಾಡಲು ಪ್ರಯತ್ನ ಮುಂದುವರಿದಿದೆ**
> **ವಿಠ್ಠಲ ಹಲಗೇಕರ,** ಶಾಸಕ

ಶುಕ್ರವಾರ ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನೆ ನಡೆಸಿದ್ದ ಪರಿಶಿಷ್ಟ ಸಮುದಾಯದ ಯುವಕರು ಮರಾಠಾ ಯುವಕರ ವಿರುದ್ಧ ಘೋಷಣೆ ಕೂಗಿದರು. ಪ್ರತಿಯಾಗಿ ಮರಾಠಾ ಸಮುದಾಯದವರೂ ಶಕ್ತಿ ಪ್ರದರ್ಶಿಸಿದರು .

ವಿಷಯ ತಿಳಿದ ಶಾಸಕ ವಿಠ್ಠಲ ಹಲಗೇಕರ, ಪೊಲೀಸರೊಂದಿಗೆ ಸ್ಥಳಕ್ಕೆ ಬಂದು ಎರಡೂ ಗುಂಪಿನ ಮುಖಂಡರ ಜೊತೆ ಚರ್ಚಿಸಿದರು. ಆಗ ಕೆಲ ಕಿಡಿಗೇಡಿಗಳು ಕಲ್ಲು ತೂರಾಟ ಆರಂಭಿಸಿದರು. ಗ್ರಾಮದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ತೋಪಿನಕಟ್ಟಿ ಗ್ರಾಮದಲ್ಲಿ ಶುಕ್ರವಾರ ಪ್ರತಿಭಟನೆ ಮಾಡಿದ ಪರಿಶಿಷ್ಟ ಸಮುದಾಯದ ಯುವಕರು ಇನ್‌ಸ್ಪೆಕ್ಟರ್ ಮಂಜುನಾಥ ನಾಯ್ಕ ಅವರೊಂದಿಗೆ ವಾಗ್ವಾದ ನಡೆಸಿದರು

ಕೆಂಗೇರಿಯಲ್ಲಿ ಡಿಜಿಟಲ್ ಗ್ರಂಥಾಲಯ ಕಟ್ಟಡವನ್ನು ಶಾಸಕ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು. ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶ್ ಕುಮಾರ್ ಎಸ್.ಹೊಸಮನಿ ಹಾಗೂ ಅಂಜನಪ್ಪ, ಕೆ.ಆರ್.ಮೂರ್ತಿ, ಮಹೇಂದ್ರ ಕಿರಣ್ ಇದ್ದರು

# ‘ಅಭಿವೃದ್ಧಿಗೆ ಯಾವ ತ್ಯಾಗಕ್ಕೂ ಸಿದ್ಧ’

ಪ್ರಜಾವಾಣಿ ವಾರ್ತೆ

**ಕೆಂಗೇರಿ:** ‘ಬದಲಾದ ಸನ್ನಿವೇಶದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಇಬ್ಬರೂ ನಾಯಕರೊಂದಿಗೆ ಮಾತುಕತೆ ನಡೆಸುವುದು ದುಸ್ತರವಾಗುತ್ತಿದೆ’ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಹೇಳಿದರು.

ಕೆಂಗೇರಿ ಉಪನಗರದಲ್ಲಿ ನೂತನವಾಗಿ ನಿರ್ಮಿಸಿರುವ ಡಿಜಿಟಲ್ ಗ್ರಂಥಾಲಯ ಕಟ್ಟಡವನ್ನು ಉದ್ಘಾಟಿಸಿದ ಅವರು, ‘ಅಭಿವೃದ್ಧಿ ವಿಚಾರದಲ್ಲಿ ಕಾಂಗ್ರೆಸ್ ನಾಯಕರೊಂದಿಗೆ ಚರ್ಚೆ ನಡೆಸುವುದು ಅನಿವಾರ್ಯ. ಇದು ಬಿಜೆಪಿಗರಿಗೆ ಮುಜುಗರ ತರಿಸುತ್ತಿದೆ. ಕಾಂಗ್ರೆಸ್‌ನವರು ನೀವು ಸರ್ಕಾರ ಬೀಳಿಸಿ ಹೋದವರು ಎನ್ನುತ್ತಾರೆ. ಯಾರೊಂದಿಗೆ ಸಮನ್ವಯ ಸಾಧಿಸುವುದು’ ಎಂದರು.

’ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಇಂತಹ ನೂರು ಆರೋಪಗಳನ್ನು ಎದುರಿಸಲು ಸಿದ್ಧ. ಕ್ಷೇತ್ರದ ಸರ್ವ ತೋಮುಖ ಬೆಳವಣಿಗೆಗಾಗಿ ಯಾವ ತ್ಯಾಗಕ್ಕೂ ಸಿದ್ಧ. ಕೆಂಗೇರಿ ಉಪನಗರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣಕ್ಕಾಗಿ ₹ 1. 75 ಕೋಟಿ ಬಿಡುಗಡೆ ಮಾಡಲಾಗಿತ್ತು. ಮಾಜಿ ವಸತಿ ಸಚಿವರೊಬ್ಬರ ಶಾಲೆಗೆ ತೊಂದರೆಯಾಗುವ ಆತಂಕದಿಂದ ಕಾಮಗಾರಿಗೆ ತಡೆಯಾಜ್ಞೆ ತರಲಾಯಿತು’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಉಲ್ಲಾಳ ಬಳಿ ಕಾಲೇಜು ನಿರ್ಮಾಣಕ್ಕೆ 5 ಎಕರೆ ನಿವೇಶನ ಗುರುತಿಸಲಾಗಿದೆ. ಶೀಘ್ರದಲ್ಲಿಯೇ ಕಾಲೇಜು ಕಾಮಗಾರಿಗೆ ಚಾಲನೆ ನೀಡಲಾಗುವುದು’ ಎಂದು ತಿಳಿಸಿದರು.

‘110 ಹಳ್ಳಿ ವ್ಯಾಪ್ತಿಯಲ್ಲಿ ಕಾವೇರಿ ಕುಡಿಯುವ ನೀರು ಸರಬರಾಜು ಹಾಗೂ ಬೋರ್‌ವೆಲ್ ದುರಸ್ತಿಗಾಗಿ ಸರ್ಕಾರದಿಂದ ₹10 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ’ ಎಂದು ಹೇಳಿದರು.

### ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ

# ‘ಡ್ರೋನ್ ರಫ್ತು: ಭಾರತ ಮುಂಚೂಣಿ’

ಪ್ರಜಾವಾಣಿ ವಾರ್ತೆ

**ಯಲಹಂಕ:** ‘ಮುಂದಿನ ಐದು ವರ್ಷಗಳಲ್ಲಿ ಭಾರತವು ಇಡೀ ಜಗತ್ತಿಗೆ ನೂತನ ತಂತ್ರಜ್ಞಾನ, ಗುಣಮಟ್ಟದ ಸಲಕರಣೆ, ಯುದ್ಧ ವಿಮಾನ ಹಾಗೂ ಡ್ರೋನ್‌ಗಳನ್ನು ರಫ್ತು ಮಾಡುವ ಮೂಲಕ ‘ವಿಶ್ವಗುರು’ ಸ್ಥಾನಕ್ಕೆ ಏರುವುದರಲ್ಲಿ ಸಂಶಯವಿಲ್ಲ ಎಂದು ಏರೋನಾಟಿಕಲ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಜಿ.ಸತೀಶ್‌ರೆಡ್ಡಿ ಹೇಳಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಸಮ್ಮೇಳನದಲ್ಲಿ ಏರೋನಾಟಿಕಲ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ ಜಿ.ಸತೀಶ್ ರೆಡ್ಡಿ ಹಾಗೂ ಇನೋವೇಶನ್ ಮತ್ತು ಸಂಶೋಧನಾ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಪ್ರೊ.ಯು. ಚಂದ್ರಶೇಖರ್ ಚರ್ಚೆಯಲ್ಲಿ ತೊಡಗಿದ್ದರು. ನವಿಲ್ ಶೆಟ್ಟಿ, ಅಥುಲ್ ಸಿಂಘಲ್, ನಿಟ್ಟೆ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ರೋಹಿತ್ ಪೂಂಜ, ಶೈಕ್ಷಣಿಕ ವಿಭಾಗದ ಮುಖ್ಯಸ್ಥ ವಿ.ಶ್ರೀಧರ್, ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಎಚ್.ಸಿ.ನಾಗರಾಜ್ ಇದ್ದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಸಿವಿಲ್, ಏರೋನಾಟಿಕಲ್ ಹಾಗೂ ಮೆಕ್ಯಾನಿಕಲ್ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ನಡೆಯುತ್ತಿರುವ ನವೀನ ಅನ್ವೇಷಣೆಗಳ ಕುರಿತ ಎರಡು ದಿನದ ಅಂತರರಾಷ್ಟ್ರೀಯ ಸಮ್ಮೇಳನ (ಎಕ್ಯಾಂ–2023) ಉದ್ಘಾಟಿಸಿ ಅವರು ಮಾತನಾಡಿದರು.

‘ಯುವ ತಂತ್ರಜ್ಞರು ತಾವು ಕಲಿತಿರುವ ಜ್ಞಾನದ ಹಿನ್ನೆಲೆಯಲ್ಲಿ ನವೀನ ಅನ್ವೇಷಣೆಗಳನ್ನು ಮಾಡುತ್ತಿದ್ದಾರೆ. ಹೊಸಹೊಸ ಉಪಾಯಗಳನ್ನು ಅಳವಡಿಸಿಕೊಂಡು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು, ಇಂದು ಇಡೀ ಜಗತ್ತು ಕುತೂಹಲದಿಂದ ನಮ್ಮ ಕಡೆಗೆ ತಿರುಗಿ ನೋಡುವಂತಹ ಸಾಧನೆ ಮಾಡಿರುವುದೇ ಇದಕ್ಕೆ ಮುಖ್ಯಕಾರಣ’ ಎಂದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಕುಲಾಧಿಪತಿ ಪ್ರೊ. ಎನ್.ಆರ್.ಶೆಟ್ಟಿ ಇದ್ದರು.

### ಮೂವರು ಡಿಸಿಎಂ ವಿಚಾರ ಕುರಿತು ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ

# ‘ಹೈಕಮಾಂಡ್ ಮೇಲೆ ಒತ್ತಡವಿದೆ’

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಂಗಳೂರು: ‘ಉಪ ಮುಖ್ಯಮಂತ್ರಿ ಹುದ್ದೆ ನೀಡಬೇಕು ಎಂಬುದು ನಮ್ಮ ವೈಯಕ್ತಿಕ ಬೇಡಿಕೆಯಲ್ಲ. ಮೂರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸುವಂತೆ ಪಕ್ಷದ ಹೈಕಮಾಂಡ್ ಮೇಲೆ ಒತ್ತಡವಿದೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ನಾನಾಗಲೀ, ಕೆ.ಎನ್. ರಾಜಣ್ಣ ಅವರಾಗಲೀ, ಜಿ. ಪರಮೇಶ್ವರ ಅವರಾಗಲೀ ವೈಯಕ್ತಿಕವಾಗಿ ಬೇಡಿಕೆ ಇಟ್ಟಿಲ್ಲ. ಸಮುದಾಯವಾರು ಉಪ ಮುಖ್ಯಮಂತ್ರಿ ಮಾಡಬೇಕೆಂಬ ಒತ್ತಡವಿದೆ. ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಈ ವಿಚಾರದಲ್ಲಿ ನಮ್ಮನ್ನೇನೂ ಕೇಳುವುದಿಲ್ಲ’ ಎಂದರು.

ಬಿಜೆಪಿ ಸರ್ಕಾರದಲ್ಲಿ ಸಮುದಾಯವಾರು ಉಪ ಮುಖ್ಯಮಂತ್ರಿ ಮಾಡಿದ್ದರು. ಕಾಂಗ್ರೆಸ್ ಸರ್ಕಾರದಲ್ಲೂ ಹಿಂದೆಪರಮೇಶ್ವರಅವರಿಗೆಉಪಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. ಉಪ ಮುಖ್ಯಮಂತ್ರಿ ಹುದ್ದೆ ನೀಡಿದರೆ ಲೋಕಸಭಾ ಚುನಾವಣೆಯಲ್ಲಿ ಎಷ್ಟು ಪರಿಣಾಮ ಬೀರುತ್ತದೆ ಎಂದು ಹೇಳುವುದು ಕಷ್ಟ. ಜನರು ಪಕ್ಷ ನೋಡಿ ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು.

‘ನಾನು ಉಪ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಲ್ಲ. ಯಾರಿಗೆ ಆ ಹುದ್ದೆ ನೀಡಬೇಕು ಎಂದು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ನಮ್ಮ ಬೆಂಬಲಿಗರು ಆಸೆಪಡುತ್ತಾರೆ ಎಂದು ಹುದ್ದೆ ನೀಡಲು ಆಗುವುದಿಲ್ಲ. ಇನ್ನೂ 30 ಮಂದಿಗೆ ಸಚಿವರಾಗುವ ಆಸೆ ಇದೆ. ಅವರಿಗೆ ಅವಕಾಶ ಸಿಕ್ಕಿಲ್ಲ’ ಎಂದರು.

## ಪಕ್ಷಕ್ಕೆ ಅನುಕೂಲವಾಗುವುದಾದರೆ ಕ್ರಮ: ವೆಂಕಟೇಶ್

ಕೆ. ವೆಂಕಟೇಶ್

ಮೈಸೂರು: ‘ರಾಜಕೀಯವಾಗಿ ಪಕ್ಷಕ್ಕೆ ಅನುಕೂಲವಾಗುವುದಾದರೆ ಹೈಕಮಾಂಡ್ ಮತ್ತೆ ಮೂವರು ಡಿಸಿಎಂಗಳನ್ನು ಮಾಡುತ್ತದೆ’ ಎಂದು ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ. ವೆಂಕಟೇಶ್ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ‘ಎಲ್ಲರಿಗೂ ಆಸೆ ಇರುತ್ತದೆ. ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿಯೂ ಆಗಿರುವ ಡಿ.ಕೆ. ಶಿವಕುಮಾರ್ ಅವರಿಗೂ ಮುಖ್ಯಮಂತ್ರಿಯಾಗುವ ಅರ್ಹತೆ ಇದೆ. ಕೇಳುವುದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ಬಿಜೆಪಿ–ಜೆಡಿಎಸ್ ಮೈತ್ರಿ ನಿರೀಕ್ಷಿತವೇ. ಎರಡು ಪಕ್ಷಗಳಿಗೂ ಹೊಂದಾಣಿಕೆ ಅನಿವಾರ್ಯ. ಹಿಂದಿನಿಂದಲೂ ಅದನ್ನು ಮಾಡಿಕೊಂಡೇ ಬಂದಿದ್ದಾರೆ. ಈಗ ಬಹಿರಂಗವಾಗಿ ಮಾಡಿಕೊಳ್ಳುತ್ತಿದ್ದಾರಷ್ಟೆ. ಇದರಿಂದ ಕಾಂಗ್ರೆಸ್‌ಗೆ ವ್ಯತಿರಿಕ್ತ ಪರಿಣಾಮವೇನೂ ಉಂಟಾಗುವುದಿಲ್ಲ’ ಎಂದರು.

### ‘ಶಿವಕುಮಾರ್ ಮೆತ್ತಗಾಗ್ತಾರೋ ಇಲ್ಲವೋ ಎಲ್ಲರಿಗೂ ಗೊತ್ತಿದೆ’

‘ಶಿವಕುಮಾರ್ ಮೆತ್ತಗಾಗ್ತಾರೋ ಇಲ್ಲವೋ ಎಲ್ಲರಿಗೂ ಗೊತ್ತಿದೆ. 1975ರಿಂದಲೂ ನನ್ನ ಹೋರಾಟ ನೋಡಿದ್ದೀರಿ. ನನ್ನ ರಾಜಕೀಯ ಹಾದಿ ಗೊತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮೂರು ಡಿಸಿಎಂ ಸೃಷ್ಟಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ನನ್ನನ್ನು ಉಪ ಮುಖ್ಯಮಂತ್ರಿ ಮಾಡಿದ್ದಾರೆ. ಬೇಕಾದಷ್ಟು ಜನರು ಆಸೆಪಡುತ್ತಾರೆ. ಅವರಿಗೆ ಏನೂ ಹೇಳಲು ಆಗುವುದಿಲ್ಲ’ ಎಂದರು.

### ‘6 ಡಿಸಿಎಂ, ಒಬ್ಬ ಪ್ರಧಾನ ಡಿಸಿಎಂ ಆಗಲಿ’

ಬೆಂಗಳೂರು: ‘ರಾಜ್ಯದಲ್ಲಿ ಆರು ಉಪ ಮುಖ್ಯಮಂತ್ರಿ ಹುದ್ದೆಗಳನ್ನು ಸೃಜಿಸುವ ಜತೆಗೆ ‘ಪ್ರಿನ್ಸಿಪಲ್ ಡೆಪ್ಯುಟಿ ಚೀಫ್ ಮಿನಿಸ್ಟರ್’ ಹುದ್ದೆಯನ್ನು ಸೃಜಿಸಿ ಇತಿಹಾಸ ಸೃಷ್ಟಿಸಬೇಕು’ ಎಂದು ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

‘ಬಿಜೆಪಿ ಸರ್ಕಾರದಲ್ಲಿ ಮೂವರು ಡಿಸಿಎಂಗಳಿದ್ದರು. ಆಂಧ್ರ ಪ್ರದೇಶದಲ್ಲಿ ಐವರು ಡಿಸಿಎಂಗಳಿದ್ದಾರೆ. ಆದ್ದರಿಂದ ಇಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪಕ್ಷದ ಹೈಕಮಾಂಡ್ ಆರು ಹುದ್ದೆಗಳನ್ನು ಸೃಷ್ಟಿಸಲಿ’ ಎಂದು ಆಗ್ರಹಿಸಿದರು.

‘ರಾಜ್ಯದ ಪ್ರತಿಯೊಂದು ವಲಯ ಸೇರಿದಂತೆ ಪ್ರಬಲ ಸಮುದಾಯಕ್ಕೆ ಹುದ್ದೆ ಕೊಟ್ಟಂತಾಗುತ್ತದೆ. ಹೆಚ್ಚು ಡಿಸಿಎಂ ಹುದ್ದೆ ಸೃಷ್ಟಿಸುವುದರಿಂದ ಲೋಕಸಭೆ ಚುನಾವಣೆಯಲ್ಲಿ ಅಧಿಕ ಸ್ಥಾನಗಳನ್ನು ಗಳಿಸಿಬಹುದು ಎಂದು ಹೇಳಲಾಗುತ್ತಿದೆ. ಆದ್ದರಿಂದ ಮೂರೇಕೆ ಆರು ಡಿಸಿಎಂಗಳನ್ನೇ ನೇಮಿಸಲಿ’ ಎಂದರು.

## ‘ಕುಕ್ಕರ್, ಇಸ್ತ್ರಿಪೆಟ್ಟಿಗೆ ಸಿದ್ದರಾಮಯ್ಯ ಹಂಚಿಲ್ಲ’

ಯತೀಂದ್ರ

ಮೈಸೂರು: ‘ವರುಣ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆ ಗೆಲ್ಲುವುದಕ್ಕಾಗಿ ಸಿದ್ದರಾಮಯ್ಯ ಅವರು ಮಡಿವಾಳ ಸಮುದಾಯದವರಿಗೆ ಕುಕ್ಕರ್ ಹಾಗೂ ಇಸ್ತ್ರಿಪೆಟ್ಟಿಗೆಗಳನ್ನು ಕೊಟ್ಟಿದ್ದಾರೆ ಎಂದು ನಾನು ಎಲ್ಲಿಯೂ ಹೇಳಿಲ್ಲ’ ಎಂದು ಅವರ ಪುತ್ರ, ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ಪ್ರತಿಪಾದಿಸಿದರು.

ನಗರದಲ್ಲಿ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ನಾನು ಹೇಳಿರುವುದೇ ಒಂದು, ಸಾಮಾಜಿಕ ಮಾಧ್ಯಮ–ದೃಶ್ಯ ಮಾಧ್ಯಮದಲ್ಲಿ ತೋರಿಸುತ್ತಿರುವುದೇ ಒಂದು. ನನ್ನ ಹೇಳಿಕೆ ಆ ರೀತಿಯ ಅರ್ಥ ಕೊಟ್ಟಿರಲೂಬಹುದು. ಆದರೆ, ಚುನಾವಣೆಗೋಸ್ಕರ ಸಿದ್ದರಾಮಯ್ಯ ಕುಕ್ಕರ್ ಕೊಟ್ಟಿದ್ದಾರೆ ಎಂದಿಲ್ಲ’ ಎಂದರು.

‘ವಿಧಾನಸಭೆ ಚುನಾವಣೆ ನೀತಿಸಂಹಿತೆ ಜಾರಿಗೂ ಮುನ್ನ, ಜ.27ರಂದು ಮಡಿವಾಳ ಸಂಘದ ರಾಜ್ಯಾಧ್ಯಕ್ಷ ನಂಜಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ಕುಕ್ಕರ್ ವಿತರಿಸಲಾಗಿತ್ತು. ಅವರು ಹಿಂದಿನಿಂದಲೂ ಈ ಕಾರ್ಯಕ್ರಮ ನಡೆಸುತ್ತಿದ್ದಾರೆ. ಹಾವೇರಿ ಮೊದಲಾದೆಡೆಯೂ ವಿತರಿಸಿದ್ದಾರೆ. ತಂದೆ ಸ್ವತಃ ಕೈಯಿಂದ ಕೊಟ್ಟಿಲ್ಲ. ಆದರೆ, ಚುನಾವಣೆಗಾಗಿಯೇ ಕುಕ್ಕರ್ ಮತ್ತು ಇಸ್ತ್ರಿಪೆಟ್ಟಿಗೆಗಳನ್ನು ಹಂಚಲಾಗಿದೆ ಎಂದು ಮಾಧ್ಯಮದಲ್ಲಿ ಬರುತ್ತಿದೆ’ ಎಂದರು.

### ಆಯೋಗಕ್ಕೆ ಬಿಜೆಪಿ ದೂರು

ಬೆಂಗಳೂರು: ವಿಧಾನಸಭಾ ಚುನಾವಣೆ ವೇಳೆ ವರುಣ ಕ್ಷೇತ್ರದಲ್ಲಿ ಮತದಾರರಿಗೆ ಇಸ್ತ್ರಿ ಪೆಟ್ಟಿಗೆ ಮತ್ತು ಕುಕ್ಕರ್‌ಗಳನ್ನು ಹಂಚಿರುವುದಾಗಿ ಡಾ.ಯತೀಂದ್ರ ಸಿದ್ದರಾಮಯ್ಯ ನೀಡಿದ್ದಾರೆ ಎನ್ನಲಾದ ವಿಷಯಕ್ಕೆ ಸಂಬಂಧಿಸಿ ಬಿಜೆಪಿ ರಾಜ್ಯ ಘಟಕವು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

‘ಈ ಕುರಿತು ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕು ಎಂದು ಆಯೋಗಕ್ಕೆ ಮನವಿ ಮಾಡಿದ್ದೇವೆ’ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

‘ಸಿದ್ದರಾಮಯ್ಯ ಇಡೀ ದೇಶಕ್ಕೆ ನೀತಿ ಪಾಠ ಹೇಳುತ್ತಾರೆ. ನಾನೇ ಶ್ರೇಷ್ಠ ಎಂದೂ ಹೇಳಿಕೊಳ್ಳುತ್ತಾರೆ. ಆದರೆ ವರುಣ ಕ್ಷೇತ್ರದಲ್ಲಿ ಅವರೇ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ’ ಎಂದರು.

‘ಮಡಿವಾಳ ಸಮುದಾಯಕ್ಕೆ ಇಸ್ತ್ರಿ ಪೆಟ್ಟಿಗೆಗಳನ್ನು ಮತ್ತು ಮನೆ ಮನೆಗಳಿಗೆ ಕುಕ್ಕರ್‌ಗಳನ್ನು ಕೊಟ್ಟಿದ್ದೇವೆ. ಜತೆಗೆ ಹಣವನ್ನೂ ಕೊಟ್ಟಿದ್ದೇವೆ ಎಂದು ಯತೀಂದ್ರ ಅವರೇ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ಆ ವಿಡಿಯೊ ತುಣುಕು ಎಲ್ಲೆಡೆ ಲಭ್ಯವಿದೆ‘ ಎಂದು ಹೇಳಿದರು.

## ರಾಜ್ಯದಲ್ಲಿ ನಾಲ್ಕು ದಿನ ಉತ್ತಮ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ದಕ್ಷಿಣ ಹಾಗೂ ಉತ್ತರ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಶನಿವಾರದಿಂದ ನಾಲ್ಕು ದಿನಗಳ ಕಾಲ ಮೋಡ ಕವಿದ ವಾತಾವರಣ ಇರಲಿದ್ದು ಉತ್ತಮ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೀದರ್, ಕಲಬುರಗಿ, ವಿಜಯಪುರ ಜಿಲ್ಲೆಯ ಅಲ್ಲಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ, ಚಾಮರಾಜನಗರ ಜಿಲ್ಲೆ ಹಲವೆಡೆ ಮಳೆಯಾಗಲಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲೂ ಸಂಜೆ ಅಥವಾ ರಾತ್ರಿ ವೇಳೆ ಜೋರು ಮಳೆಯಾಗಲಿದೆ ಎಂದು ತಿಳಿಸಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಕಳೆದ 24 ಗಂಟೆ ಅವಧಿಯಲ್ಲಿ ಕಲಬುರಗಿ ಜಿಲ್ಲೆಯ ಚಿಂಚೋಳಿ, ಸುಲೇಪೇಟದಲ್ಲಿ 5 ಸೆಂ.ಮೀ, ಉತ್ತರ ಕನ್ನಡದ ಕದ್ರಾ, ಕಲಬುರಗಿಯ ಚಿತ್ತಾಪುರ, ಯಾದಗಿರಿಯ ಸೈದಾಪುರ, ವಿಜಯಪುರದ ಇಂಡಿಯಲ್ಲಿ 3 ಸೆಂ.ಮೀ ಮಳೆಯಾಗಿದೆ.

# ಟಿಕೆಟ್ ವಂಚನೆ: ₹3.67 ಕೋಟಿ ಜಪ್ತಿ

### ಗಗನ್ ಬಳಿ ₹20 ಲಕ್ಷ ಪತ್ತೆ ● ₹25 ಲಕ್ಷಕ್ಕೆ ಕಾರು ಖರೀದಿಸಿದ್ದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಚೈತ್ರಾ

ಹಾಲಶ್ರೀ

ಬೆಂಗಳೂರು: ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ವಂಚಿಸಿದ್ದ ಪ್ರಕರಣದ ತನಿಖೆ ಕೈಗೊಂಡಿರುವ ಸಿಸಿಬಿ ಪೊಲೀಸರು, ಬಂಧಿತ ಆರೋಪಿಗಳಿಂದ ₹3.67 ಕೋಟಿ ಜಪ್ತಿ ಮಾಡಿದ್ದಾರೆ. ₹25 ಲಕ್ಷ ಕೊಟ್ಟು ಹಾಲವೀರಪ್ಪ ಸ್ವಾಮೀಜಿ ಖರೀದಿಸಿದ್ದ ಇನ್ನೋವಾ ಕಾರನ್ನು ಪೊಲೀಸರು ಸುಪರ್ದಿಗೆ ಪಡೆದಿದ್ದಾರೆ.

‘ಪ್ರಕರಣದ ಪ್ರಮುಖ ಆರೋಪಿಗಳಾದ ಚೈತ್ರಾ ಕುಂದಾಪುರ, ಹಿರೇಹಡಗಲಿ ಹಾಲಸ್ವಾಮಿ ಮಠದ ಹಾಲವೀರಪ್ಪ ಸ್ವಾಮೀಜಿ ಹಾಗೂ ಇತರರಿಗೆ ಸೇರಿದ್ದ ಜಾಗಗಳಲ್ಲಿ ನಿರಂತರವಾಗಿ ಶೋಧ ನಡೆಸಲಾಗಿದೆ. ನಗದು, ಚಿನ್ನಾಭರಣ, ಠೇವಣಿ, ಆಸ್ತಿ ದಾಖಲೆಗಳು ಹಾಗೂ ಎರಡು ಕಾರುಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹3.67 ಕೋಟಿ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಉದ್ಯಮಿ ಗೋವಿಂದ ಬಾಬು ಪೂಜಾರಿ ಅವರಿಂದ ವಂಚನೆಗೆ ಸಂಬಂಧಪಟ್ಟಂತೆ ಎಲ್ಲ ದಾಖಲೆಗಳನ್ನು ಸಂಗ್ರಹಿಸಲಾಗಿತ್ತು. ದೂರಿನಲ್ಲಿದ್ದ ಸಂಗತಿಗಳಿಗೆ ಪೂರಕವಾದ ಪುರಾವೆಗಳನ್ನು ಹಾಗೂ ಸಾಕ್ಷಿಗಳ ಹೇಳಿಕೆಗಳನ್ನು ಈಗಾಗಲೇ ಸಂಗ್ರಹಿಸಲಾಗಿದೆ. ಅದಕ್ಕೆ ತಕ್ಕಂತೆ ಮಹಜರು ಹಾಗೂ ಜಪ್ತಿ ಪ್ರಕ್ರಿಯೆ ಸಹ ನಡೆಸಲಾಗಿದೆ’ ಎಂದು ಹೇಳಿದರು.

‘ಹಾಲಶ್ರೀ ಸ್ವಾಮೀಜಿಗೆ ಸಂಬಂಧಿಸಿದ ಮಹಜರು ಪ್ರಕ್ರಿಯೆ ಪೂರ್ಣಗೊಂಡಿದೆ. ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇರುವುದರಿಂದ, ಸ್ವಾಮೀಜಿಯನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಗೋವಿಂದ್ ಬಾಬು ಅವರಿಂದ ಹಣ ಪಡೆದಿದ್ದ ಸ್ವಾಮೀಜಿ, ಅದರಲ್ಲಿ ₹ 25 ಲಕ್ಷ ಕೊಟ್ಟು ಇನ್ನೋವಾ ಕ್ರಿಸ್ಟಾ ಕಾರು ಖರೀದಿಸಿದ್ದರು. ಅದೇ ಕಾರನ್ನು ಮಠದ ಬಳಿ ನಿಲ್ಲಿಸಿ ಸ್ವಾಮೀಜಿ ತಲೆಮರೆಸಿಕೊಂಡಿದ್ದರು. ಮಠದಲ್ಲಿ ಶೋಧ ನಡೆಸಿದ್ದ ಸಂದರ್ಭದಲ್ಲಿ ಕಾರು ಜಪ್ತಿ ಮಾಡಿ, ಬೆಂಗಳೂರಿಗೆ ತರಲಾಗಿದೆ’ ಎಂದು ಹೇಳಿದರು.

**ಚೈತ್ರಾ ನ್ಯಾಯಾಲಯಕ್ಕೆ ಇಂದು:** ‘ಚೈತ್ರಾ ಕುಂದಾಪುರ, ಗಗನ್ ಹಾಗೂ ಇತರೆ ಆರೋಪಿಗಳ ಕಸ್ಟಡಿ ಅವಧಿ ಶನಿವಾರ ಮುಗಿಯಲಿದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಗಳ ಮಹಜರು, ಹೇಳಿಕೆ ದಾಖಲು ಹಾಗೂ ಇತರೆ ಪ್ರಕ್ರಿಯೆಗಳು ಪೂರ್ಣಗೊಂಡಿವೆ. ಶನಿವಾರ ಎಲ್ಲರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು’ ಎಂದು ಅಧಿಕಾರಿ ತಿಳಿಸಿದರು.

### ಶೇ 88.50 ರಷ್ಟು ಜಪ್ತಿ: ಸಿಸಿಬಿ ಸಾಧನೆ

‘ವಂಚನೆ ಪ್ರಕರಣದ ತನಿಖೆಯನ್ನು ಯಶಸ್ವಿಯಾಗಿ ನಡೆಸುತ್ತಿರುವ ಡಿಸಿಪಿ ಅಬ್ದುಲ್ ಅಹದ್ ಹಾಗೂ ಎಸಿಪಿ ರೀನಾ ಸುವರ್ಣಾ ನೇತೃತ್ವದ ತಂಡ, ಶೇ 88.50ರಷ್ಟು ಜಪ್ತಿ ಪ್ರಕ್ರಿಯೆ ಪೂರ್ಣಗೊಳಿಸಿದೆ. ಇತರೆ ವಂಚನೆ ಪ್ರಕರಣಗಳಿಗೆ ಹೋಲಿಸಿದರೆ, ಟಿಕೆಟ್ ವಂಚನೆ ಪ್ರಕರಣದಲ್ಲಿ ಕಡಿಮೆ ಅವಧಿಯಲ್ಲಿ ಹೆಚ್ಚು ಜಪ್ತಿ ಆಗಿದೆ. ಇದು ತಂಡದ ಸಾಧನೆ’ ಎಂದು ಪೊಲೀಸ್ ಅಧಿಕಾರಿ ಹೊಗಳಿದರು.

### ಗರಿಷ್ಠ ಶಿಕ್ಷೆಯಾಗಲಿ: ಜೋಶಿ

ಹುಬ್ಬಳ್ಳಿ: ‘ಚೈತ್ರಾ ಕುಂದಾಪುರ ಬಿಜೆಪಿ ಸ್ಟಾರ್ ಪ್ರಚಾರಕಿ ಅಲ್ಲ. ನಮ್ಮ ಪಕ್ಷಕ್ಕೂ ಅವರಿಗೂ ಸಂಬಂಧವಿಲ್ಲ. ಪಕ್ಷ ಮತ್ತು ದೊಡ್ಡ ನಾಯಕರ ಹೆಸರು ಹೇಳಿ ಟೋಪಿ ಹಾಕುವ ಕೆಲಸ ಮಾಡಿದ್ದಾರೆ. ಇದರ ಬಗ್ಗೆ ಸೂಕ್ತ ತನಿಖೆ ನಡೆದು, ತಪ್ಪು ಸಾಬೀತಾದರೆ ಅವರಿಗೆ ಗರಿಷ್ಠ ಶಿಕ್ಷೆ ವಿಧಿಸಬೇಕು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಒತ್ತಾಯಿಸಿದರು.

‘₹20 ಸಾವಿರಕ್ಕಿಂತ ಹೆಚ್ಚು ನಗದು ಹಣ ಬಳಸಬಾರದು ಎಂಬ ನಿಯಮವಿದೆ. ಕೋಟ್ಯಂತರ ರೂಪಾಯಿ ಹಣ ಕೊಟ್ಟ ಉದ್ಯಮಿಗೆ ಬುದ್ಧಿ ಬೇಡ್ವಾ? ವಿಶೇಷ ತಂಡ ಇದನ್ನು ತನಿಖೆ ಮಾಡಿ, ಇಷ್ಟು ಹಣ ಎಲ್ಲಿಂದ ಬಂತು ಎಂಬುದನ್ನು ಪತ್ತೆ ಮಾಡಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಚೈತ್ರಾ ಬಗ್ಗೆ ಹೆಚ್ಚು ಮಾತನಾಡುತ್ತಿರುವ ಕಾಂಗ್ರೆಸ್ ಪಕ್ಷವು ತಲೆತಲಾಂತರದಿಂದ ಟಿಕೆಟ್ ಮಾರುತ್ತಿದೆ. ಸ್ವತಃ ಆ ಪಕ್ಷದ ನಾಯಕಿ ಮಾರ್ಗರೇಟ್ ಆಳ್ವಾ ಇದರ ಬಗ್ಗೆ ಹೇಳಿದ್ದರು’ ಎಂದು ಅವರು ಹೇಳಿದರು.

### ಜಪ್ತಿ ವಿವರ

- ಚೈತ್ರಾ ಕುಂದಾಪುರ: ₹ 81 ಲಕ್ಷ ನಗದು, ₹ 23 ಲಕ್ಷ ಮೌಲ್ಯದ ಚಿನ್ನಾಭರಣ, ₹ 1.8 ಕೋಟಿ ಮೊತ್ತದ ನಿಶ್ಚಿತ ಠೇವಣಿ, ₹ 12 ಲಕ್ಷ ಮೌಲ್ಯದ ಕಿಯಾ ಕಾರು
- ಹಾಲಶ್ರೀ ಸ್ವಾಮೀಜಿ; ಮಠದಲ್ಲಿ ₹ 56 ಲಕ್ಷ, ಪರಿಚಯಸ್ಥನ ಬಳಿ ₹ 25 ಲಕ್ಷ, ₹ 25 ಲಕ್ಷ ಮೌಲ್ಯದ ಇನ್ನೋವಾ ಕಾರು
- ಗಗನ್ ಕಡೂರು: ₹ 20 ಲಕ್ಷ ನಗದು
- ಧನರಾಜ್ ಹಾಗೂ ರಮೇಶ್: ₹ 6 ಲಕ್ಷ

## ಹಾಲಶ್ರೀ ವಿರುದ್ಧ ಮತ್ತೊಂದು ವಂಚನೆ ಪ್ರಕರಣ ದಾಖಲು

ಸಂಜಯ

ಮುಂಡರಗಿ (ಗದಗ ಜಿಲ್ಲೆ): ಕರ್ತವ್ಯಲೋಪದ ಆರೋಪದಲ್ಲಿ ಅಮಾನತುಗೊಂಡಿರುವ ಶಿರಹಟ್ಟಿ ತಾಲ್ಲೂಕಿನ ರಣತೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಸಂಜಯ ಚವಡಾಳ ಎಂಬುವರು ಅಭಿನವ ಹಾಲವೀರಪ್ಪ ಸ್ವಾಮೀಜಿ ವಿರುದ್ಧ ವಂಚನೆ ಆರೋಪ ಮಾಡಿ, ಮುಂಡರಗಿ ಪೊಲೀಸ್ ಠಾಣೆಗೆ ಸೆ. 18ರಂದು ದೂರು ನೀಡಿದ್ದಾರೆ.

ಶಿರಹಟ್ಟಿ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಸಂಜಯ ಚವಡಾಳ, ಅರುಂಧತಿ ಫೌಂಡೇಷನ್ ಹೆಸರಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದರು. ‘ಬಿಜೆಪಿಯಲ್ಲಿ ತುಂಬಾ ಪ್ರಭಾವಿ’ ಎಂದು ಬಿಂಬಿಸಿಕೊಂಡಿದ್ದ ಅಭಿನವ ಹಾಲವೀರಪ್ಪ ಸ್ವಾಮೀಜಿಯನ್ನು ಪರಿಚಯ ಮಾಡಿಕೊಂಡಿದ್ದರು. ಶಿರಹಟ್ಟಿ ಮೀಸಲು ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುವಂತೆ ಅವರಿಗೆ ಕೋರಿದ್ದರು. ಅದಕ್ಕಾಗಿ ₹50 ಲಕ್ಷ, ₹40 ಲಕ್ಷ ಮತ್ತು ₹10 ಲಕ್ಷದಂತೆ ಒಟ್ಟು ಮೂರು ಕಂತುಗಳಲ್ಲಿ ₹1 ಕೋಟಿ ಹಣವನ್ನು ಸ್ವಾಮೀಜಿಗೆ ನೀಡಿರುವುದಾಗಿ ದೂರಿನಲ್ಲಿ ತಿಳಿಸಿದ್ದಾರೆ.ಸೂಕ್ತ ದಾಖಲೆ ಇಲ್ಲದ ಕಾರಣ ಮುಂಡರಗಿ ಪೊಲೀಸರು ಎನ್‌ಸಿ ದಾಖಲಿಸಿ ಕಳುಹಿಸಿದ್ದಾರೆ. ಸ್ವಾಮೀಜಿಗೆ ಹಣ ನೀಡಿರುವ ಬಗ್ಗೆ ಸಮರ್ಪಕ ದಾಖಲೆ ಒದಗಿಸುವಂತೆ ಪೊಲೀಸರು ಸಂಜಯ ಅವರಿಗೆ ಸೂಚಿಸಿದ್ದಾರೆ.

‘ಶಿರಹಟ್ಟಿ ಮೀಸಲು ಕ್ಷೇತ್ರದ ಟಿಕೆಟ್ ಕೊಡಿಸುವುದಾಗಿ ಹೇಳಿ ಹಿರೇಹಡಗಲಿಯ ಅಭಿನವ ಹಾಲವೀರಪ್ಪ ಸ್ವಾಮೀಜಿ ₹1 ಕೋಟಿ ಪಡೆದಿದ್ದಾರೆ ಎಂದು ಆರೋಪಿಸಿ ಸಂಜಯ ಲಿಖಿತ ದೂರು ನೀಡಿದ್ದಾರೆ. ಹಣ ಕೊಟ್ಟಿರುವುದಕ್ಕೆ ದಾಖಲೆ ನೀಡುವಂತೆ ಅವರಿಗೆ ನೋಟಿಸ್ ಕೊಡಲಾಗಿದೆ. ದಾಖಲಾತಿ ಒದಗಿಸಿದರೆ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲಾಗುವುದು’ ಎಂದು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

## ‘ಎನ್‌ಡಿಎಗೆ ಜೆಡಿಎಸ್ ಸಮೀಕರಣವೇ ಬದಲು’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಜೆಡಿಎಸ್ ಪಕ್ಷ ಎನ್‌ಡಿಎ ಭಾಗವಾಗುವುದರಿಂದ ರಾಜ್ಯ ರಾಜಕೀಯದ ಸಮೀಕರಣವೇ ಬದಲಾಗಲಿದೆ ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಇವತ್ತು ದೆಹಲಿಯಲ್ಲಿ ಜೆಡಿಎಸ್ ನಾಯಕರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ. ಎರಡೂ ಪಕ್ಷಗಳು ಒಟ್ಟಿಗೆ ಹೋಗಬೇಕು ಎನ್ನುವ ವಿಚಾರದಲ್ಲಿ ಎರಡು ಪಕ್ಷಗಳ ನಡುವೆ ಮಾತುಕತೆಯಾಗಿದೆ. ವರಿಷ್ಠರು ತೆಗೆದುಕೊಂಡ ತೀರ್ಮಾನ ಸ್ವಾಗತಾರ್ಹ’ ಎಂದು ತಿಳಿಸಿದರು.

‘ರಾಜ್ಯದಲ್ಲಿರುವ ಅನಿಷ್ಟ ಸರ್ಕಾರ ಎಲ್ಲ ರಂಗಗಳಲ್ಲೂ ಸಂಪೂರ್ಣ ವಿಫಲವಾಗಿದೆ. ಇದರ ವಿರುದ್ಧ ಎರಡೂ ಪಕ್ಷಗಳು ಒಟ್ಟಾಗಿ ಹೋರಾಟ ಮಾಡಬೇಕು ಎನ್ನುವುದು ಜನರ ಬಯಕೆಯಾಗಿದೆ. ಮುಂದಿನ ದಿನಗಳಲ್ಲಿ ಒಟ್ಟಾಗಿ ಹೋರಾಟ ಮಾಡುತ್ತೇವೆ’ ಎಂದು ಅವರು ಹೇಳಿದರು.

ಮೈತ್ರಿ ಕುರಿತು ಎರಡೂ ಪಕ್ಷಗಳ ಕೆಲವರಲ್ಲಿ ಅಸಮಾಧಾನ ಇದೆಯಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈ ಸಂದರ್ಭದಲ್ಲಿ ವರಿಷ್ಠರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಾರೆ. ಸೀಟು ಹಂಚಿಕೆ ಮುಂದಿನ ದಿನಗಳಲ್ಲಿ ಆಗಲಿದೆ’ ಎಂದು ಬೊಮ್ಮಾಯಿ ವಿವರಿಸಿದರು.

**ಅಶೋಕ್ ಸ್ವಾಗತ:** ‘ನರೇಂದ್ರ ಮೋದಿಯವರ ಸಮರ್ಥ ಮುಂದಾಳತ್ವ ಮತ್ತು ಅಭಿವೃದ್ಧಿ ಆಧಾರಿತ ರಾಜಕಾರಣವನ್ನು ಒಪ್ಪಿ ಎನ್‌ಡಿಎ ಮೈತ್ರಿಕೂಟಕ್ಕೆ ಸೇರಲಿರುವ ಜೆಡಿಎಸ್ ಪಕ್ಷಕ್ಕೆ ಅಭಿನಂದನೆಗಳು. ಇದರಿಂದ ಎನ್‌ಡಿಎ ಮೈತ್ರಿಕೂಟದ ಶಕ್ತಿ ಇನ್ನಷ್ಟು ಹೆಚ್ಚಾಗಲಿದೆ. ಪ್ರಧಾನಿಯವರ ನವ ಭಾರತದ ಕನಸು ಸಾಕಾರವಾಗಲು ಶಕ್ತಿ ತುಂಬಲಿದೆ’ ಎಂದು ಶಾಸಕ ಆರ್.ಅಶೋಕ ಹೇಳಿದ್ದಾರೆ.

### ‘ಜೆಡಿಎಸ್ ಸೇರ್ಪಡೆಗೆ ಸ್ವಾಗತ’



ಜೆಡಿಎಸ್ ಎನ್‌ಡಿಎ ಕೂಟದ ಭಾಗವಾಗುತ್ತಿರುವುದು ಸಂತಸ ಸಂಗತಿ. ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿಪರ ಕಾರ್ಯವನ್ನು ಮೆಚ್ಚಿ ಜೆಡಿಎಸ್, ಎನ್‌ಡಿಎ ಕೂಟಕ್ಕೆ ಸೇರ್ಪಡೆಯಾಗುತ್ತಿದೆ. ಇದರಿಂದ ಎನ್‌ಡಿಎ ಬಲ ಇನ್ನೂ ಹೆಚ್ಚಲಿದೆ ಎಂದು ಬಿಜೆಪಿಯ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು ನೀಡುವತ್ತ ಮುಂದಡಿ ಇಡಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲಾತಿ ನೀಡಿದ ಗರಿಮೆ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಇದೆ. ಸ್ಥಳೀಯ ಆಡಳಿತದಲ್ಲಿ ಸಾಕಷ್ಟು ಅಡೆತಡೆಗಳಿದ್ದರೂ ಈಗ ನಾಯಕಿಯರ ಒಂದು ದಂಡು ಸಿದ್ಧವಾಗಿದೆ. ತಳಮಟ್ಟದಲ್ಲಿ ನಾಯಕತ್ವ ಗುಣಬೆಳೆಸುವ ಈ ವ್ಯವಸ್ಥೆಯ ಫಸಲು ಕೈಗೆ ಬರುವಾಗಲೇ ಮಹಿಳಾ ಮೀಸಲು ಮಸೂದೆಗೆ ಒಪ್ಪಿಗೆ ಸಿಕ್ಕಿದೆ. ನಮ್ಮ ರಾಜ್ಯ ವಿಧಾನ ಸಭೆಯಲ್ಲಿ ನಾಯಕಿಯರ ಸಂಖ್ಯೆ ಈಗಲೂ ಬೆರಳೆಣಿಕೆಗೆ ಸೀಮಿತವಾಗಿದೆ. 70 ಜನರಾದರೂ ಇರಬೇಕಾದ ವ್ಯವಸ್ಥೆಯಲ್ಲಿ ಹತ್ತು ಜನರಿದ್ದಾರೆ. ಕಾನೂನುಗಳು ಧಾರಾಳಿಯಾಗುವಷ್ಟೇ, ವ್ಯವಸ್ಥೆಯೂ ಉದಾತ್ತ ಮನೋಭಾವ ತೋರಬೇಕಿದೆ. ಧಾರಾಳಿಯಾಗಬೇಕಿದೆ. ಆಡಳಿತದಲ್ಲಿ ಹೆಣ್ನೋಟವಿದ್ದಲ್ಲಿ, ಹೆಂಗರುಳಿದ್ದಲ್ಲಿ ಕಲ್ಯಾಣವೆಂಬುದು, ಸ್ವರಾಜ್ಯದ ಇನ್ನೊಂದು ಹೆಸರಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ನಾಲ್ಕು ರಾಜಕೀಯ ಪಕ್ಷಗಳ ವಕ್ತಾರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮೀಸಲಾತಿ ಪ್ರಭಾವ ಮತ್ತು ಪರಿಣಾಮ ಕುರಿತು ಸಾಮಾಜಿಕ ಚಳವಳಿಯಲ್ಲಿ ತೊಡಗಿರುವ ರೂಪಾ ಹಾಸನ ವಿಶ್ಲೇಷಿಸಿದ್ದಾರೆ.

## ಮಹಿಳಾ ಮೀಸಲಾತಿ

# ಆಡಳಿತದಲ್ಲಿ ಹೆಣ್ನೋಟ

### ಪಕ್ಷಾತೀತ ಬೆಂಬಲ

ಇದು ಪ್ರಾರಂಭಿಕ ಗೆಲುವು. 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಅನುಭವ ಮಂಟಪ ಇತ್ತು ಇವತ್ತಿನ ಸಂಸತ್ತಿನ ಹಾಗೆ. ಅಲ್ಲಿ ದಾರ್ಶನಿಕ ವಿಚಾರಗಳ ಜತೆ ಸಾಮಾಜಿಕ ವಿಚಾರಗಳನ್ನೂ ಚರ್ಚೆ ಮಾಡಲಾಗುತ್ತಿತ್ತು. ಶರಣರಷ್ಟೆ ಸಶಕ್ತವಾಗಿ ಶರಣೆಯರು ಮಾತನಾಡುತ್ತಿದ್ದರು. 12ನೇ ಶತಮಾನದಲ್ಲಿದ್ದ ಜಾಗೃತಿ ಕ್ರಮೇಣ ಎಲ್ಲಿಗೆ ಹೋಯಿತು. 50 ವರ್ಷಗಳ ಹಿಂದೆ ಮಹಿಳೆಯನ್ನು ಪ್ರಧಾನಿಯಾಗಿ ಸ್ವೀಕರಿಸಿದೆ. ಇಬ್ಬರು ರಾಷ್ಟ್ರಪತಿಗಳನ್ನೂ ದೇಶ ನೋಡಿದೆ. ಸದ್ಯ ಪಕ್ಷಾತೀತವಾಗಿ ಈ ಮಸೂದೆಗೆ ಬೆಂಬಲ ಸಿಕ್ಕಿದೆ.

1992ರಲ್ಲಿ ಪಂಚಾಯತ್‌ರಾಜ್ ಮಟ್ಟದಲ್ಲಿ ಶೇ 33ರಷ್ಟು ಮೀಸಲಾತಿ ಬಂತು. ಇದನ್ನು ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ವಿಸ್ತರಿಸಲಾಯಿತು. ಪರಿಣಾಮ ಪಂಚಾಯತ್ ಮಟ್ಟದಲ್ಲಿ ಸಶಕ್ತವಾಗಿ ಆಡಳಿತ ನಡೆಸುವ ಹಲವು ಮಹಿಳೆಯರು ನಮ್ಮ ನಡುವೆ ಇದ್ದಾರೆ. ಏನೇ ತೊಡಕುಗಳಿದ್ದರೂ ಕ್ರಮೇಣ ಅವೆಲ್ಲವೂ ಬಗೆಹರಿಯುತ್ತವೆ. ಮೀಸಲಾತಿ ಅನುಷ್ಠಾನದ ನಂತರ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುವಷ್ಟು ನಮ್ಮ ಸಮಾಜ ಸಶಕ್ತವಾಗಿದೆ. ಚಂದ್ರಯಾನ ಯೋಜನೆಯಲ್ಲಿ ಪಾಲ್ಗೊಳ್ಳುವಷ್ಟು ಧೀಃಶಕ್ತಿ ಪಡೆದುಕೊಂಡ ಮಹಿಳೆಯರಿಗೆ ದೆಹಲಿ, ವಿಧಾನಸಭೆಯನ್ನು ತಲುಪುವುದೇನೂ ಕಷ್ಟವಲ್ಲ. ಮಾನಸಿಕವಾಗಿ ಸಿದ್ಧರಾಗಬೇಕಿದೆ.

**ಮಾಳವಿಕಾ ಅವಿನಾಶ್,** ಬಿಜೆಪಿ ವಕ್ತಾರೆ

### ಹೊಸ ಬದಲಾವಣೆಗೆ ನಾಂದಿ

ಇದೊಂದು ಕಾಂತ್ರಿಕಾರಿ ಮಸೂದೆ. ಇಡೀ ದೇಶದ ಮಹಿಳೆಯರ ಜೀವನದಲ್ಲಿ ಹೊಸ ಬದಲಾವಣೆ ತರುತ್ತದೆ. ಶಾಸನ ಸಭೆಗಳಲ್ಲಿ ಹೆಚ್ಚು ಮಹಿಳೆಯರು ಇದ್ದಾಗ, ಸಂವೇದನಾಶೀಲ ಕಾನೂನುಗಳು ಅನುಷ್ಠಾನಗೊಳ್ಳುತ್ತವೆ. ಮಹಿಳೆಯರ ಬದುಕು ಮತ್ತಷ್ಟು ಸುಗಮವಾಗುತ್ತದೆ. ಆದರೆ, ಇದು ಅನುಷ್ಠಾನವಾಗಬೇಕಾದರೆ ಇನ್ನಷ್ಟು ವರ್ಷ ಬೇಕಾಗುತ್ತದೆ.

ಜನಸಂಖ್ಯೆಯಲ್ಲಿ ಹೆಣ್ಣುಮಕ್ಕಳು ಶೇ 48ರಿಂದ 50ರಷ್ಟು ಇದ್ದೇವೆ. ಕೊಡುತ್ತಿರುವುದು ಶೇ 33ರಷ್ಟು ಮೀಸಲಾತಿ. ಜನಗಣತಿಯ ಕಾರ್ಯ ಆಗಬೇಕಿಲ್ಲ. ಈಗಿನಿಂದಲೇ ಇದರ ಜಾರಿಗೆ ಯಾವುದೇ ರೀತಿಯ ತೊಂದರೆ ಇಲ್ಲ. ಮಸೂದೆ ಹಾವು ಸಾಯಬಾರದು, ಕೋಲು ಮುರಿಯಬಾರದು ಎಂಬಂಥ ಧೋರಣೆಯಿಂದ ಜಾರಿಯಾಗಬೇಕಿಲ್ಲ. ಇದೊಂದು ಚುನಾವಣೆ ಗೆಲ್ಲುವ ಗಿಮಿಕ್ ಆಗಬಾರದು.

ನೆಪಮಾತ್ರಕ್ಕೆ ಮಹಿಳೆಯರಿಗೆ ಅಧಿಕಾರ ಎನ್ನುವ ಧೋರಣೆ ಖಂಡಿತಾ ಬದಲಾಗಲಿದೆ. ಹೆಣ್ಣುಮಕ್ಕಳ ವಿರುದ್ಧ ಹೆಣ್ಣುಮಕ್ಕಳೇ ಸ್ಪರ್ಧೆಗೆ ಇಳಿಯುವುದರಿಂದ ಚುನಾವಣಾ ಕಣದಲ್ಲಿ ಸಕ್ರಿಯವಾಗಿ ಹೇಗೆ ತೊಡಗಿಸಿಕೊಳ್ಳಬೇಕು ಎಂಬುದನ್ನು ಮಹಿಳೆಯರು ಕಲಿಯುತ್ತಾರೆ. ರಾಜಕೀಯ ಸಬಲತೆ ಇನ್ನಷ್ಟು ಹೆಚ್ಚುತ್ತದೆ. ಬೂತ್ ಮಟ್ಟದಲ್ಲಿ ಮಹಿಳಾ ನಾಯಕತ್ವಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಕೆಲಸವನ್ನು ಎಲ್ಲ ಪಕ್ಷಗಳು ಮಾಡಬೇಕು.

**ಭವ್ಯ ನರಸಿಂಹಮೂರ್ತಿ,** ಕಾಂಗ್ರೆಸ್ ವಕ್ತಾರೆ

### ಮೀಸಲಾತಿಯಿಂದ ಹೊಸ ಅಲೆ ಸೃಷ್ಟಿ

ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರು ಸಕ್ರಿಯವಾಗಿರುವಾಗ ಈಗಲಾದರೂ ರಾಜಕೀಯ ಕ್ಷೇತ್ರದಲ್ಲಿ ಮೀಸಲಾತಿ ಸಿಗಲು ಒಪ್ಪಿಗೆ ಸಿಕ್ಕಿರುವುದು ಉತ್ತಮ ಬೆಳವಣಿಗೆ. ಹೆಚ್ಚು ಹೆಚ್ಚು ಹೆಣ್ಣುಮಕ್ಕಳು ಶಾಸನಸಭೆಗಳಲ್ಲಿದ್ದಷ್ಟು ದೇಶ ಉನ್ನತಿಗೆ ಹೋಗುತ್ತದೆ. ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡುವ ಹೆಣ್ಣುಮಕ್ಕಳಿಗೆ ರಾಜಕೀಯ ಕ್ಷೇತ್ರದಲ್ಲಿ ಮತ್ತಷ್ಟು ಪ್ರೋತ್ಸಾಹ ಸಿಗಲು ಈ ಮೀಸಲಾತಿ ನೆರವಾಗುತ್ತದೆ.

1994ರಲ್ಲಿ ದೇವೇಗೌಡರು ಮೊದಲು ಮೀಸಲಾತಿಯನ್ನು ಘೋಷಿಸಿದ್ದರು. ಅವರ ದೂರದೃಷ್ಟಿತ್ವದಿಂದಲೇ ಈಗ ಪಂಚಾಯ್ತಿಗಳಲ್ಲಿ ಮಹಿಳೆಯರು ಧೈರ್ಯದಿಂದ ಮಾತಾಡುವಂತೆ, ಆಡಳಿತ ನಡೆಸುವಂತೆ, ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತ ಚುಕ್ಕಾಣಿ ಹಿಡಿಯುವಂತಾಗಿದೆ. ಪುರುಷ ಪ್ರಧಾನ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರು ತಮಗಾಗಿ ಸ್ಥಾನ ಮಾಡಿಕೊಳ್ಳಲು ಸಾಧ್ಯವಾಗಿದ್ದು ಈ ಮೀಸಲಾತಿಯಿಂದ ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಮಹಿಳಾ ಮೀಸಲಾತಿ ಜಾರಿಯಾದರೆ, ಭಾರತೀಯ ಆಡಳಿತದಲ್ಲಿ ಹೊಸದೊಂದು ಅಲೆ ಸೃಷ್ಟಿಯಾಗುತ್ತದೆ. ಈಗಲೂ ಪುರುಷ ಪಾರಮ್ಯ ಇರುವ ರಾಜಕಾರಣದಲ್ಲಿ ಈ ಮೀಸಲಾತಿ ನವೀನ ಅಧ್ಯಾಯವನ್ನೇ ತೆರೆಯಲಿದೆ. ಮತ್ತದು, ಪ್ರಗತಿಯದ್ದೇ ಆಗಿರುತ್ತದೆ.

**ಪ್ರಶಾಂತಿ ಸುಭಾಷ್,** ಜೆಡಿಎಸ್ ವಕ್ತಾರೆ

### ಚುನಾವಣಾ ತಂತ್ರವಿದು

ಈ ಮಸೂದೆ ಜಾರಿಯಾಗುವುದು 2029ಕ್ಕೆ ಎಂದು ಸರ್ಕಾರವೇ ಆಧಾರಸಹಿತ ಸುಳಿವು ಕೊಟ್ಟಿದೆ. ಹಾಗಾಗಿ ಈಗಲೇ ಜಾರಿಯಾಗುತ್ತದೆ, ಮಹಿಳೆಯರಿಗೆ ಶಾಸನಸಭೆಗಳಲ್ಲಿ ಅವಕಾಶ ಸಿಗುತ್ತದೆ ಎಂದು ಯಾವ ಕನಸೂ ಕಾಣುವಂತಿಲ್ಲ. ಮಹಿಳೆಯರ ಮತ ಗಳಿಸಲು ಚುನಾವಣೆಯನ್ನು ಮುಂದಿಟ್ಟುಕೊಂಡು ಮಾಡಿದ ತಂತ್ರ ಇದು. 2024ರ ಚುನಾವಣೆ ಗಮನದಲ್ಲಿಟ್ಟುಕೊಳ್ಳಲಾಗಿದೆ. ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆಯುವ ಷಡ್ಯಂತ್ರ ಇದು. 2024ರ ಚುನಾವಣೆಗೂ ಮುನ್ನ ಜಾದೂ ಮಾಡಿ ಮಸೂದೆ ಕಾನೂನು ಆಗುವಂತೆ ನೋಡಿಕೊಳ್ಳಲು ಸಾಧ್ಯವೇ? 1996ರಲ್ಲಿ ಉಮಾಭಾರತಿ ಮೂಲಕ ಒಬಿಸಿ ಪ್ರಶ್ನೆ ಎತ್ತಿ ಮಹಿಳಾ ಮೀಸಲಾತಿಗೆ ವಿರೋಧ ಒಡ್ಡಿದವರು. ಅದು ಇಂದಿಗೂ ಬಗೆಹರಿದಿಲ್ಲ. ಮಹಿಳೆಯರನ್ನು ಮಹಿಳೆಯರ ವಿರುದ್ಧ ಎತ್ತಿಕಟ್ಟಿದವರು ಸುಳಿವು ನೀಡದೇ ಏಕಾಏಕಿ ಮಸೂದೆ ಮಂಡಿಸಿದರು. ಕುಸ್ತಿಪಟುಗಳು ಅನ್ಯಾಯವೆಂದು ರಸ್ತೆಯಲ್ಲಿ ಕೂತಾಗ, ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲೆ ಮಾಡಿದಾಗ ಬಾಯಿ ಬಿಡಲಾರದವರು ಈಗ ಮಹಿಳಾ ಮೀಸಲಾತಿ ಜಾರಿಗೆ ಭಗವಂತ ಭೂಮಿಗೆ ಕಳಿಸಿದ್ದಾನೆ ಎಂದು ಹೇಳಿಕೊಳ್ಳುವಷ್ಟು ನಿರ್ಲಜ್ಜರು. ಮನೆ ಹಾಗೂ ಹೊರಗೆ ಸಕ್ರಿಯವಾಗಿ ಕಾರ್ಯನಿರ್ವಹಿಸುವ ಮಹಿಳೆಯರು ರಾಜಕೀಯವಾಗಿಯೂ ಪ್ರಕೃತಿದತ್ತವಾಗಿಯೇ ಸಶಕ್ತರು.

**ಕೆ.ನೀಲಾ,** ಸಿಪಿಎಂ ಜಿಲ್ಲಾ ಕಾರ್ಯದರ್ಶಿ, ಕಲಬುರಗಿ

### ಒಳಮೀಸಲಾತಿ ನಿರ್ಧಾರವಾಗಲಿ

ಮಹಿಳಾ ಮೀಸಲಾತಿ ಎಲ್ಲರ ಕನಸು. ಸಾಕಾರಕ್ಕೆ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ. ಇಷ್ಟು ವರ್ಷ ನನೆಗುದಿಗೆ ಬಿದ್ದಿದ್ದು ಈಗಲಾದರೂ ಒಂದು ಹಂತದಲ್ಲಿ ಒಪ್ಪಿಗೆ ಸಿಕ್ಕಿರುವುದಕ್ಕೆ ಸಂತೋಷವಿದೆ. ಜತೆಗೆ ಆತಂಕವೂ ಇದೆ. ತರಾತುರಿಯಲ್ಲಿ ಏನೋ ಒಂದು ಮಾಡಿದಂತಾಗಬಾರದು. ಇದರ ಅನುಷ್ಠಾನ ವಿಳಂಬವಾಗಲಿದೆ ಎನ್ನುವುದನ್ನೂ ಗಮನಿಸಬೇಕು.

ಮಸೂದೆಗೆ ಒಪ್ಪಿಗೆ ಸಿಕ್ಕಷ್ಟೆ ಕ್ಷಿಪ್ರವಾಗಿ ಜಾರಿಗೆ ಬೇಕಾದ ತಯಾರಿ ಮಾಡಿಕೊಳ್ಳುವುದು ಕಷ್ಟವಲ್ಲ. ಮೊದಲಿಗೆ ಜನಗಣತಿ ಕಾರ್ಯ ಆರಂಭವಾಗಬೇಕು. ಜನಗಣತಿ 2021ರಲ್ಲಿ ಆಗಬೇಕಿತ್ತು. ಮುಂಬರುವ ಚುನಾವಣೆಗೆ ಮುಂಚಿತವಾಗಿಯಾದರೂ ಜನಗಣತಿ ಆಗಬೇಕು. ಜನಗಣತಿಯ ಜತೆಗೆ ದೇಶದಾದ್ಯಂತ ಜಾತಿ ಜನಗಣತಿಯೂ ಆಗಬೇಕು. ಆಗ ಒಂದು ಸ್ಪಷ್ಟವಾದ ರೂಪ ಸಿಗುತ್ತದೆ. ಒಳಮೀಸಲಾತಿಯೂ ಇದೇ ಸಂದರ್ಭದಲ್ಲಿ ನಿರ್ಧಾರವಾಗಬೇಕು.

ಹಿಂದುಳಿದ ಜಾತಿ, ವರ್ಗಗಳು, ಅಲ್ಪಸಂಖ್ಯಾತರು, ತಳಸಮುದಾಯದ ಹೆಣ್ಣುಮಕ್ಕಳಿಗೂ ಅವಕಾಶ ಸಿಗಬೇಕು. ಇಲ್ಲವಾದರೆ ಮತ್ತೆ ಅವಕಾಶಗಳೆಲ್ಲವೂ ಮೇಲ್ವರ್ಗದವರ ಪಾಲಾಗುತ್ತದೆ. ಹಣ, ಅಧಿಕಾರ, ಜಾತಿ ಮೇಲಾಟಗಳ ನಡುವೆ ತಳ ಸಮುದಾಯದ ಹೆಣ್ಣುಮಕ್ಕಳು ನುಗ್ಗಿ ಮೀಸಲಾತಿ ಪಡೆಯಲು ಸಾಧ್ಯವೆ? ಒಳಮೀಸಲಾತಿ ಬೇಕು. ಒಪ್ಪಿಗೆ ಸಿಕ್ಕ ಮಸೂದೆಯಲ್ಲಿ ಈ ವಿಚಾರ ಸ್ಪಷ್ಟವಾಗಿಲ್ಲ. ಜಾತಿ ಜನಗಣತಿಯ ಆಧಾರದ ಮೇಲೆ ಯಾವ ವರ್ಗಕ್ಕೆ ಎಷ್ಟು ಮೀಸಲಾತಿ ನೀಡಬೇಕು ಎನ್ನುವುದರ ಕಲ್ಪನೆ ಸಿಗುತ್ತದೆ. ಈಗ ಮಹಿಳಾ ಸಂಘಟನೆ ಹಾಗೂ ರಾಜಕೀಯ ಪಕ್ಷಗಳ ಮೇಲೆ ದೊಡ್ಡ ಜವಾಬ್ದಾರಿ ಇದೆ. ಮೀಸಲಾತಿ ಅನುಷ್ಠಾನಗೊಳ್ಳುವ ಪ್ರಕ್ರಿಯೆಯ ಜತೆಯಲ್ಲಿಯೇ ರಾಜಕೀಯವಾಗಿ ಹೆಣ್ಣಮಕ್ಕಳನ್ನು ಇನ್ನಷ್ಟು ಜಾಗೃತಗೊಳಿಸುವ ಕೆಲಸ ಮಾಡಬೇಕಿದೆ. ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಸಾಮರ್ಥ್ಯ ಬೆಳೆಸುವ ಹಾಗೂ ಹೆಣ್ಣುಮಕ್ಕಳನ್ನು ಒಳಗೊಳ್ಳುವ ಕೆಲಸ ಆಗಬೇಕು.

ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣುಮಕ್ಕಳು ರಾಜಕೀಯಕ್ಕೆ ಬಂದರೆ ಇಡೀ ವ್ಯವಸ್ಥೆ ಬದಲಾಗುವುದರಲ್ಲಿ ಎರಡು ಮಾತಿಲ್ಲ. ಸೂಕ್ಷ್ಮ ಹಾಗೂ ಸಂವೇದನಾಶೀಲ ಆಲೋಚನೆಗಳಿಂದ ಹೆಣ್ಣುಮಕ್ಕಳು ಹೊಸ ಆಡಳಿತ ತರುತ್ತಾರೆ ಎಂಬ ಭರವಸೆಯಂತೂ ಇದೆ.

**ರೂಪಾ ಹಾಸನ,** ಸಾಮಾಜಿಕ ಹೋರಾಟಗಾರ್ತಿ

# ಗರ್ಭಕೋಶವಿಲ್ಲದೇ ಹೆಣ್ಣುಮಗು ಹುಟ್ಟುವುದಕ್ಕೆ ಕಾರಣವೇನು?

ಸ್ಪಂದನ

ಡಾ. ವೀಣಾ ಎಸ್. ಭಟ್

- **ಒಂದು ಹೆಣ್ಣು ಮಗು ಗರ್ಭಕೋಶ ಇಲ್ಲದೆ ಹುಟ್ಟುವುದಕ್ಕೆ ಏನು ಕಾರಣ? ಇದು ವಂಶಪಾರಂಪರ್ಯವಾಗಿ ಬರುತ್ತಾ ಎಂಬುದನ್ನು ತಿಳಿಸಿ.**

ಮಹಿಳೆಯರಲ್ಲಿರುವ ಸಂತಾನೋತ್ಪತ್ತಿ ಅಂಗಗಳನ್ನ ಹೊರ ಹಾಗೂ ಒಳಜನನಾಂಗಗಳೆಂದು ವಿಂಗಡಿಸಬಹುದು. ಹೊರಜನನಾಂಗಗಳು ಬರಿಗಣ್ಣಿಗೆ ಹೊರಗೆ ಕಾಣುವಂತದ್ದು, ಕ್ರಮವಾಗಿ ಮೇಲಿನಿಂದ ಕೆಳಗೆ ಯೋನಿ, ಕೂದಲು, ಹೊರದುಟಿ, ಒಳದುಟಿ, ಭಗಾಂಕುರ, ಮೂತ್ರದ್ವಾರ, ಯೋನಿಮಾರ್ಗಗಳು ಇವೆ. ಒಳಜನನಾಂಗದ ಭಾಗಗಳಾಗಿ ಗರ್ಭಕೋಶ ಎರಡು ಗರ್ಭನಾಳಗಳು ಎರಡು ಅಂಡಾಶಯ ಇರುತ್ತದೆ ಹಾಗೂ ಗರ್ಭಕೋಶವು ಯೋನಿದ್ವಾರದ ಮೇಲ್ಭಾಗಕ್ಕೆ ಗರ್ಭಕೊರಳಿನ (ಸರ್ವಿಕ್ಸ್) ಮುಖಾಂತರ ತೆರೆದುಕೊಂಡಿರುತ್ತದೆ.

ಗರ್ಭಧಾರಣೆಯಾಗಿ ಭ್ರೂಣಕ್ಕೆ ಆರುವಾರ ಆಗುವಾಗ ಶರೀರದ ಅವಯವಗಳು ವಿಕಾಸಗೊಳ್ಳಲು ಆರಂಭವಾಗುತ್ತದೆ. ಆರರಿಂದ ಏಳುವಾರದಲ್ಲಿ ಭ್ರೂಣದ ಕೆಳಭಾಗವಾದ ಕ್ಲೋಯೇಕಾದ ಭಾಗವಾದ ಯುರೋಜನೈಟಲ್ ಸೈನಸ್‌ನಿಂದ ಹೊರಜನನಾಂಗದ ಭಾಗಗಳು ಹೆಣ್ಣಿನಲ್ಲಿ ಉಂಟಾಗುತ್ತದೆ. ಒಳಜನನಾಂಗಗಳಲ್ಲಿ ಅಂಡಾಶಯಗಳು ಜೆನೈಟಲ್‌ರಿಡ್ಜ್‌ನಿಂದ ಬೆಳವಣಿಗೆಯಾಗುತ್ತದೆ. ಮುಲೇರಿಯನ್‌ನಾಳದಿಂದ ಗರ್ಭಕೋಶ ಗರ್ಭನಾಳ ಹಾಗೂ ಯೋನಿಯ ಮೇಲ್ಭಾಗ ಬೆಳವಣಿಗೆಯಾಗುತ್ತದೆ. ಭ್ರೂಣದಲ್ಲೇ ಈ ರೀತಿ ಬೆಳವಣಿಗೆಯಾಗದೆ ಇದ್ದಾಗ ಗರ್ಭಕೋಶವೇ ಇಲ್ಲದಿರುವ ಸ್ಥಿತಿ ಒದಗುತ್ತದೆ. ಇದನ್ನು 'ಮುಲೇರಿಯನ್ ಏಜನಿಸಿಸ್' ಎಂದು ಕರೆಯುತ್ತಾರೆ. ಆದ್ದರಿಂದ ಗರ್ಭಕೋಶ ಹೆಣ್ಣಿನಲ್ಲಿ ಇಲ್ಲದಿರುವಾಗ ಹೆಚ್ಚಿನ ಸಂದರ್ಭಗಳಲ್ಲಿ ಗರ್ಭನಾಳ ಮತ್ತು ಯೋನಿಯ ಮೇಲ್ಭಾಗವೂ ಇರುವುದಿಲ್ಲ. ಯೋನಿಭಾಗ ಸಣ್ಣ ಗುಳಿಯ ಹಾಗೆ ಕಾಣಬಹುದು. ಆದರೆ ಅಂಡಾಶಯ ಸಹಜವಾಗಿ ಬೆಳವಣಿಗೆಯಾಗಿರುತ್ತದೆ. ಈ ಸಂದರ್ಭದಲ್ಲಿ ಹೆಣ್ಣಿನ ಕ್ಯಾರಿಯೋಟೈಪಿಂಗ್ ಕೂಡ ಈ ತರಹದ್ದೇ ಆಗಿದ್ದು ಅಂಡಾಶಯದ ಕಾರ್ಯವೈಖರಿಯೂ ಸರಿಯಾಗಿಯೇ ಇರುತ್ತದೆ. ಹೆಣ್ತನದ ಹಾರ್ಮೋನಾದ ಈಸ್ಟ್ರೋಜನ್ ಕೂಡಾ ಅಂಡಾಶಯದಿಂದ ಸರಿಯಾಗಿ ಉತ್ಪಾದನೆ ಆಗುತ್ತಿರುವುದರಿಂದ ಹದಿವಯಸ್ಸಿನಲ್ಲಿ ಅವುಗಳ ಕಾರ್ಯಾಚರಣೆಯು ಸಹಜವಾಗಿ ಆರಂಭವಾಗಿ ಹೆಣ್ಣಿನ ಗಾತ್ರ, ಎತ್ತರ, ಸ್ತನಗಳ ಬೆಳವಣಿಗೆ ಯೋನಿ ಹಾಗೂ ಕಂಕುಳ ಭಾಗದಲ್ಲಿ ಕೂದಲು ಬೆಳವಣಿಗೆ ಇವೆಲ್ಲವೂ ಮಾಮೂಲಾಗಿಯೇ ಇರುತ್ತದೆ. ಹೆಚ್ಚಿನ ಬಾರಿ ಮೇಲ್ನೋಟಕ್ಕೆ ಗರ್ಭಕೋಶ ಇಲ್ಲದಿರುವುದು ಗೊತ್ತಾಗುವುದಿಲ್ಲ.

ಹೆಣ್ಣಿನಲ್ಲಿ 16 ರಿಂದ18 ವಯಸ್ಸಾದರೂ ಋತುಚಕ್ರ ಆರಂಭವಾಗದೇ ಇದ್ದಾಗ ಗಾಬರಿಯಿಂದ ಪಾಲಕರು ವೈದ್ಯರಲ್ಲಿ ಬಂದು ನಂತರ ವೈದ್ಯರ ತಪಾಸಣೆಯಲ್ಲಿ ಸ್ಕ್ಯಾನಿಂಗ್ ಇತ್ಯಾದಿ ನಡೆಸಿದಾಗ ಈ ಗರ್ಭಕೋಶ ಇಲ್ಲದಿರುವುದು ಕಂಡುಬರುತ್ತದೆ. ಈ ತೊಂದರೆಯ ಜೊತೆಗೆ ಕೆಲವೊಮ್ಮೆ ಮೂತ್ರಪಿಂಡಗಳ ಬೆಳವಣಿಗೆಯಲ್ಲಿ ವ್ಯತ್ಯಾಸಗಳು ಇರಬಹುದು ಮತ್ತು ಬೆನ್ನುಹುರಿಯ ರಚನೆಯಲ್ಲೂ ಇಂತಹ ತೊಂದರೆ ಇದ್ದವರಲ್ಲಿ ಇಂತಹ ವ್ಯತ್ಯಾಸ ಕಂಡುಬರಬಹುದು. ಇಂತಹ ತೊಂದರೆಗಳನ್ನ ಕಂಡುಹಿಡಿಯಲು ಇವರಿಗೆ ಎಂ.ಆರ್.ಐ.ಸ್ಕ್ಯಾನಿಂಗ್ ಅವಶ್ಯಬರಬಹುದು. ಹಾಗಾದರೆ ಇಂತಹ ಹೆಣ್ಣುಮಕ್ಕಳ ಸಂತಾನೋತ್ಪತ್ತಿ ಭವಿಷ್ಯವೇನು? ಇವರು ಲೈಂಗಿಕವಾಗಿ ಸಕ್ರಿಯವಾಗಿರಬಲ್ಲರೇ? ಎಂಬ ಪ್ರಶ್ನೆ ಕಾಡುತ್ತದೆ. ಇಂಥ ಮಹಿಳೆಯರು ಮದುವೆಯಾಗುವ ಮೊದಲು ಈ ವಿಷಯಗಳನ್ನು ಪರಸ್ಪರ ಚರ್ಚಿಸಿ, ಇವರು ಬಯಸಿದರೆ ಮದುವೆ ಮಾಡಬಹುದು. ಇವರಲ್ಲಿ ಲೈಂಗಿಕ ಹಾರ್ಮೋನುಗಳು ಸಹಜವಾಗಿರುತ್ತದೆ. ಆದರೆ ಕೆಲವೊಮ್ಮೆ ಇವರ ಯೋನಿಮಾರ್ಗ ಸಹಜವಾಗಿ ಇಲ್ಲದಿದ್ದಾಗ ಇವರ ಮದುವೆ ನಿಶ್ಚಯವಾಗಿದೆ ಎನ್ನುವಾಗ ಇವರಲ್ಲಿ ಹೊಸ ಯೋನಿಮಾರ್ಗವನ್ನು ಪ್ಲಾಸ್ಟಿಕ್‌ಸರ್ಜರಿಯ ಮೂಲಕ ಸೃಷ್ಟಿಸಬಹುದು. ಆಗ ಇಂಥವರು ಲೈಂಗಿಕ ಕ್ರಿಯೆ ನಡೆಸಲು ಸಾಧ್ಯವಿರುತ್ತದೆ. ಗರ್ಭಕೋಶ ಇಲ್ಲದಿರುವುದರಿಂದ ಸಂತಾನಪ್ರಾಪ್ತಿಯಾಗುವುದಿಲ್ಲ. ತನ್ನದೇ ಜೈವಿಕ ಪ್ರತಿರೂಪವಾದ ಮಗು ಬೇಕೆಂದು ಬಯಸಿದಲ್ಲಿ ಇವರ ಅಂಡಾಶಯದಿಂದ ಬಿಡುಗಡೆಯಾದ ಅಂಡಾಣುವನ್ನ ಸೂಕ್ತಸಮಯದಲ್ಲಿ ಆರಿಸಿಕೊಂಡು ಇವರ ಪತಿಯ ವೀರ್ಯಾಣುವಿನೊಂದಿಗೆ ಕೃತಕಗರ್ಭಧಾರಣೆಯ ವಿಧಾನದಲ್ಲಿ ಫಲಿತಗೊಳ್ಳುವಂತೆ ಮಾಡಿ ಬಾಡಿಗೆ ತಾಯಂದಿರಿಂದ(ಸರೋಗೆಸಿ) ಮಗುವನ್ನ ಪಡೆಯಬಹುದು. ಗರ್ಭಿಣಿಯರು ವೈದ್ಯರು ಶಿಫಾರಸು ಮಾಡದೇ ಇರುವ ಯಾವುದೇ ಔಷಧವನ್ನು ಸೇವಿಸಬಾರದು. ಅನುವಂಶೀಯ ಹಾಗೂ ವಾತಾವರಣವೂ ಕಾರಣವಿರಬಹುದು. ಎರಡೂ ನೆಲೆಯಲ್ಲಿ ಸಂಶೋಧನೆ ನಡೆಯುತ್ತಿದೆ.

**ಸ್ಪಂದನ...** ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

# ಮಿಂಚಲು ಮಿನುಗಲು ಎಚ್‌ಡಿ ಮೇಕಪ್

ವನಿತಾ ಜೈನ್

**ಮೇಕಪ್** ಎಲ್ಲ ಬಗೆಯ ಚರ್ಮಗಳಿಗೆ, ಮೊಗಗಳಿಗೆ ಒಂದೇ ತೆರನಾಗಿರುವುದಿಲ್ಲ. ವ್ಯಕ್ತಿಯ ಬಣ್ಣ, ಚರ್ಮದ ವಿಧ (ಒಣಚರ್ಮ, ಎಣ್ಣೆ ಚರ್ಮ) ಅನುಗುಣವಾಗಿ ಮೇಕಪ್ ಆಯ್ಕೆ ಮಾಡಿಕೊಳ್ಳಬೇಕು. ಜತೆಗೆ ಸಂದರ್ಭಕ್ಕೆ ಅನುಸಾರ ಮೇಕಪ್ ಮಾಡಿಕೊಳ್ಳಬೇಕು.

### ನಾನಾ ಬಗೆಯ ಮೇಕಪ್

ಮೇಕಪ್‌ನಲ್ಲಿಯೂ ಬೇಸಿಕ್ ಮೇಕಪ್, ಮ್ಯಾಟ್ ಮೇಕಪ್, ಎಚ್‌ಡಿ ಮೇಕಪ್, ಶಿಮ್ಮರಿ ಮೇಕಪ್, ವಾಟರ್ ಪ್ರೂಫ್ ಮೇಕಪ್, ನ್ಯೂಡ್ ಮೇಕಪ್, 4ಕೆ ಮೇಕಪ್ ಎಂಬ ಹಲವು ವಿಧಗಳಿವೆ. ಮೊದಲೆಲ್ಲ ಮ್ಯಾಟ್ ಮೇಕಪ್‌ಗೆ ಹೆಚ್ಚು ಮಾನ್ಯತೆ ಕೊಡುತ್ತಿದ್ದವರು ಇದೀಗ ಎಚ್‌ಡಿ ಮೇಕಪ್ ಗೆ, ವಾಟರ್ ಪ್ರೂಫ್ ಮೇಕಪ್ ಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಅದರಲ್ಲೂ ಹೆಚ್ಚು ಮೆಚ್ಚುಗೆ ಪಡೆದಿರುವುದು ಎಚ್‌ಡಿ ಮೇಕಪ್.

### ಏನಿದು ಎಚ್ ಡಿ ಮೇಕಪ್?

ಇದನ್ನು ಹೈ –ಡೆಫಿನಿಷನ್ ಮೇಕಪ್ ಎನ್ನುತ್ತಾರೆ. ಹೆಸರಿನಂತೆ ಲುಕ್ ಕೂಡ ಇರುತ್ತದೆ. ಯಾವುದೇ ಕಲೆ ಕಾಣದಂತೆ ಮುಖದ ಸೌಂದರ್ಯ ವರ್ಧಿಸುತ್ತದೆ. ಸಹಜ ಸುಂದರಿಯಾಗಿ ಕಾಣಿಸಿಕೊಳ್ಳಬೇಕು ಎನ್ನವವರಿಗೆ ಇದು ಹೇಳಿ ಮಾಡಿಸಿದ ಮೇಕಪ್.

ಈ ಎಚ್‌ಡಿ ಮೇಕಪ್ ಬೆವರಿದರೂ ಸುಮಾರು 12 ಗಂಟೆಗಳಿಂದ 24 ಗಂಟೆಯವರೆಗೆ ಯಾವುದೇ ರೀತಿಯಲ್ಲಿ ಹಾಳಾಗದೇ ಹಾಗೆಯೇ ಇರುತ್ತದೆ.

### ಈ ಮೇಕಪ್ ವಿಧ

- **ಏರ್ ಬ್ರಶ್ ಎಚ್‌ಡಿ ಮೇಕಪ್ :** ಬ್ರಶ್ ನ ಸಹಾಯವಿಲ್ಲದೇ ಏರ್ ಬ್ರಶ್ ಯಂತ್ರ ಉಪಯೋಗಿಸಿ ಮಾಡುವ ಮೇಕಪ್.
- **ಮಿನರಲ್ ಎಚ್‌ಡಿ ಮೇಕಪ್:** ಇದು ಚರ್ಮಕ್ಕೆ ಸಹಜ ಕಾಂತಿ ನೀಡುವುದಲ್ಲದೇ ತುಂಬಾ ಸೂಕ್ಷ್ಮ ಚರ್ಮಗಳಿಗೆ ಇದು ಸೂಕ್ತ.
- **ಲಿಕ್ವಿಡ್ ಎಚ್‌ಡಿ ಮೇಕಪ್:** ಇದು ಒಂದು ರೀತಿಯ ಫೌಂಡೇಶನ್ ಆಗಿದ್ದು, ಬ್ರಶ್ ಅಥವಾ ಸ್ಪಾಂಜ್ ಬಳಸಿ ಮಾಡಲಾಗುತ್ತದೆ. ಇದರಿಂದ ನೈಸರ್ಗಿಕ ಲುಕ್ ಕೊಡುತ್ತದೆ.
- **ಕ್ರೀಮ್ ಎಚ್‌ಡಿ ಮೇಕಪ್:** ಇದು ಬೆರಳುಗಳಿಗೆ ಮಾತ್ರ ಉಪಯೋಗಿಸುವ ಮೇಕಪ್.

ಬ್ರ್ಯಾಂಡ್ ಆಗಿರುವ ಪ್ರಸಾಧನಗಳನ್ನೇ ಬಳಸುವುದು ಸೂಕ್ತ. ಯಾವುದೇ ಮೇಕಪ್ ಆಗಿರಲಿ. ಚರ್ಮದ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಇಷ್ಟಕ್ಕೂ ಆರೋಗ್ಯವಂತ ತ್ವಚೆಯೇ ಸರಳ, ಸ್ನಿಗ್ಧ ಮತ್ತು ಸುಂದರ ಅನ್ನುವುದಂತೂ ಅಲ್ಲಗಳೆಯಲಾಗದು.



### ಯಾರಿಗೆ ಈ ಮೇಕಪ್ ಸೂಕ್ತ?

ಎಚ್ ಡಿ ಮೇಕಪ್ ಎಲ್ಲ ತರಹದ ಚರ್ಮಗಳಿಗೆ ಹೊಂದಿಕೊಳ್ಳುತ್ತದೆ. ಮದುವೆ ಸಮಾರಂಭಗಳಲ್ಲಿ ಮದುವಣಗಿತ್ತಿ, ಆಕೆಯ ಸಂಬಂಧಿಕರು ಇದನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ರೂಪದರ್ಶಿ, ದೊಡ್ಡ ದೊಡ್ಡ ಸೆಲೆಬ್ರೆಟಿಗಳು ಫೋಟೊಶೂಟ್ ಸಂದರ್ಭದಲ್ಲಿ ಇದಕ್ಕೆ ಪ್ರಾಮುಖ್ಯ ನೀಡುತ್ತಾರೆ ಎನ್ನುತ್ತಾರೆ ಪ್ರಸಾಧನ ಕಲಾವಿದರು.

ಉಡುಗೆ ತೊಡುಗೆ

# ಗೊತ್ತೇನ್ರಿ ಬೆಟಗೇರಿ ಗಾಡಿದಡಿ ಸೀರಿ?

ಪೂರ್ಣಿಮಾ ಗೊಂದೆನಾಯ್ಕರ

**ಎಲ್ಲಾರಿಗೂ** ಇಳಕಲ್ ಸೀರಿ ಗೊತ್ತು. ಆದ್ರ ಬೆಟಗೇರಿ ಸೀರಿ? ಅದೇ ಇಳಕಲ್ ಸೀರೆಯ ನೆರಳಿನಂತಿದ್ದರೂ ತನ್ನದೇ ವೈಶಿಷ್ಟ್ಯ ಉಳಿಸಿಕೊಂಡು ಬಂದಿದೆ. ಚೌಕಳಿಗಳಿರುವ, ಚೌಕಳಿಗಳಲ್ಲಿ ಬಿಳಿದಾರದ ಎಳೆ ಇರುವ, ಗಾಡಿ ದಡಿ ಎಂಬ ಹೆಸರಿರುವ ಅಂಚಿನ ಸೀರೆ ಬೆಟಗೇರಿ ಸೀರೆ.

ಗದಗ– ಬೆಟಗೇರಿ ಅವಳಿ ನಗರಗಳಲ್ಲಿ ಬೆಟಗೇರಿಗೆ ನೇಯ್ಗೆಯದ್ದೇ ಇತಿಹಾಸವಿದೆ. ಬಟ್ಟೆ ಉತ್ಪಾದನೆ, ನೇಯಲು ಬೆಟಗೇರಿ ಹೆಸರುವಾಸಿಯಾದರೆ, ರೋಣ ಬಟ್ಟೆಗಳಿಗೆ ಬಣ್ಣ ಹಾಕಲು ಹೆಸರುವಾಸಿಯಾಗಿದೆ. ಗದಗ ಬೆಟಗೇರಿ ನಡುವೆ ರೈಲು ಹಳಿ ಬಂದಾಗ, ಪರಿಣತ ನೇಯ್ಗೆದಾರರು ಅದನ್ನು ಸೀರೆಯಲ್ಲಿ ತಂದರು. ಸೀರೆಯ ಅಂಚಿಗೆ ಎರಡು ಹಳಿಗಳ ಚಿತ್ರ, ಹಳಿಗಳಲ್ಲಿ ರೈಲಿನ ಚಕ್ರಗಳ ಚಿತ್ರ ಬರುವಂತೆ ನೇಯ್ದರು. ಈ ಸೀರೆ ಮುಂದೆ ಗಾಡಿ ದಡಿ ಸೀರೆ ಎಂದು ಹೆಸರಾಯಿತು. ಇಳಕಲ್ ಸೀರೆಯಲ್ಲಿ ಎರಡು ಬಣ್ಣಗಳು ಮೇಳೈಸಿ, ಸೂರ್ಯನ ಬೆಳಕಿನಲ್ಲಿ ಮಿಂಚುವಂತೆ, ಎರಡು ಬಣ್ಣಗಳ ಸಂಯೋಜನೆ ಎದ್ದು ಕಾಣುತ್ತದೆ. ಇಲ್ಲಿ ಚೌಕಳಿಗಳದ್ದೇ ಪಾರಮ್ಯ.

ಈ ಬಯಲು ಸೀಮೆಯ ಬಿಸಿಲಿಗೆ ಬೆವರು ಹೀರುವ ಶಕ್ತಿ ಇರುವ ಈ ಸೀರೆಗಳಿಗೆ, ಚಳಿಗಾಲದ ಥಂಡಿಯಿಂದಲೂ ಕಾಪಾಡುತ್ತವೆ. ಈ ವಾತಾನುಕೂಲಿತ ಗುಣಗಳಿರುವುದರಿಂದಲೇ ಬೆಟಗೇರಿ ಸೀರೆಗಳು ಈಗಲೂ ಶ್ರಮವಾಸಿಗಳ ಅಚ್ಚುಮೆಚ್ಚಿನ ಆಯ್ಕೆ ಆಗಿದೆ.

ಸದ್ಯದ ಅಗತ್ಯಕ್ಕೆ ತಕ್ಕಂತೆ ಐದುವರೆ ಮೀಟರ್ ನೇಯುತ್ತಾರೆ. ಸಾಂಪ್ರದಾಯಿಕವಾಗಿ ಎಂಟು, ಆರೂವರೆ ಮೀಟರ್ ಸಹ ನೇಯುತ್ತಾರೆ. ಹೊಲದಲ್ಲಿ ಕೆಲಸ ಮಾಡುವ ರೈತ ಮಹಿಳೆಯರು ಕಚ್ಚೆ ಸೀರೆ ಉಡಲು ಅನುಕೂಲವಾಗುವಂಥ ಉದ್ದ ಇದು. ಇನ್ನೂ ಕೆಲವೆಡೆ ಬೆಳ್ಳೀ ಡಾಬು ಕಟ್ಟಿ, ಬಾಳೆಗಂಟು ಹಾಕಿ, ಸೀರೆಯುಡುತ್ತಾರೆ.

ಮಣ್ಣಿನಲ್ಲಿ ಕೆಲಸ ಮಾಡಿದರೂ ಮಾಸದಂಥ ಗಾಢ ವರ್ಣದ ಸೀರೆಗಳೇ ಹೆಚ್ಚು ಸಿಗುತ್ತವೆ. ಗಾಢ ನೀಲಿ, ಗಾಢ ಹಸಿರು, ಕಂದು, ಕೆಂಪುಬಣ್ಣದಲ್ಲಿ ನಾನಾ ಮೂಲ ವರ್ಣಗಳ ಚೌಕಳಿಗಳು ಕಣ್ಮನ ಸೆಳೆಯುತ್ತವೆ. ಈ ಚೌಕಳಿಗಳಲ್ಲಿ ಒಂದೆಳೆ ಬಿಳಿಯ ನೇಯ್ಗೆ ಇರುತ್ತದೆ. ಈ ಬೆಳ್ಳನೆಯ ಗೆರಿ, ಬೆಟಗೇರಿ ಬ್ರ್ಯಾಂಡು. ಕಾಟನ್, ರೇಷ್ಮೆ, ಕಾಟನ್ ಒಡಲು, ರೇಷ್ಮೆ ಸೆರಗು ಹೀಗೆ ನಿಮ್ಮ ಜೇಬಿಗೆ ತಕ್ಕ ಆಯ್ಕೆಗಳು ಲಭ್ಯ. ಟೋಪಿನ ತೆನಿ ಸೆರಗು ಇರುವ ಸೀರೆಗಳಲ್ಲಿ ಬೆಟಗೇರಿ ಸೀರಿ ಯಾವುದು ಅಂತ ಗೊತ್ತು ಹಿಡೀಬಹುದಲ್ಲ?

ಪೂರಕ ಮಾಹಿತಿ: **ಸತೀಶ್ ಬೆಳ್ಳಕ್ಕಿ,** ಚಿತ್ರಗಳು: **ಬನೇಶ ಕುಲಕರ್ಣಿ**

ತೀವ್ರಗೊಂಡ ಕಾವೇರಿ ಹೋರಾಟ ● ಪ್ರತಿಭಟನೆಗೆ ಬೆಂಬಲ ಸೂಚಿಸಿದ ನಿರ್ಮಲಾನಂದನಾಥ ಸ್ವಾಮೀಜಿ

# ‘ಮೇಕೆದಾಟು ಯೋಜನೆಯೇ ಪರಿಹಾರ’

ಪ್ರಜಾವಾಣಿ ವಾರ್ತೆ

ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಪಾಲ್ಗೊಂಡು ಮಾತನಾಡಿದರು

**ಮಂಡ್ಯ:** ‘ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಕಾವೇರಿ ನೀರಿನ ಸಮಸ್ಯೆಗೆ ಮೇಕೆದಾಟು ಯೋಜನೆ ಜಾರಿಯೇ ಪರಿಹಾರ’ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಶುಕ್ರವಾರ ಹೇಳಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಕಾವೇರಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ ಅವರು, ‘ಸುಪ್ರೀಂ ಕೋರ್ಟ್ ಅಂತಿಮ ತೀರ್ಪಿನಲ್ಲಿ ತಮಿಳುನಾಡಿಗೆ 419 ಟಿಎಂಸಿ ಅಡಿ, ಕರ್ನಾಟಕಕ್ಕೆ 270 ಟಿಎಂಸಿ ಅಡಿ ನೀರು ಸಿಕ್ಕಿದೆ. ಆದರೆ ಮಳೆ ಕಡಿಮೆಯಾದಾಗ ಏನು ಮಾಡಬೇಕೆಂಬ ಸಂಕಷ್ಟ ಸೂತ್ರ ರಚನೆಯಾಗಿಲ್ಲ. ಮೇಕೆದಾಟು ಯೋಜನೆ ಜಾರಿಯಾದರೆ ಎರಡೂ ರಾಜ್ಯಗಳಿಗೆ ಸಹಕಾರಿಯಾಗಲಿದೆ’ ಎಂದರು.

‘ರೈತರು ಸುಮ್ಮನೇ ಬೀದಿಗೆ ಬರುವುದಿಲ್ಲ, ಬಂದಿದ್ದಾರೆಂದರೆ ಅವರಿಗೆ ಕಷ್ಟವಿದೆ ಎಂದೇ ಅರ್ಥ. ಈ ಭಾಗದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿದ್ದು ಕುಡಿಯುವ ನೀರಿಗೂ ಸಮಸ್ಯೆಯಾಗಿದೆ. ಒಂದೆಡೆ ಬೆಳೆ, ಮತ್ತೊಂದೆಡೆ ಮನುಷ್ಯನೂ ಒಣಗುವಂತಾಗಿದೆ’ ಎಂದು ಹೇಳಿದರು.

‘ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ನಮ್ಮ ಕಷ್ಟ ಆಲಿಸಬೇಕಾಗಿತ್ತು. ಈಗ ಆದೇಶ ಪಾಲನೆ ಮಾಡಿದರೆ ರೈತರ ಬದುಕು ಬೀದಿಗೆ ಬರುತ್ತದೆ. ಸದ್ಯ ಸಂಕಷ್ಟದ ಸ್ಥಿತಿ ಇದ್ದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಮನ್ವಯತೆಯಿಂದ ನಿರ್ಧಾರ ಕೈಗೊಳ್ಳಬೇಕು. ಈ ಭಾಗದ ರೈತರ ಹಿತ ಕಾಯುವಂತೆ ನಾನೂ ಸಚಿವರ ಜೊತೆ ಮಾತನಾಡುತ್ತೇನೆ’ ಎಂದರು.

**ಕಸಾಪ ಅಧ್ಯಕ್ಷರು ಭಾಗಿ:** ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಹೋರಾಟದಲ್ಲಿ ಭಾಗಿಯಾಗಿ, ‘ತಮಿಳುನಾಡಿನಲ್ಲಿ ಅಂತರ್ಜಲ ಮಟ್ಟ ಚೆನ್ನಾಗಿದೆ. ಆದರೆ ಕರ್ನಾಟಕದದಲ್ಲಿ ನೀರಿನ ಕೊರತೆ ಎದುರಾಗಿದ್ದು ರೈತರು ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ನೀರು ಬಿಡಬೇಕೆನ್ನುವುದು ಸರಿಯಲ್ಲ’ ಎಂದು ಹೇಳಿದರು.

‘ಬರ ಪರಿಸ್ಥಿತಿಯಲ್ಲಿ ಮೈಸೂರು ದಸರಾ, ಹಂಪಿ ಉತ್ಸವಗಳನ್ನು ಸರಳವಾಗಿ ಆಚರಿಸಬೇಕು. ಮಂಡ್ಯದಲ್ಲಿ ನಿಗದಿಯಾಗಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಂದೂಡಲಾಗಿದೆ. ಮಳೆಯಾಗಿ ರಾಜ್ಯದಲ್ಲಿ ಉತ್ತಮ ಪರಿಸ್ಥಿತಿ ನೆಲೆಯಾದರೆ ಸಮ್ಮೇಳನಕ್ಕೆ ಮುಂದಿನ ದಿನಾಂಕ ನಿಗದಿಗೊಳಿಸಲಾಗುವುದು’ ಎಂದರು.

**ನಟ ಅಭಿಷೇಕ್ ಭಾಗಿ:** ಜಿಲ್ಲಾ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಹೋರಾಟದಲ್ಲಿ ನಟ ಅಭಿಷೇಕ್ ಅಂಬರೀಷ್ ಭಾಗಿಯಾದರು. ‘ನಾನು ಸಣ್ಣ ವಯಸ್ಸಿನಿಂದಲೂ ಕಾವೇರಿ ಹೋರಾಟ ನೋಡಿದ್ದೇನೆ, ನಮ್ಮ ತಂದೆಯೂ ಭಾಗಿಯಾಗಿದ್ದರು. ನಮ್ಮ ತಾಯಿ ಲೋಕಸಭೆಯಲ್ಲಿ ಕಾವೇರಿ ನೀರಿನ ಸಮಸ್ಯೆ ಕುರಿತು ಮಾತನಾಡಿದ್ದಾರೆ. ನಟ–ನಟಿಯರೂ ಹೋರಾಟಕ್ಕೆ ಬರಲಿದ್ದು ವೇದಿಕೆ ಸಿದ್ಧಗೊಳ್ಳುತ್ತಿದೆ’ ಎಂದು ತಿಳಿಸಿದರು.

**ಅಂಚೆ ಕಚೇರಿಗೆ ಮುತ್ತಿಗೆ:** ಮಂಡ್ಯ ಹಾಗೂ ಶ್ರೀರಂಗಪಟ್ಟಣದಲ್ಲಿ ರೈತಸಂಘ ಸೇರಿ ವಿವಿಧ ಸಂಘಟನೆಗಳ ಮುಖಂಡರು ಅಂಚೆ ಕಚೇರಿಗೆ ಮತ್ತಿಗೆ ಹಾಕಲು ಯತ್ನಿಸಿದರು.

## ಬಿಎಸ್‌ಎನ್‌ಎಲ್ ಕಚೇರಿಗೆ ಮುತ್ತಿಗೆ

**ಚಾಮರಾಜನಗರ:** ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಕಾವೇರಿ ಬಿಕ್ಕಟ್ಟನ್ನು ಬಗೆಹರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಬಿಎಸ್‌ಎನ್‌ಎಲ್ ಕಚೇರಿಗೆ ಮುತ್ತಿಗೆ ಹಾಕಿದರು. ದೊಡ್ಡಂಗಡಿ ಬೀದಿ ಬಳಿ ಸೇರಿದ ಪ್ರತಿಭಟನಾಕಾರರು, ಅಲ್ಲಿಂದ ಬಿಎಸ್‌ಎನ್‌ಎಲ್ ಕಚೇರಿವರೆಗೂ ಮೆರವಣಿಗೆ ನಡೆಸಿ, ಮುತ್ತಿಗೆ ಹಾಕಿದರು.

## ಸಚಿವರ ಸಭೆಗೆ ನುಗ್ಗಲು ಯತ್ನ

**ಮೈಸೂರು:** ಕಾವೇರಿ ತೀರ್ಪಿನ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿ, ಜಿಲ್ಲಾ ಪಂಚಾಯಿತಿಯಲ್ಲಿ ಸಚಿವ ಬೈರತಿ ಸುರೇಶ್ ನೇತೃತ್ವದಲ್ಲಿ ಶುಕ್ರವಾರ ನಡೆಯುತ್ತಿದ್ದ ಸಭೆಗೆ ನುಗ್ಗಲು ಯತ್ನಿಸಿದ ರೈತ ಮುಖಂಡರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು. ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಕೈಗೆ ಕಪ್ಪು ಪಟ್ಟಿ ಧರಿಸಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟಿಸಿದರು.

# ಕಾವೇರಿ ಕೊಳ್ಳ: ಕೇವಲ 60 ಟಿಎಂಸಿ ಅಡಿ ನೀರು

● ಆದಿತ್ಯ ಕೆ.ಎ.

**ಬೆಂಗಳೂರು:** ಕಾವೇರಿ ಪ್ರಾಧಿಕಾರದ ಸೂಚನೆಯಂತೆ ಕಾವೇರಿ ನದಿಯಿಂದ ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರು ಹರಿಸಲಾಗುತ್ತಿದ್ದು, ಕಾವೇರಿಕೊಳ್ಳದ ಜಲಾಶಯಗಳ ಸ್ಥಿತಿ ಬೇಸಿಗೆಗೆ ಮುನ್ನ ಶೋಚನೀಯವಾಗುತ್ತಿದೆ. ನಾಲ್ಕು ಜಲಾಶಯಗಳಲ್ಲಿ ಒಟ್ಟು 60.62 ಟಿಎಂಸಿ ಅಡಿಯಷ್ಟೇ ನೀರಿನ ಸಂಗ್ರಹವಿದೆ.

ಜಲಾಶಯದಲ್ಲಿ ಸದ್ಯ ಸಂಗ್ರಹವಿರುವ ನೀರಿನ ಪ್ರಮಾಣ ಗಮನಿಸಿದರೆ ಬೆಳೆಗೆ ಮಾತ್ರವಲ್ಲ, ಕುಡಿಯುವ ನೀರಿಗಾಗಿ ಕಾವೇರಿ ಆಶ್ರಯಿಸಿರುವ ನಗರ, ಪಟ್ಟಣ ಪ್ರದೇಶಗಳ ಜನರಿಗೆ ಹಾಗೂ ಜಾನುವಾರುಗಳಿಗೆ ಬೇಸಿಗೆಯಲ್ಲಿ ತೀವ್ರ ಸಮಸ್ಯೆ ಎದುರಾಗುವ ಸಾಧ್ಯತೆಯಿದೆ.

ಕಾವೇರಿ ಜಲಾನಯನ ಪ್ರದೇಶಗಳಾದ ಕೊಡಗು, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಹಾಸನ ಜಿಲ್ಲೆಯ ಸಕಲೇಶಪುರ ಹಾಗೂ ಕೇರಳದ ವೈಯನಾಡು ಪ್ರದೇಶದಲ್ಲಿ ಸೆಪ್ಟೆಂಬರ್‌ನಲ್ಲೂ ವಾಡಿಕೆಯಷ್ಟು ಮಳೆ ಸುರಿದಿಲ್ಲ. ಇದರ ಪರಿಣಾಮ ಕಾವೇರಿ ಕೊಳ್ಳದ ಜಲಾಶಯಕ್ಕೆ ಒಳಹರಿವು ನಿರೀಕ್ಷೆಯಷ್ಟು ಬರುತ್ತಿಲ್ಲ. ಹಿಂದಿನ ಮೂರು ವರ್ಷಗಳಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಸೆಪ್ಟೆಂಬರ್‌ನಲ್ಲಿ ಭಾರಿ ಮಳೆಯಾಗಿತ್ತು. ಪರಿಣಾಮವಾಗಿ ಈ ಜಲಾನಯನ ಪ್ರದೇಶಗಳನ್ನು ಅವಲಂಬಿಸಿದ ಹಾರಂಗಿ, ಹೇಮಾವತಿ, ಕೆಆರ್‌ಎಸ್, ಕಬಿನಿ ಜಲಾಶಯಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿನ ಸಂಗ್ರಹವಿತ್ತು. ಈ ವರ್ಷ ಪರಿಸ್ಥಿತಿ ಭಿನ್ನವಾಗಿದ್ದು ಸಮಸ್ಯೆ ಉದ್ಭವಿಸಿದೆ.

ಈ ನಾಲ್ಕು ಜಲಾಶಯಗಳ ಸಾಮರ್ಥ್ಯ 114.57 ಟಿಎಂಸಿ ಅಡಿ. ಕಳೆದ ವರ್ಷ ಇದೇ ಅವಧಿಯಲ್ಲಿ ಈ ಜಲಾಶಯಗಳಲ್ಲಿ ಒಟ್ಟು 112.87 ಟಿಎಂಸಿ ಅಡಿಯಷ್ಟು ನೀರಿನ ಸಂಗ್ರಹವಿತ್ತು. ಈ ಬಾರಿ ನಾಲ್ಕು ಜಲಾಶಯಗಳಲ್ಲಿ 60.62 ಅಡಿಯಷ್ಟೇ ನೀರಿನ ಸಂಗ್ರಹವಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 52.25 ಟಿಎಂಸಿ ಅಡಿ ನೀರು ಕಡಿಮೆಯಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಅಧಿಕಾರಿಗಳು ಮಾಹಿತಿ ನೀಡಿದರು.

ಕಳೆದ ಆಗಸ್ಟ್ 31ರ ವೇಳೆಗೆ ಜಲಾಶಯಗಳಲ್ಲಿ 69.63 ಟಿಎಂಸಿ ಅಡಿ ನೀರಿತ್ತು. ತಮಿಳುನಾಡಿಗೆ ನೀರು ಹರಿಸಲು ಆರಂಭಿಸಿದ ಮೇಲೆ 9 ಟಿಎಂಸಿ ಅಡಿ ನೀರು ಖಾಲಿಯಾಗಿದೆ.

ಮಲೆನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಒಂದು ವಾರದಿಂದ ಈಚೆಗೆ ಮಳೆಯಾಗುತ್ತಿದ್ದು ಜಲಾಶಯಗಳ ಒಳಹರಿವು ಕೊಂಚ ಏರಿಕೆಯಾಗಿದೆ. ಆಗಸ್ಟ್ 31ಕ್ಕೆ ನಾಲ್ಕು ಜಲಾಶಯಗಳಿಗೆ ಒಟ್ಟು 2,679 ಕ್ಯೂಸೆಕ್ ನೀರು ಹರಿದುಬರುತ್ತಿತ್ತು. ಈಗ 8,751 ಕ್ಯೂಸೆಕ್‌ಗೆ ಏರಿಕೆಯಾಗಿದೆ. ಮುಂದಿನ ಒಂದು ವಾರ ಬಿರುಸಿನ ಮಳೆಯಾಗುವ ಸಾಧ್ಯತೆಯಿದ್ದು, ಕೊರತೆ ಪ್ರಮಾಣ ಸ್ವಲ್ಪ ತಗ್ಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

### ಮೂಲದಲ್ಲೂ ಸದ್ಯ ನೀರಿಲ್ಲ

ಕಾವೇರಿ ನದಿಯ ಮೂಲ ಕೊಡಗು ಜಿಲ್ಲೆಯಲ್ಲಿ ಈ ವರ್ಷ ಶೇ 40ರಷ್ಟು ಮಳೆ ಕೊರತೆಯಾಗಿದ್ದು ಅಂತರ್ಜಲವು ವೃದ್ಧಿಯಾಗಿಲ್ಲ. ಇದರಿಂದ ಕಾವೇರಿಯ ನದಿಯಲ್ಲಿ ಮಳೆಗಾಲದಲ್ಲಿ ನೀರಿನ ಹರಿವು ಪ್ರಮಾಣ ಕುಸಿದಿದೆ. ಇನ್ನೂ ಮಳೆ ಸುರಿಯದಿದ್ದರೆ ಅಕ್ಟೋಬರ್ 15ರ ವೇಳೆಗೆ ಜಲಾಶಯಗಳ ಒಳಹರಿವು ಬಹುತೇಕ ಸ್ಥಗಿತವಾಗಲಿದೆ ಎಂದು ತಜ್ಞರು ಹೇಳುತ್ತಾರೆ.

**ಜಲಾಶಯಗಳಲ್ಲಿನ ನೀರಿನ ಸ್ಥಿತಿ (ಟಿಎಂಸಿ ಅಡಿಗಳಲ್ಲಿ)**

| ಜಲಾಶಯ | ಸಂಗ್ರಹ ಸಾಮರ್ಥ್ಯ | ಪ್ರಸ್ತುತ ಸಂಗ್ರಹ | ಇದೇ ಅವಧಿಗೆ ಕಳೆದ ವರ್ಷ |
|---|---|---|---|
| ಹಾರಂಗಿ | 8.50 | 7.77 | 8.10 |
| ಹೇಮಾವತಿ | 37.10 | 17.82 | 37.07 |
| ಕೆಆರ್‌ಎಸ್ | 49.45 | 20.56 | 48.81 |
| ಕಬಿನಿ | 19.52 | 14.47 | 18.89 |
| ಒಟ್ಟು | 114.57 | 60.62 | 112.87 |

# ಮಂಡ್ಯದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಮಂಡ್ಯ ಬಂದ್ ವೇಳೆ ಅಹಿತಕರ ಘಟನೆಗಳು ನಡೆಯುವುದನ್ನು ತಡೆಯಲು ಕ್ಷಿಪ್ರ ಕಾರ್ಯಾಚರಣೆ ಪಡೆ (ಆರ್‌ಎಎಫ್) ನಿಯೋಜನೆ ಸೇರಿ, ಬಿಗಿಯಾದ ಪೊಲೀಸ್ ಬಂದೋಬಸ್ತ್ ಮಾಡಿದ್ದೇವೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ ನೆಲ– ಜಲದ ವಿಚಾರದಲ್ಲಿ ಸಂಘ ಸಂಸ್ಥೆಗಳು ಪ್ರತಿಭಟನೆ ಮಾಡಬಹುದು. ಆದರೆ, ಸಾರ್ವಜನಿಕ ಆಸ್ತಿಗಳಿಗೆ ನಷ್ಟ ಮಾಡಬಾರದು ಎಂದು ತಿಳಿಸಿದರು.

‘ಜನ ಸಾಮಾನ್ಯರಿಗೆ ತೊಂದರೆ ಮಾಡುವುದು ಮತ್ತು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಬಾರದು ಎಂದು ಮನವಿ ಮಾಡುತ್ತೇನೆ. ಒಂದು ವೇಳೆ ಅಹಿತಕರ ಘಟನೆಗಳು ನಡೆದರೆ ತಡೆಯಲು ಪೊಲೀಸರು ಸಿದ್ಧರಾಗಿದ್ದಾರೆ. ಈಗಾಗಲೇ ಕೆಆರ್‌ಎಸ್, ಮಂಡ್ಯ ಜಿಲ್ಲೆ ಮತ್ತು ಪ್ರತಿಭಟನೆ ನಡೆಯುವ ಕಡೆಗಳಲ್ಲಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದೇವೆ. ಕಾನೂನು ಬಾಹಿರ ಚಟುವಟಿಕೆಗಳು ನಡೆಯುವುದಿಲ್ಲ ಎಂಬ ನಂಬಿಕೆ ಇದೆ. ಒಂದು ವೇಳೆ ಶಾಂತಿಗೆ ಭಂಗ ತಂದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

ಮಂಡ್ಯ ಬಂದ್‌ಗೆ ಬಿಜೆಪಿ ಬೆಂಬಲಿಸಿರುವುದರ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಪ್ರತಿಭಟನೆ ಮಾಡಲು ತಕರಾರು ಇಲ್ಲ. ಬಿಜೆಪಿ ಜವಾಬ್ದಾರಿಯಿಂದ ವರ್ತಿಸುತ್ತದೆ ಎಂದು ಭಾವಿಸುತ್ತೇನೆ’ ಎಂದರು.

## ‘ಜನ ದಂಗೆ ಏಳುತ್ತಾರೆ’

**ಬೆಂಗಳೂರು:** ‘ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ಉಡಾಫೆಯಾಗಿ ನಡೆದುಕೊಳ್ಳುತ್ತಿದೆ. ಹೀಗೆ ನಿರ್ಲಕ್ಷ್ಯ ಮಾಡಿದರೆ ಸ್ವಾಮೀಜಿಗಳು, ರೈತರು ಮತ್ತು ಬೆಂಗಳೂರಿನ ನಾಗರಿಕರು ದಂಗೆ ಏಳುತ್ತಾರೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಕಾವೇರಿ ವಿಚಾರದಲ್ಲಿ ಬಿಜೆಪಿಯ ಮುಂದಿನ ಹೋರಾಟದ ಕುರಿತು ಪಕ್ಷದ ಕಚೇರಿಯಲ್ಲಿ ಶುಕ್ರವಾರ ನಡೆದ ಕಾವೇರಿ ನೀರನ್ನು ಆಶ್ರಯಿಸಿದ ಜಿಲ್ಲೆಗಳ ಪಕ್ಷದ ಪದಾಧಿಕಾರಿಗಳ ಸಭೆಯ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಕಾವೇರಿ ನದಿ ನೀರಿನ ವಿವಾದವನ್ನು ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿರುವುದನ್ನು ಖಂಡಿಸಿ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶನಿವಾರ(ಸೆ.23) ಪ್ರತಿಭಟಿಸಲಾಗುವುದು’ ಎಂದರು.

## ಸ್ಟಾಲಿನ್– ಲಹರ್ ಸಿಂಗ್ ಭೇಟಿ ಸೋಮವಾರ

**ನವದೆಹಲಿ:** ಕಾವೇರಿ ಜಲ ಬಿಕ್ಕಟ್ಟು ಹಾಗೂ ರಾಜ್ಯದ ಜಲಾಶಯಗಳ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ಬಿಜೆಪಿಯ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಅವರು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಸೋಮವಾರ ಭೇಟಿ ಮಾಡಲಿದ್ದಾರೆ.

‘ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗಂಭೀರ ಬರ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೂ, ನೀರು ಹರಿಸುವಂತೆ ತಮಿಳುನಾಡು ಹಟ ಹಿಡಿದಿದೆ. ನಮ್ಮ ರಾಜ್ಯದ ದಯನೀಯ ಸ್ಥಿತಿಯನ್ನು ತಮಿಳುನಾಡಿಗೆ ಮನವರಿಕೆ ಮಾಡಿಕೊಡಬೇಕಿದೆ. ಕಾವೇರಿ ಬಿಕ್ಕಟ್ಟನ್ನು ಮಾತುಕತೆಯ ಮೂಲಕ ಬಗೆಹರಿಸಬೇಕಿದೆ. ಅದಕ್ಕಾಗಿ ನಾನೇ ಒಂದು ಪ್ರಯತ್ನ ಮಾಡುವೆ. ರಾಜ್ಯಕ್ಕೆ ಎದುರಾಗಿರುವ ಸಂಕಷ್ಟವನ್ನು ಬಗೆಹರಿಸೋಣ’ ಎಂದರು.

## ರಾಜ್ಯದ ಹಿತಕ್ಕೆ ಧಕ್ಕೆ: ಡಿಕೆಶಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಶನಿವಾರ ನಡೆಸಲು ಉದ್ದೇಶಿಸಿರುವ ಮಂಡ್ಯ ಬಂದ್‌ನಿಂದ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗಲಿದೆ. ಈ ಕಾರಣದಿಂದ ಬಂದ್ ಹಿಂಪಡೆಯಬೇಕು’ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

‘ನಾವು ಕೂಡ ರೈತರಿಗಾಗಿಯೇ ಹೋರಾಟ ಮಾಡುತ್ತಿದ್ದೇವೆ. ಬಂದ್ ನಡೆಸಿ ಕಾನೂನು, ಸುವ್ಯವಸ್ಥೆಗೆ ಧಕ್ಕೆಯಾದರೆ ಕಷ್ಟವಾಗುತ್ತದೆ. ಕಾನೂನು ಹೋರಾಟದ ಹಾದಿಯಲ್ಲೂ ಹಿನ್ನಡೆ ಆಗುತ್ತದೆ. ಜನರಿಗೆ ಸಿಟ್ಟಿದ್ದರೆ ನಮ್ಮನ್ನೇ ಬೈದುಬಿಡಲಿ. ಬಂದ್ ನಡೆಸುವುದು ಬೇಡ’ ಎಂದರು.

# ಶಾ ಜೊತೆ ಚರ್ಚೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ರಾಜ್ಯವು ಎದುರಿಸುತ್ತಿರುವ ಕಾವೇರಿ ಜಲ ಸಂಕಷ್ಟದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ವಿಸ್ತೃತವಾಗಿ ಚರ್ಚೆ ನಡೆಸಿದ್ದೇನೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನವದೆಹಲಿಯಲ್ಲಿ ಅಮಿತ್ ಶಾ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ ನಂತರ ಅವರು ಮಾಧ್ಯಮಗಳ ಜತೆ ಮಾತನಾಡಿದರು.

‘ಶಾ ಅವರಿಗೆ ರಾಜ್ಯದ ಕಾವೇರಿ ಕುರಿತ ವಾಸ್ತವ ಸ್ಥಿತಿಯನ್ನು ವಿವರಿಸಿದ್ದೇನೆ. ಕಾವೇರಿ ಸಮಸ್ಯೆ, ಬರ ಇತ್ಯಾದಿ ವಿಷಯಗಳ ಬಗ್ಗೆ ಅವರಿಗೆ ಮಾಹಿತಿ ನೀಡಿದ್ದೇನೆ. ಕಾವೇರಿ ನದಿ ನೀರಿನ ವಿಷಯದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಬಹಳ ಅಸಡ್ಡೆ ಪ್ರದರ್ಶಿಸಿದೆ. ಕನ್ನಡನಾಡಿನ ರೈತರು, ಜನರ ವಿಷಯದಲ್ಲಿ ಚೆಲ್ಲಾಟವಾಡಿದೆ’ ಎಂದು ಕಿಡಿಕಾರಿದರು.

‘ಈ ಹಿಂದೆ ಸುಪ್ರೀಂ ಕೋರ್ಟ್ ನೀಡಿರುವ ಒಂದು ಆದೇಶವನ್ನು ಗಮನಿಸಿದ್ದೇನೆ. ಒಂದು ವೇಳೆ ಕೋರ್ಟ್ ಪಾಲಿಸಲಾಗದ ಕಠಿಣ ಆದೇಶವನ್ನೇನಾದರೂ ನೀಡಿದರೆ, ಅಂತಹ ಸಂಕಷ್ಟ ಸಮಯದಲ್ಲಿ ಆಯಾ ರಾಜ್ಯ ಸರ್ಕಾರವು ಜನರ ಪರವಾಗಿ ಕೈಗೊಳ್ಳುವ ನಿರ್ಧಾರವು ನ್ಯಾಯಾಲಯದ ಆದೇಶದ ಉಲ್ಲಂಘನೆ ಆಗುವುದಿಲ್ಲ. ಆಂಧ್ರ ಪ್ರದೇಶಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಒಂದು ತೀರ್ಪಿನಲ್ಲಿ ಈ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ಈ ಬಗ್ಗೆ ರಾಜ್ಯ ಸರ್ಕಾರ ಮಾಹಿತಿ ಪಡೆದು ದಿಟ್ಟ ಕ್ರಮ ಕೈಗೊಳ್ಳಲಿ’ ಎಂದು ಅವರು ಒತ್ತಾಯಿಸಿದರು.

ರಾಜ್ಯದ ಜನರ ಹಿತ ರಕ್ಷಣೆಗೆ ಇಂಥ ಸಾಧ್ಯತೆಗಳ ಬಗ್ಗೆ ಪರಿಶೀಲನೆ ಮಾಡದೆ, ಕಾಂಗ್ರೆಸ್ ಸರ್ಕಾರ ಕೇವಲ ಐದು ಗ್ಯಾರಂಟಿಗಳ ಬಗ್ಗೆ ನಿತ್ಯವೂ ಭಜನೆ ಮಾಡುತ್ತಿದೆ. ನಮ್ಮ ರಾಜ್ಯದಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿ ಕರ್ತವ್ಯ ನಿರ್ವಹಿಸಿದ ಮೂವರು ವಿಶ್ರಾಂತ ನ್ಯಾಯಮೂರ್ತಿಗಳಿದ್ದಾರೆ. ಸುಪ್ರೀಂ ಕೋರ್ಟ್‌ನ ಹಲವಾರು ವಿಶ್ರಾಂತ ನ್ಯಾಯಮೂರ್ತಿಗಳು ರಾಜ್ಯದಲ್ಲಿದ್ದಾರೆ. ಅಡ್ವೋಕೇಟ್ ಜನರಲ್‌ಗಳಾಗಿ ಕೆಲಸ ಮಾಡಿದ ಆರು ಜನ ಕಾನೂನು ತಜ್ಞರಿದ್ದಾರೆ. ಇವರೆಲ್ಲರನ್ನೂ ಆಹ್ವಾನಿಸಿ ಚರ್ಚೆ ಮಾಡಬೇಕಿತ್ತಲ್ಲವೇ? ಅಂಥವರನ್ನು ಕರೆದು ಸಭೆ ಮಾಡುವ ಸಾಮಾನ್ಯ ಜ್ಞಾನ ಇವರಿಗೆ ಇಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

## ಇಂದು ಮಂಡ್ಯಕ್ಕೆ ಕುಮಾರಸ್ವಾಮಿ

ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಪ್ರತಿಭಟಿಸಿ ಮಂಡ್ಯ ಜಿಲ್ಲೆಯ ಜನರು ನಡೆಸುತ್ತಿರುವ ಬಂದ್‌ಗೆ ತಮ್ಮ ಬೆಂಬಲವಿದೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆ ದೆಹಲಿಯಿಂದ ಬೆಂಗಳೂರಿಗೆ ತಾವು ವಾಪಸ್ಸಾಗಲಿದ್ದು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದಲೇ ನೇರವಾಗಿ ಮಂಡ್ಯಕ್ಕೆ ತೆರಳುವುದಾಗಿ ಹೇಳಿದ್ದಾರೆ.

## ‘ಸರ್ಕಾರ ಸರಿ ನಿಭಾಯಿಸಿಲ್ಲ’

**ನವದೆಹಲಿ:** ಕಾವೇರಿ ಜಲ ಬಿಕ್ಕಟ್ಟನ್ನು ಕರ್ನಾಟಕದ ಕಾಂಗ್ರೆಸ್ ಸರ್ಕಾರ ಸಮರ್ಪಕವಾಗಿ ನಿಭಾಯಿಸುತ್ತಿಲ್ಲ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ರಾಜ್ಯದ ಅಧಿಕಾರಿಗಳು ಭೌತಿಕವಾಗಿ ಹಾಜರಾಗುತ್ತಿಲ್ಲ. ಆದರೆ, ತಮಿಳುನಾಡಿನ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ವರ್ಚುವಲ್ ಮೂಲಕ ಸಭೆಯಲ್ಲಿ ಭಾಗಿಯಾದರೆ ಸಮರ್ಥವಾಗಿ ವಾದ ಮಂಡಿಸಲು ಸಾಧ್ಯವೇ’ ಎಂದು ಪ್ರಶ್ನಿಸಿದರು. ನಮ್ಮ ರಾಜ್ಯದ ಅಧಿಕಾರಿಗಳ ಧೋರಣೆ ಬಗ್ಗೆ ಎಚ್‌.ಡಿ.ಕುಮಾರಸ್ವಾಮಿ ಅವರು ಧ್ವನಿ ಎತ್ತಿದ್ದಾರೆ ಎಂದರು.

‘ರಾಜ್ಯಸಭೆ ಕಲಾಪದಲ್ಲಿ ಭಾಗವಹಿಸಲು ಸೆಪ್ಟೆಂಬರ್ 17ರಂದು ಬಂದೆ. ಮಂಡಿನೋವಿನ ಕಾರಣದಿಂದ ನನಗೆ ಎದ್ದೇಳಲೂ ಆಗುತ್ತಿರಲಿಲ್ಲ. ಆದರೂ, ಮಹಿಳಾ ಮೀಸಲಾತಿ ಮಸೂದೆ ಹಾಗೂ ಕಾವೇರಿ ಜಲವಿವಾದದ ಕುರಿತು ಸದನದಲ್ಲಿ ಮಾತನಾಡಿದ್ದೇನೆ. ತಮಿಳುನಾಡಿಗೆ ನೀರು ಹರಿಸುತ್ತಿರುವುದರಿಂದ ರಾಜ್ಯಕ್ಕೆ ಆಗುತ್ತಿರುವ ಸಮಸ್ಯೆಗಳ ಕುರಿತು ರಾಜ್ಯಸಭೆಯಲ್ಲಿ ಧ್ವನಿ ಎತ್ತಿದ ಏಕೈಕ ಸದಸ್ಯ ನಾನು’ ಎಂದರು.

ಮಲ್ಲಿಕಾರ್ಜುನ ಖರ್ಗೆ ಅವರು ಈ ಬಗ್ಗೆ ಧ್ವನಿ ಎತ್ತಲಿಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ಬಗ್ಗೆ ನನ್ನಿಂದ ಏನೂ ಹೇಳಿಸಬೇಡಿ. ಅವರು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರು’ ಎಂದರು.

# 5,962 ‘ಪಶು ಸಖಿ’ಯರ ನೇಮಕ

ಪ್ರಜಾವಾಣಿ ವಾರ್ತೆ

**ಮೈಸೂರು:** ‘ಆರೋಗ್ಯ ಇಲಾಖೆಯ ಆಶಾ ಕಾರ್ಯಕರ್ತೆಯರ ರೀತಿಯಲ್ಲೇ ಪಶುಸಂಗೋಪನೆ ಇಲಾಖೆಯಲ್ಲಿ 5,962 ‘ಪಶು ಸಖಿ’ಯರನ್ನು ನೇಮಿಸಲಾಗಿದೆ’ ಎಂದು ಸಚಿವ ಕೆ. ವೆಂಕಟೇಶ್ ತಿಳಿಸಿದರು.

‘ಇಲಾಖೆ ಮತ್ತು ರೈತರ ನಡುವಿನ ಅಂತರವನ್ನು ತಗ್ಗಿಸಿ ಸೇತುವೆಯಾಗಿ ಕಾರ್ಯನಿರ್ವಹಿಸಲು ಹಾಗೂ ವಿಸ್ತರಣಾ ಚಟುವಟಿಕೆಗಳನ್ನು ಸಮರ್ಪಕವಾಗಿ ತಲುಪಿಸುವುದೇ ಪ್ರಮುಖ ಉದ್ದೇಶ. ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ, 8ನೇ ತರಗತಿ ಅಥವಾ ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆಯ ಆಧಾರದಲ್ಲಿ, ಕೇಂದ್ರ ಸರ್ಕಾರದ ಎ-ಹೆಲ್ಪ್ (ಅಕ್ರೆಡೆಟೆಡ್ ಏಜೆಂಟ್ ಫಾರ್ ಹೆಲ್ತ್ ಅಂಡ್ ಎಕ್ಸ್‌ಟೆನ್ಶನ್ ಆಫ್ ಲೈವ್‌ಸ್ಟಾಕ್ ಪ್ರೊಡಕ್ಷನ್) ಯೋಜನೆ ಅಡಿ ಈ ನೇಮಕಾತಿಯಾಗಿದೆ’ ಎಂದು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಕನಿಷ್ಠ 18 ದಿನಗಳ ಸಾಮಾನ್ಯ ತರಬೇತಿ ನಂತರ, ಜಾನುವಾರುಗಳ ವೈಜ್ಞಾನಿಕ ಸಾಕಣೆ ಹಾಗೂ ಪೋಷಣೆ, ರೋಗ ನಿಯಂತ್ರಣ ಕ್ರಮಗಳ ಬಗ್ಗೆ 16 ದಿನಗಳ ತರಬೇತಿ ಕೊಡಲಾಗುವುದು. ಬಳಿಕ ಕೆಲಸಕ್ಕೆ ನಿಯೋಜಿಸಲಾಗುತ್ತದೆ. ಗ್ರಾಮೀಣ ರೈತ ಮಹಿಳೆಯರಿಗೆ ಪಶು ಸಂಗೋಪನಾ ಚಟುವಟಿಕೆಗಳ ಸಮಗ್ರ ಮಾಹಿತಿ ಕೊಡಿಸುವುದು ಉದ್ದೇಶ. ಪಶು ವೈದ್ಯರ ಮಾರ್ಗದರ್ಶನದಲ್ಲಿ ಸಖಿಯರು ಕೆಲಸ ಮಾಡಲಿದ್ದಾರೆ’ ಎಂದರು.

‘ಸಖಿಯರಿಗೆ ಕೇಂದ್ರ ಸರ್ಕಾರದಿಂದ ತಿಂಗಳಿಗೆ ₹ 3,800 ಸಂಭಾವನೆ ನೀಡಲಾಗುತ್ತದೆ. ಯೋಜನೆ ಅನುಷ್ಠಾನದಲ್ಲಿ ದೇಶದಲ್ಲೇ ನಮ್ಮ ರಾಜ್ಯ ಮುಂದಿದೆ’ ಎಂದರು.

‘ತರಬೇತಿ ಕಾರ್ಯಕ್ರಮಕ್ಕೆ ಸೆ.26ರಂದು ಬೆಳಿಗ್ಗೆ 10.30ಕ್ಕೆ ತಾಲ್ಲೂಕಿನ ಉತ್ತನಹಳ್ಳಿಯಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ’ ಎಂದು ಹೇಳಿದರು.

ಭೂಮಿಕಾ ಪುರವಣಿ ಓದಿ


**ಮೈಸೂರು ಮಹಾನಗರ ಪಾಲಿಕೆ**

ಕಾರ್ಯಪಾಲಕ ಅಭಿಯಂತರರವರ ಕಛೇರಿ

ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–5/1027/2023–24 ದಿನಾಂಕ: 21–09–2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನಗಳಲ್ಲಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ವಿವರ | ಕಾಮಗಾರಿಗಳು | ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಸಂಜೆ 5.30 ಗಂಟೆ ನಂತರ: ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ | ಸಂಜೆ 5.30 ಗಂಟೆ ಒಳಗೆ: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ಸಂಜೆ 5.45 ಗಂಟೆ ನಂತರ: ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ |
|---|---|---|---|---|---|---|
| 1 | Kw-1, Kw-2 | 13 ಸಂಖ್ಯೆ | 94.33 | 26–09–2023 | 03–10–2023 | 04–10–2023 |
| 2 | Service Tenders | 2 ಸಂಖ್ಯೆ | 3.60 | 26–09–2023 | 03–10–2023 | 04–10–2023 |

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ನೀಸ&ಒಚ(ಪಶ್ಚಿಮ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು



**ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ**

ಸಂ:ಶಿಮನಪಾಶಿ:ಆವಿ:ಸಿ.ಆರ್:55/2023-24 ದಿನಾಂಕ:21.09.2023

**ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)**

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸರಬರಾಜುದಾರರು ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.
(1) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: **26.09.2023** ರಿಂದ (2) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **26.10.2023 ಕ್ರ.ಸಂ: 01 ಮತ್ತು 02ರ ಕಾಮಗಾರಿಗಳಿಗೆ ದಿನಾಂಕ: 11.10.2023 ಕ್ರ.ಸಂ : 03 ರಿಂದ 05ರವರೆಗಿನ ಕಾಮಗಾರಿಗಳಿಗೆ (3) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ as per KPP portal** (4) ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

| ಕ್ರ ಸಂ | ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಅನುದಾನ |
|---|---|---|---|---|
| 1 | Supply of 3 CUM Auto Tipper for Shivamogga City Corporation (29 No's). | 315.00 | 4,72,500/- | ಪರಿಷ್ಕೃತ ಸ್ವಚ್ಛ ಭಾರತ್ ಮಿಷನ್ (1.0)ಡಿ.ಪಿ.ಆರ್ ಅನುದಾನ ಮತ್ತು 2023–24ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿ |
| 2 | Supply of MINI EXCAVATOR for Shivamogga City Corporation (04 No's). | 121.00 | 1,81,500/- | 2023-24ನೇ ಸಾಲಿನ ಪಾಲಿಕೆಯ ಸಾಮಾನ್ಯ ಅನುದಾನ |
| 3 | Supply of morning breakfast with one egg to Pourakarmikas and cleaning employees (Drivers, Loaders, Driver cum operators and Helpers) daily working in Shivamogga City Corporation for a period of 12 months. Indent No:DMA/2023-24/SE0608/CALL-02 | 102.20 | 1,53,300/- | |
| 4 | Supply of 02 no of Dumper placer vehicles with 04 Nos containers Bins (3.5 CUM capacity) for Shivamogga City Corporation. | 99.96 | 1,99,920/- | |
| 5 | RFP for “Appointment of Agency/Firm support for Swachh Survekshan 2024, SBM 2.0 and related works for the period of 12 months in Shivamogga City Corporation | 49.50 | 99,000/- | |

ಸೂಚನೆ: ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿ–1)/ (ಪ್ರ)
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.81-09/ಝೇಂಕಾರ್/2023-24



ಕರ್ನಾಟಕ ಸರಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗದಗ–582 101**

ದೂರವಾಣಿ ಸಂಖ್ಯೆ: 08372-237300, 236009 ಫ್ಯಾಕ್ಸ್ : 08372-232413,
E-Mail: deo.gadag@gmail.com

ನಂ. ADMIN-18015/1/2015 ದಿನಾಂಕ : 22–09–2023

**ಮಳಿಗೆಗಳ ಲೀಜ್ ಹರಾಜು 2ನೇ ಕರೆ ಪತ್ರಿಕಾ ಪ್ರಕಟಣೆ**

ಈ ಮೂಲಕ ಸಮಸ್ತ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಜಿಲ್ಲಾಡಳಿತ ಭವನದಲ್ಲಿರುವ ಬಾಕಿ ಉಳಿದಿರುವ 06 ವಾಣಿಜ್ಯ ಮಳಿಗೆಗಳನ್ನು ಬಾಡಿಗೆ ಮೂಲಕ ವಿಲೇವಾರಿ ಮಾಡಲು ಬಹಿರಂಗ ಹರಾಜು ಮಾಡಲಾಗುತ್ತಿದೆ. ಆಸಕ್ತರು ಜಿಲ್ಲಾಧಿಕಾರಿಗಳ ಕಛೇರಿ ಕೊಠಡಿ ಸಂಖ್ಯೆ 27 ರಲ್ಲಿ ದಿನಾಂಕ: **25–09–2023** ರಿಂದ **04–10–2023** ರ ಸಂಜೆ 5.30 ರ ವರೆಗೆ ಅರ್ಜಿಯನ್ನು ಪಡೆದು ನಿಗಧಿತ ದಾಖಲಾತಿಗಳು ಹಾಗೂ ಠೇವಣಿ ಮೊತ್ತವನ್ನು ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ದಿನಾಂಕ : **09–10–2023** ರಂದು ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹರಾಜು ಪ್ರಕ್ರಿಯೆ ಜರುಗಿಸಲಾಗುವರು. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಹಾಗೂ ಜಿಲ್ಲಾ ವೆಬ್ ಸೈಟ್ https://gadag.nic.in ನೇದ್ದರಲ್ಲಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿಗಳು
ಗದಗ ಜಿಲ್ಲೆ, ಗದಗ

ವಾಸಾಸಂಇ/ಗದಗ/ಕೆ.ಎಸ್.ಎಂ.ಸಿ.ಎ/199/2023–24



**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001
ದೂ: 080–2558 6520/ 2558 9112 ಫ್ಯಾಕ್ಸ್: 080–2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.karnataka.gov.in

ಸಂಖ್ಯೆ: ಮಾನಿಮಂ/28/ಬಿಎಲ್‌ಡಿ/2023–24/3224 ದಿನಾಂಕ: 12.09.2023

**ಟೆಂಡರ್‌ಗಾಗಿ ಆಹ್ವಾನ – 1ನೇ ಕರೆ**
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪರವಾಗಿ ಸದಸ್ಯ ಕಾರ್ಯದರ್ಶಿಗಳು, ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.eproc.karnataka.gov.in** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

**ಕಾಮಗಾರಿಯ ಹೆಸರು:** ಉಡುಪಿಯ ಪ್ರಾದೇಶಿಕ ಕಚೇರಿ ಕಟ್ಟಡಕ್ಕೆ 50 ಕೆವಿಎ ಡಿಜಿಯೊಂದಿಗೆ ಅಕೌಸ್ಟಿಕ್ ಎನ್ಕ್ಲೋಸರ್ ಸರಬರಾಜು, ಎರೆಕ್ಷನ್, ಪರೀಕ್ಷೆ ಮತ್ತು ಕಾರ್ಯಾಚರಣೆ ಮಾಡಲು ಟೆಂಡರ್. ಕಾಮಗಾರಿಯ ಅಂದಾಜು ಮೊತ್ತ: **ರೂ.9.98 ಲಕ್ಷಗಳು**. ಟೆಂಡರ್ ಮೊತ್ತ, ಇ.ಎಂ.ಡಿ ಇತ್ಯಾದಿಗಳನ್ನು ಇ–ಪಾವತಿ ಮೂಲಕ ಮಾತ್ರ ಪಾವತಿಸತಕ್ಕದ್ದು.

ಹೆಚ್ಚಿನ ಮಾಹಿತಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://www.eproc.karnataka.gov.in.**ಗೆ ಭೇಟಿ ನೀಡುವುದು.

ಸಹಿ/–
ಸದಸ್ಯ ಕಾರ್ಯದರ್ಶಿ

ವಾ.ಸಾ.ಸಂ.ಇ/1390/2023–24



**GOVERNEMENT OF KARANTAKA**
**DISTRICT HEALTH AND FAMILY WELFARE DEPARTMENT, BALLARI.**
(DISTRICT TUBERCULOSIS ELIMINATION CENTRE, BALLARI) O/o The District Tuberculosis elimination Officer, District Hospital Premises, Dr.Rajkumar, Road, Ballari-583101. Contact No. +91 9164447599 / e-Mail ID: dtokably@rntcp.org

NO/DTO/BLY/TBITEMSTENDER/01/2023-24 DATE 20.09.2023.

**ಇ–ಟೆಂಡರ್ ಪ್ರಕಟಣೆ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವ್ಯಾಪ್ತಿಯಲ್ಲಿ ಒಳಗೊಂಡಿರುವ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರ, ಬಳ್ಳಾರಿ ಇಲ್ಲಿಗೆ ಅವಶ್ಯವಿರುವ ಈ ಕೆಳಕಂಡ ಟಿ.ಬಿ.ಸಾಮಾಗ್ರಿಗಳನ್ನು ಖರೀದಿಸಲು ಪ್ರತ್ಯೇಕವಾಗಿ ಜೆಮ್ / ಕೆ.ಪಿ.ಪಿ.ಪಿ ಇ–ಸಂಗ್ರಹಣೆ ಪೋರ್ಟಲ್ ವೇದಿಕೆಯ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ, ಇ–ಟೆಂಡರಿನ ಮಾಹಿತಿಯು ಜೆಮ್ / ಕೆ.ಪಿ.ಪಿ.ಪಿ ವೆಬ್ ಸೈಟ್‌ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯ ವಿರುತ್ತದೆ. (ಆನ್ ಲೈನ್‌ನಲ್ಲಿ ಇ–ಟೆಂಡರ್‌ನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಇ–ಟೆಂಡರ್ ಮೊತ್ತ ಈ ಕೆಳಕಂಡಂತೆ ಇರುತ್ತದೆ.

**1.ಖರೀದಿಸಲಿರುವ ಸಾಮಾಗ್ರಿಗಳ ವಿವರ:** SUPPLY OF IGRA KITS TO DISTRICT TUBERCULOSIS ELIMINATION CENTRE, DH&FWS, BALLARI UNDER NTEP FUND FOR THE YEAR 2023-24. IND NO: DHFWS/2023-24/IND0178 **ಟೆಂಡರಿನ ವಿವರ:** ಸರಕು ಆಧರಿತ ಟೆಂಡರ್. **ಕೊನೆಯ ದಿನಾಂಕ:** 05.10.2023 @ 17:00 ಗಂಟೆಯವರೆಗೆ. **ಇ–ಟೆಂಡರ್ ಮೊತ್ತ ಲಕ್ಷಗಳಲ್ಲಿ:** ರೂ.18.90 ಲಕ್ಷಗಳು. **ಪೋರ್ಟಲ್‌ನ ವಿವರ:** https://kppp.karnataka.gov.in/#/portal/portal-home

**2.ಖರೀದಿಸಲಿರುವ ಸಾಮಾಗ್ರಿಗಳ ವಿವರ:** Micro PCR MTB Test Kit (Q3) GEM/2023/B/3951732 **ಟೆಂಡರಿನ ವಿವರ:** ಸರಕು ಆಧರಿತ ಟೆಂಡರ್. **ಕೊನೆಯ ದಿನಾಂಕ:** 23.09.2023 @ 13:00 ಗಂಟೆಯವರೆಗೆ. **ಇ–ಟೆಂಡರ್ ಮೊತ್ತ ಲಕ್ಷಗಳಲ್ಲಿ:** ರೂ.43.02 ಲಕ್ಷಗಳು. **ಪೋರ್ಟಲ್‌ನ ವಿವರ:** https://gem.gov.in/

**3.ಖರೀದಿಸಲಿರುವ ಸಾಮಾಗ್ರಿಗಳ ವಿವರ:** CBNAAT MTB / RIF PCR Test Kit (Q3) GEM/2023/B/3952260 **ಟೆಂಡರಿನ ವಿವರ:** ಸರಕು ಆಧರಿತ ಟೆಂಡರ್. **ಕೊನೆಯ ದಿನಾಂಕ:** 23.09.2023 @ 13:00 ಗಂಟೆಯವರೆಗೆ. **ಇ–ಟೆಂಡರ್ ಮೊತ್ತ ಲಕ್ಷಗಳಲ್ಲಿ:** ರೂ.63.06 ಲಕ್ಷಗಳು. **ಪೋರ್ಟಲ್‌ನ ವಿವರ:** https://gem.gov.in/

ಸಹಿ/–ಜಿಲ್ಲಾ ಕ್ಷಯರೋಗ ನಿರ್ಮೂನಾಧಿಕಾರಿಗಳು,
ಜಿ.ಆ.ಕು.ಕ ಇಲಾಖೆ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/305/ಕೆಎಸ್‌ಎಂಸಿಎ/2023–24

ಸುಭಾಷಿತ

ಯಾವಾಗ ಎಲ್ಲದಕ್ಕೂ ರೂಪಾಯಿಯಲ್ಲಿ ಬೆಲೆ ಕಟ್ಟಲು ಮುಂದಾಗುತ್ತೇವೆಯೋ ಆಗ ಜೀವನದ ವೈಭವ ಮರೆಯಾಗುತ್ತಾ ಬರುತ್ತದೆ.

-ಸಿದ್ಧೇಶ್ವರ ಸ್ವಾಮೀಜಿ

# ಭಾರತದ ಕಳವಳವನ್ನು ಕೆನಡಾ ಕಡೆಗಣಿಸುವುದು ಸರಿಯಲ್ಲ

**ಖಾಲಿಸ್ತಾನಿ** ಪ್ರತ್ಯೇಕತಾವಾದಿ ಹೋರಾಟಗಾರ ಹರದೀಪ್ ಸಿಂಗ್ ನಿಜ್ಜರ್ ಅವರನ್ನು ಬ್ರಿಟಿಷ್ ಕೊಲಂಬಿಯಾದಲ್ಲಿನ ಗುರುದ್ವಾರದ ಹೊರಭಾಗದಲ್ಲಿ ಜೂನ್‌ನಲ್ಲಿ ಹತ್ಯೆ ಮಾಡಿರುವುದರ ಹಿಂದೆ ಭಾರತ ಏಜೆಂಟರ ಕೈವಾಡ ಇದೆ ಎಂಬುದಕ್ಕೆ ತಮ್ಮಲ್ಲಿ ವಿಶ್ವಾಸಾರ್ಹ ಸಾಕ್ಷ್ಯ ಇದೆ ಎಂದು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಆರೋಪಿಸಿದ್ದಾರೆ. ಈ ಸ್ಫೋಟಕ ಆರೋಪವು ಎರಡೂ ದೇಶಗಳ ನಡುವಣ ಸಂಬಂಧದಲ್ಲಿ ತೀವ್ರವಾದ ಬಿರುಕನ್ನು ಸೃಷ್ಟಿಸಿದೆ. ಕೆನಡಾದಲ್ಲಿ ನೆಲೆಸಿರುವ ಭಾರತ ಮೂಲದ ಸಿಖ್ ಸಮುದಾಯದ ಕೆಲವರು ಖಾಲಿಸ್ತಾನಿ ಪ್ರತ್ಯೇಕತಾವಾದಿ ಚಟುವಟಿಕೆ ನಡೆಸುತ್ತಿರುವುದು ಭಾರತದ ಭದ್ರತೆಗೆ ಗಂಭೀರವಾದ ಅಪಾಯವನ್ನು ಒಡ್ಡಿದೆ. ಇಂತಹ ಚಟುವಟಿಕೆಯನ್ನು ಆ ದೇಶವು ಸಹಿಸಿಕೊಂಡಿರುವುದು ಎರಡೂ ದೇಶಗಳ ದ್ವಿಪಕ್ಷೀಯ ಸಂಬಂಧದ ಮೇಲೆ ಪ್ರತಿಕೂಲ ಪರಿಣಾಮವನ್ನು ಕೆಲವು ದಶಕಗಳಿಂದ ಬೀರುತ್ತಲೇ ಬಂದಿದೆ. ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ 2001ರ ಸೆಪ್ಟೆಂಬರ್ 11ರಂದು (9/11) ನಡೆದ ದಾಳಿಗೆ ಮೊದಲು ಪಶ್ಚಿಮದ ದೇಶಗಳು ಸಾಕ್ಷಿಯಾದ ಅತಿದೊಡ್ಡ ಭಯೋತ್ಪಾದನಾ ದಾಳಿಯ ಮೂಲ ಕೆನಡಾ ದೇಶವೇ ಆಗಿತ್ತು. ಅದು, 1985ರಲ್ಲಿ ಏರ್ ಇಂಡಿಯಾ ವಿಮಾನವೊಂದರ ಮೇಲೆ ನಡೆದ ಬಾಂಬ್ ದಾಳಿ. ಈ ವಿಮಾನದಲ್ಲಿ 329 ಮಂದಿ ಪ್ರಯಾಣಿಕರು ಇದ್ದರು. 'ಕನಿಷ್ಕ ಬಾಂಬ್ ದಾಳಿ' ಎಂದೇ ಗುರುತಿಸಲಾಗುವ ಈ ದಾಳಿಯ ಹಿಂದೆ ಇದ್ದದ್ದು ಕೆನಡಾದಲ್ಲಿ ಸಕ್ರಿಯವಾಗಿರುವ ಖಾಲಿಸ್ತಾನಿ ಭಯೋತ್ಪಾದನಾ ಸಂಘಟನೆಯಾದ ಬಬ್ಬರ್ ಖಾಲ್ಸಾ ಎಂದು ಭಾವಿಸಲಾಗಿದೆ. ಈ ದಾಳಿಯ ಸಂತ್ರಸ್ತರಲ್ಲಿ ಹೆಚ್ಚಿನವರು ಕೆನಡಾ ಪ್ರಜೆಗಳು. ಈ ದುರ್ಘಟನೆಯನ್ನು ಕೆನಡಾ ಅತ್ಯಂತ ಸುಲಭವಾಗಿ ಮರೆತುಬಿಟ್ಟಿದೆ. ಈ ಪ್ರಕರಣದ ತನಿಖೆಯನ್ನು ತೀರಾ ಕಳಪೆಯಾಗಿ ನಡೆಸುವ ಮೂಲಕ ಯಾರೊಬ್ಬರಿಗೂ ಶಿಕ್ಷೆಯಾಗದಂತೆ ನೋಡಿಕೊಳ್ಳಲಾಯಿತು ಎಂಬುದನ್ನು ಒಪ್ಪಿಕೊಳ್ಳುವುದಕ್ಕೆ ಕೂಡ ಆ ದೇಶವು ಹಲವು ವರ್ಷಗಳನ್ನೇ ತೆಗೆದುಕೊಂಡಿತ್ತು.

**ಸಂಬಂಧವನ್ನು ಉತ್ತಮಪಡಿಸಿಕೊಳ್ಳುವುದು ಕಷ್ಟದ ವಿಚಾರವೇನಲ್ಲ. ಇನ್ನಷ್ಟು ವಿಳಂಬವಾಗುವ ಮುಂಚೆಯೇ ಎರಡೂ ದೇಶಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಬೇಕು**

1980ರ ದಶಕದ ಬಳಿಕ, ಖಾಲಿಸ್ತಾನಿ ಪ್ರತ್ಯೇಕತಾವಾದಿ ಉಗ್ರ ಹೋರಾಟವು ಮತ್ತೆ ತಲೆ ಎತ್ತುವ ಸೂಚನೆಗಳು ಕಾಣಿಸುತ್ತಿವೆ. ಆ ಕಾಲದ ಹಿಂಸಾತ್ಮಕ ತೀವ್ರವಾದ ಮತ್ತು ಭಯೋತ್ಪಾದನೆ ಹಾಗೂ ಅದನ್ನು ತಡೆಯಲು ಸರ್ಕಾರವು ಕೈಗೊಂಡ ಕ್ರಮಗಳು ಭಾರತದ ಮನಃಪಟಲದಲ್ಲಿ ಆಳವಾದ ಗಾಯಗಳನ್ನು ಉಳಿಸಿಹೋಗಿವೆ. ಈ ಸ್ಥಿತಿಯು ಮರುಕಳಿಸಬಾರದು ಎಂಬುದು ಭಾರತದ ಆಂತರಿಕ ಮತ್ತು ಬಾಹ್ಯ ಭದ್ರತಾ ಸಂಸ್ಥೆಗಳ ಉದ್ದೇಶವಾಗಿದೆ. ಸಿಖ್ ಸಮುದಾಯದ ಜನರು ಹೆಚ್ಚಾಗಿರುವ ಕೆನಡಾ, ಅಮೆರಿಕ ಮತ್ತು ಬ್ರಿಟನ್‌ಗೆ ಭಾರತ ಈ ಕುರಿತು ಆಗಾಗ ಎಚ್ಚರಿಕೆಗಳನ್ನು ನೀಡುತ್ತಲೇ ಬಂದಿದೆ. ಆ ದೇಶಗಳಲ್ಲಿರುವ ಖಾಲಿಸ್ತಾನಿ ಹೋರಾಟಗಾರರು ಭಾರತಕ್ಕೆ ಬೆದರಿಕೆಯಾಗಬಹುದು ಎಂಬುದನ್ನೂ ಗಮನಕ್ಕೆ ತರಲಾಗಿದೆ. ಈ ದೇಶಗಳು ನೀಡಿದ ಪ್ರತಿಕ್ರಿಯೆಯು ಅಸಡ್ಡೆಯಿಂದಲೇ ಕೂಡಿತ್ತು. ಏಕೆಂದರೆ, ಈ ದೇಶಗಳಲ್ಲಿರುವ ಭಾರತದ ರಾಯಭಾರ ಕಚೇರಿಗಳ ಮೇಲೆ ನಡೆದ ದಾಳಿಗಳು, ರಾಜತಾಂತ್ರಿಕ ಅಧಿಕಾರಿಗಳಿಗೆ ಇರುವ ಬೆದರಿಕೆಯು ಇದನ್ನು ಪುಷ್ಟೀಕರಿಸುತ್ತದೆ. ಪ್ರತ್ಯೇಕತಾವಾದಿಗಳಿಂದ ಭಾರತಕ್ಕೆ ಇರುವ ಬೆದರಿಕೆಗಳನ್ನು ಪಶ್ಚಿಮದ ದೇಶಗಳ ಗುಪ್ತಚರ ಸಂಸ್ಥೆಗಳು ಅಲ್ಲಗಳೆಯುತ್ತಲೇ ಬಂದಿವೆ. ಅಲ್ಪಸಂಖ್ಯಾತರನ್ನು 'ತಾರತಮ್ಯ'ದಿಂದ ನಡೆಸಿಕೊಳ್ಳುತ್ತಿರುವುದನ್ನು ಮರೆಮಾಚಲು ಭಾರತವು ಪ್ರತ್ಯೇಕತಾವಾದಿ ಚಟುವಟಿಕೆಗಳನ್ನು ಉತ್ಪ್ರೇಕ್ಷೆ ಮಾಡುತ್ತಿದೆ ಎಂದು ಈ ಸಂಸ್ಥೆಗಳು ಹೇಳಿವೆ. ಈಗ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಪರಿಣಾಮವಾಗಿ, ಕೆನಡಾದಲ್ಲಿರುವ ಭಾರತದ ಹೈಕಮಿಷನ್ ಕಚೇರಿಯಲ್ಲಿದ್ದ ಗುಪ್ತಚರ ಅಧಿಕಾರಿಯನ್ನು ಉಚ್ಚಾಟನೆ ಮಾಡಲಾಗಿದೆ. ಇಲ್ಲಿರುವ ಕೆನಡಾ ಭದ್ರತೆ ಮತ್ತು ಗುಪ್ತಚರ ಸೇವಾ ಕೇಂದ್ರದ ಮುಖ್ಯಸ್ಥನನ್ನು ಉಚ್ಚಾಟನೆ ಮಾಡುವ ಮೂಲಕ ಭಾರತವು ತಿರುಗೇಟು ನೀಡಿದೆ. ಈ ನಡೆಯು ಎರಡೂ ದೇಶಗಳ ರಾಯಭಾರ ಕಚೇರಿಗಳ ನಡುವಣ ಸಹಕಾರವನ್ನು ಇನ್ನಷ್ಟು ಕ್ಲಿಷ್ಟಕರಗೊಳಿಸಿದೆ.

ನರೇಂದ್ರ ಮೋದಿ ಅವರ ಸಚಿವ ಸಂಪುಟದಲ್ಲಿ ಇರುವುದಕ್ಕಿಂತ ಹೆಚ್ಚು ಸಿಖ್ಖರು ತಮ್ಮ ಸಚಿವ ಸಂಪುಟದಲ್ಲಿ ಇದ್ದಾರೆ ಎಂದು ಟ್ರುಡೊ ಅವರು ಒಮ್ಮೆ ಹೆಮ್ಮೆಯಿಂದ ಹೇಳಿಕೊಂಡಿದ್ದರು. ಆದರೆ, ಟ್ರುಡೊ ಅವರು 'ಮತಬ್ಯಾಂಕ್ ರಾಜಕಾರಣ' ಮಾಡುತ್ತಿದ್ದಾರೆ ಎಂಬುದರ ಪುಷ್ಟೀಕರಣವಲ್ಲದೆ ಇದು ಬೇರೇನೂ ಅಲ್ಲ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ವ್ಯಂಗ್ಯವಾಡಿದ್ದರು. ಕೆನಡಾದಲ್ಲಿ 2025ರ ಅಕ್ಟೋಬರ್‌ನಲ್ಲಿ ಚುನಾವಣೆ ನಡೆಯಬೇಕಿದೆ. ಹಾಗಾಗಿಯೇ, ಪ್ರತ್ಯೇಕತಾವಾದದ ವಿಚಾರದಲ್ಲಿ ಆ ದೇಶದಿಂದ ಹೆಚ್ಚಿನ ನೆರವನ್ನು ಭಾರತ ನಿರೀಕ್ಷಿಸುವಂತಿಲ್ಲ. ಬಿರುಕು ಮೂಡುವುದಕ್ಕೆ ಮುಂಚೆ, ಎರಡೂ ದೇಶಗಳ ನಡುವಣ ವ್ಯಾಪಾರ ಸಂಬಂಧವು ಉತ್ತಮವಾಗಿತ್ತು ಹಾಗೂ ಜನರ ನಡುವಣ ಸಂಪರ್ಕವು ಚೆನ್ನಾಗಿತ್ತು. ವಿಶೇಷವಾಗಿ, ಸಾವಿರಾರು ವಿದ್ಯಾರ್ಥಿಗಳು ಮತ್ತು ವೃತ್ತಿಪರರು ಪ್ರತಿವರ್ಷವೂ ಆ ದೇಶಕ್ಕೆ ಹೋಗುತ್ತಿದ್ದಾರೆ. ಹಾಗಾಗಿ, ಸಂಬಂಧವನ್ನು ಉತ್ತಮಪಡಿಸಿಕೊಳ್ಳುವುದು ಕಷ್ಟದ ವಿಚಾರವೇನಲ್ಲ. ತನ್ನ ಏಷ್ಯಾ-ಪೆಸಿಫಿಕ್ ಲೆಕ್ಕಾಚಾರವನ್ನು ಕೈಬಿಟ್ಟಿರುವ ಕೆನಡಾವು ಈಗ ಹಿಂದೂ ಮಹಾಸಾಗರ-ಪೆಸಿಫಿಕ್ ಕಾರ್ಯತಂತ್ರದ ಜೊತೆಗೂಡಿದೆ. ಎರಡೂ ದೇಶಗಳ ನಡುವಣ ಮುನಿಸು ಶಮನಕ್ಕೆ ಇದು ಹೆಚ್ಚು ವಿಸ್ತೃತವಾದ ವೇದಿಕೆ ಒದಗಿಸಲಿದೆ. ಎರಡೂ ದೇಶಗಳು ಇನ್ನಷ್ಟು ವಿಳಂಬವಾಗುವ ಮುಂಚೆಯೇ ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು.

## ದಿನದ ಟ್ವೀಟ್

### ಸರಳ ದಸರಾ ಭಾಗ್ಯ!

**ಮೈಸೂರಿನಲ್ಲಿ ಹಲವರು, ಅದರಲ್ಲೂ ಪ್ರವಾಸೋದ್ಯಮ ವಲಯದವರು ನಮ್ಮ ನಾಡಹಬ್ಬ ದಸರಾವನ್ನು ಅವಲಂಬಿಸಿರುತ್ತಾರೆ. ಆ 10 ದಿನಗಳಿಗಾಗಿ ಅವರು ಇಡೀ ವರ್ಷ ಕಾದಿರುತ್ತಾರೆ. ದಸರಾವನ್ನು ಸರಳವಾಗಿ ಆಚರಿಸುವುದಾಗಿ ಸಚಿವರು ಹೇಳಿದ್ದಾರೆ. ಸರ್ಕಾರವು ಸಚಿವರುಗಳಿಗಾಗಿ ₹ 10 ಕೋಟಿ ಮೊತ್ತದಲ್ಲಿ ಕಾರುಗಳನ್ನು ಖರೀದಿಸಲು ಸಾಧ್ಯ ಎಂದಾದರೆ, ದಸರಾಗಾಗಿ ₹ 26 ಕೋಟಿ ಅನುದಾನ ಒದಗಿಸಲಾಗದೇ?! ಸರಳ ದಸರಾ ಭಾಗ್ಯ.**

**ರವಿಕೀರ್ತಿ ಗೌಡ**

## ಕಿಡಿನುಡಿ

**ನಮ್ಮ ಸಂಸತ್ತನ್ನು ನಾವು ಯಾವ ಮಟ್ಟಕ್ಕೆ ಇಳಿಸಿದ್ದೇವೆ?! ಮಹಾಪಂಚಾಯಿತಿಗಳಲ್ಲಿ ಆರಂಭವಾಗಿ, ಸಚಿವರು ಸಾರ್ವಜನಿಕ ಸಭೆಗಳಲ್ಲಿ ಮಾಡುವ ಭಾಷಣಗಳಲ್ಲಿ ಕೇಳಿಬರುತ್ತಿದ್ದ ಮಾತುಗಳು ಈಗ ಸಂಸತ್ತಿನಲ್ಲೂ ಕೇಳಲಾರಂಭಿಸಿವೆ!**

(ಬಿಜೆಪಿ ಸಂಸದ ರಮೇಶ್ ಬಿಧೂಡಿ ಅವರು ಬಿಎಸ್‌ಪಿ ಸಂಸದ ಡ್ಯಾನಿಷ್ ಅಲಿ ಅವರನ್ನು ಲೋಕಸಭೆಯಲ್ಲಿ ಕೆಟ್ಟದಾಗಿ ನಿಂದಿಸಿರುವುದಕ್ಕೆ ಪ್ರತಿಕ್ರಿಯೆ)

**ಅರವಿಂದ್ ಗುಣಶೇಖರ್,** ಪತ್ರಕರ್ತ

## 25 ವರ್ಷಗಳ ಹಿಂದೆ

ಬುಧವಾರ, 23-9-1998

• **ಬಿಹಾರ: ರಾಷ್ಟ್ರಪತಿ ಆಳ್ವಿಕೆಗೆ ಕೇಂದ್ರ ಶಿಫಾರಸು**

ನವದೆಹಲಿ, ಸೆ. 22- ನಿರೀಕ್ಷೆಯಂತೆ ಕೇಂದ್ರ ಸಚಿವ ಸಂಪುಟವು ಬಿಹಾರ ಸರ್ಕಾರವನ್ನು ವಜಾ ಮಾಡಿ ವಿಧಾನಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಸಸ್ಪೆಂಡ್ ಮಾಡಲು ರಾಷ್ಟ್ರಪತಿ ಅವರಿಗೆ ಶಿಫಾರಸು ಮಾಡಿರುವುದರಿಂದ, ಹದಿನಾಲ್ಕು ತಿಂಗಳ ಮುಖ್ಯಮಂತ್ರಿ ರಾಬ್ಡಿ ದೇವಿ ನೇತೃತ್ವದ ಸರ್ಕಾರದ ಆಳ್ವಿಕೆ ಅಂತ್ಯಗೊಳ್ಳುವುದು ಬಹುತೇಕ ಖಚಿತವಾಗಿದೆ.

ಬಿಹಾರದ ರಾಜ್ಯಪಾಲ ಸುಂದರ್ ಸಿಂಗ್ ಭಂಡಾರಿ ಅವರು ನೀಡಿರುವ ವರದಿಯ ಎಲ್ಲ ಅಂಶಗಳನ್ನು ಪರಿಶೀಲಿಸಿದ ಸಚಿವ ಸಂಪುಟದ ಸಭೆಯು ಬಿಹಾರಕ್ಕೆ ಸಂವಿಧಾನದ ವಿಧಿ 356 ಜಾರಿಗೊಳಿಸುವಂತೆ ರಾಷ್ಟ್ರಪತಿ ಅವರಿಗೆ ಶಿಫಾರಸು ಮಾಡಲು ನಿರ್ಧರಿಸಿತು.

• **ಜಾಗೃತ ಆಯೋಗ ಸುಗ್ರೀವಾಜ್ಞೆಗೆ ತಡೆ**

ನವದೆಹಲಿ, ಸೆ. 22 (ಯುಎನ್‌ಐ)- ತನ್ನ ಮುಂದಿರುವ ಪ್ರಶ್ನಿತ ಅರ್ಜಿ ವಿಲೇವಾರಿಯಾಗುವ ತನಕ ಕೇಂದ್ರ ಜಾಗೃತ ಆಯೋಗಕ್ಕೆ ಶಾಸನಬದ್ಧ ಅಧಿಕಾರ ನೀಡುವ ಆಗಸ್ಟ್ 25ರ ಸುಗ್ರೀವಾಜ್ಞೆಯನ್ನು ಜಾರಿಗೊಳಿಸಬಾರದು ಎಂದು ಸುಪ್ರೀಂ ಕೋರ್ಟ್ ಇಂದು ಕೇಂದ್ರ ಸರ್ಕಾರಕ್ಕೆ ಆದೇಶ ನೀಡಿದೆ.

ಈ ಆದೇಶವನ್ನು ನ್ಯಾಯಮೂರ್ತಿಗಳಾದ ಎಸ್.ಪಿ. ಭರೂಚ, ಜಿ.ಟಿ. ನಾನಾವತಿ, ಬಿ.ಎನ್.ಕಿರ್ಪಾಲ್ ಅವರ ಪೀಠವು ನೀಡಿತು.

ನಿಷ್ಪಕ್ಷಪಾತವಾದಿ ಅನಿಲ್ ದಿವಾನ್ ಅವರು ಈ ತಿಂಗಳ 8ರಂದು ಸುಗ್ರೀವಾಜ್ಞೆ ಪ್ರಶ್ನಿಸಿ ಮನವಿ ಸಲ್ಲಿಸಿದ್ದರು.

## 50 ವರ್ಷಗಳ ಹಿಂದೆ

ಭಾನುವಾರ, 23-9-1973

• **ಆರು ಅಂಶಗಳ ಸೂತ್ರಕ್ಕೆ ಆಂಧ್ರದ ವಿರೋಧ ಪಕ್ಷಗಳ ತಿರಸ್ಕಾರ**

ಹೈದರಾಬಾದ್, ಸೆ. 22- ಆಂಧ್ರ ಮತ್ತು ತೆಲಂಗಾಣ ಪ್ರತ್ಯೇಕತಾವಾದಿ ಕಾಂಗ್ರೆಸ್ಸಿಗರು, ಆಂಧ್ರದ ಏಕತೆಯನ್ನು ಕಾಪಾಡಿಕೊಂಡು ಬರಲು ಅನುಕೂಲವಾದ ಆರು ಅಂಶಗಳ ಸೂತ್ರವನ್ನು ಈಗ ಒಪ್ಪಿರುವುದಕ್ಕೆ ಆಂಧ್ರ ರಾಜ್ಯದ ವಿರೋಧ ಪಕ್ಷಗಳು ತಮ್ಮ ಅಸಮ್ಮತಿಯನ್ನು ಸೂಚಿಸಿವೆ.

ಶುಕ್ರವಾರ ದೆಹಲಿಯಲ್ಲಿ ನಿರೂಪಿಸಲಾದ ಈ ಆರು ಅಂಶಗಳ ಪರಿಹಾರ ಸೂತ್ರವನ್ನು ರಾಜ್ಯದ ಕಮ್ಯುನಿಸ್ಟೇತರ ವಿರೋಧ ಪಕ್ಷಗಳ ನಾಯಕರು ಮತ್ತು ಆಂಧ್ರ ಸೇನಾ ಪ್ರತ್ಯೇಕತಾವಾದಿಗಳು ಇಂದು ತಿರಸ್ಕರಿಸಿದರು.

ಪ್ರತ್ಯೇಕ ರಾಜ್ಯದ ಹೊರತು ಬೇರೆ ಯಾವುದೇ ಸೂತ್ರವನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಅವರು ಜಂಟಿ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದರು.

ಇಂದು ನಾವು ಅಳವಡಿಸಿಕೊಳ್ಳಬೇಕಿರುವುದು ಸನಾತನ ಧರ್ಮದ ಆಧುನಿಕ ರೂಪವನ್ನು

# ಸನಾತನ ಧರ್ಮ ಎಂದರೆ...

ವಿಶ್ಲೇಷಣೆ

ಸಿ.ಎನ್.ರಾಮಚಂದ್ರನ್

**ಅನೇಕ** ಸಂದರ್ಭಗಳಲ್ಲಿ ಚರ್ಚೆಗಳು, ವಾದ-ಪ್ರತಿವಾದಗಳು ನಡೆಯುವುದು ಅಮೂರ್ತ ಪರಿಕಲ್ಪನೆಗಳ ಬಗ್ಗೆ. ಚರ್ಚೆಗಳಲ್ಲಿ ಆ ಅಮೂರ್ತ ಪರಿಕಲ್ಪನೆಗಳ ಆನ್ವಯಿಕ ಸ್ವರೂಪಗಳೇನು, ಪರಿಣಾಮಗಳೇನು ಎಂಬ ಪ್ರಶ್ನೆಗಳು ಸಂಪೂರ್ಣವಾಗಿ ಮರೆಯಾಗುತ್ತವೆ. ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ, ದೇಶದ ವಿವಿಧೆಡೆ ಹಾಗೂ ಮಾಧ್ಯಮಗಳಲ್ಲಿ ಸನಾತನ ಧರ್ಮದ ಕುರಿತು ಈಗ ನಡೆಯುತ್ತಿರುವ ಚರ್ಚೆ.

ಈ ಚರ್ಚೆ ಚೆನ್ನೈಯಲ್ಲಿ ಪ್ರಾರಂಭವಾಗಿ, ರಾಷ್ಟ್ರದ ರಾಜಧಾನಿಯನ್ನು ತಲುಪಿ, ಸ್ವತಃ ಪ್ರಧಾನಿಯವರೇ ಸಾರ್ವಜನಿಕ ಸಭೆಗಳಲ್ಲಿ 'ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ಸನಾತನ ಧರ್ಮವನ್ನು ನಾಶ ಮಾಡಿ ದೇಶವನ್ನು ಮರಳಿ ಸಾವಿರ ವರ್ಷಗಳ ದಾಸ್ಯಕ್ಕೆ ನೂಕುತ್ತದೆ' ಎಂದು ಹೇಳುವಷ್ಟು ತೀವ್ರ ಸ್ವರೂಪವನ್ನು ತಾಳಿದೆ.

ಸನಾತನ ಧರ್ಮ ಎಂದರೇನು ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಕಾರಣ, ಇಂದು ಹಿಂದೂ ಧರ್ಮವೆಂದು ಕರೆಯಲಾಗುವ ಧರ್ಮಕ್ಕೆ ಕ್ರಿ.ಶ. ಆರನೆಯ ಶತಮಾನದವರೆಗೆ ಯಾವ ಹೆಸರೂ ಇರಲಿಲ್ಲ. ಸನಾತನ ಧರ್ಮ ಎಂಬ ಹೆಸರು ಮೊದಲಿಗೆ ಮಾಧವವರ್ಮನ ಖಾನಾಪುರ ತಾಮ್ರಶಾಸನಗಳಲ್ಲಿ ಕಂಡುಬರುತ್ತದೆ ಎಂದು ಸ್ವಾಮಿ ಹರ್ಷಾನಂದ ಹಿಂದೂ ಧರ್ಮವನ್ನು ಕುರಿತ ತಮ್ಮ 'ವಿಶ್ವಕೋಶ'ದಲ್ಲಿ ದಾಖಲಿಸುತ್ತಾರೆ (ಸಂ. 3: ಪುಟ 183). ಆನಂತರ ಆ ಹೆಸರು 'ಮತ್ಸ್ಯಪುರಾಣ', 'ಭಾಗವತ ಪುರಾಣ'ದಂತಹವುಗಳಲ್ಲಿ ಕಂಡುಬರುತ್ತದೆ. ಹಿಂದೂ ಧರ್ಮ ಅಥವಾ ಸನಾತನ ಧರ್ಮಕ್ಕೆ ಇಸ್ಲಾಂ ಧರ್ಮ, ಕ್ರೈಸ್ತ ಧರ್ಮಕ್ಕೆ ಇರುವಂತೆ ಯಾವ ಒಂದು ಆಧಾರ ಗ್ರಂಥವೂ ಇಲ್ಲ, ಇದು ಒಂದು 'ರಿಲಿಜನ್' ಅಲ್ಲ ಎಂದು ವಾದಿಸುವುದು ಅರ್ಧಸತ್ಯ. ಸನಾತನ ಧರ್ಮವೂ ವ್ಯಾಪಕ ವೈಚಾರಿಕತೆಯನ್ನು ಆಧರಿಸಿದೆ. ಶ್ರುತಿ, ಸ್ಮೃತಿ ಮತ್ತು ಪುರಾಣ ಈ ಮೂರು ವೈಚಾರಿಕ ಸ್ತಂಭಗಳ ಮೇಲೆ ನಿಂತಿದೆ.

'ಶ್ರುತಿ' ಎಂದರೆ 'ಕೇಳಿದುದು'; ನಾಲ್ಕು ವೇದಗಳು. ಇವುಗಳು ಅಪೌರುಷೇಯ, ಎಂದರೆ ಮಾನವನಿಂದ ರಚಿಸಲ್ಪಟ್ಟವುಗಳಲ್ಲ ಎಂದು ಆಸ್ತಿಕರು ನಂಬುತ್ತಾರೆ. ಪ್ರತಿಯೊಂದು ವೇದದಲ್ಲಿಯೂ ಮೂರು ಭಾಗಗಳಿವೆ: ಸಂಹಿತೆ (ಸೂಕ್ತಗಳು. ನೈಸರ್ಗಿಕ ಸಂಗತಿಗಳನ್ನು ಮಾನುಷೀಕರಣಗೊಳಿಸಿ, ಅವುಗಳನ್ನು ಸ್ತುತಿಸುವ ಸ್ತೋತ್ರಗಳು), ಬ್ರಾಹ್ಮಣಗಳು (ಯಜ್ಞಯಾಗಾದಿ ವಿಧಿವತ್ತಾದ ಆಚರಣೆಗಳ ಸ್ವರೂಪ ಮತ್ತು ಅವುಗಳನ್ನು ಆಚರಿಸುವ ವಿಧಿವಿಧಾನಗಳನ್ನು ಮಂಡಿಸುವ ಭಾಗ) ಮತ್ತು ಉಪನಿಷತ್ತುಗಳು (ಮಾನವರೆಲ್ಲರಿಗೂ ಸಮಾನವಾದ ವಿಶ್ವಸೃಷ್ಟಿ, ಸೃಷ್ಟಿಕರ್ತ-ಮಾನವ ಸಂಬಂಧ, ಪಾಪ-ಪುಣ್ಯ, ಸಾವು-ಜನ್ಮಾಂತರದಂತಹ ವಿಷಯಗಳ ಬಗ್ಗೆ ಇರುವ ಆಳವಾದ ಜಿಜ್ಞಾಸೆಯನ್ನು ಹಾಗೂ ಅಮೂಲ್ಯ ಚಿಂತನೆಯನ್ನು ಮಂಡಿಸುತ್ತವೆ). ಎಸ್.ರಾಧಾಕೃಷ್ಣನ್, ವಿವೇಕಾನಂದರಂತಹವರು ಗೌರವಿಸುವುದು ಈ ಭಾಗವನ್ನು.

ಇರುವ ನೂರೆಂಟು ಉಪನಿಷತ್ತುಗಳಲ್ಲಿ ಮುಖ್ಯವಾದವು ಐತ್ತರೇಯ, ತೈತ್ತಿರೀಯ, ಬೃಹದಾರಣ್ಯಕ, ಪ್ರಶ್ನದಂತಹ 10-12 ಮಾತ್ರ. ಪುರಾಣಗಳು ಎಂದರೆ ಪ್ರಾಚೀನ ಇತಿಹಾಸ ಮತ್ತು ಕಾಲ್ಪನಿಕ ಕಥನಗಳು. ಇವೆಲ್ಲವೂ, ಅದರಲ್ಲಿಯೂ ಮುಖ್ಯವಾಗಿ ವೇದೋಪನಿಷತ್ತುಗಳು ಸನಾತನ ಧರ್ಮದ ಅದ್ಭುತ ತಾತ್ವಿಕ, ಆಧ್ಯಾತ್ಮಿಕ ಆಯಾಮವನ್ನು ಕಟ್ಟಿಕೊಡುತ್ತವೆ. ಆದರೆ, ಒಂದು ಸಮಾಜವನ್ನು ಹಾಗೂ ಅದು ಒಳಗೊಳ್ಳುವ ವ್ಯಕ್ತಿಗಳ ದೈನಂದಿನ ಬದುಕಿಗೆ ಸಂಬಂಧಿಸಿದ ಲೌಕಿಕ ಆಯಾಮವನ್ನು ಕಟ್ಟಿಕೊಡುವುದು 'ಸ್ಮೃತಿಗಳು.' ಹಿಂದೂ ಸಮಾಜದ ರಾಜಕೀಯ, ಸಾಮಾಜಿಕ, ಕೌಟುಂಬಿಕ ಸಂಬಂಧಗಳನ್ನು, ಕರ್ತವ್ಯಾಕರ್ತವ್ಯಗಳನ್ನು ಮತ್ತು ವಿಧಿನಿಷೇಧಗಳನ್ನು ಸುಮಾರು ಎರಡು ಸಹಸ್ರಮಾನಗಳ ಕಾಲ ನಿರ್ಧರಿಸಿದುದು ಹಾಗೂ ನಿಯಂತ್ರಿಸಿದುದು ಸ್ಮೃತಿಗಳು.

ಸ್ಮೃತಿ ಎಂದರೆ ನೆನಪು. ವೇದೋಪನಿಷತ್ತುಗಳ 'ಸತ್ಯವನ್ನು' ಮತ್ತೆ ಮತ್ತೆ ನೆನಪಿಸುವುದು ಸ್ಮೃತಿ. ಪ್ರಪ್ರಥಮ ಸ್ಮೃತಿಯೆಂದರೆ, ಬಹುಶಃ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ರಚಿಸಲ್ಪಟ್ಟ ಮನುಸ್ಮೃತಿ ಅಥವಾ ಮಾನವ ಧರ್ಮಶಾಸ್ತ್ರ. ನಂತರ ಬಂದ ಎಲ್ಲ ಸ್ಮೃತಿಕಾರರೂ ಮನುವನ್ನು ಗೌರವದಿಂದ ಕಂಡು, ಅವನ ವಿಚಾರಗಳನ್ನು ಒಪ್ಪಿ ಮುಂದುವರಿಯುತ್ತಾರೆ.

ಸ್ಮೃತಿಗಳು ಅನೇಕವಾದರೂ ಮುಖ್ಯವಾದವುಗಳೆಂದರೆ ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ, ನಾರದ ಸ್ಮೃತಿ ಮತ್ತು ಪರಾಶರ ಸ್ಮೃತಿ (ಕ್ರಿ.ಶ. 100- 300). ಆಶ್ಚರ್ಯದ ಸಂಗತಿಯೆಂದರೆ, ಹನ್ನೆರಡನೆಯ ಶತಮಾನದಲ್ಲಿ ರಚಿಸಲಾದ ಯಾಜ್ಞವಲ್ಕ್ಯ ಸ್ಮೃತಿಯ ವ್ಯಾಖ್ಯಾನವಾದ ಮಿತಾಕ್ಷರ ಸಂಹಿತೆಯು ಇತರ ಸ್ಮೃತಿಗಳಿಗಿಂತ ಹೆಚ್ಚು ಪ್ರಭಾವಿಯಾಗಿದ್ದುದು. ಆದಿಸ್ಮೃತಿಯಾದ ಮನುಸ್ಮೃತಿಯ ಬಗ್ಗೆ ಸ್ವಲ್ಪದರಲ್ಲಿಯೇ ಹೇಳಬೇಕಾದರೆ, ಮನು ಕೌಟುಂಬಿಕ, ಸಾಮಾಜಿಕ, ರಾಜಕೀಯದಂತಹ ಎಲ್ಲ ಕ್ಷೇತ್ರಗಳಲ್ಲಿಯೂ ಮೌಲ್ಯಾಧಾರಿತ ಶ್ರೇಣೀಕರಣವನ್ನು ಮಾಡುತ್ತಾನೆ. ಕೌಟುಂಬಿಕ ನೆಲೆಯಲ್ಲಿ ಪತಿ-ಪತ್ನಿ, ಸಾಮಾಜಿಕ ನೆಲೆಯಲ್ಲಿ ಸವರ್ಣೀಯರು-ಶೂದ್ರರು, ರಾಜಕೀಯ ನೆಲೆಯಲ್ಲಿ ಪ್ರಭು-ಪ್ರಜೆ... ಈ ಜೋಡಿ ಪದಗಳಲ್ಲಿ ಮೊದಲನೆಯದು ಶ್ರೇಷ್ಠ, ಎರಡನೆಯದು ಕನಿಷ್ಠ. ಎಂದರೆ, ಪತಿಗೆ ಪತ್ನಿ ಸದಾ ವಿಧೇಯಳಾಗಿರಬೇಕು, ಸವರ್ಣೀಯರಿಗೆ ಶೂದ್ರರು ಸದಾ ದಾಸರಾಗಿರಬೇಕು. ವರ್ಣಾಶ್ರಮ ಚೌಕಟ್ಟಿನಿಂದ ಹೊರಗಿರುವ (ಪಂಚಮರು ಎಂದು ಕರೆಯಲ್ಪಟ್ಟಿದ್ದ) ದಲಿತರು, ಅಲೆಮಾರಿ ಜನಾಂಗಕ್ಕೆ ಸೇರಿದವರು, ಬುಡಕಟ್ಟು ಜನರು, ಆದಿವಾಸಿಗಳಂತಹ ಸಮುದಾಯಗಳು ಸ್ಮೃತಿಕಾರರ ದೃಷ್ಟಿಯಲ್ಲಿ ಪರಿಗಣಿಸಬೇಕಾದ ಮಾನವರೇ ಅಲ್ಲ. ಅವರು ಊರು-ನಗರಗಳಿಂದ, ಸಮಾಜದಿಂದ ಹೊರಗಿರುವವರು. ಮನುಸ್ಮೃತಿಯಲ್ಲಿನ ಈ ಹೇಳಿಕೆಯ ವಿವರಣೆ ಹೀಗಿದೆ:

ಸ್ತ್ರೀ: ಹುಟ್ಟುವಾಗಲೇ ಪಾಪಿಷ್ಠಳಾಗಿರುವ ಸ್ತ್ರೀ ಯಾವ ಶಿಕ್ಷಣಕ್ಕಾಗಲಿ, ಅಧಿಕಾರಕ್ಕಾಗಲಿ ಯೋಗ್ಯಳಲ್ಲ. ಹಾಸಿಗೆ, ಮಂಚ, ಆಭರಣಗಳು, ಕಾಮಾಸಕ್ತಿ, ಕ್ರೋಧ, ದುಷ್ಟ ವರ್ತನೆ, ಅಸೂಯಾಪರ ಸ್ವಭಾವ ಮತ್ತು ಕೆಟ್ಟ ಗುಣ- ಇವುಗಳನ್ನು ಮನು ಸ್ತ್ರೀಯರಿಗೆ ಕೊಟ್ಟಿದ್ದಾನೆ (9: 17). ಆದ್ದರಿಂದ, ಸ್ತ್ರೀಯರು ತಮ್ಮನ್ನು ಹಗಲು-ರಾತ್ರಿ ಅವಲಂಬಿಸಿರುವಂತೆ ಪುರುಷರು ಅವರನ್ನು ನಡೆಸಿಕೊಳ್ಳಬೇಕು (9: 2-3).

ಮನುವಿನ ನಂತರ ಬಂದ ಯಾವ ಸ್ಮೃತಿಕಾರನೂ ಮನುವಿನ ಈ ನಿಲುವನ್ನು ಖಂಡಿಸಿಲ್ಲ. ಅದಕ್ಕೆ ವಿರುದ್ಧವಾಗಿ, ಮನುವಿನ ನಿಲುವನ್ನೇ ಮತ್ತಷ್ಟು ಕಠಿಣ ಮಾಡುತ್ತಾರೆ. ಮನುವಿಗಿಂತ ಸಾವಿರ ವರ್ಷಗಳ ನಂತರ ಬಂದ ವಿಜ್ಞಾನೇಶ್ವರನು ಮಿತಾಕ್ಷರ ಸಂಹಿತೆಯಲ್ಲಿ ಮಂಡಿಸುವಂತೆ, ಅವಿಭಕ್ತ ಕುಟುಂಬದಲ್ಲಿ ಗಂಡುಮಕ್ಕಳಿಗೆ ಹುಟ್ಟಿನಿಂದಲೇ ಆಸ್ತಿಯ ಹಕ್ಕು ಲಭಿಸಿದರೆ, ಅದೇ ಕುಟುಂಬದ ಹೆಣ್ಣುಮಕ್ಕಳು, ಪತ್ನಿ, ಮೃತನ ವಿಧವೆ ಇವರುಗಳಿಗೆ ಆ ಕುಟುಂಬದ ಆಸ್ತಿಯಲ್ಲಿ ಎಂದಿಗೂ ಹಕ್ಕಿರುವುದಿಲ್ಲ. ಮನು ವಿಧವೆಯರಿಗೆ ಶೋಚನೀಯ ಬದುಕನ್ನು ವಿಧಿಸಿದರೆ, ವಿಜ್ಞಾನೇಶ್ವರನು ವಿಧವೆಯರಿಗೆ ಬದುಕುವ ಹಕ್ಕನ್ನೇ ನಿರಾಕರಿಸುತ್ತಾನೆ. ಗಂಡ ಸತ್ತ ನಂತರ ವಿಧವೆಯರಿಗೆ ಅನ್ವಾರೋಹಣ (ಪತಿಯ ಮೃತದೇಹದೊಡನೆ ಚಿತೆಗೇರುವುದು) ತುಂಬಾ ಪುಣ್ಯಕಾರಕ ಎಂದು ಮಂಡಿಸುತ್ತಾನೆ (ಮಿತಾಕ್ಷರ, 3: 166-167).

ಇಂತಹ ಮಹಿಳಾ ವಿರೋಧಿ ಮಿತಾಕ್ಷರ ಸಂಹಿತೆಯು ಭಾರತದ ಬಹುಭಾಗಗಳಲ್ಲಿ ಅಧಿಕೃತವಾಗಿ ಸುಮಾರು 800 ವರ್ಷ (1955ರವರೆಗೆ) ಹಿಂದೂ ಸಮಾಜದ ಆಚಾರ, ವ್ಯವಹಾರಗಳನ್ನು ನಿಯಂತ್ರಿಸಿತು ಎಂಬುದನ್ನು ನಂಬುವುದೇ ಕಷ್ಟವಾಗುತ್ತದೆ.

ಶೂದ್ರರು: ಸ್ತ್ರೀಯರು ಮತ್ತು ಶೂದ್ರರ ಬಗೆಗಿನ ನಿಲುವುಗಳ ನಡುವೆ ಸ್ಮೃತಿಗಳಲ್ಲಿ ಹೆಚ್ಚು ವ್ಯತ್ಯಾಸವೇನೂ ಇಲ್ಲ. ನಿದರ್ಶನಾರ್ಥವಾಗಿ ಮನುಸ್ಮೃತಿಯ ಈ ಕೆಳಗಿನ ಶ್ಲೋಕಗಳನ್ನು ನೋಡಬಹುದು:

ಪ್ರಭುವು ಶೂದ್ರರಿಗೆ ನಿರ್ದೇಶಿಸಿರುವ ಒಂದೇ ಒಂದು ಕರ್ಮವೆಂದರೆ, ಮೊದಲ ಮೂರು ವರ್ಣಗಳ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಸೇವೆಯನ್ನು ವಿನೀತರಾಗಿ ಮಾಡುವುದು (1: 91).

ಶೂದ್ರನು ದ್ವಿಜರನ್ನು ನಿಂದನೆಯ ಮೂಲಕ ಅಪಮಾನಿಸಿದರೆ ಅವನ ನಾಲಿಗೆಯನ್ನು ಕತ್ತರಿಸಬೇಕು (8: 270)- ಇಂತಹ ಶಿಕ್ಷೆಗಳ ಪಟ್ಟಿ ಬಹಳಷ್ಟು ದೀರ್ಘವಾಗಿದೆ.

ಯಾವ ಸ್ಮೃತಿಕಾರನೂ ಮನುವಿನ ಈ ಕಟ್ಟಲೆಗಳನ್ನು ವಿರೋಧಿಸಿಲ್ಲ. ಒಟ್ಟಾರೆಯಾಗಿ, ಇಂದು ನಾವು ಅಳವಡಿಸಿಕೊಳ್ಳಬೇಕಾದ ಸನಾತನ ಧರ್ಮದ ಆಧುನಿಕ ರೂಪವೆಂದರೆ, ಉಪನಿಷತ್ತುಗಳ ಪಠಣ ಮತ್ತು ಮನನ ಮಾಡುವುದು, ಸ್ಮೃತಿಗಳನ್ನು ತಿರಸ್ಕರಿಸುವುದು ಹಾಗೂ ಪುರಾಣಗಳನ್ನು ಕಾಲ್ಪನಿಕ ಕಥೆಗಳಂತೆ ಓದುವುದು.

## ಚುರುಮುರಿ

### ಯಥಾ ತವ, ತಥಾ ಕಕವ!

• ತುರುವೇಕೆರೆ ಪ್ರಸಾದ್

'ಇನ್ನೇನಮ್ಮ, ನಿಮಗೂ 33 ಪರ್ಸೆಂಟ್ ಮೀಸಲಾತಿ ಬಂದೋಯ್ತು' ಎಂದ ಪೇಪರ್ ನೋಡ್ತಾ ಪರ್ಮೇಶಿ. 'ನಿಮಗೇನ್ ಹೊಟ್ಟೇಲಿ ಮೆಣಸಿನಕಾಯಿ ಕಿವುಚಿದಂಗೆ ಆಗ್ತಿದ್ಯಾ? ಈಗೇನು 33 ಪರ್ಸೆಂಟ್ ಭಿಕ್ಷೆ ನೀವು ಹಾಕೋದು... ನಮಗೆ ಬರೋಬ್ಬರಿ 50 ಪರ್ಸೆಂಟ್ ಸೀಟ್‌ಗಳನ್ನ ಬಿಟ್‌ಕೊಡ್ಬೇಕು' ಎಂದರು ಪದ್ದಮ್ಮ ಖಡಕ್ಕಾಗಿ!

'ಅದೂ ಆಗುತ್ತೆ, ಈಗ ಹತ್ರಹತ್ರ ಪಾಸಿಂಗ್ ಮಾರ್ಕ್‌ಗೆ ಬಂದಿದೀರಿ. ಸಮಾಧಾನ ಮಾಡ್ಕೊಳ್ಳಿ'.

'ಹೇಗ್ ಸಮಾಧಾನ ಮಾಡ್ಕೊಳ್ಳೋದು? ಇಡೀ ದೇಶನ, ಪ್ರಜಾಪ್ರಭುತ್ವನ, ಚುನಾವಣೆ ವ್ಯವಸ್ಥೆನ ಕುಲಗೆಡಿಸಿ ಮೇಲ್ ಓರಿಯಂಟೆಡ್ ಮಾಡಿ ಕೂರ್ಸಿದೀರಿ. ಈಗ ನಮಗೆ ಮೀಸಲಾತಿ ಕೊಟ್ರೆ ನಾವು ಎಲೆಕ್ಷನ್ ಗೆದ್‌ಬಿಡಕ್ಕಾಗುತ್ತೇನ್ರೀ?'

'ಅಲ್ಲ, ಕೆಲವರು ಮುಂದಿನ ವರ್ಷನೇ ಮೀಸಲಾತಿ ಜಾರಿಗೆ ಬರ್ಬೇಕು ಅಂತಿದಾರೆ. ಅಂಥಾದ್ರಲ್ಲಿ ನೀನು ಎಲೆಕ್ಷನ್‌ಗೆ ಕಂಟೆಸ್ಟ್ ಮಾಡೋದೇ ಕಷ್ಟ ಅಂತಿದೀಯಲ್ಲ'.

'ನೋಡ್ರಿ, ನನ್ ಪ್ರಕಾರ 2029ಕ್ಕೇ ಮೀಸಲಾತಿ ಜಾರಿಗೆ ಬರ್ಬೇಕು. ಅಷ್ಟರೊಳಗೆ ಇಡೀ ಚುನಾವಣೆ ವ್ಯವಸ್ಥೆ ವಿಮೆನ್ ಓರಿಯಂಟೆಡ್ ಆಗದಿದ್ರೂ ನಿಮ್ ಕಪಿಮುಷ್ಟಿಯಿಂದ ಈಚೆ ಬರ್ಬೇಕು'.

'ವಿಮೆನ್ ಓರಿಯಂಟೆಡ್ ಆಗೋದಂದ್ರೇನು?'

'ಈಗ ನೋಡಿ, ನೀವು ಗಂಡಸರು ಎಲೆಕ್ಷನ್ ಅಂದ್ರೆ ಎಣ್ಣೆ ಕುಡ್ಸೋದು, ನೋಟು ಹಂಚೋದು, ಕುಕ್ಕರು, ಮಿಕ್ಸಿ ಕೊಡೋದು, ಜನಗಳನ್ನ ಕಕವಾ ಮಾಡೋದನ್ನೇ ಕಸುಬು ಮಾಡ್ಕೊಂಡಿದೀರಿ. ನಾವು ಹಾಗ್ ಮಾಡಕ್ಕಾಗುತ್ತೇನ್ರೀ? ಹಾಗ್ ಮಾಡಲಿಲ್ಲ ಅಂದ್ರೆ, ಈ ಆಮಿಷಕ್ಕೆ ಅಡಿಕ್ಟ್ ಆಗಿರೋ ಜನ, ಪಾಂಪ್ಲೆಟ್ ಕೈಗಿಟ್ಟು ಕೈ ಮುಗಿದುಬಿಟ್ರೆ ವೋಟ್ ಹಾಕ್ಬಿಡ್ತಾರಾ? ನಾವೂ ನಿಮ್ ಸಮಕ್ಕೆ ದುಡ್ಡು ಬಿಚ್ಬೇಕು ತಾನೆ? ಎಲ್ಲಿದೆ ನಮ್ಮ ಹತ್ರ ದುಡ್ಡು?'

'ಹೌದಲ್ವಾ? ಕರಡು ತಯಾರು ಮಾಡಿದೋರೂ ಈ ವಿಷಯದಲ್ಲೇ ಕುರುಡಾಗಿಬಿಟ್ಟಿದಾರಲ್ಲ. ಇದಕ್ಕೆ ಏನ್ ಮಾಡ್ಬೇಕು ಅಂತೀಯ?'

'ಸ್ತ್ರೀ ಸಬಲೀಕರಣ ಆಗ್ಬೇಕು. ಸ್ಟೇಟ್ ಕೊಟ್ಟರೋ ಹಾಗೆ ಸೆಂಟ್ರಲ್ಲೂ ಮಹಿಳೆಯರಿಗೆ ಗ್ಯಾರಂಟಿ ಮೇಲೆ ಗ್ಯಾರಂಟಿ ಕೊಡ್ಬೇಕು. ಗಂಡಸರ ಹೆಸರಲ್ಲಿರೋ ಅರ್ಧ ಆಸ್ತಿ ನಮ್ ಹೆಸರಿಗೆ ಬರ್ಬೇಕು. ಇಷ್ಟು ವರ್ಷ ನಮಗೆ ಅವಕಾಶ ಕೊಡ್ದೇ ಇದ್ದದ್ದಕ್ಕೆ ಇದೇ ಶಿಕ್ಷೆ' ವರ್ಡಿಕ್ಟ್ ಕೊಟ್ಟರು ಪದ್ದಮ್ಮ, ಪರ್ಮೇಶಿ ತಲೆ ಚಚ್ಚಿಕೊಂಡ.

## ಸಂಗತ

# ಮಹಿಳಾ ಮೀಸಲಾತಿ ಮತ್ತು ತಾತ್ವಿಕ ಸವಾಲು

**ಸಾಂಸ್ಥಿಕ ತಡೆಗೋಡೆ ದಾಟಿದ ನಂತರವೂ ಈ ಮಸೂದೆಯು ಅನುಷ್ಠಾನಗೊಳ್ಳಲು ಇನ್ನೂ ಆರು ವರ್ಷ ಕಾಯಬೇಕಿರುವುದು ಯಾವ ಕಾರಣಕ್ಕಾಗಿ?**

• ನಾ.ದಿವಾಕರ

**ಹಿಂದಿನ** ಮೂರು ದಶಕಗಳಲ್ಲಿ ಭಾರತದ ಅಧಿಕಾರ ರಾಜಕಾರಣದ ಆವರಣದಲ್ಲಿ ಕಾಣಬಹುದಾದ ಸಮಾನ ಎಳೆ ಎಂದರೆ, ಲಿಂಗಸೂಕ್ಷ್ಮತೆಯ ಕೊರತೆ ಮತ್ತು ವ್ಯಾವಹಾರಿಕ ಪ್ರಜ್ಞೆಯ ಹೆಚ್ಚಳ. ತಳಮಟ್ಟದ, ಅವಕಾಶವಂಚಿತ ಜನರನ್ನು ತಲುಪುವಂತಹ ಶಾಸನಗಳನ್ನು ಜಾರಿಗೊಳಿಸುವಾಗಲೂ ಮುಂದಿನ ಚುನಾವಣೆಗಳಲ್ಲಿ ಲಭ್ಯವಾಗಬಹುದಾದ ಲಾಭ-ನಷ್ಟದ ಲೆಕ್ಕಾಚಾರದೊಂದಿಗೇ ಮುಂದಡಿ ಇಡುವುದು, ಹಾಲಿ ಕಾಯ್ದೆಗಳಿಗೆ ತಿದ್ದುಪಡಿ ತರುವುದು ಅಥವಾ ಹೊಸ ಮಸೂದೆಗಳನ್ನು ಮಂಡಿಸುವುದು ಈ ಅವಧಿಯಲ್ಲಿ ಗುರುತಿಸಬಹುದಾದ ವಿದ್ಯಮಾನ.

ಸಂಸತ್ತು ಅಥವಾ ವಿಧಾನಸಭೆಯಲ್ಲಿ ಕುಳಿತಿರುವ ಜನಪ್ರತಿನಿಧಿಗಳಿಗೆ ತಾವು ಸಾಂವಿಧಾನಿಕ ಶಿಸ್ತಿಗೊಳಪಟ್ಟ ಸಿಪಾಯಿಗಳು, ಸಮಸ್ತ ಜನಕೋಟಿಯ ಪ್ರಗತಿಗಾಗಿ ದುಡಿಯಲು ಆಯ್ಕೆ ಮಾಡಲಾಗಿರುವ 'ಪ್ರತಿನಿಧಿಗಳು' ಎಂಬ ಅರಿವೇ ಇಲ್ಲದಂತಹ ಪರಿಸ್ಥಿತಿಯನ್ನು ಅಸ್ಮಿತೆ-ಕೇಂದ್ರಿತ ಸಾಂಸ್ಕೃತಿಕ ರಾಜಕಾರಣ ಸೃಷ್ಟಿಸಿದೆ.

ಈ ವಾತಾವರಣದ ನಡುವೆಯೂ ಹೊರಹೊಮ್ಮಿದ ಒಂದು ಮಹತ್ವಾಕಾಂಕ್ಷಿ ಮಸೂದೆ ಎಂದರೆ ಮಹಿಳೆಯರಿಗೆ ಶಾಸನಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿ ನೀಡುವ ಒಂದು ಮಸೂದೆ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳಾ ಸಮೂಹಕ್ಕೆ ಮೂರನೇ ಒಂದರಷ್ಟು ಸ್ಥಾನಗಳನ್ನು ನೀಡುವ ಅತಾರ್ಕಿಕ ನಿಲುವು ಸಾರ್ವಕಾಲಿಕ ಪ್ರಶ್ನೆಯಾಗಿ ಉಳಿದರೂ, ಪುರುಷಾಧಿಪತ್ಯದ ಆಡಳಿತ ವ್ಯವಸ್ಥೆ ಈ ಮಟ್ಟಿಗಾದರೂ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಮುಂದೆ ಬಂದಿದ್ದು ಕೊಂಚ ಮಟ್ಟಿಗೆ ಕ್ರಾಂತಿಕಾರಕವೇ ಎನ್ನಬಹುದು. ಆದರೆ ಈ ಮಸೂದೆ ಯಾವುದೇ ಪಕ್ಷದ ಅಥವಾ ಚಿಂತನೆಯ ಔದಾರ್ಯದ ಫಲ ಅಲ್ಲ ಎನ್ನುವ ವಾಸ್ತವವನ್ನೂ ಪಕ್ಷ ರಾಜಕಾರಣದ ವಾರಸುದಾರರು ಒಪ್ಪಿಕೊಳ್ಳಲೇಬೇಕು. ದಶಕಗಳ ಮಹಿಳಾ ಹೋರಾಟಗಳಲ್ಲಿ ನಿರಂತರವಾಗಿ ಪ್ರವಹಿಸಿರುವ ಒಂದು ಸಾಂವಿಧಾನಿಕ ಹಕ್ಕೊತ್ತಾಯವೇ ಆಡಳಿತ ವ್ಯವಸ್ಥೆಯಲ್ಲಿ ಸಮಪಾಲು ಮತ್ತು ಘನತೆಯ ಸ್ಥಾನಮಾನ.

1980ರ ನಂತರದಲ್ಲಿ ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಪಂಚಾಯಿತಿ ಮಟ್ಟದಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ನೀತಿ ಜಾರಿಯಲ್ಲಿ ಇರುವುದಾದರೂ, ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಈ ಹಕ್ಕು ಪಡೆಯಲು ಆಧುನಿಕ ಭಾರತಕ್ಕೆ ಮೂರು-ನಾಲ್ಕು ದಶಕಗಳೇ ಬೇಕಾದವು. 1996ರಲ್ಲಿ ಮಂಡನೆಯಾದ ಈ ಮಸೂದೆಯನ್ನು ಜಾರಿಗೊಳಿಸುವ ಪ್ರಯತ್ನಗಳು ಅನಂತರದ ಸರ್ಕಾರಗಳ ಅವಧಿಯಲ್ಲೂ ನಡೆದವು. ಆದರೂ ಸ್ಥಾಪಿತ ವ್ಯವಸ್ಥೆಯ ವಾರಸುದಾರರಂತೆ ವರ್ತಿಸುವ ಪಿತೃಪ್ರಾಧಾನ್ಯದ ಪರಿಚಾರಕರು ಪ್ರತಿಬಾರಿಯೂ ಈ ಉದ್ದೇಶವು ಕ್ರಿಯೆಗೆ ಇಳಿಯದಂತೆ ಮಾಡುವಲ್ಲಿ ಸಫಲರಾಗಿರುವುದು ಚರಿತ್ರೆಯ ವಿಪರ್ಯಾಸ.

ಆಗ ತಾತ್ವಿಕ ನಿಲುಮೆಗಳಿಗಾಗಿ ಮಸೂದೆಯನ್ನು ವಿರೋಧಿಸಿದ ಹಲವು ನಾಯಕರು ಇಂದು ಎದೆ-ತಟ್ಟಿಕೊಳ್ಳುತ್ತಿರುವುದು ಸಮಕಾಲೀನ ಭಾರತದ ವಿಡಂಬನೆ. ಇಷ್ಟೆಲ್ಲಾ ಗೊಂದಲಗಳ ನಡುವೆಯೂ ಮಹಿಳಾ ಮೀಸಲಾತಿ ಮಸೂದೆಯನ್ನು ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿ, ಉಭಯ ಸದನಗಳಲ್ಲಿ ಅನುಮೋದನೆ ಪಡೆದಿದೆ. ಮೂಲತಃ ಅಡ್ಡಿಯಾಗಬಹುದಾಗಿದ್ದ ಈ ಸಾಂಸ್ಥಿಕ ತಡೆಗೋಡೆಯನ್ನು ದಾಟಿದ ನಂತರವೂ ಈ ಮಸೂದೆಯು ಅನುಷ್ಠಾನಗೊಳ್ಳಲು ಇನ್ನೂ ಆರು ವರ್ಷಗಳು ಕಾಯಬೇಕಿರುವುದು ಯಾವ ಕಾರಣಕ್ಕಾಗಿ? 2026ರಲ್ಲಿ ನಡೆಯಲಿರುವ ಜನಗಣತಿ, ತದನಂತರದ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆಯ ನಂತರ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸುವುದೇ ಆದರೆ, 2029ರ ಚುನಾವಣೆಯನ್ನೂ ದಾಟಿಹೋಗುವ ಸಾಧ್ಯತೆಯಿದೆ.

2014ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ತನ್ನ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿದ್ದಂತೆ ಬಿಜೆಪಿ ನೇತೃತ್ವದ ಸರ್ಕಾರ ಈ ಮಸೂದೆಯನ್ನು ಮಂಡಿಸಿದ್ದಲ್ಲಿ, ಈ ವೇಳೆಗೆ ಒಂದು ನಿರ್ಣಾಯಕ ಹಂತ ತಲುಪಬಹುದಿತ್ತು. ಆದರೆ 9 ವರ್ಷ ಮೌನ ವಹಿಸಿ 2024ರ ಚುನಾವಣೆಗೆ ಮುನ್ನ ಮಸೂದೆಯನ್ನು ಮಂಡಿಸಿರುವುದು ಪಕ್ಷದ ರಾಜಕೀಯ ಚಾಣಾಕ್ಷತನವನ್ನು ತೋರಿಸುತ್ತದೆ.

ಮಹಿಳೆಯರಿಗೆ ರಾಜಕೀಯ ಅಧಿಕಾರ ಮತ್ತು ಪ್ರಾತಿನಿಧ್ಯ ನೀಡಬಹುದಾದ ಈ ಮಸೂದೆ ತಾತ್ವಿಕವಾಗಿ ನಮ್ಮ ಮುಂದಿದ್ದರೂ ವಾಸ್ತವವಾಗಿ ಇದು ಪುರುಷಾಧಿಪತ್ಯದ ಬುಡವನ್ನು ಸದ್ಯಕ್ಕಂತೂ ಅಲುಗಾಡಿಸುವುದಿಲ್ಲ. ಜನಗಣತಿ, ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗಳು ಮುಂದೂಡಲ್ಪಟ್ಟಷ್ಟೂ ಮಸೂದೆಯೂ ಇದೇ ಸ್ಥಿತಿಯಲ್ಲಿ ಮುಂದುವರಿಯುತ್ತದೆ. ಪಿತೃಪ್ರಧಾನ ಸಮಾಜ ಮತ್ತು ಪುರುಷಾಧಿಪತ್ಯದ ರಾಜಕೀಯ ವ್ಯವಸ್ಥೆಯಲ್ಲಿ ಲಿಂಗಸೂಕ್ಷ್ಮತೆ ಮತ್ತು ಸ್ತ್ರೀ ಸಂವೇದನೆಯ ಒಂದಂಶವಾದರೂ ಇದ್ದಿದ್ದಲ್ಲಿ ಈ ಮಸೂದೆ ಮೂರು ದಶಕಗಳ ಕಾಲ ನನೆಗುದಿಗೆ ಬೀಳುತ್ತಿರಲಿಲ್ಲ.

ಬಿಲ್ಕಿಸ್ ಬಾನು ಪ್ರಕರಣ, ಮಹಿಳಾ ಕುಸ್ತಿಪಟುಗಳ ಹೋರಾಟ, ಮಣಿಪುರದ ಬೆತ್ತಲೆ ಮೆರವಣಿಗೆ... ಇಂತಹ ಪ್ರಸಂಗಗಳಲ್ಲಿ, ಈಗಾಗಲೇ ಅಧಿಕಾರ ರಾಜಕಾರಣದ ಫಲಾನುಭವಿಗಳಾಗಿರುವ ಬಹುತೇಕ ಮಹಿಳಾ ಪ್ರತಿನಿಧಿಗಳ ತಣ್ಣನೆಯ ಮೌನವನ್ನು ಗಮನಿಸಿದಾಗ, ಭಾರತದ ಪಿತೃಪ್ರಧಾನ ರಾಜಕೀಯ ವ್ಯವಸ್ಥೆಯು ಆಡಳಿತ ವಲಯದಲ್ಲಿ ಸ್ತ್ರೀ ಸಂವೇದನೆಯನ್ನು ಹೇಗೆ ನಿಷ್ಕ್ರಿಯಗೊಳಿಸಿದೆ ಎನ್ನುವುದು ಅರ್ಥವಾಗುತ್ತದೆ.

ಈ ತಾತ್ವಿಕ ಸವಾಲುಗಳ ನಡುವೆಯೇ ಮಹಿಳಾ ಮೀಸಲಾತಿ ಮಸೂದೆ ಆದಷ್ಟು ಬೇಗ ಜಾರಿಯಾಗಲಿ. ಆ ನಿರೀಕ್ಷೆಯಲ್ಲಿ ಇರೋಣವೇ?

## ವಾಚಕರ ವಾಣಿ

### ಅಧ್ಯಯನ ಪಠ್ಯ ಕನ್ನಡದಲ್ಲಿ ಲಭ್ಯವಾಗಲಿ

ಕೇಂದ್ರ ನಾಗರಿಕ ಸೇವಾ ಪರೀಕ್ಷೆಗೆ ರಾಜ್ಯದಿಂದ ಗಣನೀಯ ಪ್ರಮಾಣದಲ್ಲಿ ಆಕಾಂಕ್ಷಿಗಳು ಅರ್ಜಿ ಸಲ್ಲಿಸುತ್ತಿರುವುದು ಶ್ಲಾಘನೀಯ. ಆದರೆ, ಫಲಿತಾಂಶದಲ್ಲಿ ಹಿಂದಿ, ತಮಿಳು, ತೆಲುಗು ಮಾಧ್ಯಮದ ಅಭ್ಯರ್ಥಿಗಳು ಮೇಲುಗೈ ಸಾಧಿಸುತ್ತಿದ್ದಾರೆ. ಇದಕ್ಕೆ ಬಹುಮುಖ್ಯ ಕಾರಣ, ಕನ್ನಡಿಗರಿಗೆ ಇರುವ ಭಾಷಾ ಮಾಧ್ಯಮದ ತೊಡಕು. ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶದಲ್ಲಿ ಯುಪಿಎಸ್‌ಸಿ ಸಂಬಂಧ ಆಯಾ ರಾಜ್ಯ ಭಾಷೆಯಲ್ಲಿ ಇಂಗ್ಲಿಷ್ ಭಾಷೆಯಿಂದ ಬಹಳಷ್ಟು ಪುಸ್ತಕಗಳನ್ನು ಅಲ್ಲಿನ ಲೇಖಕರು, ಪ್ರಕಾಶಕರು ತರ್ಜುಮೆ ಮಾಡುತ್ತಿದ್ದಾರೆ. ಆದರೆ ಆ ಉತ್ಸಾಹ ಕನ್ನಡದಲ್ಲಿ ಕಾಣುತ್ತಿಲ್ಲ.

ಅಧ್ಯಯನ ವಿಷಯಗಳು ಮಾತೃಭಾಷೆಯಲ್ಲಿ ದೊರೆತರೆ ಇಲ್ಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಬಹುದು. ಆದ್ದರಿಂದ, ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಇಂಗ್ಲಿಷ್‌ನಲ್ಲಿರುವ ಉತ್ಕೃಷ್ಟ ಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಲು ರಾಜ್ಯ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಪುಸ್ತಕ ಪ್ರಕಾಶನ ಸಂಸ್ಥೆಗಳು ಮುಂದಾಗಬೇಕು. ಗ್ರಾಮಾಂತರ ವಿದ್ಯಾರ್ಥಿಗಳು ಹಾಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಪೂರೈಸಿರುವವರ ಹಿತದೃಷ್ಟಿಯಿಂದ ಇಂತಹ ಕ್ರಮ ಅಗತ್ಯ.

**ಅನಿಲ್ ಕುಮಾರ್**, ನಂಜನಗೂಡು

### ಡಿಸಿಎಂ ವಿವಾದ: ನಗೆಪಾಟಲಾದೀತು

ಎಲ್ಲ ವರ್ಗದವರನ್ನೂ ತೃಪ್ತಿಪಡಿಸಬೇಕು ಎಂದಾದರೆ, ಮೂವರು ಮುಖ್ಯಮಂತ್ರಿ ಹಾಗೂ 15 ಉಪಮುಖ್ಯಮಂತ್ರಿ ಸ್ಥಾನಗಳನ್ನು ಸೃಷ್ಟಿಸಬೇಕಾಗುತ್ತದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಅವರು ವ್ಯಂಗ್ಯವಾಡಿರುವುದನ್ನು ಓದಿದಾಗ (ಪ್ರ.ವಾ., ಸೆ. 22) ನಿರ್ದೇಶಕ ದಾಸರಿ ನಾರಾಯಣ ರಾವ್ ಅವರ ತೆಲುಗು ಚಲನಚಿತ್ರವೊಂದರ ಸನ್ನಿವೇಶ ನೆನಪಾಯಿತು. ಆ ಚಿತ್ರದಲ್ಲಿ, ಮುಖ್ಯಮಂತ್ರಿ ಪಾತ್ರಧಾರಿ ಉಳಿದ ಎಲ್ಲಾ ಶಾಸಕರನ್ನು ಡಿಸಿಎಂಗಳನ್ನಾಗಿ ಮಾಡಿ ಸರ್ಕಾರ ರಚಿಸುತ್ತಾರೆ.

ಜನಸೇವೆಗೆ ಇಂಥಿಂಥ ಹುದ್ದೆಗಳೇ ಬೇಕು ಅನ್ನುವುದು ಎಷ್ಟು ಸರಿ? ಇದರಿಂದ ಜನರ ದೃಷ್ಟಿಯಲ್ಲಿ ಸರ್ಕಾರದ ಬಗ್ಗೆ ತಾತ್ಸಾರ ಹುಟ್ಟುವ ಸಾಧ್ಯತೆಯೇ ಹೆಚ್ಚು. ನಗೆಪಾಟಲಿಗೆ ಗುರಿಯಾಗುವಂತಹ ಹೇಳಿಕೆಗಳು ಜನರಿಗೆ ಬೇಕಾಗಿಲ್ಲ.

**ಶಾಂತಕುಮಾರ್,** ಸರ್ಜಾಪುರ

### ಬೇಕು ಹಾಲಿನ ಘಟಕ

ಸರ್ಕಾರಿ ಕಾರ್ಯಕ್ರಮಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ನೀರಿನ ಬಾಟಲಿ ಬಳಕೆಗೆ ನಿಷೇಧ ಹೇರಿರುವ ಸರ್ಕಾರದ ಕ್ರಮ ಸ್ವಾಗತಾರ್ಹ. ಪ್ಲಾಸ್ಟಿಕ್ ಇನ್ನಿಲ್ಲದ ಹಾಗೆ ನಮ್ಮ ಬದುಕಿನಲ್ಲಿ ಬೆಸೆದುಕೊಂಡಿರುವ ಈ ಹೊತ್ತಿನಲ್ಲಿ, ಅದರಿಂದ ಮುಕ್ತವಾಗುವ ಪ್ರಯತ್ನಗಳು ಅತ್ಯವಶ್ಯಕ. ಸಾರ್ವಜನಿಕರು ಪ್ಲಾಸ್ಟಿಕ್ ಲೋಟ, ಬಾಟಲಿಗಳ ಬಳಕೆಗೆ ಇನ್ನಾದರೂ ವಿದಾಯ ಹೇಳಬೇಕಾಗಿದೆ.

ಹಾಲು, ಮೊಸರು, ಮಜ್ಜಿಗೆಯ ಕವರ್‌ಗಳು ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯವನ್ನು ಉತ್ಪಾದಿಸುತ್ತವೆ. ಕುಡಿಯುವ ನೀರಿನ ಘಟಕಗಳು ಇರುವಂತೆ ಹಾಲಿನ ಘಟಕಗಳನ್ನು ತೆರೆದರೆ ಚೆನ್ನಾಗಿರುತ್ತದೆ. ಚಿಲ್ಲರೆ ಸಮಸ್ಯೆ ನಿವಾರಿಸಲು ಈಗಾಗಲೇ ಬಹುತೇಕರು ಹೊಂದಿಕೊಂಡಿರುವ ಸ್ಕ್ಯಾನ್ ಮಾದರಿ ಹಣ ಪಾವತಿಯ ವಿಧಾನವನ್ನು ಇದಕ್ಕಾಗಿ ಅನುಸರಿಸಬಹುದು. ಈ ಬಗ್ಗೆ ಸರ್ಕಾರ ಹಾಗೂ ಪರಿಸರತಜ್ಞರು ಗಮನಹರಿಸಲಿ.

**ಸುಮಾವೀಣಾ,** ಹಾಸನ

### ನಗದು ಪಾವತಿಗೆ ಇರಲಿ ಅವಕಾಶ

ಚಿತ್ರದುರ್ಗಕ್ಕೆ ಒನಕೆ ಓಬವ್ವನ ಕಿಂಡಿ ಹಾಗೂ ಐತಿಹಾಸಿಕ ಕೋಟೆ ವೀಕ್ಷಿಸಲು ರಾಜ್ಯದ ಮೂಲೆಮೂಲೆಗಳಿಂದ ಪ್ರವಾಸಿಗರು, ವಿದ್ಯಾರ್ಥಿಗಳು ಹಾಗೂ ಇತಿಹಾಸಪ್ರಿಯರು ಬರುತ್ತಾರೆ. ಕೋಟೆಗೆ ಪ್ರವೇಶ ಪಡೆಯಲು ಟಿಕೆಟ್ ಖರೀದಿಸಬೇಕಿದ್ದು, ಆನ್‌ಲೈನ್ ಮಾದರಿಯಲ್ಲಷ್ಟೇ ಹಣ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಶುಲ್ಕ ಸಂಗ್ರಹದಲ್ಲಿ ಆಗುವ ದುರುಪಯೋಗ ತಡೆಯಲು, ಪಾರದರ್ಶಕತೆ ತರಲು ಈ ಕ್ರಮ ಎಂದು ಸ್ಥಳೀಯವಾಗಿ ಸಂಬಂಧಪಟ್ಟವರು ಉತ್ತರಿಸುತ್ತಿದ್ದಾರೆ. ಆದರೆ ಕೋಟೆ ವೀಕ್ಷಿಸಲು ಬರುವ ವೃದ್ಧರು, ಗ್ರಾಮೀಣ ಭಾಗದ ಜನರು, ಶಾಲಾ ಮಕ್ಕಳ ಬಳಿ ಸ್ಮಾರ್ಟ್‌ಫೋನ್ ಇರುವುದಿಲ್ಲ. ಕೆಲವರ ಬಳಿ ಇದ್ದರೂ ಹಣ ಪಾವತಿಯ ಡಿಜಿಟಲ್ ಸಾಕ್ಷರತೆಯ ಕೊರತೆ ಇರುತ್ತದೆ. ಆನ್‌ಲೈನ್ ಮೂಲಕ ಹಣ ಪಾವತಿಸಲು ಸಾಧ್ಯವಾಗದೆ ಕೆಲವರು ನಿರಾಸೆಯಿಂದ ವಾಪಸ್ ತೆರಳುವ ಸಂದರ್ಭ ಸೃಷ್ಟಿಯಾಗುತ್ತಿದೆ. ಇನ್ನು ಕೆಲವರು ಮೊಬೈಲ್ ಫೋನ್ ಹೊಂದಿದ ಇತರ ಪ್ರವಾಸಿಗರಿಗೆ ಹಣ ನೀಡಿ ಟಿಕೆಟ್ ಖರೀದಿಸಿಕೊಡುವಂತೆ ಬೇಡುವ ಪ್ರಹಸನಗಳೂ ನಡೆಯುತ್ತಿವೆ.

ಭಾರತೀಯ ಪುರಾತತ್ವ ಇಲಾಖೆಯ ಸಂರಕ್ಷಣೆಯಲ್ಲಿರುವ ಕೋಟೆಯನ್ನು ವೀಕ್ಷಿಸಲು ಪ್ರವೇಶ ಶುಲ್ಕವನ್ನು ಇ- ಪಾವತಿಯ ಜೊತೆಗೆ ಮೊದಲಿನಂತೆ ಕೌಂಟರ್‌ನಲ್ಲಿ ನಗದು ನೀಡಿ ಸಹ ಪಾವತಿಸುವಂತಹ ವ್ಯವಸ್ಥೆಯನ್ನು ಮರುಜಾರಿಗೊಳಿಸಬೇಕು. ಸ್ಥಳೀಯ ಸಂಸ್ಥೆಯ ಜನಪ್ರತಿನಿಧಿಗಳು ಪುರಾತತ್ವ ಇಲಾಖೆಗೆ ವಿಷಯವನ್ನು ಮನವರಿಕೆ ಮಾಡಿಕೊಡುವ ಮೂಲಕ, ಐತಿಹಾಸಿಕ ಮಹತ್ವದ ಸ್ಥಳಗಳ ಬಗ್ಗೆ ಆಸಕ್ತಿಯುಳ್ಳ ಪ್ರವಾಸಿಗರ ಹಿತ ಕಾಯಬೇಕು.

**ರೇಣುಕಾರಾಜ್ ಎಂ.,** ಹರನಹಳ್ಳಿ

### ಕೆಎಸ್‌ಒಯು: ವಿಶ್ವಾಸಾರ್ಹ ಸಂಸ್ಥೆಯಾಗುವುದೆಂದು?

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಕೆಎಸ್‌ಒಯು) ಈಗ ಮತ್ತೆ ಚರ್ಚೆಯ ವಸ್ತುವಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಮೈಸೂರಿನಲ್ಲಿ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಹಲವು ದಿನಗಳ ಹಿಂದೆ ಪರೀಕ್ಷಾ ಕೇಂದ್ರದಲ್ಲಿಯೇ ನಕಲು ಮಾಡಲು ಅನುವು ಮಾಡಿಕೊಟ್ಟಿದ್ದರು ಎನ್ನಲಾದ ಸುದ್ದಿಯನ್ನೂ ನಾವು ಓದಿದ್ದೇವೆ. ಇತ್ತೀಚೆಗೆ ನಡೆದಿರುವ ಈ ಎರಡು ಬೆಳವಣಿಗೆಗಳಿಂದ, ದೂರಶಿಕ್ಷಣದ ಮೂಲಕ ಶಿಕ್ಷಣ ಪಡೆಯಬೇಕೆಂಬ ವಿದ್ಯಾರ್ಥಿಗಳು ಕೆಎಸ್‌ಒಯು ವ್ಯವಸ್ಥೆಯನ್ನು ಅನುಮಾನದಿಂದ ನೋಡುವ ಸ್ಥಿತಿ ಬಂದಿದೆ.

ಕೆಎಸ್‌ಒಯು ಒಂದು ಕಾಲದಲ್ಲಿ ಬಹಳಷ್ಟು ವಿವಾದಗಳಿಂದಾಗಿ ಯುಜಿಸಿಯಿಂದ ಅಧಿಕೃತ ಮಾನ್ಯತೆಯನ್ನೇ ಕಳೆದುಕೊಂಡಿತ್ತು. ಬಳಿಕ ಹಲವು ಪ್ರಯತ್ನಗಳ ನಂತರ ಅಧಿಕೃತ ಮಾನ್ಯತೆಯನ್ನು ಮರಳಿ ಪಡೆದುಕೊಂಡಿತು. ಇನ್ನಾದರೂ ಕೆಎಸ್‌ಒಯು ಒಳ್ಳೆಯ ಬೆಳವಣಿಗೆಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಲಿ. ಉನ್ನತ ಶಿಕ್ಷಣ ಪಡೆಯಬೇಕೆಂಬ ಆಕಾಂಕ್ಷೆ ಹೊಂದಿರುವ ವಿದ್ಯಾರ್ಥಿಗಳ ವಿಶ್ವಾಸಾರ್ಹ ಸಂಸ್ಥೆಯಾಗಿ ರೂಪುಗೊಳ್ಳಲಿ.

**ಪ್ರಸಾದ್ ಜಿ.ಎಂ.,** ಮೈಸೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

## ಜಾತ್ಯತೀತ, ಸಮಾಜವಾದ, ಸಮಗ್ರತೆ– ಪದಗಳನ್ನು ಸಂವಿಧಾನದ ಪ್ರಸ್ತಾವನೆಯಿಂದ ಕೈಬಿಡುವುದು ಸರಿಯೇ?

# ಸಂವಿಧಾನಕ್ಕೆ ತುರುಕಿದ ಪದಗಳು

• ಪಿ.ಪಿ.ಹೆಗ್ಡೆ

> 1949ರ ನವೆಂಬರ್ 26ರಂದು ಸಂವಿಧಾನ ರಚನಾ ಸಭೆಯಲ್ಲಿ ನೀಡಲಾದ ಸಂವಿಧಾನದ ಪ್ರತಿಗಳಲ್ಲಿ, ಸಂವಿಧಾನ ಪ್ರಸ್ತಾವನೆಯಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಎಂಬ ಪದಗಳೇ ಇರಲಿಲ್ಲ. 'ದೇಶವು ಸಾರ್ವಭೌಮತ್ವವುಳ್ಳ, ಸಮಾಜವಾದಿ, ಜಾತ್ಯತೀತ ಪ್ರಜಾಪ್ರಭುತ್ವ ಗಣರಾಜ್ಯ' ಎಂದು ಘೋಷಿಸಿ ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ತರಲಾಯಿತು. ಈ ಮೂಲಕ, 'ಜಾತ್ಯತೀತ' ಮತ್ತು 'ಸಮಾಜವಾದ' ಎಂದು ಎರಡು ಪದಗಳನನ್ನು ಏಕಪಕ್ಷೀಯವಾಗಿ ಸ್ಥಾಪಿಸಲಾಯಿತು. ಈ ಎರಡೂ ಪದಗಳ ಅರ್ಥ ಏನು ಎಂಬುದಕ್ಕೆ ಸಂವಿಧಾನದಲ್ಲಿ ಎಲ್ಲಿಯೂ ನಿಖರ ವ್ಯಾಖ್ಯಾನ ಇಲ್ಲ.

**ಸುಪ್ರೀಂ ಕೋರ್ಟ್** ಕಟ್ಟಡದ ಮೇಲೆ ಕಂಗೊಳಿಸುತ್ತಿರುವ, 'ಯತೋ ಧರ್ಮಸ್ತತೊ ಜಯಃ' (ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ) ಎಂಬುದನ್ನು ಗಮನಿಸಿದಾಗ ನಮ್ಮ ಸರ್ಕಾರ ಜಾತಿಯ ಪರವಾಗಿರಬೇಕಿಲ್ಲ. ಧರ್ಮದ ಪರ ಇರಬೇಕು ಎಂಬುದು ಅರಿವಾಗುತ್ತದೆ. ಧರ್ಮವೇ ಈ ರಾಷ್ಟ್ರದ ನೆಲೆಗಟ್ಟು. ಹೀಗಿರುವಾಗ ಜಾತ್ಯತೀತ ಪದಕ್ಕೆ ನಿರ್ದಿಷ್ಟ ಅರ್ಥ ನೀಡದೆಯೇ ಆ ಪದವನ್ನು ಬಳಸಿದರೆ ಗೊಂದಲವಾಗುತ್ತದೆ.

'ಜಾತ್ಯತೀತ' ಮತ್ತು 'ಸಮಾಜವಾದ' ಎಂಬ ಪದಗಳು ಮೂಲ ಸಂವಿಧಾನದ ಪ್ರಸ್ತಾವನೆಯಲ್ಲಿ ಇರಲೇ ಇಲ್ಲ. ತುರ್ತು ಪರಿಸ್ಥಿತಿ ಹೇರಿದ ನಂತರದ ನಿರಂಕುಶ ಆಡಳಿತವು ಇವುಗಳನ್ನು ಸಂವಿಧಾನದಲ್ಲಿ ತುರುಕಿತು. ಯಾಕಾಗಿ ಹೀಗೆ ಆಯಿತು ಎಂಬುದನ್ನು ಕೆದಕಿದರೆ ಕರಾಳ ರಾಜಕೀಯ ಚರಿತ್ರೆಯೇ ಕಣ್ಣ ಮುಂದೆ ಸುಳಿದು ಹೋಗುತ್ತದೆ.

1971ರಲ್ಲಿ 5ನೇ ಲೋಕಸಭಾ ಚುನಾವಣೆ ಜರುಗಿತು. ಇಂದಿರಾ ಗಾಂಧಿ ಅವರು ರಾಯಬರೇಲಿ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಪ್ರಧಾನಿಯಾಗಿಯೂ ಆಯ್ಕೆ ಆಗಿದ್ದರು. ಅದೇ ಕ್ಷೇತ್ರದಲ್ಲಿ ಇಂದಿರಾ ಗಾಂಧಿ ವಿರುದ್ಧ ಸ್ಪರ್ಧಿಸಿದ್ದ ಸಂಯುಕ್ತ ಸಮಾಜವಾದಿ ಪಕ್ಷದ (ಎಸ್‌ಎಸ್‌ಪಿ) ಅಭ್ಯರ್ಥಿ, ವಕೀಲ ರಾಜ್‌ನಾರಾಯಣ್ ಅವರು ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, 'ಸರ್ಕಾರಿ ಸೌಲಭ್ಯ ದುರುಪಯೋಗಪಡಿಸಿಕೊಂಡು ಚುನಾವಣಾ ಅಕ್ರಮಗಳನ್ನು ಎಸಗಿ ಇಂದಿರಾ ಗಾಂಧಿ ಅವರು ಸಂಸದೆಯಾಗಿ ಆಯ್ಕೆಯಾಗಿದ್ದಾರೆ. ಆದ್ದರಿಂದ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿದ್ದರು.

ಪ್ರಕರಣದ ಕುರಿತು ಸುದೀರ್ಘ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಜಗಮೋಹನಲಾಲ್ ಸಿನ್ಹಾ ಅವರಿದ್ದ ಏಕಸದಸ್ಯ ಪೀಠವು, 'ಇಂದಿರಾ ಗಾಂಧಿ ಅವರು ಚುನಾವಣಾ ಅಕ್ರಮಗಳನ್ನು ಎಸಗಿರುವುದು ಸಾಬೀತಾಗಿದೆ. ಆದ್ದರಿಂದ, ಅವರ ಆಯ್ಕೆಯನ್ನು ರದ್ದುಗೊಳಿಸಲಾಗಿದೆ. ಮುಂದಿನ ಆರು ವರ್ಷ ಅವರು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರು' ಎಂಬ ತೀರ್ಪು ನೀಡಿತ್ತು.

ನ್ಯಾಯಾಲಯದ ತೀರ್ಪು ಘೋಷಣೆಯಾದಾಗ ರಾಜಕೀಯ ವಲಯದಲ್ಲಿ ಅಲ್ಲೋಲ ಕಲ್ಲೋಲವೇ ಸೃಷ್ಟಿಯಾಗಿತ್ತು. ಇಂದಿರಾ ಅವರು ತಮ್ಮ ಪ್ರಧಾನಿ ಹುದ್ದೆಗೆ ತಕ್ಷಣವೇ ರಾಜೀನಾಮೆ ನೀಡುವ ಅನಿವಾರ್ಯ ಎದುರಾಗಿತ್ತು. ಈ ಅನರ್ಹತೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮತ್ತು ಅಧಿಕಾರದಲ್ಲಿ ಮುಂದುವರಿಯುವುದಕ್ಕಾಗಿ ಅವರು ಕಂಡುಕೊಂಡ ಉಪಾಯವೇ 'ತುರ್ತು ಪರಿಸ್ಥಿತಿ'.

1975ರ ಜೂನ್ 12ರಂದು ಹೇರಲಾದ ತುರ್ತು ಪರಿಸ್ಥಿತಿ ಸ್ವಾತಂತ್ರ್ಯಾನಂತರದ ಚರಿತ್ರೆಯಲ್ಲಿ ಒಂದು ಕರಾಳ ದಿನವಾಯಿತು. ಎಲ್ಲಾ ವಿರೋಧ ಪಕ್ಷದ ನಾಯಕರನ್ನು ರಾತ್ರೋರಾತ್ರಿ ಜೈಲಿಗೆ ಅಟ್ಟಲಾಯಿತು. ಜಯಪ್ರಕಾಶ್ ನಾರಾಯಣ್, ಲಾಲ್ ಬಹದ್ದೂರ್ ಶಾಸ್ತ್ರಿ, ಅಟಲ್ ಬಿಹಾರಿ ವಾಜಪೇಯಿ, ಲಾಲಕೃಷ್ಣ ಆಡ್ವಾಣಿ, ಜಾರ್ಜ್ ಫರ್ನಾಂಡಿಸ್.... ಹೀಗೆ ಸಾಲು ಸಾಲು ನಾಯಕರು ಜೈಲು ಕಂಬಿಗಳ ಹಿಂದೆ ಬಂದಿಯಾಗಬೇಕಾದ ವಿಷಮ ಪರಿಸ್ಥಿತಿ ಎದುರಾಯಿತು. ನಂತರದಲ್ಲಿ ಸಂವಿಧಾನಕ್ಕೆ ಒಂದಾದ ನಂತರ ಒಂದರಂತೆ ತಿದ್ದುಪಡಿಗಳನ್ನು ತರಲಾಯಿತು.

ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಹಾಗೂ ಸ್ಪೀಕರ್ ಹುದ್ದೆಗೆ ಆಗಿರುವ ಆಯ್ಕೆಯನ್ನು ಯಾವುದೇ ನ್ಯಾಯಾಲಯವು ಪ್ರಶ್ನಿಸುವಂತಿಲ್ಲ ಎಂದು ಸಂವಿಧಾನಕ್ಕೆ 39ನೇ ತಿದ್ದುಪಡಿ ತರಲಾಯಿತು. ತಿದ್ದುಪಡಿಯ ಕಾರಣದಿಂದಾಗಿ ಅಲಹಾಬಾದ್ ನ್ಯಾಯಾಲಯ ನೀಡಿದ್ದ ತೀರ್ಪು ಅಸಿಂಧುವಾಯಿತು! ತುರ್ತು ಪರಿಸ್ಥಿತಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಎಂಬ ತಿದ್ದುಪಡಿಯೂ ಇದರೊಟ್ಟಿಗೆ ಹೊರಬಿತ್ತು!!

1949ರ ನವೆಂಬರ್ 26ರಂದು ಸಂವಿಧಾನ ರಚನಾ ಸಭೆಯಲ್ಲಿ ನೀಡಲಾದ ಸಂವಿಧಾನದ ಪ್ರತಿಗಳಲ್ಲಿ, ಸಂವಿಧಾನ ಪ್ರಸ್ತಾವನೆಯಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಎಂಬ ಪದಗಳೇ ಇರಲಿಲ್ಲ. 'ದೇಶವು ಸಾರ್ವಭೌಮತ್ವವುಳ್ಳ, ಸಮಾಜವಾದಿ, ಜಾತ್ಯತೀತ ಪ್ರಜಾಪ್ರಭುತ್ವ ಗಣರಾಜ್ಯ' ಎಂದು ಘೋಷಿಸಿ ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ತರಲಾಯಿತು. ಈ ಮೂಲಕ, ಈ ಎರಡು ಪದಗಳನನ್ನು ಏಕಪಕ್ಷೀಯವಾಗಿ ಸ್ಥಾಪಿಸಲಾಯಿತು. ಈ ಎರಡೂ ಪದಗಳ ಅರ್ಥ ಏನು ಎಂಬುದಕ್ಕೆ ಸಂವಿಧಾನದಲ್ಲಿ ಎಲ್ಲಿಯೂ ನಿಖರ ವ್ಯಾಖ್ಯಾನ ಇಲ್ಲ.

42ನೇ ತಿದ್ದುಪಡಿ ಮಸೂದೆಯನ್ನು 1976ರ ಸೆಪ್ಟೆಂಬರ್ 1ರಂದು ಲೋಕಸಭೆಯಲ್ಲಿ ಮಂಡಿಸಿದಾಗ ಮೂರು ದಿನಗಳ ಸುದೀರ್ಘ ಚರ್ಚೆ ನಡೆದಿತ್ತು. ಚರ್ಚೆಯಲ್ಲಿ ಒಟ್ಟು 94 ಸಂಸದರು ಭಾಗವಹಿಸಿದ್ದರು. ವಿಪರ್ಯಾಸವೆಂದರೆ ಚರ್ಚೆ ನಡೆಯುವ ವೇಳೆಯಲ್ಲಿ ಎಲ್ಲಾ ವಿರೋಧ ಪಕ್ಷಗಳ ನಾಯಕರು ಮತ್ತು ಸಂಸದರು ಜೈಲಿನಲ್ಲಿದ್ದರು. ಆದರೆ, ಅವರೆಲ್ಲರೂ ಜೈಲಿನಲ್ಲಿಯೇ ತಿದ್ದುಪಡಿಯನ್ನು ಒಕ್ಕೊರಲಿನಿಂದ ವಿರೋಧಿಸಿದ್ದರು. ಇದು, 'ಇಂಡಿಯಾ ಸಂವಿಧಾನ'ವನ್ನು 'ಇಂದಿರಾ ಸಂವಿಧಾನ'ವಾಗಿ ಮಾರ್ಪಡಿಸುವ ಪ್ರಯತ್ನ ಎಂದೂ ಅಬ್ಬರಿಸಿದ್ದರು. ಸಂವಿಧಾನ ತಜ್ಞ ಎಚ್.ಎಂ. ಸೀರ್ವಾಯಿ ಅವರಂತೂ ಈ ಎರಡೂ ಪದಗಳು ವ್ಯಾಖ್ಯಾನ ಇಲ್ಲದ ಅತ್ಯಂತ ಅಸ್ಪಷ್ಟ ಪದಗಳು ಎಂಬ ಅಸಹನೆಯನ್ನೇ ಹೊರಹಾಕಿದ್ದರು.

ಸಂವಿಧಾನ ಸಭೆಯ ವಿಸ್ತೃತ ಚರ್ಚೆಯಲ್ಲಿ 'ಜಾತ್ಯತೀತ' ಪದವನ್ನು ಸಂವಿಧಾನದಲ್ಲಿ ಅಳವಡಿಸಬೇಕೇ ಬೇಡವೇ ಎನ್ನುವ ಬಗ್ಗೆ ಹಲವು ಮೇಧಾವಿಗಳು ಸುದೀರ್ಘ ಚರ್ಚೆ ನಡೆಸಿದ್ದರು. ಈ ಪದಗಳನ್ನು ಸಂವಿಧಾನದಲ್ಲಿ ಪರಿಚಯಿಸಲು ಕನಿಷ್ಠ ಮೂರು ವಿಭಿನ್ನ ಸಂದರ್ಭಗಳಲ್ಲಿ ಪ್ರಯತ್ನಿಸಲಾಗಿತ್ತು. ಆದರೆ, ಆ ಎಲ್ಲ ಸಂದರ್ಭಗಳಲ್ಲೂ ಅವು ತಿರಸ್ಕೃತಗೊಂಡಿದ್ದವು.

'ಜಾತ್ಯತೀತ' ಎಂಬ ಪದವನ್ನು ಮೊದಲು ಸಂವಿಧಾನ ಸಭೆಯ ಮುಂದೆ ತಂದಾಗ, ಈ ಪದವು ಅಸ್ಪಷ್ಟವಾಗಿದೆ ಎಂಬ ಕಾರಣಕ್ಕೆ ವಿರೋಧ ವ್ಯಕ್ತವಾಗಿತ್ತು. ಈ ಪದದ ಅರ್ಥವನ್ನು ವಿವರಿಸಲು ಸಮರ್ಥನಕಾರರ ಬಳಿ ಯಾವುದೇ ವ್ಯಾಖ್ಯಾನವಿರಲಿಲ್ಲ.

1948ರ ಡಿಸೆಂಬರ್ 6ರಂದು ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಲೋಕನಾಥ್ ಮಿಶ್ರಾ ಅವರು, 'ಈ ನೆಲದ ಪ್ರಾಚೀನ ಸಂಸ್ಕೃತಿಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನಮ್ಮ ಜಾತ್ಯತೀತ ದೇಶವು ಜಾರಿ ಬೀಳುವ ಹಾದಿಯಲ್ಲಿ ಸಾಗುತ್ತಿರುವಂತೆ ಭಾಸವಾಗುತ್ತಿದೆ' ಎಂಬ ಆತಂಕ ಹೊರಹಾಕಿದ್ದರು.

'ಭಾರತವು ಜಾತ್ಯತೀತ, ಫೆಡರಲ್ ರಾಜ್ಯಗಳ ಸಮಾಜವಾದಿ ಒಕ್ಕೂಟ' ಎಂಬುದನ್ನು ಸಂವಿಧಾನದ 1ನೇ ವಿಧಿಯ 1ನೇ ಉಪವಿಧಿಯಲ್ಲಿ ಸೇರಿಸಬೇಕು ಎಂದು ಸಂವಿಧಾನ ರಚನೆಗೆ ಶ್ರಮಿಸಿದ್ದ ವಕೀಲ, ಆರ್ಥಿಕ ತಜ್ಞ, ಸಮಾಜವಾದಿ ಕೆ.ಟಿ.ಷಾ ಅವರು 1948ರ ನವೆಂಬರ್ 15ರಂದು ನಡೆದ ಸಭೆಯಲ್ಲಿ ಪ್ರಸ್ತಾಪಿಸಿದ್ದರು.

ಆದರೆ, ಬಿ.ಆರ್. ಅಂಬೇಡ್ಕರ್ ಈ ತಿದ್ದುಪಡಿಯನ್ನು ಖಡಾಖಂಡಿತವಾಗಿ ವಿರೋಧಿಸಿದ್ದರು. ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಜನರು ಯಾವ ರೀತಿ ವರ್ತಿಸಬೇಕು, ಯಾವ ತೀರ್ಮಾನ ತೆಗೆದುಕೊಳ್ಳಬೇಕು ಎಂಬುದನ್ನು ಜನರೇ ನಿರ್ಧರಿಸಬೇಕೇ ಹೊರತು, ಸಂವಿಧಾನ ಇವುಗಳನ್ನು ನಿರ್ದೇಶಿಸು ವಂತಿರಬಾರದು. ಹೀಗೆ ಮಾಡಿದರೆ, ಪ್ರಜಾಪ್ರಭುತ್ವವನ್ನು ಹತ್ಯೆ ಮಾಡಿದಂತಾಗುತ್ತದೆ ಎಂದು ಅಂಬೇಡ್ಕರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ಸಂದರ್ಭಗಳಲ್ಲಿ ಅವರು ತೋರಿದ ವಿವೇಕ ಮತ್ತು ಬುದ್ಧಿವಂತಿಕೆಯನ್ನು ನಾವೆಲ್ಲಾ ಶ್ಲಾಘಿಸಲೇಬೇಕು.

ಜವಾಹರಲಾಲ್ ನೆಹರೂ ಅವರಂತೂ, 'ಜಾತ್ಯತೀತ ಎಂಬುದು ರಾಜ್ಯಗಳ ಪಾಲಿನ ವ್ಯವಹಾರ. ಈ ಪದವನ್ನು ಆಗಾಗ್ಗೆ ಬಳಸುವ ಮಹನೀಯರು, ಅದನ್ನು ಬಳಸುವ ಮೊದಲು ಯಾವುದಾದರೂ ನಿಘಂಟನ್ನು ನೋಡಬೇಕೆಂದು ನಾನು ವಿನಮ್ರವಾಗಿ ಬೇಡುತ್ತೇನೆ' ಎಂದು ನಯವಾಗಿಯೇ ತಮ್ಮ ಅಸಮ್ಮತಿ ಸೂಚಿಸಿದ್ದರು. ಇಂಹತ ಸೂಕ್ಷ್ಮಗಳನ್ನೆಲ್ಲಾ ಸಿಂಹಾವಲೋಕನ ಮಾಡಿದಾಗ ಚಲನಶೀಲ ವ್ಯವಸ್ಥೆಯ ಬಗ್ಗೆ ನಮಗೆ ನಂಬಿಕೆ ಹೆಚ್ಚಾಗಬೇಕು. ಇಲ್ಲದೇ ಹೋದರೆ ಯಾವುದೇ ತರ್ಕ ಮತ್ತು ಸಿದ್ಧಾಂತಗಳು ಬಹಳ ಕಾಲ ಬಾಳಿಕೆ ಬರುವುದಿಲ್ಲ. ಇದಕ್ಕೆ ಇಂದು ನಡೆಯುತ್ತಿರುವ ಬೆಳವಣಿಗೆಗಳೇ ಸಾಕ್ಷಿ.

ಲೇಖಕ: ಹಿರಿಯ ವಕೀಲ, ಹೈಕೋರ್ಟ್

# ದುರ್ಬಲಗೊಳಿಸುವ ಹುನ್ನಾರ

• ಹಸ್ಮತ್ ಪಾಷ

> ಸಂವಿಧಾನ ಪ್ರಸ್ತಾವನೆ ಎಂಬುದೇ ಒಂದು ಪುಟ್ಟ ಸಂವಿಧಾನವಿದ್ದಂತೆ. ಇದು ಸಂವಿಧಾನದ ಪರಿಚಯಾತ್ಮಕ ಹೇಳಿಕೆಯೂ ಹೌದು. ಪ್ರಸ್ತಾವನೆಯು ಸಂವಿಧಾನದ ಉದ್ದೇಶ, ಮೂಲ ತತ್ವಗಳು ಮತ್ತು ಗುರಿಗಳನ್ನು ತಿಳಿಸುವ ಕೀಲಿಕೈ ಕೂಡ ಆಗಿದೆ. ಜೊತೆಗೆ ಎಲ್ಲರಿಗೂ ರಕ್ಷಣೆ ಕೊಡಲು ಸಂವಿಧಾನವೇ ಆಧಾರ. ಆದರೆ, ರಾಜಕೀಯ ಲಾಭಕ್ಕಾಗಿ ಸಮಾಜವನ್ನು, ಜನರನ್ನು ಒಡೆದು ಆಳುವ, ವಿಘಟಿಸುವ ಕೃತ್ಯಗಳು ನುಸುಳದಂತೆ ನೋಡಿಕೊಳ್ಳುವ ಜವಾಬ್ದಾರಿ ಕಾರ್ಯಾಂಗದ ಮೇಲಿದೆ

**1946 ಡಿಸೆಂಬರ್** 13ರಂದು ನಡೆದ ಸಂವಿಧಾನ ರಚನಾ ಸಭೆಯಲ್ಲಿ ಜವಾಹರಲಾಲ್ ನೆಹರೂ ಅವರು ಸಂವಿಧಾನದ ಆಶಯಗಳನ್ನು ಮಂಡಿಸಿದ್ದರು. ಅಂದು ಆ ಸಭೆಯಲ್ಲಿ ಹೊರಹೊಮ್ಮಿದ ವಸ್ತುನಿಷ್ಠ ವಿಚಾರಗಳ ಮಂಡನೆಗಳ ಪ್ರತೀಕವಾಗಿಯೇ ನಮ್ಮ ಸಂವಿಧಾನದ ಪ್ರಸ್ತಾವನೆ ಸಿದ್ಧವಾಯಿತು. ಆದರೆ, ಆ ಪ್ರಸ್ತಾವನೆಯಲ್ಲಿ 'ಜಾತ್ಯತೀತ' ಹಾಗೂ 'ಸಮಾಜವಾದ' ಎಂಬ ಪದಗಳನ್ನು ಸೇರಿಸಿರಲಿಲ್ಲ. ಮುಂದೆ ಎಂದಾದರೂ ಈ ಪದಗಳನ್ನು ಸೇರಿಸಬಹುದು ಎಂದು ಸಂವಿಧಾನ ರಚನಾ ಸಭೆಯಲ್ಲಿ ಅಭಿಪ್ರಾಯಕ್ಕೆ ಬರಲಾಗಿತ್ತು. ಅದರಂತೆ, 1974–75ರ ಸಾಮಾಜಿಕ ಸ್ಥಿತಿಗಳಿಗೆ ಅನುಗುಣವಾಗಿ 'ಜಾತ್ಯತೀತ' ಹಾಗೂ 'ಸಮಾಜವಾದ' ಪದಗಳನ್ನು ಸೇರಿಸುವ ಅನಿವಾರ್ಯ ಬಂದೊದಗಿತ್ತು.

ಸಂವಿಧಾನಕ್ಕೆ ತಿದ್ದುಪಡಿಗಳನ್ನು ತಂದುಕೊಳ್ಳುವ ಅವಕಾಶ ನೀಡುವ ಸಲುವಾಗಿಯೇ 368ನೇ ವಿಧಿಯನ್ನು ರೂಪಿಸಲಾಗಿದೆ. ಈ ಹಿನ್ನೆಲೆ ಅಲ್ಲಿಯೇ 1976ರಲ್ಲಿ 'ಜಾತ್ಯತೀತ' ಮತ್ತು 'ಸಮಾಜವಾದ' ಪದಗಳನ್ನು ಸಂವಿಧಾನ ಪ್ರಸ್ತಾವನೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಪ್ರಸ್ತಾವನೆ ಎಂಬುದೇ ಒಂದು ಪುಟ್ಟ ಸಂವಿಧಾನವಿದ್ದಂತೆ. ಇದು ಸಂವಿಧಾನದ ಪರಿಚಯಾತ್ಮಕ ಹೇಳಿಕೆಯೂ ಹೌದು. ಪ್ರಸ್ತಾವನೆಯು ಸಂವಿಧಾನದ ಉದ್ದೇಶ, ಮೂಲ ತತ್ವಗಳು ಮತ್ತು ಗುರಿಗಳನ್ನು ತಿಳಿಸುವ ಕೀಲಿಕೈ ಕೂಡ ಆಗಿದೆ.

ಮೊದಲೇ ಹೇಳಿದ ಹಾಗೆ, 'ಜಾತ್ಯತೀತ' ಮತ್ತು 'ಸಮಾಜವಾದ' ಪದಗಳನ್ನು ಪ್ರಸ್ತಾವನೆಯಲ್ಲಿ ಸೇರಿಸುವುದು ಈಗಲೇ ಬೇಡ ಎಂಬ ಅಭಿಪ್ರಾಯವು ಸಂವಿಧಾನ ಕರಡನ್ನು ಅಂಗೀಕರಿಸಿದ 1949ರ ನವೆಂಬರ್ 26ರಂದೇ ವ್ಯಕ್ತವಾಗಿತ್ತು. ಮುಂದೆ ಅಗತ್ಯ ಒದಗಿಬಂದರೆ, ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಈ ಪದಗಳನ್ನು ಸೇರಿಸಿದರೆ ಆಯಿತು ಎಂಬ ಸಲಹೆಯೂ ಅಂದು ವ್ಯಕ್ತವಾಗಿತ್ತು. ಈ ಪದಗಳನ್ನು ಸೇರಿಸಲೇ ಬೇಕಾದ ಸಾಮಾಜಿಕ ವ್ಯವಸ್ಥೆಯೂ ಅಂದು ಇರಲಿಲ್ಲ.

ಆದರೆ, 1970ರ ದಶಕದಲ್ಲಿ ದೇಶದಾದ್ಯಂತ ಜನಜೀವನ ಹಾಗೂ ಸಾಮಾಜಿಕ ಪರಿಸ್ಥಿತಿ ಬಿಗಡಾಯಿಸಿತ್ತು. ಒಂದೆಡೆ ಪ್ರಕೃತಿಯ ವೈಪರೀತ್ಯಗಳು ಘೀಳಿಡುತ್ತಿದ್ದರೆ ಮತ್ತೊಂದೆಡೆ ಸಮಾಜದಲ್ಲಿನ ಜಾತಿ ಪದ್ಧತಿಗೆ ಕಡಿವಾಣವೇ ಇಲ್ಲವಾಗಿತ್ತು. ಜಾತಿಯ ಹೆಸರಿನಲ್ಲಿ ಶೋಷಣೆ, ಅಪಮಾನ, ಪಾಳೇಗಾರಿಕೆ ವಿಜೃಂಭಿಸುತ್ತಿತ್ತು. ದೇಶದಲ್ಲಿ ದುರ್ಬಲರ ಮೇಲಿನ ತಾರತಮ್ಯ, ನಿಮ್ನ ಜಾತಿಯ ಜನರಿಗೆ ನೀಡಲಾಗುತ್ತಿದ್ದ ಉಪಟಳ ಹೆಚ್ಚಾಗ ತೊಡಗಿತ್ತು. ಕೋಮು ಗಲಭೆಗಳಂತೂ ಉಚ್ಛ್ರಾಯ ಸ್ಥಿತಿ ತಲುಪಿತ್ತು.

ಈ ಹಿನ್ನೆಲೆಯಲ್ಲಿ ಸಮಾಜವು ಸಾಗುತ್ತಿರುವ ದಿಕ್ಕನ್ನು ಇಂದಿರಾ ಗಾಂಧಿ ಅವರು ಅರಿತರು. 'ಜಾತ್ಯತೀತ' ಮತ್ತು 'ಸಮಾಜವಾದ' ಪದಗಳನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲೇ ಬೇಕಾದ ಪರಿಸ್ಥಿತಿ ಬಂದೊದಗಿತ್ತು. ಈ ಕಾರಣದಿಂದಲೇ ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ತರುವ ಮೂಲಕ ಸಂವಿಧಾನದ ಪ್ರಸ್ತಾವನೆಯಲ್ಲಿ ಈ ಪದಗಳನ್ನು ಸೇರಿಸಲಾಯಿತು.

1970ರ ದಶಕದ ಹೊತ್ತಿಗೆ 'ಜಾತ್ಯತೀತ' ಮತ್ತು 'ಸಮಾಜವಾದ' ಪದಗಳನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸುವ ಅನಿವಾರ್ಯ ಎಷ್ಟಿತ್ತೊ, ಅದನ್ನು ಪ್ರಸ್ತಾವನೆಯಲ್ಲಿ ಇರಿಸಿಕೊಳ್ಳಬೇಕಾದ ಅಷ್ಟೇ ಅನಿವಾರ್ಯ ಇಂದೂ ಇದೆ. ಯಾಕೆಂದರೆ, ಸಮಾಜದಲ್ಲಿನ ಅಪಮಾನ, ಶೋಷಣೆ, ಅಶಕ್ತರ ಮೇಲಿನ ದೌರ್ಜನ್ಯಗಳು ಇನ್ನೂ ದೂರವಾಗಿಲ್ಲ. ಕಲ್ಯಾಣ ರಾಜ್ಯದ ಕನಸನ್ನು ನಾವಿನ್ನೂ ನನಸು ಮಾಡಿಕೊಂಡಿಲ್ಲ. 1975ರಲ್ಲಿನ ಸಾಮಾಜಿಕ ಪರಿಸ್ಥಿತಿಯೇ ಇಂದು ಬೇರೊಂದು ರೂಪದಲ್ಲಿ ತಾಂಡವವಾಡುತ್ತಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಇತ್ತೀಚಿನ ಕೆಲವು ವರ್ಷಗಳಲ್ಲಿ ನಡೆದ ಕೆಲವು ಘಟನೆಗಳನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಜೊತೆಗೆ, ಸಂವಿಧಾನದ ಪ್ರಸ್ತಾವನೆಯನ್ನು ಆಧರಿಸಿ ನ್ಯಾಯಾಲಯಗಳು ಹಲವು ಮಹತ್ವ ತೀರ್ಪುಗಳನ್ನು ನೀಡಿದೆ. ಹಿಜಾಬ್ ಸೇರಿದಂತೆ ಹಲವು ಪ್ರಕರಣಗಳು ಇದಕ್ಕೆ ಉದಾಹರಣೆಗಳಾಗಿವೆ. ಇದನ್ನೂ ಮರೆಯದಿರಬೇಕು.

**1.** ಸಂವಿಧಾನದ ಪ್ರಸ್ತಾವನೆಯಲ್ಲಿ 'ಸಮಾಜವಾದ' ಮತ್ತು 'ಜಾತ್ಯತೀತ' ಪದಗಳನ್ನು ಕೈಬಿಟ್ಟು ವಾರ್ತಾ ಮತ್ತು ಪ್ರಸಾರ ಸಚಿವಾಲಯ 2015ರಲ್ಲಿ ಜಾಹೀರಾತುವೊಂದನ್ನು ಪ್ರಕಟಿಸಿತ್ತು. ಕೇಂದ್ರ ಸರ್ಕಾರದ ಈ ನಡೆಯು ತೀವ್ರ ಟೀಕೆ, ಆಕ್ರೋಶಗಳಿಗೆ ಎಡೆಮಾಡಿಕೊಟ್ಟಿತ್ತು. ಈ ಎಲ್ಲ ವಿರೋಧಗಳಿಗೆ ಕೇಂದ್ರ ಸರ್ಕಾರವು ಸಮಜಾಯಿಶಿಯನ್ನೂ ನೀಡಿತ್ತು. 'ಸಂವಿಧಾನ ಅಂಗೀಕಾರವಾದ ಸಂದರ್ಭದಲ್ಲಿ ಬಳಸಿದ ಪ್ರಸ್ತಾವನೆಯ ಚಿತ್ರವನ್ನೇ ಜಾಹೀರಾತಿನಲ್ಲಿ ಬಳಸಿಕೊಳ್ಳಲಾಗಿದೆ' ಎಂದು ಕೇಂದ್ರ ಸಚಿವರೊಬ್ಬರು ಸರ್ಕಾರದ ನಡೆಯನ್ನು ಸಮರ್ಥಿಸಿಕೊಂಡಿದ್ದರು. 'ನೆಹರೂ ಅವರಿಗೆ ಜಾತ್ಯತೀತ ಪರಿಕಲ್ಪನೆಯ ಕುರಿತು ತಿಳಿವಳಿಕೆ ಇರಲಿಲ್ಲವೇ? ಈಗ ಅದರ ಬಗ್ಗೆ ಚರ್ಚೆಯಾದರೆ ಏನು ಹಾನಿ? ನಾವು ಮೂಲ ಸಂವಿಧಾನದ ಪ್ರಸ್ತಾವನೆಯನ್ನು ರಾಷ್ಟ್ರದ ಮುಂದೆ ಇಟ್ಟಿದ್ದೇವೆ' ಎಂಬ ತರ್ಕವನ್ನೂ ಅವರು ಮಂಡಿಸಿದ್ದರು.

**2.** ಸಂಸದರೊಬ್ಬರು 2020ರಲ್ಲಿ ಸಂವಿಧಾನದ ಪ್ರಸ್ತಾವನೆಯಿಂದ 'ಸಮಾಜವಾದ' ಪದವನ್ನು ತೆಗೆದುಹಾಕುವಂತೆ ಸಂಸತ್ತಿನಲ್ಲಿ ಖಾಸಗಿ ಮಸೂದೆ ಮಂಡಿಸಿದ್ದರು

**3.** 'ಸಂವಿಧಾನದ ಪ್ರಸ್ತಾವನೆಯಿಂದ 'ಜಾತ್ಯತೀತ' ಮತ್ತು 'ಸಮಾಜವಾದಿ' ಪದಗಳನ್ನು ತೆಗೆದುಹಾಕುವಂತೆ ನಿರ್ದೇಶಿಸಬೇಕು' ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು 2020ರಲ್ಲಿ ಸಲ್ಲಿಕೆಯಾಗಿತ್ತು. ಬಲರಾಮ್ ಸಿಂಗ್, ಕರುಣೇಶ್ ಕುಮಾರ್ ಶುಕ್ಲಾ, ಪ್ರವೇಶ್ ಕುಮಾರ್ ಎಂಬವರು ಈ ಕುರಿತಾದ ಕಾನೂನಿನ ಸಿಂಧುತ್ವವನ್ನು ಪ್ರಶ್ನಿಸಿದ್ದರು. ಅರ್ಜಿಯಲ್ಲಿ ಭಾರತೀಯ ಚುನಾವಣಾ ಆಯೋಗ ಮತ್ತು ಕೇಂದ್ರ ಸರ್ಕಾರವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು. 'ರಾಜಕೀಯ ಪಕ್ಷವನ್ನು ನೋಂದಾಯಿಸುವ ಮುನ್ನ ಸಮಾಜವಾದ ಮತ್ತು ಜಾತ್ಯತೀತ ತತ್ವಗಳನ್ನು ಕಡ್ಡಾಯವಾಗಿ ಅನುಸರಿಸುವ ಅಗತ್ಯವಿದೆ' ಎಂಬ ಷರತ್ತಿಗೆ ಈ ಅರ್ಜಿದಾರರು ತಕರಾರು ತೆಗೆದಿದ್ದರು.

ನೂತನ ಸಂಸತ್ತು ಭವನದಲ್ಲಿ ನಡೆದ ಅಧಿವೇಶನದಲ್ಲಿ ಸಂಸದರಿಗೆ ಉಡುಗೊರೆಯಾಗಿ ನೀಡಿದ ಸಂವಿಧಾನ ಪ್ರತಿಯಲ್ಲಿ, ಪ್ರಸ್ತಾವನೆಯಿಂದ 'ಜಾತ್ಯತೀತ' ಮತ್ತು 'ಸಮಾಜವಾದ' ಪದಗಳ ಕೈಬಿಟ್ಟ ಘಟನೆಯನ್ನು ಈ ಎಲ್ಲಾ ಹಿನ್ನೆಲೆಯಲ್ಲಿ ಅವಲೋಕನ ಮಾಡಬೇಕಾಗಿದೆ.

ಪ್ರತಿಯೊಬ್ಬ ಪ್ರಜೆಯೂ ಸೋದರ ತತ್ವದೊಂದಿಗೆ ಬಾಳ್ವೆ ನಡೆಸಬೇಕಾಗಿದೆ. ಜಾತ್ಯತೀತ ಪರಿಕಲ್ಪನೆಯಲ್ಲಿಯೇ ಇಂದಿನ ಸಮಾಜವು ಸುಧಾರಣೆಯಾಗಬೇಕಿದೆ. ಜೊತೆಗೆ, ದೇಶದ ಏಕತೆಗೆ ಶ್ರಮಿಸಬೇಕು ಎಂಬ ತಿಳಿವಳಿಕೆ ಜನಸಾಮಾನ್ಯರಲ್ಲಿ ಮೂಡಿಸುವುದು ಸರ್ಕಾರದ ಕರ್ತವ್ಯವೂ ಹೌದು. ಇವತ್ತು ರಾಜಕೀಯ ಮೌಲ್ಯಗಳು, ಆದ್ಯತೆಗಳು ಬದಲಾಗಿವೆ. ಆಳುವ ಸರ್ಕಾರದ ಮನಃಸ್ಥಿತಿ ಅವಕಾಶವಾದಕ್ಕೆ ಪಕ್ಕಾಗಿದೆ.

ಎಲ್ಲರಿಗೂ ರಕ್ಷಣೆ ಕೊಡಲು ಸಂವಿಧಾನವೇ ಆಧಾರ. ಆದರೆ, ರಾಜಕೀಯ ಲಾಭಕ್ಕಾಗಿ ಸಮಾಜವನ್ನು, ಜನರನ್ನು ಒಡೆದು ಆಳುವ, ವಿಘಟಿಸುವ ಕೃತ್ಯಗಳು ನುಸುಳದಂತೆ ನೋಡಿಕೊಳ್ಳುವ ಜವಾಬ್ದಾರಿ ಕಾರ್ಯಾಂಗದ ಮೇಲಿದೆ. ಪ್ರಜಾಪ್ರಭುತ್ವ ದುರ್ಬಲವಾಗದಂತೆ ಕಾಪಾಡಲು ಪ್ರತಿಯೊಬ್ಬರೂ ಶ್ರಮಿಸಬೇಕಿದೆ. ಸರ್ವಧರ್ಮ ಸಮನ್ವಯ ಇಲ್ಲದ ಶಾಸಕಾಂಗ ವ್ಯವಸ್ಥೆಯಿಂದ ದೇಶದ ಪ್ರಗತಿಚಕ್ರ ದಿಕ್ಕು ತಪ್ಪುವ ಸಾಧ್ಯತೆ ಇರುತ್ತದೆ.

ಲೇಖಕ: ಹಿರಿಯ ವಕೀಲ, ಹೈಕೋರ್ಟ್

ನಿರೂಪಣೆ: ಬಿ.ಎಸ್. ಷಣ್ಮುಖಪ್ಪ

---

## ಹೊಸ ಸಿನಿಮಾದಲ್ಲಿ ಹಳೆ ಕಥೆ

**ಒಲವೇ ಮಂದಾರ–2**

- ನಿರ್ಮಾಣ: ರಮೇಶ್ ಮರಗೋಳ
- ನಿರ್ದೇಶನ: ಎಸ್.ಆರ್.ಪಾಟೀಲ್
- ತಾರಾಗಣ: ಸನತ್, ಪ್ರಜ್ಞಾ ಭಟ್, ಅನುಪಾ ಸತೀಶ್, ಭವ್ಯ, ಡಿಂಗ್ರಿ ನಾಗರಾಜ ಮತ್ತಿತರರು

**ಊರೊಂದರಲ್ಲಿ** ಕೆಲಸವಿಲ್ಲದೆ ಅಲೆದಾಡುತ್ತಿರುವ ನಾಯಕ–ಪಿಯು ಓದುತ್ತಿರುವ ನಾಯಕಿ ನಡುವೆ ಪ್ರೀತಿ ಹುಟ್ಟುವುದು, ಮನೆಯವರಿಗೆ ಇದು ಇಷ್ಟವಿಲ್ಲದೆ ಓಡಿಹೋಗುವುದು... ಈ ಎಳೆಯ ಕಥೆ ಇರುವ ಅನೇಕ ಸಿನಿಮಾಗಳು ಈಗಾಗಲೇ ತೆರೆ ಮೇಲೆ ಬಂದಿವೆ. ಇದಕ್ಕೆ ಮತ್ತೊಂದು ಸೇರ್ಪಡೆ 'ಒಲವೇ ಮಂದಾರ–2'. ಜೊತೆಗಿರದ ಜೀವ ಎಂದೆಂದಿಗೂ ಜೀವಂತ ಎನ್ನುವುದು ಇಡೀ ಸಿನಿಮಾದ ಸಾರಾಂಶ.

ಊರಲ್ಲಿರುವ ನಾಯಕನಿಗೆ(ಆರ್ಯ) ಕೆಲಸವಿಲ್ಲ. ಆದರೆ ಅತ್ತಿಂದಿತ್ತ ಪ್ರತಿ ದೃಶ್ಯದಲ್ಲೂ ಅಲೆದಾಡಲು ಬುಲೆಟ್ ಬೈಕ್ ಇದೆ! ಇದಕ್ಕೆ ಯಾರು ಪೆಟ್ರೋಲ್ ಸುರಿಯುತ್ತಾರೆ ಎನ್ನುವುದಕ್ಕೆ ನಿರ್ಮಾಪಕರೇ ಪಾತ್ರವೊಂದಕ್ಕೆ ಬಣ್ಣಹಚ್ಚಿ ಉತ್ತರ ಹೇಳಿದ್ದಾರೆ! ಮಾತಿನ ಮಲ್ಲನಾದ ಆರ್ಯನ ಪ್ರೇಮಕಥೆಯೇ ಈ ಸಿನಿಮಾ. ಅನನುಕ್ರಮಣಿಕೆಯ ಚಿತ್ರಕಥೆಯಲ್ಲಿ ಸಿನಿಮಾ ಸಾಗುತ್ತದೆ. ಬೆಂಗಳೂರಿನ ಐ.ಟಿ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಆರ್ಯನ ಮೇಲೆ ಧೃತಿಗೆ(ಅನುಪಾ ಸತೀಶ್) ಪ್ರೀತಿ ಹುಟ್ಟಿದಾಗ, ಆರ್ಯನ ಮೊದಲ ಪ್ರೇಮಕಥೆ ತೆರೆದುಕೊಳ್ಳುತ್ತದೆ. ಈ ಭಾಗಕ್ಕೆ ಭೂಮಿ(ಪ್ರಜ್ಞಾ ಭಟ್) ನಾಯಕಿ. ಆರ್ಯನಿಗೆ ಭೂಮಿ ಸಿಗುತ್ತಾಳಾ? ಧೃತಿ ಪ್ರೀತಿ ಏನಾಗುತ್ತದೆ? ಎನ್ನುವುದಕ್ಕೆ ಸಿನಿಮಾ ನೋಡಬೇಕು.

**ನಾವು ನೋಡಿದ ಸಿನಿಮಾ**

ಸಿನಿಮಾದ ಆರಂಭಿಕ ದೃಶ್ಯಗಳು ಪೇಲವವಾಗಿವೆ. ಆರ್ಯನ ಪ್ರೀತಿಗಾಗಿ ಹಪಹಪಿಸುವ ನಾಯಕಿ, ಆಕೆಯ ಸಹೋದ್ಯೋಗಿ, ಸ್ನೇಹಿತೆಯರ ಜೊತೆಗಿನ ಸಂಭಾಷಣೆಯ ದೃಶ್ಯಗಳು ನೀರಸವಾಗಿವೆ. ನಾಯಕನ ಮೊದಲ ಪ್ರೀತಿಯನ್ನು ಹೇಳಲು ನಿರ್ದೇಶಕರು ಇಳಿದಾಗ ಕಥೆ ವೇಗ ಪಡೆದುಕೊಳ್ಳುತ್ತದೆ. ಆದರೆ ಮತ್ತದೇ ಹಳೆಯ ಸಿನಿಮಾಗಳ ಕಥಾ ಎಳೆ ತೆರೆದುಕೊಂಡಾಗ ಸಿನಿಮಾ ಗಟ್ಟಿತನ ಕಳೆದುಕೊಳ್ಳುತ್ತದೆ. ಸಿನಿಮಾದ ಅವಧಿ 110 ನಿಮಿಷದ್ದಾಗಿರುವುದರಿಂದ ನಿಟ್ಟುಸಿರು ಬಿಡಬಹುದು. ಕ್ಲೈಮ್ಯಾಕ್ಸ್‌ನಲ್ಲಿ ಕಥೆಗೊಂದು ಭಿನ್ನ ಆಯಾಮವನ್ನು ನಿರ್ದೇಶಕರು ನೀಡಿದ್ದಾರೆ.

ಹೊಸಬರ ಪ್ರಯತ್ನವಾಗಿರುವುದರಿಂದ ಬಂಡವಾಳ ಹೂಡಿದವರೇ ನಟರಾಗಿದ್ದಾರೆ! ಹೀಗಾಗಿ ಹಲವು ದೃಶ್ಯಗಳು ಕೃತಕವಾಗಿ ಕಾಣುತ್ತವೆ. ಸಿನಿಮಾದ ಹಾಡುಗಳು ಕಿವಿಗೆ ಇಂಪು. ನಟನೆಯಲ್ಲಿ ಪ್ರಜ್ಞಾ ಭಟ್ ಅವರಿಗೆ ಭವಿಷ್ಯವಿದೆ. ನಾಯಕ ಸನತ್ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

-ಅಭಿಲಾಷ್ ಪಿ.ಎಸ್.

## 'ಘೋಸ್ಟ್'ಗೆ ಬಂಪರ್

ಸಿನಿ ಬಿಟ್ಸ್

ಶಿವರಾಜ್‌ಕುಮಾರ್

**ಸ್ಯಾಂಡಲ್‌ವುಡ್‌ನ** ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರ ಈ ವರ್ಷದ ಮೊದಲ ಸಿನಿಮಾ ರಿಲೀಸ್‌ಗೆ ಮುಹೂರ್ತ ನಿಗದಿಯಾಗಿದೆ. 'ಘೋಸ್ಟ್' ಸಿನಿಮಾ 2023ರ ಅ.19ರಂದು ಬಿಡುಗಡೆಯಾಗಲಿದೆ. ಸಿನಿಮಾ ಬಿಡುಗಡೆ ಹೊಸ್ತಿಲಲ್ಲೇ ಚಿತ್ರತಂಡವು 'ಬಂಪರ್' ಸುದ್ದಿ ನೀಡಿದೆ.

ಶ್ರೀನಿ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದ ಥಿಯೇಟ್ರಿಕಲ್, ಸ್ಯಾಟಲೈಟ್ ಹಾಗೂ ಡಿಜಿಟಲ್ ಹಕ್ಕುಗಳು ಪೆನ್ ಸ್ಟುಡಿಯೊ ಸಂಸ್ಥೆಗೆ ಭಾರಿ ಮೊತ್ತಕ್ಕೆ ಮಾರಾಟವಾಗಿದೆ. ಸಿನಿಮಾ ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಸಿನಿಮಾವಾಗಿ ರಿಲೀಸ್ ಆಗಲಿದೆ. ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಂದೇಶ್ ಎನ್. ಈ ಚಿತ್ರವನ್ನು ನಿರ್ಮಿಸಿದ್ದಾರೆ. 'ಆರ್‌ಆರ್‌ಆರ್', 'ಜವಾನ್' ಸೇರಿದಂತೆ ಅನೇಕ ಹಿಟ್ ಚಿತ್ರಗಳನ್ನು ವಿತರಣೆ ಮಾಡಿರುವ ಪೆನ್ ಸ್ಟುಡಿಯೊ ಸಂಸ್ಥೆ ಈಗ 'ಘೋಸ್ಟ್' ಚಿತ್ರದ ವಿತರಣಾ ಹಕ್ಕನ್ನು ಪಡೆದುಕೊಂಡಿದೆ. ಕನ್ನಡ, ತಮಿಳು ಹಾಗೂ ಮಲಯಾಳಂ ಭಾಷೆಗಳನ್ನು ಹೊರತು ಪಡಿಸಿ ಮಿಕ್ಕೆಲ್ಲಾ ಭಾಷೆಗಳಲ್ಲಿ 'ಘೋಸ್ಟ್' ಚಿತ್ರವನ್ನು ಪೆನ್ ಸ್ಟುಡಿಯೊ ಬಿಡುಗಡೆ ಮಾಡುತ್ತಿರುವುದಾಗಿ ನಿರ್ಮಾಪಕ ಸಂದೇಶ್ ತಿಳಿಸಿದ್ದಾರೆ.

ಅಕ್ಟೋಬರ್ ಮೊದಲ ವಾರ ಚಿತ್ರದ ಪ್ರಚಾರಕ್ಕಾಗಿ ಶಿವರಾಜ್ ಕುಮಾರ್ ಅವರು ಮುಂಬೈ, ದೆಹಲಿ ಮುಂತಾದ ಕಡೆ ತೆರಳುತ್ತಿದ್ದಾರೆ ಎಂದು ನಿರ್ಮಾಪಕರು ಮಾಹಿತಿ ನೀಡಿದ್ದಾರೆ. ಚಿತ್ರದ 'ಒಜಿಎಂ' ಶುಕ್ರವಾರ ಬಿಡುಗಡೆಯಾಗಿದ್ದು, ಕನ್ನಡ, ತೆಲುಗು, ತಮಿಳು, ಮಲಯಾಳಂ ಸೇರಿಸಿ ಈ ಹಾಡನ್ನು ಸಿದ್ಧಪಡಿಸಲಾಗಿದೆ. ಅರ್ಜುನ್ ಜನ್ಯ ಸಂಗೀತ ಈ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

---

## ಪದಬಂಧ 5449

– ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1.ಅನಿರೀಕ್ಷಿತವಾಗಿ ಬಂದವ ಆತಂಕ ಹುಟ್ಟಿಸಿಹನಲ್ಲಾ? (4)
3.ಶ್ರೇಷ್ಠ ನೆಲೆ ಅಥವಾ ಸ್ವರ್ಗ ಎಂದರೂ ಸರಿ (4)
5.ಸತಿಯ ಹತ್ತಿರವೇ ಇದ್ದಾಳೆ ಉಪಪತ್ನಿ! (3)
6.ವನದ ಕೊನೆಗೆ ಮಾಡಿದ ಹೋಮ (3)
8.ಅತ್ತಿಂದಿತ್ತ ತೂಗಾಡುವ ವಸ್ತು (3)
9.ತಾಪತ್ರಯದಲ್ಲಿ ಬಂದಿರುವ ಓಲೆ! (2)
10.ಪಕ್ಷಿಯ ಕೊಕ್ಕು (2)
11.ಧಾನ್ಯ ಶೇಖರಿಸುವ ಸ್ಥಳ (3)
12.ಹೆಚ್ಚು ಪದದ ವಿರುದ್ಧ ಪದ (3)
14.ವರನಲ್ಲಿರುವ ವಾಗ್ಮಿ (3)
16.ಹೂಳಿಟ್ಟ ನಿಧಿಯು ಕರದಲ್ಲಿದೆ (4)
17.ಮಧ್ಯರಾತ್ರಿಯನ್ನು ಹೀಗೆನ್ನಿ (4)

**ಮೇಲಿಂದ ಕೆಳಕ್ಕೆ**

1.ಆ ಗ್ರಹವನ್ನು ನೋಡುತ್ತಲೇ ಮಾಡಿದ ಹಟ! (3)
2.ಕನಸಲ್ಲಿರುವ ಕೊಳೆ! (2)
3.ಪದಾತಿ ಜೊತೆಯಿರುವ ಗಂಡ (2)
4.ಕರುವಿಗೆ ತೋರಿದ ದಯೆ (3)
7. ತಾರೆಗಳ ಗುಂಪು (5)
8.ಅಯಸ್ಕಾಂತವನ್ನು ಹೀಗೂ ಕರೆವರು (5)
11.ತಿರುಗಿಸಿದರೂ ಇದು ಚಿನ್ನ (3)
13.ಮೆದು ಮಾತಿನವನ ಮಸ್ತಿಷ್ಕ (3)
14.ವಠಾರದಲ್ಲಿರುವ ಮದುವೆಯ ಗಂಡು (2)
15.ನಗರದಲ್ಲಿರುವ ಮನುಷ್ಯ ತಿರುಗಿದ್ದಾನಲ್ಲಾ? (2)

### 5448ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅನರ್ಘ್ಯ 2.ಮಾರಕ
5.ರಗಡು 6.ಅನೃತ
7.ಕಿಕ್ಲುಭಿ 8.ಮಸಣ
9.ಜ್ಞಾತಿಕಲಹ 10.ಪಾವನ
11.ನೀರಸ
13.ಸಂದಾಯ 14.ಟಿಸಿಲು
16.ಕೋಷ್ಟಕ 17.ಗಮನ

**ಮೇಲಿಂದ ಕೆಳಕ್ಕೆ:**
1.ಅವಿವೇಕಿ 2.ಮಾವುತ
3.ಕರ
4.ಕಡುಜಾಣ 6.ಅಭಿಜ್ಞಾನ
8.ಮಹನೀಯ
10.ಪಾವಟಿಗೆ 12.ಸಭಾಜನ
13.ಸಂದೂಕ 15.ಲುಕೋ

## ಸುಡೊಕು 5835

| | | | | | | | | |
|---|---|---|---|---|---|---|---|---|
| 4 | | 3 | | 2 | | 6 | | 1 |
| | 6 | | | | | | 9 | |
| | | | | 3 | | | 4 | 8 |
| | 4 | | 3 | | 1 | | 7 | |
| 1 | 3 | 7 | | | | 4 | | 5 |
| | | | 4 | | 7 | | 1 | |
| | 2 | | 5 | | | | 3 | |
| 6 | | 9 | | | | 5 | | 4 |
| | 5 | | | | 2 | | 8 | |

### 5834 ಸುಡೊಕು

| | | | | | | | | |
|---|---|---|---|---|---|---|---|---|
| 3 | 2 | 6 | 5 | 8 | 4 | 9 | 7 | 1 |
| 7 | 9 | 8 | 1 | 2 | 3 | 5 | 6 | 4 |
| 5 | 4 | 1 | 9 | 7 | 6 | 3 | 2 | 8 |
| 6 | 7 | 3 | 8 | 1 | 5 | 2 | 4 | 9 |
| 4 | 5 | 2 | 7 | 6 | 9 | 1 | 8 | 3 |
| 8 | 1 | 9 | 3 | 4 | 2 | 6 | 5 | 7 |
| 9 | 3 | 4 | 2 | 5 | 8 | 7 | 1 | 6 |
| 1 | 6 | 5 | 4 | 9 | 7 | 8 | 3 | 2 |
| 2 | 8 | 7 | 6 | 3 | 1 | 4 | 9 | 5 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶನಿವಾರ ಸೆಪ್ಟೆಂಬರ್ 23, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಭಾದ್ರಪದ ಶುಕ್ಲ ಅಷ್ಟಮಿ ಗಂ. 12-18 ನಕ್ಷತ್ರ: ಮೂಲ ಗಂ. 14-56 ಯೋಗ: ಸೌಭಾಗ್ಯ ಗಂ. 21-30 ಕರಣ: ಬವ ಗಂ. 12-18, ಕನ್ಯಾ ಮಾಸದ 06 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 3. ರಾಹುಕಾಲ : ಬೆಳಿಗ್ಗೆ 09-00 – 10-30, ಸೂರ್ಯೋದಯ : 06-23 ಸೂರ್ಯಾಸ್ತ : 06-23, ಮುಸ್ಲಿಂ ದಿನಾಂಕ : 07 ರಬಿಉಲ್ಲಾವಲ್, ದಿನ ವಿಶೇಷ : ರಾಧಾಷ್ಟಮಿ, ದೂರ್ವಾಷ್ಟಮಿ (ಬಂಗಾಳ), ಕೇದಾರ ವ್ರತ
**ಅದೃಷ್ಟ ಸಂಖ್ಯೆ :** 5, 7

**ಮೇಷ:** ವಾಕ್‌ಚಾತುರ್ಯದಿಂದ ಸಹೋದರರ ಕೋಪ ಉಪಶಮನಗೊಳಿಸುವ ಕೆಲಸದಿಂದ ಕೌಟುಂಬಿಕ ಸೌಖ್ಯ ಹೆಚ್ಚುವುದು. ಹಿಂಬಾಲಕರ ಮಾತುಗಳಿಗೆ ಮಹತ್ವ ಸಲ್ಲದು. ಮಾತಿನ ಬಲದಿಂದ ಕಾರ್ಯ ಸಾಧಿಸಿಕೊಳ್ಳುವ ಶಕ್ತಿ ನಿಮ್ಮಲಿದೆ.

**ವೃಷಭ:** ನಿಶ್ಚಿತ ವರ-ವಧುಗಳ ಮಧ್ಯದಲ್ಲಿ ಸಣ್ಣ-ಪುಟ್ಟ ವಿಚಾರಗಳಿಗೆ, ಸೋಲೊಪ್ಪದ ಮನಸ್ಥಿತಿಯಿಂದ ಭಿನ್ನಾಭಿಪ್ರಾಯ ಬರುವ ಸಂಭವವಿದೆ. ಹಣದ ವಿಚಾರದಲ್ಲಿ ಸರಿಯಾಗಿ ಲೆಕ್ಕ ಪತ್ರವನ್ನು ಕಾಪಾಡುವುದು ಅಗತ್ಯ.

**ಮಿಥುನ:** ಸ್ನೇಹಿತರೊಂದಿಗೆ ಪ್ರವಾಸ ಹೊರಡುವ ಸಾಧ್ಯತೆ. ವಾಹನ, ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿಯಿಂದ ಖರ್ಚು ಸಂಭವಿಸಲಿದೆ. ಹೆಸರಿಗೆ ಪ್ರಾಮುಖ್ಯ ನೀಡುವುದು ಒಳ್ಳೆಯದು. ಬರವಣಿಗೆಗಳಿಂದ ಆದಾಯ ಕಂಡುಕೊಳ್ಳುವಿರಿ.

**ಕರ್ಕಾಟಕ:** ಕಾಲಕ್ಕೆ ತಕ್ಕಂತೆ ಕೆಲವು ಬದಲಾವಣೆ ಮಾಡಿಕೊಳ್ಳಲು ಸಿದ್ಧರಾಗಬೇಕಾಗುತ್ತದೆ. ಹಂತ ಹಂತವಾಗಿ ಸುಧಾರಿಸಲಿರುವ ಪರಿಸ್ಥಿತಿ ಬರುವುದು. ಫ್ಯಾಕ್ಟರಿ ಕೆಲಸಗಾರರಿಗೆ ವಿಶೇಷ ಭತ್ಯೆ ಹೆಚ್ಚಳವಾಗಲಿದೆ.

**ಸಿಂಹ:** ಉಳಿತಾಯ ಯೋಜನೆಯಲ್ಲಿ ಆಸಕ್ತಿ ಇದ್ದರೂ ಖರ್ಚು ಅಧಿಕವಾಗಿರುವುದರಿಂದ ಅಸಾಧ್ಯ. ನೀವೇ ನಡೆಸಬೇಕಾದಂತಹ ವಿವಾಹದಂಥ ಸಮಾರಂಭದ ವಿಚಾರದಲ್ಲಿ ಬಹುದಿನದ ಪ್ರಯತ್ನ ನಿಷ್ಫಲವೆನಿಸುವುದಿಲ್ಲ.

**ಕನ್ಯಾ:** ಸಾಂಸಾರಿಕವಾಗಿ ಒಂದೊಂದೇ ಸಮಸ್ಯೆಗಳನ್ನು ನಿವಾರಿಸಿಕೊಂಡು ಬರುತ್ತಿದ್ದಂತೆ ಇನ್ನೊಂದು ಮತ್ತೊಂದು ಎಂಬಂತೆ ಸಮಸ್ಯೆಗಳು ಅನಾವರಣವಾಗುತ್ತದೆ. ರೇಷ್ಮೆ ಸಗಟು ಮಾರಾಟದಿಂದ ಅಧಿಕ ಲಾಭ ದೊರೆಯುವುದು.

**ತುಲಾ:** ಆಸೆ ಆಕಾಂಕ್ಷೆಗೂ ಪ್ರಚಲಿತ ವಿದ್ಯಮಾನಕ್ಕೂ ಇರುವ ವ್ಯಾತ್ಯಾಸಗಳ ಬಗ್ಗೆ ಮನೆಯವರೊಂದಿಗೆ ಚರ್ಚಿಸಿ. ಹಿಡಿತಕ್ಕೆ ಸಿಕ್ಕಿರುವ ಕೆಲಸಗಳನ್ನು ವೃಥಾ ಚಿಂತಿಸದೆ ಕಾರ್ಯರೂಪಕ್ಕೆ ತನ್ನಿ. ಆತ್ಮಾಭಿಮಾನವನ್ನು ಕಾಪಾಡಿಕೊಳ್ಳಿರಿ.

**ವೃಶ್ಚಿಕ:** ಜಾಗ ಖರೀದಿಸಲು ಅಥವಾ ಒಪ್ಪಂದಕ್ಕೆ ಸಹಿ ಹಾಕಲು ಇಂದು ಸರಿಯಾದ ದಿನ. ಸ್ನೇಹಿತರ ಮೇಲಿನ ದೃಷ್ಟಿಕೋನ ಬದಲಾಯಿಸುವುದರಿಂದ ಅನುಕೂಲ. ಷೇರು ಬಂಡವಾಳಗಳನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಿ.

**ಧನು:** ವರಮಾನದಲ್ಲಿ ಕೊರತೆ ಇರುವುದಿಲ್ಲ. ನಿಮ್ಮ ಚಾಣಾಕ್ಷತನ , ಸರಳತೆಗೆ ಹಿರಿಯರಿಂದ ಮೆಚ್ಚುಗೆಯನ್ನು ಪಡೆಯುವಿರಿ. ವೃತ್ತಿಪರ ಕೆಲಸಗಳು ಅಡೆತಡೆಗಳಿಲ್ಲದೆ ಮುಂದುವರಿಯುವುದು.

**ಮಕರ:** ತಂದೆ ತಾಯಿಯವರ ಮಾತಿನಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವ ಸಲುವಾಗಿ ಯೋಜನೆ ಕೈಗೊಳ್ಳುವಿರಿ. ಗುರುಗಳ ಮಾರ್ಗದರ್ಶನದ ಮಹತ್ವ ತಿಳಿಯುವುದು. ಆರೋಗ್ಯ ಸುಧಾರಿಸುವುದು.

**ಕುಂಭ:** ಹಿರಿಯ ಅಧಿಕಾರಿಗಳ ಸಹಾಯ ಪಡೆದು ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಸಫಲರಾಗುವಿರಿ. ದಿನಸಿ ವರ್ತಕರಿಗೆ ಹೋಟೆಲ್ ಉದ್ಯಮದವರಿಗೆ ಜೋರಿನ ವ್ಯಾಪಾರ ಇರಲಿದೆ. ಇಷ್ಟಾರ್ಥ ಸಿದ್ಧಿಯೋಗ ನಿಮ್ಮ ಪಾಲಿಗಿರುತ್ತದೆ.

**ಮೀನ:** ಸದ್ಗುಣಗಳ ವ್ಯಕ್ತಿತ್ವದ ಮತ್ತು ಪರೋಪಕಾರಿ ಬದುಕಿನಿಂದ ಜನಪ್ರಿಯತೆ ಹೆಚ್ಚಾಗುವ ಯೋಗವಿರುತ್ತದೆ. ಬ್ಯಾಂಕ್ ನೌಕರರು ವರ್ಗಾವಣೆಗೆ ಯೋಚನೆ ಮಾಡುವುದು ಸರಿಯಲ್ಲ. ಗಣ್ಯ ವ್ಯಕ್ತಿಗಳ ಪರಿಚಯವಾಗಲಿದೆ.

**ಷೇರುಪೇಟೆ ವಹಿವಾಟು** 221




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 19,742 |
| ಇಂದಿನ ಅಂತ್ಯ | 19,674 |
| ▼ | 68 |
| ದಿನದ ಕನಿಷ್ಠ | 19,657 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹535 |
| 12 ಮೊಟ್ಟೆಗೆ | ₹70 |
| ಮೈಸೂರು | |
| 100 ಮೊಟ್ಟೆಗೆ | ₹537 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1790 (1840) |
| ಸೋಯಾ (ರಿಫೈನ್ಡ್) | ₹870 (880) |
| ಸೂರ್ಯಕಾಂತಿ (ರಿಫೈನ್ಡ್) | ₹870 (870) |
| ಪಾಮೋಲಿನ್ | ₹800 (804) |

**ವಿನಿಮಯ ದರ**

| | |
|---|---|
| $ ಡಾಲರ್ | 82.94 |
| £ ಪೌಂಡ್ | 101.52 |
| € ಯೂರೊ | 88.19 |
| ¥ ಯೆನ್ (100ಕ್ಕೆ) | 56 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | 7500-8337 |
| ತಿಪಟೂರು | ₹7000-10000 |
| ತುರುವೇಕೆರೆ | ₹8000-8300 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹142.50 |
| ಆರ್‌ಎಸ್‌ಎಸ್-5 | ₹136.50 |
| ಗುಡ್ ಲಾಟ್ | ₹125 |

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹295-550 |
| ದ್ವಿತಳಿ (ಬಿ.ವಿ) | ₹288-626 |

## ಬಂಡವಾಳ ಸಂಗ್ರಹ: ಕರ್ಣಾಟಕ ಬ್ಯಾಂಕ್ ಮಂಡಳಿ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹1,500 ಕೋಟಿವರೆಗೆ ಈಕ್ವಿಟಿ ಬಂಡವಾಳ ಸಂಗ್ರಹಿಸಲು ಕರ್ಣಾಟಕ ಬ್ಯಾಂಕ್‌ನ ಆಡಳಿತ ಮಂಡಳಿಯ ನಿರ್ದೇಶಕರು ಒಪ್ಪಿಗೆ ನೀಡಿದ್ದಾರೆ.

ಅರ್ಹ ಸಾಂಸ್ಥಿಕ ನೀಡಿಕೆ/ಆದ್ಯತಾ ನೀಡಿಕೆ ಅಥವಾ ಇನ್ನಾವುದೇ ಮಾರ್ಗಗಳ ಮೂಲಕ ಒಂದು ಅಥವಾ ಅದಕ್ಕೂ ಹೆಚ್ಚಿನ ಕಂತುಗಳಲ್ಲಿ ಬಂಡವಾಳ ಸಂಗ್ರಹಿಸಲು ಒಪ್ಪಿಗೆ ದೊರೆತಿದೆ.

ಈ ಬಂಡವಾಳ ಸಂಗ್ರಹವು ಬ್ಯಾಂಕ್‌ನ ಭವಿಷ್ಯದ ಬೆಳವಣಿಗೆಗೆ ನೆರವಾಗಲಿದೆ. ದೀರ್ಘಾವಧಿ ಬಂಡವಾಳದ ಅಗತ್ಯ ಮತ್ತು ಇತರ ಕಾರ್ಪೊರೇಟ್ ಉದ್ದೇಶಗಳಿಗೆ ಈ ಬಂಡವಾಳವನ್ನು ಬ್ಯಾಂಕ್ ಬಳಸಿಕೊಳ್ಳಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಹಣಕಾಸು ಸಚಿವಾಲಯದ ಆರ್ಥಿಕ ಪರಿಶೀಲನಾ ವರದಿಯಲ್ಲಿ ಉಲ್ಲೇಖ

# ‘ತೈಲ ದರ ಏರಿಕೆ ಕಳವಳಕಾರಿ’

ನವದೆಹಲಿ (ರಾಯಿಟರ್ಸ್): ಕಚ್ಚಾ ತೈಲ ದರ ಏರಿಕೆಯು ಭಾರತದ ಆರ್ಥಿಕತೆಯ ಪಾಲಿಗೆ ಕಳವಳಕಾರಿ ವಿಷಯ ಆಗಿದೆ. ಆದರೆ, ಸೆಪ್ಟೆಂಬರ್‌ನಲ್ಲಿ ನಿರೀಕ್ಷೆಗಿಂತಲೂ ಉತ್ತಮವಾಗಿ ಮಳೆ ಆಗಿರುವುದು ಹಾಗೂ ಕೆಲವು ಆಹಾರ ವಸ್ತುಗಳ ಬೆಲೆ ಇಳಿಕೆ ಕಂಡಿರುವುದರಿಂದಾಗಿ ಆರ್ಥಿಕ ಬೆಳವಣಿಗೆಯ ಮುನ್ನೋಟವು ಉತ್ತಮವಾಗಿರಲಿದೆ ಎಂದು ಹಣಕಾಸು ಸಚಿವಾಲಯವು ತನ್ನ ಆಗಸ್ಟ್ ತಿಂಗಳ ಆರ್ಥಿಕ ಪರಿಶೀಲನಾ ವರದಿಯಲ್ಲಿ ಹೇಳಿದೆ.

ಈ ವಾರದ ಆರಂಭದಲ್ಲಿ ಕಚ್ಚಾ ತೈಲ ದರವು 10 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡು, ಆ ಬಳಿಕ ತುಸು ಇಳಿಕೆ ಕಂಡಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸಚಿವಾಲಯ ಈ ಪ್ರತಿಕ್ರಿಯೆ ನೀಡಿದೆ. ಈಚಿನ ದಿನಗಳಲ್ಲಿ ಕಚ್ಚಾ ತೈಲ ದರದಲ್ಲಿ ಆಗಿರುವ ಏರಿಕೆಯು ಕಳವಳಕಾರಿ ಆಗಿದೆ. ಆದರೆ, ಅಪಾಯದ ಸೂಚನೆ ಸದ್ಯಕ್ಕಿಲ್ಲ ಎಂದು ವರದಿಯಲ್ಲಿ ತಿಳಿಸಿದೆ. ಭಾರತವು ತನ್ನ ದೇಶಿ ಬೇಡಿಕೆಯ ಶೇ 80ಕ್ಕೂ ಅಧಿಕ ಪ್ರಮಾಣದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ.

ಕೆಲವು ಆಹಾರ ವಸ್ತುಗಳ ಬೆಲೆ ಏರಿಕೆ ಕಂಡಿದ್ದರಿಂದ ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು ಶೇ 7ಕ್ಕೂ ಹೆಚ್ಚು ಏರಿಕೆ ಕಂಡಿತ್ತು. ಆ ನಂತರ ಆಗಸ್ಟ್‌ನಲ್ಲಿ ತುಸು ಇಳಿಕೆ ಕಂಡಿದೆ. ತರಕಾರಿಗಳ ಬೆಲೆ ಕಡಿಮೆ ಆಗುತ್ತಿರುವುದು ಹಾಗೂ ಸರ್ಕಾರ ಮತ್ತು ಆರ್‌ಬಿಐ ಕೈಗೊಳ್ಳುತ್ತಿರುವ ಕ್ರಮಗಳಿಂದಾಗಿ ಮುಂಬರುವ ತಿಂಗಳುಗಳಲ್ಲಿ ಹಣದುಬ್ಬರವು ಇಳಿಮುಖ ಹಾದಿಗೆ ಬರುವ ನಿರೀಕ್ಷೆ ಮಾಡಲಾಗಿದೆ ಎಂದು ವರದಿಯು ಹೇಳಿದೆ.

ಆರ್‌ಬಿಐ ಸದ್ಯದ ಮಟ್ಟಿಗೆ ಬಡ್ಡಿದರ ಹೆಚ್ಚಳ ಮಾಡುವುದಿಲ್ಲ. ಬದಲಾಗಿ 2024ರ ಎರಡನೇ ತ್ರೈಮಾಸಿಕದಲ್ಲಿ ಬಡ್ಡಿದರ ಕಡಿತ ಮಾಡಲು ಆರಂಭಿಸಲಿದೆ. ಕಳೆದೊಂದು ವರ್ಷದಿಂದ ಆಹಾರ ವಸ್ತುಗಳ ದರ ಏರಿಕೆ ಆಗುತ್ತಿರುವುದು ನೀತಿ ನಿರೂಪಕರಲ್ಲಿ ಕಳವಳಕ್ಕೆ ಕಾರಣವಾಗಿದೆ ಎಂದು ತಿಳಿಸಿದೆ.

### ‘ಜಿಡಿಪಿ ಶೇ 6.5ರಷ್ಟು ಬೆಳವಣಿಗೆ ಕಾಣಲಿದೆ’

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕತೆಯು ಶೇ 6.5ರಷ್ಟು ಬೆಳವಣಿಗೆ ಸಾಧಿಸುವ ವಿಶ್ವಾಸ ಹೊಂದಿರುವುದಾಗಿ ಹಣಕಾಸು ಸಚಿವಾಲಯ ಹೇಳಿದೆ.

ಕಚ್ಚಾ ತೈಲ ದರ ಏರಿಕೆ ಮತ್ತು ಮುಂಗಾರು ಕೊರತೆಯ ನಡುವೆಯೂ ಕಾರ್ಪೊರೇಟ್ ಲಾಭ ಹೆಚ್ಚಾಗಿರುವುದು, ಬ್ಯಾಂಕ್ ಸಾಲ ನೀಡಿಕೆಯಲ್ಲಿ ವೃದ್ಧಿ ಮತ್ತು ನಿರ್ಮಾಣ ವಲಯದ ಚಟುವಟಿಕೆ ಹೆಚ್ಚಾಗಿರುವ ಕಾರಣಗಳಿಂದಾಗಿ ಅಂದಾಜು ಮಾಡಿರುವಂತೆ ಶೇ 6.5ರಷ್ಟು ಆರ್ಥಿಕ ಬೆಳವಣಿಗೆ ಸಾಧ್ಯವಾಗಲಿದೆ ಎಂದು ವರದಿಯಲ್ಲಿ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

**ಎಂಟನೇ ವರ್ಷದ ಪುಣ್ಯಸ್ಮರಣೆ**

ದಿ॥ ಶ್ರೀಮತಿ ಹೆಚ್.ಎಂ. ಕಮಲಮ್ಮ
ಜನನ: 26-03-1950, ನಿಧನ : 23-09-2015
ನೀವು ಹಚ್ಚಿದೊಂದು ಹಣತೆ ಇನ್ನೂ ಬೆಳಗಿದೆ, ಮನಕೆ ಮಬ್ಬು ಕವಿಯದಂತೆ ಸದಾ ಕಾದಿದೆ.
ಇಂದಿಗೆ ನೀವು ನಮ್ಮನ್ನು ಅಗಲಿ ಎಂಟು ವರ್ಷವಾದರು, ನಿಮ್ಮ ಧ್ಯೇಯ, ಧೈರ್ಯದ ನುಡಿಗಳು, ಇಂದಿಗೂ ನೀವು ನಮ್ಮೊಂದಿಗಿರುವಂತೆ ಮಾಡಿವೆ.
ಸದಾ ನಿಮ್ಮ ಸ್ಮರಣೆಯಲ್ಲೇ ಇರುವ
ಶ್ರೀ ಎಂ.ವಿ. ಭೀಮರಾಜು (ಪತಿ),
ಶ್ರೀ ಛೀ. ಪದ್ಮನಾಭ, ಶ್ರೀಮತಿ ಎಂ.ಸಿ. ಲತಾ,
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
7829155592/9986811974

**ಎರಡನೇ ವರ್ಷದ ಪುಣ್ಯಸ್ಮರಣೆ**

ಶ್ರೀಮತಿ ಜಾನಕಮ್ಮ
(ನಿಧನ: 23.09.2021)
ಇಂತಿ ನಿಮ್ಮನ್ನು ಸದಾ ಸ್ಮರಿಸುವ:
ಆರ್. ವೆಂಕಟೇಶ್ ಮತ್ತು ಕುಟುಂಬದವರು.

**ಚಿರಸ್ಮರಣೆ**

ಟಿ. ಶ್ರೀನಿವಾಸ
14-04-1942 23-09-2002
ವರದಾ ಶ್ರೀನಿವಾಸ ಕುಟುಂಬ, ಬಂಧುವರ್ಗ ಮತ್ತು ಶ್ರೀ ವೆಂಕಟೇಶ್ವರ ವಿದ್ಯಾಪೀಠ

**ಶ್ರದ್ಧಾಂಜಲಿ !**



ಅತೀ ವಂದನೀಯ ಫಾ. ಟಿ.ಬರ್ನಾರ್ಡ್
ಜನನ : 02.06.1943
ಯಾಜಕದೀಕ್ಷೆ : 29.12.1971
ಮರಣ : 22.09.2023
ದಿನಾಂಕ: 22.09.2023 ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದಿನಾಂಕ: 23.09.2023 ರಂದು ಬೆಳಗ್ಗೆ : 10.00 ಗಂಟೆಗೆ ಬೆಂಗಳೂರು ಮಹಾಧರ್ಮಕ್ಷೇತ್ರದ ರಿಚ್ಮಂಡ್ ರಸ್ತೆಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಬಲಿಪೂಜೆಯನ್ನು ನೆರವೇರಿಸಿ ತದನಂತರ ಪ್ರೀಸ್ಟ್ಸ್ ಸಿಮೆಟ್ರಿಯಲ್ಲಿ ಅಂತಿಮ ಸಂಸ್ಕಾರವನ್ನು ಮಾಡಲಾಗುವುದು.
ಬೆಂಗಳೂರು ಮಹಾಧರ್ಮಕ್ಷೇತ್ರದ ಭಾವಪೂರ್ಣ ಶ್ರದ್ಧಾಂಜಲಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

### ಭಾರತದಲ್ಲಿ ಮಾರುಕಟ್ಟೆ ಪಾಲು ಹೆಚ್ಚುವ ನಿರೀಕ್ಷೆಯಲ್ಲಿ ಆ್ಯಪಲ್

# ಐಫೋನ್ 15ಗೆ ಉತ್ತಮ ಸ್ಪಂದನೆ

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯು ಐಫೋನ್ 15 ಮತ್ತು 15 ಪ್ಲಸ್ ಸ್ಮಾರ್ಟ್‌ಫೋನ್‌ಗಳ ಮಾರಾಟವು ಭಾರತದಲ್ಲಿ ಶುಕ್ರವಾರದಿಂದ ಆರಂಭ ಆಗಿದೆ. ಉದ್ಯಮದ ಮೂಲಗಳ ಅಂದಾಜಿನ ಪ್ರಕಾರ, ಐಫೋನ್ 14 ಸರಣಿಯ ಫೋನ್‌ಗಳ ಮೊದಲ ದಿನದ ಮಾರಾಟಕ್ಕೆ ಹೋಲಿಸಿದರೆ ಐಫೋನ್ 15 ಸರಣಿಯ ಫೋನ್‌ಗಳ ಮಾರಾಟದಲ್ಲಿ ಶೇ 100ರಷ್ಟು ಪ್ರಗತಿ ಕಂಡುಬಂದಿದೆ.

ಫೋನ್ ಖರೀದಿಗೆ ಎಲ್ಲೆಡೆಯೂ ಉದ್ದದ ಸಾಲು ಸಾಮಾನ್ಯವಾಗಿತ್ತು. ಜನರು ತಮ್ಮ ಕಚೇರಿ ಕೆಲಸದ ಅವಧಿಯ ಮುಗಿಸಿ ಫೋನ್ ಖರೀದಿಸಲು ಮಳಿಗೆಗಳ ಎದುರು ಜಮಾಯಿಸಿದ್ದರು ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸಿದ ಉದ್ಯಮದ ಮೂಲವೊಂದು ತಿಳಿಸಿದೆ.

ಈ ಕುರಿತು ಆ್ಯಪಲ್ ಕಂಪನಿಗೆ ಕಳುಹಿಸಿದ ಇ-ಮೇಲ್‌ಗೆ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಭಾರತದಲ್ಲಿ ತಯಾರಾಗಿರುವ ಐಫೋನ್ 15 ಬೆಲೆ ₹79,900ರಿಂದ ಮತ್ತು 6 ಐಫೋನ್ 15 ಪ್ಲಸ್ ಬೆಲೆಯು ₹89,900 ರಿಂದ ಆರಂಭ ಆಗುತ್ತದೆ.

ಐಫೋನ್ 15 ಪ್ರೊ ಮತ್ತು ಪ್ರೊ ಮ್ಯಾಕ್ಸ್ ಫೋನ್‌ಗಳ ಬೆಲೆ ಕ್ರಮವಾಗಿ ₹1,34,900 ಮತ್ತು ₹1,59,900 ರಿಂದ ಆರಂಭ ಆಗುತ್ತದೆ. 1ಟಿಬಿ ಸ್ಟೋರೇಜ್ ಸಾಮರ್ಥ್ಯದ ಐಫೋನ್ 15 ಪ್ರೊ ಮ್ಯಾಕ್ಸ್ ಬೆಲೆಯು ಭಾರತದಲ್ಲಿ ₹1.99 ಲಕ್ಷ ಇದೆ.

ಭಾರತದಲ್ಲಿ ಐಫೋನ್ 15 ಸರಣಿಯ ಸ್ಮಾರ್ಟ್‌ಫೋನ್‌ಗಳ ಮಾರಾಟವು ಶುಕ್ರವಾರದಿಂದ ಆರಂಭ ಆಗಿದ್ದು, ಮುಂಬೈನ ಆ್ಯಪಲ್ ಮಳಿಗೆಯೊಂದರ ಎದುರು ಜನರು ಮೊಬೈಲ್ ಖರೀದಿಸಲು ಸಾಲುಗಟ್ಟಿ ನಿಂತಿದ್ದರು –ಪಿಟಿಐ ಚಿತ್ರ

### ಜಿಯೊ ಕೊಡುಗೆ

ಬೆಂಗಳೂರು: ಐಫೋನ್ 15 ಖರೀದಿಸಿದರೆ ₹2,394 ಮೌಲ್ಯದ 6 ತಿಂಗಳ ಉಚಿತ ಪ್ಲಾನ್ ಸಿಗಲಿದೆ ಎಂದು ರಿಲಯನ್ಸ್ ಜಿಯೊ ಶುಕ್ರವಾರ ತಿಳಿಸಿದೆ.

ಐಫೋನ್ 15 ಖರೀದಿಸುವವರಿಗೆ ಪ್ರತಿ ತಿಂಗಳಿಗೆ ₹399ರಂತೆ ಒಟ್ಟು ಆರು ತಿಂಗಳ ರಿಚಾರ್ಜ್ ಪ್ಲಾನ್ ಉಚಿತವಾಗಿ ಸಿಗಲಿದೆ. ₹399 ಪ್ಲಾನ್‌ನಲ್ಲಿ ಪ್ರತಿನಿತ್ಯ 3 ಜಿಬಿ ಹೈಸ್ಪೀಡ್ ಡೇಟಾ, ಅನಿಯಮಿತ ಕರೆ, ಪ್ರತಿನಿತ್ಯ 100 ಎಸ್‌ಎಂಎಸ್ ಸಿಗಲಿದೆ. ರಿಲಯನ್ಸ್ ರಿಟೇಲ್, ರಿಲಯನ್ಸ್ ಡಿಜಿಟಲ್‌ನಲ್ಲಿ ಖರೀದಿಸಿದರೆ ಮಾತ್ರವೇ ಈ ಕೊಡುಗೆ ಸಿಗಲಿದೆ.

### ಮುಂಬೈ ಧಾರಣೆ

**ಶೇಂಗಾ**

22-09-2023

| | |
|---|---|
| ಜಾವಾ 70/80(ಹೊಸ) | 12300-12400 |
| ಜಾವಾ 80/90(ಹೊಸ) | 12000-12100 |
| ದಪ್ಪ ಮಧ್ಯಪ್ರದೇಶ(ಹೊಸ) | 10900-11000 |
| ದಪ್ಪ ಗುಜರಾತ್(ಹೊಸ) | 11800-11900 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1800 (1850) |
| ಒಂದು ವಾರದ ಡೆಲಿವರಿ | 1795 (1845) |
| ಸೋಯಾ ಕಚ್ಚಾ | 822 (817) |
| ಪಾಮ್ ವಾರದ ಡೆಲಿವರಿ | 798(802) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 780 (780) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
58,950 (58,900)
ಬೆಳ್ಳಿ ಕೆ.ಜಿ 73,200 (72,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 850-900 |
| ನಡುಗೋಲು | 1000-1100 |
| ರಾಶಿ | 1200-1250 |
| ರಾಶಿ ಉತ್ತಮ | 1300-1350 |
| ಹೆರಕಿದ್ದು | 2000-2100 |
| ಹಸಿರು ಸಾಧಾರಣ | 1200-1300 |
| ಹಸಿರು ಉತ್ತಮ | 1500-1600 |
| ಹಸಿರು ಅತಿ ಉತ್ತಮ | 2200-2300 |
| ಕಾಳು ಮೆಣಸು | 590 |
| **ಬಂಟ್ವಾಳ** | |
| ಕೋಕ | 15000-25000 |
| ಹೊಸತು | 28000-45000 |
| ಹಳತು | 46000-48000 |
| **ಹೊಸನಗರ** | |
| ಚಾಲಿ | 3199-36529 |
| ಕೆಂಪುಗೋಟು | 31600-34311 |
| ರಾಶಿ | 43211-47899 |
| **ಕಾರ್ಕಳ** | |
| ಹೊಸತು | 30000-45000 |
| ಹಳತು | 40000-48500 |
| **ಕುಮಟ** | |
| ಚಿಪ್ಪು | 33089-34569 |
| ಕೋಕ | 21169-32569 |
| ಫ್ಯಾಕ್ಟರಿ | 11869-26099 |
| ಹಳೆಚಾಲಿ | 39019-40769 |
| ಹೊಸಚಾಲಿ | 37209-40019 |
| **ಮಂಗಳೂರು** | |
| ಕೋಕ | 23000-26000 |
| **ಪುತ್ತೂರು** | |
| ಹೊಸತು | 34000-45000 |
| **ಶಿವಮೊಗ್ಗ** | |
| ಬೆಟ್ಟೆ | 47009-52700 |
| ಗೊರಬಲು | 17009-37199 |
| ರಾಶಿ | 38869-49899 |
| ಸರಕು | 52119-71010 |
| **ಸಿದ್ದಾಪುರ** | |
| ಬಿಳಿಗೋಟು | 30199-34908 |
| ಚಾಲಿ | 37800-40509 |
| ಕೋಕ | 29899-33899 |
| ಕೆಂಪುಗೋಟು | 33189-33299 |
| ರಾಶಿ | 43109-48099 |
| ತಟ್ಟಿಬೆಟ್ಟೆ | 36589-40169 |
| **ಶಿರಸಿ** | |
| ಬೆಟ್ಟೆ | 40999-43599 |
| ಬಿಳಿಗೋಟು | 28401-36599 |
| ಚಾಲಿ | 37199-41899 |
| ಕೆಂಪುಗೋಟು | 28069-30699 |
| ರಾಶಿ | 41099-50299 |
| **ಯಲ್ಲಾಪುರ** | |
| ಅಪಿ | 54900-54900 |
| ಬಿಳಿಗೋಟು | 25099-35350 |
| ಚಾಲಿ | 36369-41299 |
| ಕೋಕ | 21012-29999 |
| ಕೆಂಪುಗೋಟು | 24169-34703 |
| ರಾಶಿ | 47290-52299 |
| ತಟ್ಟಿಬೆಟ್ಟೆ | 36469-46810 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 12000 | 12000 | - | 154.85ಸೆಂಟ್ಸ್ |
| ಎಸಿ | 7000 | 6200 | - | |
| ಆರ್‌ಪಿ | 9900 | 9900 | - | ಲಂಡನ್ |
| ಆರ್‌ಸಿ | 5830 | 240 on OT | - | 2464ಡಾಲರ್ಸ್ |

## ಬೂಕರ್ ಪ್ರಶಸ್ತಿ: ಸ್ಪರ್ಧೆಯಲ್ಲಿ ಚೇತನಾ ಕೃತಿ

ಲಂಡನ್ (ಪಿಟಿಐ): ಲಂಡನ್‌ನಲ್ಲಿ ವಾಸವಿರುವ ಭಾರತ ಮೂಲದ ಲೇಖಕಿ ಚೇತನಾ ಮಾರೂ ಅವರ ಚೊಚ್ಚಲ ಕಾದಂಬರಿ ‘ವೆಸ್ಟರ್ನ್ ಲೇನ್’ 2023ನೇ ಸಾಲಿನ ಬೂಕರ್ ಪ್ರಶಸ್ತಿಗೆ ಸ್ಪರ್ಧೆಯಲ್ಲಿರುವ ಆರು ಕೃತಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಈ ಕಾದಂಬರಿಯು 11 ವರ್ಷದ ಬಾಲಕಿ ಗೋಪಿ ಮತ್ತು ಆಕೆಯ ಕುಟುಂಬದ ಜೊತೆಗಿನ ಒಡನಾಟವನ್ನು ಒಳಗೊಂಡಿರುವ ಕೃತಿಯಾಗಿದ್ದು, ಮಾನವನ ಭಾವನೆಗಳ ತಾಕಲಾಟದ ಅಭಿವ್ಯಕ್ತಿಗೆ ರೂಪಕವಾಗಿ ಸ್ಕ್ವಾಶ್ ಕ್ರೀಡೆಯು ಬಳಕೆಯಾಗಿದೆ ಎಂದು ಬೂಕರ್ ಪ್ರಶಸ್ತಿಯ ತೀರ್ಪುಗಾರರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಸಿಂಗಪುರ: ಭಾರತ ಮೂಲದ ವ್ಯಕ್ತಿಗೆ 2 ವಾರ ಜೈಲು ಶಿಕ್ಷೆ

ಸಿಂಗಪುರ (ಪಿಟಿಐ): ಇಲ್ಲಿನ ರಾಷ್ಟ್ರಧ್ವಜವನ್ನು ಅಂಗಿಯಂತೆ ಸುತ್ತಿಕೊಂಡು, ಕಾಫಿಶಾಪ್‌ನಲ್ಲಿದ್ದ ಗ್ರಾಹಕರತ್ತ ತೆರಳಿ ಕಿರುಚಾಡಿದ ಪ್ರಕರಣದಲ್ಲಿ ಭಾರತ ಮೂಲದ ರಾಯ್ ರವಿ ಜಗನ್ನಾಥನ್ ಅವರಿಗೆ 2 ವಾರ ಜೈಲು ಶಿಕ್ಷೆ ವಿಧಿಸಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ. ಈ ವರ್ಷ ಜುಲೈನಲ್ಲೂ ರವಿ ಅವರು ಇಂಥದ್ದೇ ಅಪರಾಧ ಮಾಡಿದ್ದು, ಐದು ದಿನ ಕಾರಾಗೃಹ ಶಿಕ್ಷೆ ವಿಧಿಸಲಾಗಿತ್ತು ಎಂದು ‘ದಿ ಸ್ಟ್ರೈಟ್ಸ್ ಟೈಮ್ಸ್’ ತಿಳಿಸಿದೆ.

# ಕಮಲ ಮುಡಿದ ದಳ

ಒಂದನೇ ಪುಟದಿಂದ...

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶಾ ನಿವಾಸದಲ್ಲಿ ಶುಕ್ರವಾರ ಭೇಟಿ ಮಾಡಿ ಜೆಡಿಎಸ್–ಬಿಜೆಪಿ ಮೈತ್ರಿ ಸಂಬಂಧ ಸುದೀರ್ಘವಾಗಿ ಸಮಾಲೋಚಿಸಿದರು. ಎನ್‌ಡಿಎ ಒಕ್ಕೂಟಕ್ಕೆ ಅಧಿಕೃತವಾಗಿ ಸೇರಲು ಕುಮಾರಸ್ವಾಮಿ ಸಮ್ಮತಿ ಸೂಚಿಸಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲು ಅವರು ರಾಷ್ಟ್ರ ರಾಜಧಾನಿಯಲ್ಲಿ ಇದ್ದರೂ ಅವರಿಗೆ ಈ ಸಭೆಗೆ ಆಹ್ವಾನ ಇರಲಿಲ್ಲ. ವಿಧಾನಸಭಾ ಚುನಾವಣೆಯಲ್ಲಿ ಸೋತ ಬಳಿಕ ರಾಜ್ಯದ ನಾಯಕರನ್ನು ನಿರಂತರವಾಗಿ ಕಡೆಗಣಿಸುತ್ತಿರುವ ಬಿಜೆಪಿ ವರಿಷ್ಠರು, ‘ಮೈತ್ರಿ’ ಮಾತುಕತೆಯಿಂದಲೂ ದೂರವಿಟ್ಟು ಸಂದೇಶ ರವಾನಿಸಿದರು. ಆದರೆ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಜರಿದ್ದು ಮೈತ್ರಿ ರೂಪುಗೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿದರು.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಶುಕ್ರವಾರ ದೆಹಲಿಯಲ್ಲಿ ಇದ್ದರೂ ‘ದೋಸ್ತಿ’ ಮಾತುಕತೆಯಿಂದ ದೂರ ಉಳಿದರು. ಅವರು, ಅಮಿತ್ ಶಾ ಅವರನ್ನು ಎರಡು ವಾರಗಳ ಹಿಂದೆ ಭೇಟಿ ಮಾಡಿ ‘ಮೈತ್ರಿ’ ಕುರಿತು ಆರಂಭಿಕ ಹಂತದ ಚರ್ಚೆ ನಡೆಸಿದ್ದರು. ಬಳಿಕ ಮಾತುಕತೆಯ ಹೊಣೆಯನ್ನು ಕುಮಾರಸ್ವಾಮಿಗೆ ವಹಿಸಿದ್ದರು.

ಮಹತ್ವದ ಸಭೆಯ ಬಳಿಕ, ನಡ್ಡಾ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ, ‘ಮೈತ್ರಿಕೂಟದ ಭಾಗವಾಗಲು ಜೆಡಿಎಸ್ ನಿರ್ಧರಿಸಿರುವುದು ನನಗೆ ಖುಷಿ ತಂದಿದೆ. ಪಕ್ಷವನ್ನು ಎನ್‌ಡಿಎಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಇದು ಎನ್‌ಡಿಎ ಮತ್ತು ಪ್ರಧಾನಿಯವರ ‘ನವ ಭಾರತ, ಬಲಿಷ್ಠ ಭಾರತ’ ದೃಷ್ಟಿಕೋನವನ್ನು ಮತ್ತಷ್ಟು ಬಲಪಡಿಸುತ್ತದೆ’ ಎಂದರು.

ಸುದ್ದಿಗಾರರ ಜತೆಗೆ ಮಾತನಾಡಿದ ಕುಮಾರಸ್ವಾಮಿ, ‘ಒಳ್ಳೆಯ ದಿನ, ಒಳ್ಳೆಯ ಸಮಯ ನೋಡಿಕೊಂಡು ಯಾರಿಗೆಷ್ಟು ಕ್ಷೇತ್ರಗಳು ಎಂಬುದನ್ನು ದಸರಾ ನಂತರ ನಿರ್ಧಾರ ಮಾಡುತ್ತೇವೆ’ ಎಂದರು.

‘ಯಾರು ಯಾರಿಗೆ ಎಷ್ಟು ಸೀಟು ಹಂಚಿಕೆ ಆಗುತ್ತದೆ ಎನ್ನುವುದು ಮುಖ್ಯವಲ್ಲ ಎಂದು ಅನೇಕ ಬಾರಿ ಹೇಳಿದ್ದೇನೆ. ಈಗಲೂ ಅದನ್ನೇ ಹೇಳುತ್ತಿದ್ದೇನೆ. ರಾಜ್ಯದ 28 ಕ್ಷೇತ್ರಗಳ ಪೈಕಿ ಎಲ್ಲ ಕ್ಷೇತ್ರಗಳನ್ನು ಗೆಲ್ಲುವ ಬಗ್ಗೆ ಚರ್ಚೆ ನಡೆಸಲಾಯಿತು. ಈ ವಿಷಯವನ್ನು ನಾನು ಬಿಜೆಪಿ ವರಿಷ್ಠರಿಗೆ ಒತ್ತಿ ಹೇಳಿದ್ದೇನೆ. ನನ್ನ ಮಾತಿಗೆ ಅವರೂ ಸಹಮತ ವ್ಯಕ್ತಪಡಿಸಿದರು’ ಎಂದು ಅವರು ತಿಳಿಸಿದರು.

‘ಬರೀ ಮೈತ್ರಿಯ ಬಗ್ಗೆಯಷ್ಟೇ ಕೇಳಬೇಡಿ. ಕಾವೇರಿ ವಿಷಯದ ಬಗ್ಗೆಯೂ ಕೇಳಿ. ನಾನಿಲ್ಲಿ ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯೂ ಚರ್ಚೆ ನಡೆಸಲು ಬಂದಿದ್ದೇನೆ. ಕಾವೇರಿ, ಬರ ಸೇರಿದಂತೆ ರಾಜ್ಯದ ಮುಂದಿರುವ ಸಮಸ್ಯೆಗಳ ಬಗ್ಗೆ ಬಿಜೆಪಿ ವರಿಷ್ಠರ ಗಮನ ಸೆಳೆದಿದ್ದೇನೆ’ ಎಂದರು.

ಮಾತುಕತೆ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಕುಪೇಂದ್ರ ರೆಡ್ಡಿ, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಜರಿದ್ದರು.

### ಚುನಾವಣೆಯಲ್ಲಿ ಅನುಕೂಲ

ಉಭಯ ಪಕ್ಷಗಳ ಮೈತ್ರಿಯಿಂದ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕಲಬುರ್ಗಿ, ತುಮಕೂರು, ಚಿತ್ರದುರ್ಗ, ಮೈಸೂರು, ಚಾಮರಾಜನಗರ, ರಾಯಚೂರು, ಮಂಡ್ಯ ಹಾಗೂ ಹಾಸನ ಕ್ಷೇತ್ರಗಳಲ್ಲಿ ‘ಕೈ’ಪಾಳಯವನ್ನು ಸುಲಭದಲ್ಲಿ ಕಟ್ಟಿ ಹಾಕಬಹುದು ಎಂಬ ಬಗ್ಗೆಯೂ ಚರ್ಚೆಗಳು ನಡೆದವು ಎಂದು ಮೂಲಗಳು ತಿಳಿಸಿವೆ.

**ಎಡವಟ್ಟು ಕುರಿತು ಎಚ್ಚರ:** 2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದ್ದವು. ಉಭಯ ಪಕ್ಷಗಳು ತಲಾ ಒಂದು ಸ್ಥಾನ ಗೆದ್ದಿದ್ದವು. ಕಾಂಗ್ರೆಸ್‌ನ ಕೆಲವು ನಾಯಕರೇ ಕೆಲವು ಕ್ಷೇತ್ರಗಳಲ್ಲಿ ಮೈತ್ರಿಕೂಟದ ಸೋಲಿಗೆ ಕಾರಣರಾಗಿದ್ದರು. ಬಿಜೆಪಿ–ಜೆಡಿಎಸ್ ಮೈತ್ರಿಯಿಂದ ಇಂತಹ ಎಡವಟ್ಟುಗಳು ನಡೆಯದಂತೆ ಎಚ್ಚರ ವಹಿಸಬೇಕು ಎಂದು ಕುಮಾರಸ್ವಾಮಿ ಗಮನ ಸೆಳೆದರು.

**‘ಅತೃಪ್ತಿ ಶಮನಕ್ಕೆ ಒತ್ತು’:** ದೋಸ್ತಿ ಬಗ್ಗೆ ಬಿಜೆಪಿಯ ಕೆಲವು ನಾಯಕರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅವರನ್ನು ಆದಷ್ಟು ಶೀಘ್ರದಲ್ಲಿ ಕರೆದು ಮಾತನಾಡಿಸಿ ಮುನಿಸು ಶಮನಗೊಳಿಸಬೇಕು ಎಂದು ಕುಮಾರಸ್ವಾಮಿ ಒತ್ತಾಯಿಸಿದರು. ಈ ಎಲ್ಲ ಸಮಸ್ಯೆಗಳನ್ನು ಕೆಲವೇ ದಿನಗಳಲ್ಲಿ ಬಗೆಹರಿಸುತ್ತೇವೆ. ಈ ಬಗ್ಗೆ ಚಿಂತೆ ಬೇಡ ಎಂದು ಬಿಜೆಪಿ ವರಿಷ್ಠರು ಭರವಸೆ ನೀಡಿದರು.

**‘ಕಾಂಗ್ರೆಸ್‌ಗೆ ಪಾಠ’:** ‘ಬಿಜೆಪಿ–ಜೆಡಿಎಸ್ ನಾಯಕರ, ಕಾರ್ಯಕರ್ತರು ಬೇಗ ಹೊಂದಾಣಿಕೆ ಮಾಡಿಕೊಳ್ಳಲಿದ್ದಾರೆ. ಇದೊಂದು ಸಹಜ ಮೈತ್ರಿ ಆಗಲಿದೆ. ‘ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯ ಗೆಲುವಿನಿಂದ ಬೀಗುತ್ತಿರುವ ಕಾಂಗ್ರೆಸ್ ಪಕ್ಷವನ್ನು ಲೋಕಸಭಾ ಚುನಾವಣೆಯಲ್ಲಿ ಸೊನ್ನೆಗೆ ಇಳಿಸಬೇಕು. ಅದಕ್ಕಾಗಿ ಸೀಟು ಹಂಚಿಕೆಯ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸೋಣ. ಕೊಡು ಕೊಳ್ಳುವಿಕೆಯಲ್ಲಿ ಎರಡೂ ಪಕ್ಷಗಳ ನಾಯಕರು ಉದಾರವಾಗಿ ಇರೋಣ’ ಎಂದು ಜೆಡಿಎಸ್–ಬಿಜೆಪಿ ವರಿಷ್ಠರು ಸಂಧಾನಕ್ಕೆ ಬಂದರು ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**Part-Time Jobs**

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

**General**

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ಬೇಕಾಗಿದ್ದಾರೆ. ಸಿಗರೆಟ್ ಮಾರಾಟಮಾಡಲು ಬೆಂಗಳೂರಿನಲ್ಲಿ ಕೆಲಸಗಾರರು ಬೇಕಾಗಿದ್ದಾರೆ. 2ವೀಲರ್ ಕಡ್ಡಾಯ ಲೈಸನ್ಸ ಇರಬೇಕು. Sadath: 7892507677, Sunil Menon: 9895701323

**Marketing & Sales**

LOCAL REP Retired Defence Promote Technical Textiles Rs.5000 per month. Work from home Commission 2% resume@urjafabrics.com

**Wanted**

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080- 25300714

**ಸಾರ್ವಜನಿಕ ಪ್ರಕಟಣೆ**

**PUBLIC NOTICE**

I **MRS. ANJALI M** resident of Amruthnagar, Bangalore through Mrs. T.K. Parvathi advocate enrolment No. KAR 482/1986, purchasing the empty land from Mr. Gururaj M., absolute owner of sites bearing No's. 1/A measuring 6100 sq ft with **East-West** 61 feet & **North-South:**100 feet and 1/B measuring 1830 Sq ft with **East-West** 61 feet & **North-South:** 30 feet, BBMP khata No's 3/1/1A and 4/1/1B respectively under the survey No 101/3 in the layout at Allalasandra, Chikkabommasandra and Jakkur plantation villages, Yelahanka Hobli, Bangalore north taluk, formed by Karnataka Judicial department employees house building co-operative society, Bangalore and bounded on: **East by:** road, **West by:** passage, **South by:** GKVK, **North by:** Water tank. Any objections / claims by all or any persons including banks, financial institutions or any other party with regard to this to contact the Phone No: **8050306767** **Within 7 days** from the date of this notice.

**ಪ್ರವಾಸ**

**Travel Agencies**

9/10/23 ರಿಂದ ವಿಮಾನದಲ್ಲಿ ಗುಜರಾತ್ ಟೂರ್ ಪಟೇಲ್ ಪ್ರತಿಮೆ ಸೋಮನಾಥ್ ದ್ವಾರಕಾ ಮಾತೃಗಯಾ 34000/ ಶ್ರೀ ರಾಮ್ ಟೂರ್ 9108933383

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

**Travel**

17.11.2023 02.12.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 27.10.2023 06.12.2023 ನೇಪಾಳ 9 ದಿನಗಳು. 06.10.2023 23.12.2023 ಭೂತಾನ್ 8 ದಿನಗಳು. 09.10.2023 17.11.2023 11.12.2023 ಶ್ರೀಲಂಕಾ 6 ದಿನಗಳು. 04.10.2023 22.11.2023 06.12.2023 ರಾಜಸ್ಥಾನ್ 9 ದಿನಗಳು. 27.10.2023 25.11.2023 12.12.2023 ಗುಜರಾತ್ 8 ದಿನಗಳು 27.10.2023 27.11.2023 ಅಸ್ಸಾಂ,ಮೇಘಾಲಯ 9 ದಿನಗಳು 06.10.2023 11.11.2023 11.12.2023 ಕಾಶಿ,ಗಯಾ,ಅಲಹಾಬಾದ್ 7 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

10.10.2023ಮತ್ತು 10.11.2023 6ದಿನಗಳು ವಿಮಾನದಲ್ಲಿ ಅಲಹಾಬದ್,ಕಾಶಿ, ಗಯಾ,ಅಯೋಧ್ಯ (ಕೆಲವೇ ಸೀಟುಗಳಿವೆ)24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Land_Package15000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

**Pilgrimage Tours**

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/10 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ಪ್ಯಾಕೇಜ್. 22/10 ಹೈದರಾಬಾದ್ 4 ದಿನಗಳ ಪ್ಯಾಕೇಜ್ 9591017782, 9880621353

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ನಿಜ್ಜರ್ ಹತ್ಯೆ: 'ಫೈವ್ ಐಸ್ ಇಂಟೆಲಿಜೆನ್ಸ್ ನೆಟ್ ವರ್ಕ್'ನ ಸಂಯೋಜಿತ ಸಂಸ್ಥೆಯಿಂದಲೂ ಮಾಹಿತಿ

# 'ಅಧಿಕಾರಿಗಳ ಸಂವಹನ ಆಧರಿಸಿ ಆರೋಪ'

ಟೊರಂಟೊ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕನ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂಬ ಕೆನಡಾದ ಆರೋಪವು ಮಾನವ ಮತ್ತು ಇತರ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಪಡೆದ ಮಾಹಿತಿಯನ್ನು ಮತ್ತು 'ಫೈವ್ ಐಸ್ ಇಂಟೆಲಿಜೆನ್ಸ್ ನೆಟ್ ವರ್ಕ್' ನ ಸಂಯೋಜಿತ ಸಂಸ್ಥೆ ನೀಡಿದ ಮಾಹಿತಿಯನ್ನು ಆಧರಿಸಿದೆ ಎಂದು ಕೆನಡಾ ಸರ್ಕಾರದ ಮೂಲಗಳನ್ನು ಉಲ್ಲೇಖಿಸಿ ಮಾಧ್ಯಮ ವರದಿಯೊಂದು ಹೀಗೆ ಹೇಳಿದೆ.

ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಆರೋಪಿಸಿದ್ದು, ಎರಡೂ ರಾಷ್ಟ್ರಗಳ ನಡುವೆ ತೀವ್ರತರವಾದ ರಾಜತಾಂತ್ರಿಕ ಬಿಕ್ಕಟ್ಟಿಗೆ ಕಾರಣವಾಗಿದೆ.

ಈ ದೇಶದಲ್ಲಿರುವ ರಾಜತಾಂತ್ರಿಕ ಅಧಿಕಾರಿಗಳು ಸೇರಿದಂತೆ ಭಾರತದ ಅಧಿಕಾರಿಗಳು ನಡೆಸಿದ ಸಂವಹನ ಮಾಹಿತಿಯನ್ನು ಬೇಹುಗಾರಿಕೆ ಒಳಗೊಂಡಿದೆ ಎಂದು ಕೆನಡಾದ ಸರ್ಕಾರದ ಮೂಲಗಳು ತಿಳಿಸಿವೆ. ಕೆನಡಾದಿಂದಷ್ಟೇ ಗುಪ್ತಚರ ಮಾಹಿತಿ ಬಂದಿಲ್ಲ. 'ಫೈವ್ ಐಸ್ ಇಂಟೆಲಿಜೆನ್ಸ್'ನಲ್ಲಿ ಸಂಯೋಜಿತವಾಗಿರುವ ಹೆಸರು ಬಹಿರಂಗ ಪಡಿಸದ ಸಂಸ್ಥೆಗಳಿಂದಲೂ ಕೆಲವು ಮಾಹಿತಿಗಳು ಬಂದಿವೆ ಎಂದು ಇಲ್ಲಿನ ಪ್ರಸಾರ ನಿಗಮದ ವಿಭಾಗವಾದ ಸಿಬಿಸಿ ನ್ಯೂಸ್ ತಿಳಿಸಿದೆ.

ಬೇಹುಗಾರಿಕೆಯ ಕೂಟವಾಗಿರುವ 'ಫೈವ್ ಐಸ್ ನೆಟ್‌ವರ್ಕ್' ಕೆನಡಾ ಅಲ್ಲದೆ ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ರಾಷ್ಟ್ರಗಳನ್ನು ಒಳಗೊಂಡಿದೆ. ನಿಜ್ಜರ್ ಹತ್ಯೆಯ ತನಿಖೆಗೆ ಸಹಕಾರ ಕೋರಿ ಕೆನಡಾದ ಅಧಿಕಾರಿಗಳು ಹಲವು ಬಾರಿ ಭಾರತಕ್ಕೆ ತೆರಳಿದ್ದರು ಎಂದು ವರದಿ ಹೇಳಿದೆ.

ದೇಶದ ರಾಷ್ಟ್ರೀಯ ಭದ್ರತೆ, ಬೇಹುಗಾರಿಕೆ ಸಲಹೆಗಾರ ಜೊಡಿ ಥಾಮಸ್ ಆಗಸ್ಟ್ ಮಧ್ಯಭಾಗದಲ್ಲಿ ನಾಲ್ಕು ದಿನ ಭಾರತದಲ್ಲಿದ್ದರು. ಮತ್ತೆ ಸೆಪ್ಟೆಂಬರ್‌ನಲ್ಲಿ ಐದು ದಿನ ಇದ್ದರು. ಪ್ರಧಾನಿ ಟುಡ್ರೊ ಮತ್ತು ಭಾರತದ ಪ್ರಧಾನಿ ಮೋದಿ ಅವರೊಂದಿಗೆ ಮಾತುಕತೆ ನಡೆದ ವೇಳೆಯೂ ಭೇಟಿ ನೀಡಿದ್ದರು ಎಂದು ತಿಳಿಸಿದೆ.

'ರಹಸ್ಯವಾಗಿ ವಿಚಾರಣೆ ನಡೆಸಿದಾಗ ಭಾರತದ ಯಾವ ಅಧಿಕಾರಿಗಳೂ ಈ ಗಂಭೀರ ಆರೋಪವನ್ನು ಅಲ್ಲಗಳೆಯಲಿಲ್ಲ. ಈ ನೆಲದಲ್ಲಿ ನಡೆದ ಇಲ್ಲಿನ ಪ್ರಜೆಯ ಹತ್ಯೆಯಲ್ಲಿ ಭಾರತ ಸರ್ಕಾರದ ಪಾತ್ರವಿದೆ ಎಂಬ ಆರೋಪ ಕುರಿತು ಇದು ಸಾಕ್ಷ್ಯವಾಗಬಹುದು' ಎಂದು ಹೇಳಿದೆ.

ಪ್ರತೀಕಾರ ಕೈಗೊಳ್ಳಲು ಕೆನಡಾ ಆಲೋಚಿಸುತ್ತಿದೆ. ಆದರೆ ನಿರ್ಧಾರ ಇನ್ನೂ ಕೈಗೊಂಡಿಲ್ಲ ಎಂದು ಕೆನಡಾ ಸರ್ಕಾರದ ಮೂಲಗಳು ತಿಳಿಸಿವೆ.

'ದ್ವೇಷ ಹರಡಲು ಕೆನಡಾದಲ್ಲಿ ಅವಕಾಶ ಇಲ್ಲ': ಇಲ್ಲಿರುವ ಹಿಂದೂಗಳು ದೇಶವನ್ನು ತೊರೆಯುವಂತೆ ಹೇಳುವ ವಿಡಿಯೊ ಒಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು ಇದು ಆಕ್ರಮಣಕಾರಿ ಮತ್ತು ದ್ವೇಷಪೂರಿತ ಕ್ರಮ ಎಂದು ಕೆನಡಾ ಸರ್ಕಾರ ಹೇಳಿದೆ.

ಅಪ್ರಚೋದಿತ ಆಕ್ರಮಣ, ದ್ವೇಷ ಹರಡುವ ಮತ್ತು ಭೀತಿ ಹುಟ್ಟಿಸುವ ವಾತಾವರಣಕ್ಕೆ ಈ ದೇಶದಲ್ಲಿ ಅವಕಾಶ ನೀಡುವುದಿಲ್ಲ. ಇಂಥವು ನಮ್ಮನ್ನು ವಿಭಜಿಸುತ್ತವೆ ಅಷ್ಟೆ. ಕೆನಡಿಯನ್ನರೆಲ್ಲರೂ ಪರಸ್ಪರ ಗೌರವಿಸಬೇಕು ಮತ್ತು ಇಲ್ಲಿನ ಕಾನೂನನ್ನು ಪಾಲಿಸಬೇಕು ಎಂದೂ ಕೆನಡಾದ ಸಾರ್ವಜನಿಕರ ಸುರಕ್ಷತೆ ವಿಭಾಗ ಗುರುವಾರ ರಾತ್ರಿ 'ಎಕ್ಸ್'ನಲ್ಲಿ ತಿಳಿಸಿದೆ.

> ಕೆನಡಾದ ತನಿಖಾ ಪ್ರಯತ್ನವನ್ನು ಅಮೆರಿಕ ಬೆಂಬಲಿಸುತ್ತದೆ. ಇಂತಹ ಕೃತ್ಯಗಳಿಗೆ ಯಾವುದೇ ರಾಷ್ಟ್ರ 'ವಿಶೇಷ ವಿನಾಯಿತಿ' ಪಡೆಯಲು ಸಾಧ್ಯವಿಲ್ಲ
> **ಜೇಕ್ ಸುಲ್ಲಿವನ್**, ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ

> ಕೆನಡಾದಲ್ಲಿರುವ ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಮತ್ತು ವೃತ್ತಿಪರರ ಸುರಕ್ಷತೆಯನ್ನು ಎಲ್ಲಾ ಸಮಯದಲ್ಲೂ ಖಾತ್ರಿಪಡಿಸಬೇಕು
> **ಜೈರಾಂ ರಮೇಶ್**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಖಾಲಿಸ್ತಾನಿ ಪರ ಗುಂಪು ದಲ್ ಖಾಲ್ಸಾದ ಕಾರ್ಯಕರ್ತ ಕನ್ವರ್ ಪಾಲ್ ಸಿಂಗ್ (ಎಡದಿಂದ ಎರಡನೆಯವರು) ಅವರು ಅಮೃತಸರದಲ್ಲಿ ಗುರುವಾರ ಪ್ರತ್ಯೇಕತಾವಾದಿ ನಿಜ್ಜರ್‌ನ ಪೋಸ್ಟರ್ ಪ್ರದರ್ಶಿಸಿದರು — ಎಎಫ್‌ಪಿ ಚಿತ್ರ

## 'ಮಾಹಿತಿ ಇದ್ದರೂ ಕ್ರಮ ಕೈಗೊಳ್ಳದ ಕೆನಡಾ'

ನವದೆಹಲಿ: ಹರದೀಪ್ ಸಿಂಗ್ ನಿಜ್ಜರ್ ನಕಲಿ ಪಾಸ್‌ಪೋರ್ಟ್ ಬಳಸಿ ಉತ್ತರ ಅಮೆರಿಕ ದೇಶವನ್ನು ತಲುಪಿದ್ದ ಎಂದು ಮೂಲಗಳು ಹೇಳಿವೆ.

ಆತ 12ಕ್ಕೂ ಹೆಚ್ಚು ಕೊಲೆ ಪ್ರಕರಣಗಳಲ್ಲಿ ಮತ್ತು ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾನೆಂಬ ಮಾಹಿತಿ ಇದ್ದರೂ ಆತನ ವಿರುದ್ಧ ಕೆನಡಾ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ತಿಳಿಸಿವೆ.

1997ರಲ್ಲಿ ಆತ ನಕಲಿ ಪಾಸ್‌ಪೋರ್ಟ್ ಬಳಸಿ ಕೆನಡಾಕ್ಕೆ ತೆರಳಿದ್ದ. ಭಾರತ ತನಗೆ ಕಿರುಕುಳ ನೀಡುವುದಾಗಿ ಹೇಳಿ ಕೆನಡಾದಲ್ಲಿ ಆಶ್ರಯ ಕೋರಿದ್ದ. ಆದರೆ ಕೋರಿಕೆ ತಿರಸ್ಕೃತಗೊಂಡಿತ್ತು. 11 ದಿನಗಳ ಬಳಿಕ ಆತ ವಲಸೆಗೆ ನೆರವು ನೀಡಿದ್ದ ಮಹಿಳೆಯೊಂದಿಗೆ ವಿವಾಹವಾಗಿದ್ದ. ಆದರೆ ಆಗ ಕೂಡ ವಲಸೆ ಅಧಿಕಾರಿಗಳು ಅವನ ಅರ್ಜಿಯನ್ನು ತಿರಸ್ಕರಿಸಿದ್ದರು. ಮತ್ತೊಬ್ಬ ಪತಿ ನೀಡಿದ್ದ ಪ್ರಾಯೋಜಕತ್ವದ ಮೇಲೆ ಈ ಮಹಿಳೆ 1997ರಲ್ಲಿ ಕೆನಡಾಕ್ಕೆ ಬಂದಿದ್ದು ಇದಕ್ಕೆ ಕಾರಣವಾಗಿತ್ತು.

ತನ್ನನ್ನು ತಾನು ಕೆನಡಾ ಪ್ರಜೆ ಎಂದು ಹೇಳಿಕೊಂಡಿದ್ದ ಆತ ಅರ್ಜಿ ತಿರಸ್ಕಾರದ ವಿರುದ್ಧ ಕೋರ್ಟ್ ಮೊರೆ ಹೋಗಿದ್ದ. ನಂತರದಲ್ಲಿ ಆತನಿಗೆ ಕೆನಡಾ ಪೌರತ್ವ ದೊರಕಿದ್ದು ಇದಕ್ಕೆ ಪೂರಕವಾದ ಸನ್ನಿವೇಶಗಳ ಬಗ್ಗೆ ಸ್ಪಷ್ಟತೆ ಇಲ್ಲ. 2014ರ ನವೆಂಬರ್‌ನಲ್ಲಿ ಆತನ ವಿರುದ್ಧ 'ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸ್ (ಆರ್‌ಸಿಎನ್) ನೀಡಲಾಗಿತ್ತು. ಭಾರತದಲ್ಲಿ ಆತ ವಿರುದ್ಧ ಕೊಲೆ ಪ್ರಕರಣ, ಭಯೋತ್ಪಾದನಾ ಚಟುವಟಿಕೆ ಪ್ರಕರಣಗಳು ಇದ್ದು ವಿವರಗಳನ್ನು ಕೆನಡಾದ ಅಧಿಕಾರಿಗಳಿಗೆ ನೀಡಲಾಗಿತ್ತು. ಆದರೆ ಆತನು ವಿಮಾನದಲ್ಲಿ ಪಯಣಿಸುವುದನ್ನು ನಿಷೇಧಿಸುವುದು ಬಿಟ್ಟರೆ ಬೇರಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂದು ಮೂಲಗಳು ಹೇಳಿವೆ.

## ರಾಜತಾಂತ್ರಿಕ ಪರಿಹಾರಕ್ಕೆ ಒತ್ತಾಯ

ನವದೆಹಲಿ (ಪಿಟಿಐ): ಭಯೋತ್ಪಾದನೆ ವಿರುದ್ಧದ ಹೋರಾಟ ಯಾವುದೇ ರಾಜಿಗೆ ಒಳಪಡಬಾರದು. ಭಾರತ - ಕೆನಡಾ ದೇಶಗಳ ಮಧ್ಯೆ ಉಂಟಾಗಿರುವ ಗಂಭೀರ ಬಿಕ್ಕಟ್ಟು ಪರಿಹಾರಕ್ಕೆ ತೀವ್ರತರವಾದ ರಾಜತಾಂತ್ರಿಕ ಚಟುವಟಿಕೆಗಳಲ್ಲಿ ತೊಡಗಿ ಕೊಳ್ಳಬೇಕು ಎಂದು ಕಾಂಗ್ರೆಸ್ ಪುನರುಚ್ಚರಿಸಿದೆ.

ಇದರ ಜತೆಗೇ ಕೆನಡಾದಲ್ಲಿ ಭಾರತೀಯರ ಸುರಕ್ಷತೆ ಬಗ್ಗೆಯೂ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಬಿಕ್ಕಟ್ಟು ಕುರಿತು ಕೇಳಿದ ಪ್ರಶ್ನೆಗೆ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು, 'ಭಾರತದ ಸಾರ್ವಭೌಮತೆ, ಏಕತೆ ಮತ್ತ ಸಮಗ್ರತೆಗೆ ಭಯೋತ್ಪಾದನೆಯು ಬೆದರಿಕೆಯೊಡ್ಡಿದಾಗ ಅದರ ವಿರುದ್ಧದ ನಮ್ಮ ಹೋರಾಟದಲ್ಲಿ ಯಾವುದೇ ರಾಜಿಯನ್ನು ಮಾಡಿಕೊಳ್ಳಬಾರದು' ಎಂದು ಪ್ರತಿಕ್ರಿಯಿಸಿದರು.

ಕೆನಡಾದಲ್ಲಿ ಭಾರತದ ಮೂಲದ ವಿದ್ಯಾರ್ಥಿಗಳು 3 ಲಕ್ಷದಷ್ಟು ಸಂಖ್ಯೆಯಲ್ಲಿದ್ದಾರೆ. ಅಲ್ಲದೆ, ಸಾವಿರಾರು ವೃತ್ತಿಪರರಿದ್ದಾರೆ. ಇವರು ಕೆನಡಾದ ಆರ್ಥಿಕ ಬೆಳವಣಿಗೆಗೆ ಮತ್ತು ಭಾರತ– ಕೆನಡಾ ಬಾಂಧವ್ಯಕ್ಕೆ ಕೊಡುಗೆ ನೀಡುತ್ತಿದ್ದಾರೆ ಎಂದು ವಿವರಿಸಿದರು.

' ಶಾಸ್ತ್ರಿ ಇಂಡೊ– ಕೆನಡಾ ಇನ್‌ಸ್ಟಿಟ್ಯೂಟ್ ಹೆಸರಿನ ಸಂಸ್ಥೆ ಕೂಡ ಅಲ್ಲಿದೆ. ದೀರ್ಘಕಾಲದಿಂದ ಎರಡೂ ದೇಶಗಳು ಆರ್ಥಿಕ ಮತ್ತು ತಾಂತ್ರಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿವೆ' ಎಂದರು.

ತನ್ನ ನೆಲದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಭಾರತ ವಿರೋಧಿ ಶಕ್ತಿಗಳು ಮತ್ತು ಭಯೋತ್ಪಾದಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಭಾರತ ಗುರುವಾರ ಕೆನಡಾಕ್ಕೆ ನೀಡಿದ ಸ್ಪಷ್ಟ ಸಂದೇಶದಲ್ಲಿ ಒತ್ತಾಯಿಸಿತ್ತು.

## ಭಾರತದ ಸಹಕಾರ ಕೋರಿದ ಕೆನಡಾ

ವಿಶ್ವಸಂಸ್ಥೆ (ಎಎಫ್‌ಪಿ): ಪ್ರತ್ಯೇಕತಾವಾದಿಯ ಹತ್ಯೆಯಲ್ಲಿ ಭಾರತದ ಕೈವಾಡವಿರುವ ಕುರಿತ ತನಿಖೆಗೆ ಭಾರತ ಸರ್ಕಾರ ಸಹಕರಿಸಬೇಕು ಎಂದು ಆ ದೇಶದ ಪ್ರಧಾನಿ ಜಸ್ಟಿನ್ ಟ್ರುಡೊ ಗುರುವಾರ ಕರೆ ನೀಡಿದ್ದಾರೆ.

'ಪ್ರಕರಣ ಕುರಿತು ಸತ್ಯ ಬಹಿರಂಗಪಡಿಸಲು ಭಾರತ ನಮ್ಮೊಂದಿಗೆ ಕಾರ್ಯ ನಿರ್ವಹಿಸಬೇಕು' ಎಂದು ಅವರು ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯಸಭೆಯ ಕಾರ್ಯಕ್ರಮದ ವೇಳೆ ಹೇಳಿದ್ದಾರೆ. ಆದರೆ ಭಾರತದ ವಿರುದ್ಧ ಆರೋಪ ಮಾಡಲು ಕಾರಣವಾದ ಸಾಕ್ಷ್ಯಗಳನ್ನು ಒದಗಿಸಲು ನಿರಾಕರಿಸಿದ್ದಾರೆ.

# ನಾಯ್ಡು ವಿರುದ್ಧದ ಪ್ರಕರಣ ರದ್ದುಪಡಿಸಲು ಕೋರ್ಟ್ ನಕಾರ

ವಿಜಯವಾಡ (ಪಿಟಿಐ): ಆಂಧ್ರಪ್ರದೇಶದ ಕೌಶಲ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಗೊಳಿಸುವಂತೆ ಕೋರಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರು ಸಲ್ಲಿಸಿದ್ದ ಅರ್ಜಿಯನ್ನು ಆಂಧ್ರಪ್ರದೇಶ ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.



ಚಂದ್ರಬಾಬು ನಾಯ್ಡು

ಇದೇ ಪ್ರಕರಣ ಸಂಬಂಧ ಭ್ರಷ್ಟಾಚಾರ ನಿಗ್ರಹ ದಳದ ವಿಶೇಷ ನ್ಯಾಯಾಲಯವು, ನಾಯ್ಡು ಅವರನ್ನು ಎರಡು ದಿನ ಸಿಐಡಿ ವಶಕ್ಕೆ ಒಪ್ಪಿಸಿ, ಆದೇಶಿಸಿದೆ.

ಈ ಬಗ್ಗೆ ಶುಕ್ರವಾರ ವಿಚಾರಣೆ ನಡೆಸಿದ ಎಸಿಬಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜಿ. ಹಿಮಬಿಂದು ಅವರು, ನಾಯ್ಡು ಅವರನ್ನು ಎರಡು ದಿನಗಳ ಕಾಲ ಸಿಐಡಿ ವಶಕ್ಕೆ ನೀಡಲಾಗಿದೆ. ರಾಜಮಹೇಂದ್ರವರಂ ಕೇಂದ್ರೀಯ ಕಾರಾಗೃಹದಲ್ಲಿ ಅವರನ್ನು ಬೆಳಿಗ್ಗೆ 9.30ರಿಂದ ಸಂಜೆ ಐದು ಗಂಟೆವರೆಗೆ ಸಿಐಡಿ ವಿಚಾರಣೆ ನಡೆಸಲಿದೆ ಎಂದು ಹೇಳಿದರು.

ಅಲ್ಲದೆ, ನಾಯ್ಡು ವಿಚಾರಣೆ ಪೂರ್ಣವಾದ ಬಳಿಕ ಅವರನ್ನು ಮತ್ತೆ ನ್ಯಾಯಾಲಯದ ಮುಂದೆ ಹಾಜರು ಪಡಿಸಬೇಕು. ಈ ವಿಚಾರಣೆಯ ವಿಸ್ತೃತ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು. ಪ್ರಕರಣದ ತನಿಖಾಧಿಕಾರಿಗಳು, ವಿಡಿಯೊ ಮತ್ತು ಫೋಟೊಗಳನ್ನು ಬಹಿರಂಗಪಡಿಸಬಾರದು ಎಂದು ಸಿಐಡಿ ಅಧಿಕಾರಿಗಳಿಗೆ ನ್ಯಾಯಾಲಯ ಸೂಚಿಸಿದೆ.

ನಾಯ್ಡು ಅವರು ವಿಡಿಯೊ ಲಿಂಕ್ ಮೂಲಕ ವಿಚಾರಣೆಗೆ ಹಾಜರಾಗಿದ್ದರು. ಈ ವೇಳೆ, ಮಾಡದ ತಪ್ಪಿಗಾಗಿ ತಮ್ಮನ್ನು ಶಿಕ್ಷಿಸಲಾಗುತ್ತಿದೆ ಎಂದು ನ್ಯಾಯಾಧೀಶರಿಗೆ ಹೇಳಿದರು. ಆಗ, ನಾಯ್ಡು ಅವರನ್ನು ಕಾನೂನಿನ ಕಾರ್ಯವಿಧಾನದ ಪ್ರಕಾರ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ನ್ಯಾಯಾಧೀಶೆ ತಿಳಿಸಿದರು.

ಕೌಶಲ ಅಭಿವೃದ್ಧಿ ನಿಗಮದ ಹಣ ದುರ್ಬಳಕೆಯಿಂದಾಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ₹300 ಕೋಟಿಗೂ ಹೆಚ್ಚು ನಷ್ಟವಾಗಿದೆ ಎನ್ನಲಾಗಿದ್ದು, ಈ ಪ್ರಕರಣ ಸಂಬಂಧ ಸೆ.9ರಂದು ನಾಯ್ಡು ಅವರನ್ನು ಬಂಧಿಸಲಾಗಿದೆ.

# ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಕಾಶ್ಮೀರ ವಿಷಯ ಪ್ರಸ್ತಾಪಿಸಿದ ಪಾಕ್

ವಿಶ್ವಸಂಸ್ಥೆ (ಪಿಟಿಐ): ಪಾಕಿಸ್ತಾನದ ಉಸ್ತುವಾರಿ ಪ್ರಧಾನಿ ಅನ್ವರ್ ಉಲ್ ಹಕ್ ಕಾಕರ್ ಅವರು ಶುಕ್ರವಾರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಜಮ್ಮು- ಕಾಶ್ಮೀರ ವಿಷಯ ಉಲ್ಲೇಖಿಸಿದ್ದಾರೆ.

'ಭಾರತ– ಪಾಕಿಸ್ತಾನದ ನಡುವೆ ಶಾಂತಿ ಸ್ಥಾಪನೆಗೆ ಕಾಶ್ಮೀರ ವಿಷಯವೇ ನಿರ್ಣಾಯಕ' ಎಂದು ಪ್ರತಿಪಾದಿಸಿದ್ದಾರೆ. ವಿಶ್ವಸಂಸ್ಥೆ ಸಾಮಾನ್ಯ ಸಭೆಯ 78ನೇ ಅಧಿವೇಶನ ಉದ್ದೇಶಿಸಿ ಮಾತನಾಡಿದ ಕಾಕರ್ ಅವರು, 'ಭಾರತ ಸೇರಿದಂತೆ ತನ್ನ ನೆರೆಯ ರಾಷ್ಟ್ರಗಳ ಜೊತೆಗೆ ಶಾಂತಿಯುತ ಮತ್ತು ಫಲಪ್ರದವಾದ ಬಾಂಧವ್ಯವನ್ನು ಹೊಂದಲು ಬಯಸುತ್ತದೆ. ಕಾಶ್ಮೀರ ಕುರಿತ ತನ್ನ ನಿರ್ಣಯ ಜಾರಿಗೊಳಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಒತ್ತು ನೀಡಬೇಕು ಎಂದರು.

# 'ಸೇನೆಯ ಆಡಳಿತಾತ್ಮಕ ಮೇಲ್ವಿಚಾರಣೆ ಅಸಾಧ್ಯ'

ನವದೆಹಲಿ: 'ಭಾರತೀಯ ಸೇನೆಯ ಆಡಳಿತಾತ್ಮಕ ವಿಷಯಗಳ ಮೇಲ್ವಿಚಾರಣೆಯನ್ನು ಸುಪ್ರೀಂಕೋರ್ಟ್ ನಿಭಾಯಿಸುವುದಿಲ್ಲ. ಕಾನೂನಾತ್ಮಕ ಅಂಶಗಳನ್ನು ಒಳಗೊಂಡ ವಿಷಯಗಳಿದ್ದಲ್ಲಿ ಮಾತ್ರ ಮಧ್ಯಪ್ರವೇಶಿಸಲಿದೆ' ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

ಸಾಮಾನ್ಯವಾಗಿ ಮೇಜರ್ ನೇತೃತ್ವ ವಹಿಸಬಹುದಾದ ಯೋಧರ ತುಕಡಿಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ತಮಗೆ ನೀಡಲಾಗಿದೆ ಎಂದು ದೂರಿ ಮಹಿಳಾ ಕರ್ನಲ್ ಒಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಈ ಮಾತು ಹೇಳಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು. ಕೇಂದ್ರದ ಪರ ಹಾಜರಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, 'ಪ್ರಕರಣ ಹಲವು ಸಂಗತಿಗಳನ್ನು ಒಳಗೊಂಡಿದೆ. ಇದನ್ನು ಸಶಸ್ತ್ರ ಪಡೆಗಳ ನ್ಯಾಯಮಂಡಳಿಗೆ (ಎಎಫ್‌ಟಿ) ವರ್ಗಾಯಿಸಬೇಕು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಅರ್ಜಿದಾರರ ಪರ ವಕೀಲೆ ಮೀನಾಕ್ಷಿ ಅರೋರಾ, 'ಮಹಿಳೆಯರು 2020ರಿಂದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಯಾವುದೇ ಮಹಿಳಾ ಅಧಿಕಾರಿಗೆ ಈ ವರೆಗೆ ಬಡ್ತಿ ನೀಡಲಾಗಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಈ ಪ್ರಕರಣದಲ್ಲಿ, ಮಹಿಳಾ ಅಧಿಕಾರಿಯನ್ನು ಪೂರ್ಣಾವಧಿಗೆ ನೇಮಕ ಮಾಡಲಾಗಿದೆ. ಅವರು ಕರ್ನಲ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಇದು ಅವರಿಗೆ ಮಾಡಲಾದ ಭಾರಿ ಅವಮಾನ' ಎಂದೂ ಅರೋರಾ ಹೇಳಿದರು.

'ಸಾಮಾನ್ಯವಾಗಿ, ನಿರ್ದಿಷ್ಟ ಸಂಖ್ಯೆಯ ಜೂನಿಯರ್ ಕಮಿಷನ್ಡ್ ಆಫೀಸರ್ಸ್ (ಜೆಸಿಒ) ಇರುವ ತುಕಡಿಯನ್ನು ಮುನ್ನಡೆಸುವ ಹುದ್ದೆಯಲ್ಲಿ ಕರ್ನಲ್ ಇರುತ್ತಾರೆ. ಇತರ ಅಧಿಕಾರಿಗಳು ಅವರ ಅಧೀನದಲ್ಲಿ ಇರುತ್ತಾರೆ' ಎಂದೂ ತಿಳಿಸಿದರು.

'ಸಂಬಂಧಪಟ್ಟ ಪ್ರಾಧಿಕಾರಗಳು ಇಂತಹ ವಿಷಯ ಪರಿಶೀಲಿಸ ಬೇಕು' ಎಂದು ವೆಂಕಟರಮಣಿ ಅವರನ್ನು ಉದ್ದೇಶಿಸಿ ಹೇಳಿದ ಪೀಠ, ಪ್ರತಿಕ್ರಿಯೆ ಸಲ್ಲಿಸುವಂತೆ ಪ್ರತಿವಾದಿಗಳಿಗೆ ನಿರ್ದೇಶನ ನೀಡಿತು. ಅಲ್ಲದೇ, ತಮ್ಮ ದೂರುಗಳನ್ನು ಒಳಗೊಂಡ ಮನವಿಯನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಅರ್ಜಿದಾರರಿಗೆ ಸೂಚಿಸಿತು.

# 'ಎನ್‌ಸಿಪಿಯ 10 ಶಾಸಕರ ಸದಸ್ಯತ್ವ ರದ್ದುಪಡಿಸಿ'

ಮುಂಬೈ (ಪಿಟಿಐ): ಶರದ್ ಪವಾರ್ ನೇತೃತ್ವದ ಬಣದ ಜೊತೆಗೆ ಗುರುತಿಸಿಕೊಂಡಿರುವ ಎನ್‌ಸಿಪಿಯ 10 ಶಾಸಕರ ಸದಸ್ಯತ್ವ ರದ್ದುಪಡಿಸಲು ಕೋರಿ ಪಕ್ಷದ ಅಜಿತ್ ಪವಾರ್ ನೇತೃತ್ವದ ಬಣ ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ಅವರಿಗೆ ಮನವಿ ಸಲ್ಲಿಸಿದೆ.

ಅಜಿತ್ ಬಣದ ಮುಖ್ಯ ಸಚೇತಕರಾಗಿರುವ ಅನಿಲ್ ಭಾಯಿದಾಸ್ ಪಾಟೀಲ ಶುಕ್ರವಾರ ಈ ಸಂಬಂಧ ಅರ್ಜಿಯನ್ನು ಸಲ್ಲಿಸಿದರು.

ಅಜಿತ್‌ಪವಾರ್ ನೇತೃತ್ವದ ಬಣದ ಜೊತೆಗೆ ಗುರುತಿಸಿಕೊಂಡಿರುವ 40 ಶಾಸಕರ ಸದಸ್ಯತ್ವವನ್ನು ರದ್ದುಪಡಿಸಬೇಕು ಎಂದು ಕೋರಿ ಶರದ್ ಪವಾರ್ ನೇತೃತ್ವದ ಬಣವು ಈಗಾಗಲೇ ಸ್ಪೀಕರ್ ಅವರಿಗೆ ಮನವಿಯನ್ನು ಸಲ್ಲಿಸಿದೆ.

ಶಾಸಕರಾದ ಜಯಂತ್ ಪಾಟೀಲ, ಜಿತೇಂದ್ರ ಅವ್ಹಾದ್, ರಾಜೇಶ್ ಟೋಪೆ, ರೋಹಿತ್ ಪವಾರ್, ಅನಿಲ್ ದೇಶಮುಖ್, ಪ್ರಜಕ್ತ್ ತಾನ್ಪುರೆ, ಬಾಳಾಸಾಹೇಬ್ ಪಾಟೀಲ, ಸುನಿಲ್ ಭೂಸಾರ, ಸಂದೀಪ್ ಕ್ಷೀರಸಾಗರ್, ಸುಮನ್ ಪಾಟೀಲ್ ಅವರನ್ನು ವಿಧಾನಸಭೆಯ ಸದಸ್ಯತ್ವದಿಂದ ಅನರ್ಹಗೊಳಿಸಬೇಕು ಎಂದು ಅರ್ಜಿಯಲ್ಲಿ ಅನಿಲ್ ಭಾಯಿದಾಸ್ ಪಾಟೀಲ ಕೋರಿದ್ದಾರೆ.

288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಎನ್‌ಸಿಪಿ 53 ಸದಸ್ಯರನ್ನು ಹೊಂದಿದೆ. ಜುಲೈ 2ರಂದು ಎನ್‌ಸಿಪಿ ಇಬ್ಭಾಗವಾಗಿತ್ತು. ಅಜಿತ್ ಪವಾರ್ ನೇತೃತ್ವದಲ್ಲಿ ಎಂಟು ಶಾಸಕರು ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಮೈತ್ರಿ ಸರ್ಕಾರವನ್ನು ಸೇರಿದ್ದರು. ಅಜಿತ್ ಪವಾರ್ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ್ದರು.


**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಜಯನಗರ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 39ನೇ ಅಡ್ಡರಸ್ತೆ, 18ನೇ ಮುಖ್ಯ ರಸ್ತೆ, ಜಯನಗರ – 4ನೇ "ಟಿ" ಬ್ಲಾಕ್, ಬೆಂಗಳೂರು – 560041
ಇ–ಮೇಲ್ : eejayanagarbbmp@gmail.com ದೂ.: 8022975711
ಸಂ. ಕಾಅ(ಜ)/ಡಿಎಂ/ಇ–ಪ್ರೊಕ್/06/2023–24 ದಿನಾಂಕ : 22–09–2023

**ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ**
(ದ್ವಿಲಕೋಟೆ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರು ಕೆಳಕಂಡ ಕೋಷ್ಠಕದಲ್ಲಿ ವಿವರಿಸಲಾದ ನಿರ್ಮಾಣ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಥವಾ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ ಅಥವಾ ರಾಜ್ಯ ಸರ್ಕಾರದ ಇತರ ಯಾವುದೇ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ) | ಇಎಂಡಿ (ರೂ.) |
|---|---|---|---|
| 1 | ವಾರ್ಡ್ ಸಂ.169 ಭೈರಸಂದ್ರದಲ್ಲಿ 2023–24ನೇ ವರ್ಷಕ್ಕಾಗಿ ರಸ್ತೆ, ಗಟಾರಗಳು ಮತ್ತು ಪಾದಚಾರಿ ಮಾರ್ಗದ ನಿರ್ವಹಣಾ ಕಾಮಗಾರಿ (ಕರೆ–2) **ದರ್ಜೆ : ಇತರೆ** | 55.00 | 1,10,000/– |
| 2 | ವಾರ್ಡ್ ಸಂ.170 ಜಯನಗರ ಪೂರ್ವದಲ್ಲಿ 2023–24ನೇ ವರ್ಷಕ್ಕಾಗಿ ರಸ್ತೆ, ಗಟಾರಗಳು ಮತ್ತು ಪಾದಚಾರಿ ಮಾರ್ಗದ ನಿರ್ವಹಣಾ ಕಾಮಗಾರಿ (ಕರೆ–2) **ದರ್ಜೆ : ಪ. ಜಾತಿ** | 55.00 | 55,000/– |
| 3 | ವಾರ್ಡ್ ಸಂ.171 ಗುರಪ್ಪನಪಾಳ್ಯದಲ್ಲಿ 2023–24ನೇ ವರ್ಷಕ್ಕಾಗಿ ರಸ್ತೆ, ಗಟಾರಗಳು ಮತ್ತು ಪಾದಚಾರಿ ಮಾರ್ಗದ ನಿರ್ವಹಣಾ ಕಾಮಗಾರಿ (ಕರೆ–2) **ದರ್ಜೆ : ಪ. ಪಂಗಡ** | 55.00 | 55,000/– |
| 4 | ವಾರ್ಡ್ ಸಂ.177 ಜೆ.ಪಿ.ನಗರದಲ್ಲಿ 2023–24ನೇ ವರ್ಷಕ್ಕಾಗಿ ರಸ್ತೆ, ಗಟಾರಗಳು ಮತ್ತು ಪಾದಚಾರಿ ಮಾರ್ಗದ ನಿರ್ವಹಣಾ ಕಾಮಗಾರಿ (ಕರೆ–2) **ದರ್ಜೆ : ಇತರೆ** | 55.00 | 1,10,000/– |
| 5 | ವಾರ್ಡ್ ಸಂ.178 ಸಾರಕ್ಕಿಯಲ್ಲಿ 2023–24ನೇ ವರ್ಷಕ್ಕಾಗಿ ರಸ್ತೆ, ಗಟಾರಗಳು ಮತ್ತು ಪಾದಚಾರಿ ಮಾರ್ಗದ ನಿರ್ವಹಣಾ ಕಾಮಗಾರಿ (ಕರೆ–2) **ದರ್ಜೆ : ಇತರೆ** | 55.00 | 1,10,000/– |
| 6 | ವಾರ್ಡ್ ಸಂ.179 ಶಾಕಾಂಬರಿನಗರದಲ್ಲಿ 2023–24ನೇ ವರ್ಷಕ್ಕಾಗಿ ರಸ್ತೆ, ಗಟಾರಗಳು ಮತ್ತು ಪಾದಚಾರಿ ಮಾರ್ಗದ ನಿರ್ವಹಣಾ ಕಾಮಗಾರಿ (ಕರೆ–2) **ದರ್ಜೆ : ಪ.ಜಾತಿ** | 55.00 | 55,000/– |
| 7 | ಚಿಕ್ಕನಾಗಮಂಗಲ ಸಂಸ್ಕರಣಾ ಘಟಕದಿಂದ ಸಂಸ್ಕರಣಾ ತ್ಯಾಜ್ಯವನ್ನು ವಾಹನಗಳನ್ನು ಬಳಸಿ ಬೃಬೆಂಮಪಾ ಉಳ್ಳಲಿ ಲ್ಯಾಂಡ್‌ಫಿಲ್ ಪ್ರದೇಶಕ್ಕೆ ಸಾಗಿಸುವುದಕ್ಕಾಗಿ ಗೋಷ್ವಾರೆ **ದರ್ಜೆ : ಇತರೆ** | 89.00 | 1,78,000/– |

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ : **05–10–2023 ರಂದು 16.00 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗೆ ಅನುಸಾರವಾಗಿ ಟೆಂಡರ್‌ಗಳನ್ನು ತೆರೆಯಲಾಗುವುದು. (2) ಬಿಡ್ಡಿಂಗ್ ದಾಖಲೆಯ "ಬಿಡ್ಡುದಾರರಿಗೆ ಸೂಚನೆಗಳು" ನಲ್ಲಿ ಇರುವಂತೆ ಸಮಸ್ಯೆಗಳನ್ನು ಸ್ಪಷ್ಟೀಕರಿಸಲು ಮತ್ತು ಆ ಸಮಯದಲ್ಲಿ ಉಂಟಾಗುವ ಯಾವುದೇ ಪ್ರಶ್ನೆಗಳಿಗೆ ಉತ್ತರಿಸಲು ಬಿಡ್–ಪೂರ್ವ ಸಭೆಯನ್ನು ಮುಖ್ಯ ಅಭಿಯಂತರರು (ದಕ್ಷಿಣ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 9ನೇ ಮುಖ್ಯ ರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560011 ಇಲ್ಲಿ ದಿನಾಂಕ : **30–09–2023 ರಂದು 15:00 ಗಂಟೆಗೆ** ನಡೆಸಲಾಗುವುದು. (3) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಛೇರಿ, ಜಯನಗರ ವಿಭಾಗ ಇಲ್ಲಿ ವೆಬ್‌ಸೈಟ್ **https://eproc.karnataka.gov.in** ನಲ್ಲಿ ದಿನಾಂಕ : **06–10–2023 ರಂದು 16:30 ಗಂಟೆಗೆ** ತೆರೆಯಲಾಗುವುದು.
ವಿವರಗಳು, ನೋಂದಣಿ ಮತ್ತು ಇ–ಪಾವತಿಯ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in** ಗೆ ಭೇಟಿ ನೀಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–23010900, 080–23010901, 080–38013000 ಗೆ ಸಂಪರ್ಕಿಸಿ.
ಸಹಿ/– ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬೃ.ಬೆಂ.ಮ.ಪಾ.



**ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು**
ಬೆಳಗುಂಬ ರಸ್ತೆ, ತುಮಕೂರು–572103.
ಫ್ಯಾಕ್ಸ್ : 0816–2255761 ದೂರವಾಣಿ : 2272280
email: tudatmk2009@yahoo.co.in Website: tuda.co.in,
ಸಂಖ್ಯೆ:ಟಿಯುಡಿಎ/ಆಯುಕ್ತರು/ಪತ್ರಿಕಾ ಭವನ/2023–24 ದಿನಾಂಕ: 20.09.2023

**ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಅದ್ಯಾದೇಶ 1999–2000 ರಂತೆ ಬಿಡ್ ಡಾಕ್ಯುಮೆಂಟ್ ರೀತ್ಯಾ ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ Supplying & Fixing of Basic Infrastructure Materils to PATRIKHA BHAVAN TUMKUR ಅರ್ಹ ಗುತ್ತಿಗೆದಾರರಿಂದ/ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (ವೆಬ್‌ಸೈಟ್ ವಿಳಾಸ: Kppp.karnataka.gov.in) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ನಿಗಧಿಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸುವುದು.
ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ : 20.09.2023 ರಿಂದ ದಿ. 05.10.2023 ವೇಳೆ 17.00 ಗಂಟೆಯವರೆಗೆ. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.10.2023ವೇಳೆ 17.00 ಗಂಟೆಯವರೆಗೆ. ಟೆಂಡರ್ ತೆರೆಯುವ ಸಮಯ ಮತ್ತು ದಿನಾಂಕ : 07.10.2023 ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.
ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.



ಕರ್ನಾಟಕ ಸರ್ಕಾರ
**ಲೋಕೋಪಯೋಗಿ ಇಲಾಖೆ**
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 08022122856

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 02/2023–24**
**ದಿನಾಂಕ: 21.09.2023**

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000ರನ್ವಯ ಕೆಡಬ್ಲ್ಯೂ–4 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in) ಪಿಡಬ್ಲ್ಯೂಡಿಯಲ್ಲಿ ನೊಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

| ಕ್ರ ಸಂ | ಕಾಮಗಾರಿಯ ಹೆಸರು | ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ |
|---|---|---|
| 1 | Reconstruction of Sri Varaprasadha Anjaneyaswamy Temple work in Sri Banashankari Temple premises at S, Kariyappa road, Bangalore. **PWD/2023-24/BD/WORK_INDENT1415** | 6,12,95,859.23 |

ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ : 24 ತಿಂಗಳು, ಗುತ್ತಿಗೆದಾರರ ದರ್ಜೆ: 1ನೇ ದರ್ಜೆ ಮೇಲ್ಪಟು, ಮೀಸಲಾತಿ ಹಂಚಿಕೆ: ಇತರೆ.
1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಯಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ: 23.09.2023 ರಿಂದ 05.10.2023 ಸಂಜೆ 4.30 ಗಂಟೆಯವರೆಗೆ
2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 07.10.2023 ಸಂಜೆ 4.30 ಗಂಟೆಯವರೆಗೆ.
3) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕಃ 09.10.2023 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು
DIPR/CP/1405/Zen/2023-24



ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ ಇವರ ಕಾರ್ಯಾಲಯ.**
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:ಕೋಟೇಶನ್::2023–24:1744 ದಿನಾಂಕ:21–09–2023.

**ಕೋಟೇಶನ್ ಆಹ್ವಾನಿಸುವ ಕುರಿತು**

2023–24ನೇ ಸಾಲಿಗೆ ಕೊಪ್ಪಳ ತಾಲೂಕಿನ ಹುಲಗಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಸ್ಥಾನದ ಹಳೇ ಕಟ್ಟಡವನ್ನು ತೆರವುಗೊಳಿಸಿ ಹೊಸದಾಗಿ ಚಿಕ್ಕಬಳ್ಳಾಪುರ/ದೊಡ್ಡಬಳ್ಳಾಪುರ ಗ್ರಾನೈಟ್ ಕಲ್ಲಿನ ಅಥವಾ ಸಮಾನಾಂತರ ಮಾದರಿಯ ಗ್ರಾನೈಟ್ ಸೈಜ್ 5 ರಿಂದ 6 ಘ.ಮೀ. ಸಾಮರ್ಥ್ಯದ ಬ್ಲಾಕ್‌ಗಳನ್ನು ಹುಲಗಿ ದೇವಸ್ಥಾನದ ಪರಿಮಿತಿಗೆ ಸಾಗಿಸುವುದು ಹಾಗೂ ಬೇಕಾದ ಸೈಜ್‌ಗೆ ಕಟ್ಟಿಂಗ್ ಮಾಡುವುದಕ್ಕೆ ದರಗಳನ್ನು ಸಲ್ಲಿಸಲು ಕೋಟೇಶನ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಏಜನ್ಸಿಯವರು ದಿನಾಂಕ: 29–09–2023 ರೊಳಗಾಗಿ ಈ ಕಛೇರಿಗೆ ಹಾಜರಾಗಿ ಕೋಟೇಶನ್‌ಗಳನ್ನು ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು ಹಾಗೂ ಮೊಬೈಲ್ ಸಂಖ್ಯೆ: **9448868074** ರಿಂದ ಪಡೆಯಬಹುದು.
**ಷರತ್ತುಗಳು:– 1.ದರಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. 2.ನಿಗದಿತ ಸಮಯದ ನಂತರ ಬರುವ ಕೋಟೇಶನ್‌ಗಳನ್ನು ಪರಿಗಣಿಸಲಾಗುವುದಿಲ್ಲ. 3.ಸಲ್ಲಿಸಲಾಗಿರುವ ಕೋಟೇಶನ್‌ಗಳಲ್ಲಿ ಕಡಿಮೆ ದರವಿರುವ ಕೋಟೇಶನ್ ನ್ನು ಅಂಗೀಕರಿಸಲಾಗುವುದು.**
ಯಾವುದೇ ಕೋಟೇಶನ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಅಥವಾ ಹಿಂತೆಗೆದುಕೊಳ್ಳುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/155/ಕೆಎಸ್‌ಎಂಸಿಎ/2023–24



ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ.**
ಸಂಖ್ಯೆ : ಗ್ರಾ.ಕು.ನೀ.ಮತ್ತುನೈ.ವಿ./ಬಾಗಲಕೋಟೆ/ಪಿಬಿ–4/ಟೆಂಡರ್/2023–24/749
ದಿನಾಂಕ : 21–09–2023

**ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ)**

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ **ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ** ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಯ ವಿವರ ಈ ಕೆಳಗಿನಂತಿದೆ.
1) Indent No - 4139 (Ilkal Taluka Gorabal) APT-63.61 Lakhs
2) Indent No - 4137 (Ilkal Taluka Hiresinganaguthi) APT-57.42 Lakhs
3) Indent No - 4135 (Ilkal Taluka Herur) APT-33.38 Lakhs
4) Indent No - 4108 (Ilakal Ingalagi) APT-21.73 Lakhs (SC Category)

**1) ಲೆಕ್ಕ ಶೀರ್ಷಿಕೆ : 2215 – ಜಲ ಜೀವನ ಮೀಷನ್, 2) ಗುತ್ತಿಗೆದಾರರ ಅರ್ಹತೆ : ಕಾಮಗಾರಿ ಕ್ರ. ಸಂ. 1 ರಿಂದ 3 ರವರೆಗೆ 3ನೇ ದರ್ಜೆ ಹಾಗೂ ಮೇಲ್ಪಟ್ಟ & ಕಾಮಗಾರಿ ಕ್ರ. ಸಂ. 4ಕ್ಕೆ – 4ನೇ ದರ್ಜೆ ಹಾಗೂ ಮೇಲ್ಪಟ್ಟ, 3) ಟೆಂಡರ್ ಪಾರಂ ಪಡೆಯುವ ದಿನಾಂಕ : 21–09–2023 ರಿಂದ 03–10–2023 ರವರೆಗೆ, 4) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಕೆಪಿಪಿಪಿ ಪೋರ್ಟಲ್ ಪ್ರಕಾರ, 5) ಟೆಂಡರ್ ಪಾರಂ ಸಲ್ಲಿಸುವ ಅಂತಿಮ ದಿನಾಂಕ : 03–10–2023 ಸಾಯಂಕಾಲ 5.30 ಗಂಟೆಯವರೆಗೆ, 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 05–10–2023 ಮುಂಜಾನೆ 11.00 ಗಂಟೆಯ ನಂತರ, 7) ಆರ್ಥಿಕ ಬಿಡ್ ತೆರೆಯುವ ದಿನಾಂಕ : 05–10–2023 ಮುಂಜಾನೆ 11.00 ಗಂಟೆಯ ನಂತರ (ಸಿಂಗಲ್ ಕವರ ಟೆಂಡರ್) & 10–10–2023 ಮುಂಜಾನೆ 11.00 ಗಂಟೆಯ ನಂತರ (ಟೂ ಕವರ ಟೆಂಡರ್), 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ, 9) ಅಂತರ್ಜಾಲ ತಾಣದ ವಿಳಾಸ www.kppp.portal**

ಟಿಪ್ಪಣೆ :– 1) ಟೆಂಡರ್ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDR ನ್ನು ಕಾರ್ಯನಿರ್ವಾಹಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಟೆಂಡರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ್ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ. 2) ಗುತ್ತಿಗೆ ಮೊತ್ತಕ್ಕೆ 18% ಜಿ.ಎಸ್.ಟಿ.ಯನ್ನು ಪ್ರತ್ಯೇಕ ಸೇರಿಸಿ ಕೆಲಸದ ಆದೇಶದಲ್ಲಿ ನೀಡಲಾಗುವುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾ.ಕು.ನೀ.&ನೈ. ವಿಭಾಗ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/128/ಮಣಿಪಾಲ್/2023–24



**ಸಮಗ್ರ ಶಿಕ್ಷಣ – ಕರ್ನಾಟಕ**
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560001.
ಸಂಖ್ಯೆ: ಸಶಿಕ/ಸ.ಶಾ/ಪ್ರೋಟೋಕಾಲ್/2023–24 ದಿನಾಂಕ: 22.09.2023

**ಮರು–ಟೆಂಡರ್ ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಮಗ್ರ ಶಿಕ್ಷಣ–ಕರ್ನಾಟಕ ವತಿಯಿಂದ ನಡೆಯುವ ಸಭೆಗಳಿಗೆ ಊಟೋಪಚಾರದ ಸೇವೆಗಾಗಿ ಅರ್ಹ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 05.10.2023ರ ಸಂಜೆ 5:00 ಗಂಟೆಯವರೆಗೆ.**
ವಿವರಗಳಿಗಾಗಿ: **http://kppp.karnataka.gov.in** ಗಮನಿಸುವುದು.
ಸಹಿ/–
ನಿರ್ದೇಶಕರು(ಕಾರ್ಯಕ್ರಮ)
ಸಮಗ್ರ ಶಿಕ್ಷಣ –ಕರ್ನಾಟಕ
ವಾಸಾಸಂಇ/ವಾಪ್ರ/ಜಿಎ/1397/2023–24



**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in
ಸಂಖ್ಯೆ: ಅಸಂನಿ/ಇ.ಗ್ರೇ./ಟೆಂಡರ್/ಸಿಆರ್–01/2023–24 ದಿನಾಂಕ: 20–09–2023

**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ**

**2023–24ನೇ ಸಾಲಿಗೆ Integrated course (BA, B.Com ಪದವಿ ಜೊತೆ IAS/KAS) ತರಬೇತಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಮಾನ್ಯತೆ ಪಡೆದ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಮರುಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.**
**(1) ಟೆಂಡರ್ ಪ್ರಕಟಣೆಯ ದಿನಾಂಕ: 22.09.2023, (2) ಟೆಂಡರ್ ಮೊತ್ತ: ರೂ. 846.00 ಲಕ್ಷಗಳು, (3) ಇ.ಎಂ.ಡಿ ಮೊತ್ತ: ರೂ. 12.69 ಲಕ್ಷಗಳು, (4) ಟೆಂಡರ್ ಕುರಿತು ಪೂರ್ವಭಾವಿ ಸಭೆ: ದಿನಾಂಕ : 25.09.2023 ಬೆಳಗ್ಗೆ 11.30 ಗಂಟೆಗೆ (5) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 29.09.2023 ಸಂಜೆ 5.30 ಗಂಟೆಯೊಳಗೆ (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 03.10.2023 ಬೆಳಗ್ಗೆ 11.30 ಗಂಟೆಗೆ (7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 05.10.2023 ಬೆಳಗ್ಗೆ 11.30 ಗಂಟೆಗೆ (ತಾತ್ಕಾಲಿಕ) (8) ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: ಮೌಲಾನಾ ಆಜಾದ್ ಭವನ, ನಂ.16 ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–52. (9) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–22535902, 080–22535912.**
ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/–
ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
DIPR/CP/1389/Zen/2023-24



**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು ದೂ:0816–2278387**
Email: dhotumkur@gmail.com ph:0816-2278387
ಸಂ:ಜಿಆತು/ವಾವಿ/06/2023–24 ದಿನಾಂಕ: 15.09.2023

**ಅಲ್ಪಾವಧಿ ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ**

ವಿಷಯ: ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಬಾಡಿಗೆಗೆ ಪಡೆಯುವ ಬಗ್ಗೆ.
ತುಮಕೂರು ಜಿಲ್ಲೆಯಲ್ಲಿನ ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳ ದೈನಂದಿನ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆ ಆದಾರದ ಮೇರೆಗೆ ಬಾಡಿಗೆ ವಾಹನಗಳನ್ನು (ಚಾಲಕರ ಸಮೇತ) ಪಡೆಯುವ ಸಂಬಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಟೆಂಡರ್‌ದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು ಆಸಕ್ತಿಯುಳ್ಳ ಟೆಂಡರ್‌ದಾರರು https://eproc.karnataka.gov.in ವೆಬ್‌ಸೈಟ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರ ಅವಶ್ಯಕತೆ ಇದ್ದಲ್ಲಿ ಈ ಕಚೇರಿಯ ದೂರವಾಣಿ ಸಂಖ್ಯೆ:0816–2278387 ನ್ನು ಸಂಪರ್ಕಿಸಬಹುದು.
**ಟೆಂಡರ್ ದಾಸ್ತಾವೇಜುಗಳನ್ನು ಪಡೆಯುವ ವಿಧಾನ:**
1. ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ:16.09.2023 ರಿಂದ 2. ಇ–ಪ್ರೂಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಭರ್ತಿಮಾಡಲಾದ ಟೆಂಡರ್ ದಾಸ್ತಾವೇಜುಗಳನ್ನು ಅಪ್‌ಲೋಡ್ ಮಾಡಬೇಕಾದ ದಿನಾಂಕ:30–09–2023. 3. ಟೆಂಡರ್ ಅಂದಾಜು ಮೊತ್ತ ರೂ 53.00/– ಲಕ್ಷಗಳು
**ಸಹಿ/–** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.
DIPR/TUM/194/KSMCA/2023-24

ಡ್ಯಾನಿಶ್ ಅಲಿ ವಿರುದ್ಧದ ಹೇಳಿಕೆಗೆ ವಿಪಕ್ಷಗಳ ಆಕ್ರೋಶ, ಕಠಿಣ ಕ್ರಮದ ಎಚ್ಚರಿಕೆ ನೀಡಿದ ಸ್ಪೀಕರ್

# ರಮೇಶ್ ಬಿಧೂಡಿಗೆ ಷೋಕಾಸ್ ನೋಟಿಸ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಸಂಸತ್ತಿನಲ್ಲಿ ಬಿಎಸ್‌ಪಿ ಸಂಸದ ಡ್ಯಾನಿಷ್ ಅಲಿ ಅವರ ಬಗ್ಗೆ ಬಿಜೆಪಿಯ ರಮೇಶ್ ಬಿಧೂಡಿ ಅವರು ನೀಡಿರುವ ಹೇಳಿಕೆಯು ಭಾರಿ ಕೋಲಾಹಲ ಎಬ್ಬಿಸಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ ಲೋಕ ಸಭಾ ಸ್ಪೀಕರ್ ಓಂ ಬಿರ್ಲಾ ಕಠಿಣ ಕ್ರಮದ ಎಚ್ಚರಿಕೆ ನೀಡಿ, ಅವರ ಹೇಳಿಕೆಗಳನ್ನು ದಾಖಲೆಗಳಿಂದ ತೆಗೆದು ಹಾಕಿಸಿದ್ದಾರೆ.

ವಿರೋಧ ಪಕ್ಷಗಳಿಂದ ಭಾರಿ ಟೀಕೆ ವ್ಯಕ್ತವಾದ ಕಾರಣ ಬಿಧೂಡಿಗೆ ಪಕ್ಷವು ಷೋಕಾಸ್ ನೋಟಿಸ್ ಜಾರಿ ಮಾಡಿ, 15 ದಿನಗಳಲ್ಲಿ ವಿವರಣೆ ನೀಡುವಂತೆ ಕೇಳಿದೆ.

ಚಂದ್ರಯಾನದ ಯಶಸ್ಸಿನ ಕುರಿತು ಗುರುವಾರ ರಾತ್ರಿ ಲೋಕಸಭೆಯಲ್ಲಿ ನಡೆದ ಚರ್ಚೆಯ ವೇಳೆ ಬಿಧೂಡಿ ನೀಡಿದ ಆಕ್ಷೇಪಾರ್ಹ ಹೇಳಿಕೆಗಳನ್ನು ಬಿರ್ಲಾ ಅವರು ಗಂಭೀರವಾಗಿ ಪರಿಗಣಿಸಿದ್ದಾರೆ ಮತ್ತು ಭವಿಷ್ಯದಲ್ಲಿ ಇಂತಹ ನಡವಳಿಕೆ ಪುನರಾವರ್ತನೆಯಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸುವಂತೆ ಕೋರಿ ಓಂ ಬಿರ್ಲಾ ಅವರಿಗೆ ಬಿಎಸ್‌ಪಿ ಸಂಸದರು ಪತ್ರ ಬರೆದಿದ್ದಾರೆ. ಘಟನೆ ಬಗ್ಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಿಷಾದ ವ್ಯಕ್ತಪಡಿಸಿದ್ದಾರೆ.

ಈ ನಡುವೆ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಅಲಿ ಅವರನ್ನು ಭೇಟಿಯಾಗಿ, ಬೆಂಬಲ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಎನ್‌ಸಿಪಿಯ ಸುಪ್ರಿಯಾ ಸುಳೆ ಮತ್ತು ತೃಣಮೂಲ ಕಾಂಗ್ರೆಸ್‌ನ ಅಪರೂಪ್ ಪೊದ್ದಾರ್ ಅವರು ಬಿರ್ಲಾ ಅವರಿಗೆ ಪತ್ರ ಬರೆದು ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸುವಂತೆ ಕೋರಿದರು.

ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ಹಲವು ನಾಯಕರು ಡ್ಯಾನಿಶ್ ಅಲಿ ಅವರ ಬೆಂಬಲಕ್ಕೆ ನಿಂತಿದ್ದಾರೆ. ದ್ವೇಷ ಭಾಷಣಕ್ಕೆ ಅವಕಾಶವಿಲ್ಲ, ಬಿಧೂಡಿ ಅವರನ್ನು ಬಂಧಿಸಬೇಕು ಎಂದು ಸಿಪಿಎಂ ಒತ್ತಾಯಿಸಿದರೆ, ಕೂಡಲೇ ಅವರನ್ನು ಸದನದಿಂದ ಅಮಾನತುಗೊಳಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಅವರು ಈ ರೀತಿ ಮಾತನಾಡದಂತೆ ತಡೆಯುವ ಬದಲು ಸಂಸದರಾದ ಹರ್ಷವರ್ಧನ್ ಮತ್ತು ರವಿಶಂಕರ್ ಪ್ರಸಾದ್ ಅವರು ನಗುತ್ತಿರುವುದು ಅಸಹ್ಯಕರವಾಗಿದೆ ಎಂದು ಎನ್‌ಸಿಪಿ (ಶರದ್ ಪವಾರ್ ಬಣ) ವಕ್ತಾರ ಕ್ಲೈಡ್ ಕ್ರಾಸ್ಟೊ ಹೇಳಿದ್ದಾರೆ. ಬಿಜೆಪಿಯಿಂದ ಅಮಾನತುಗೊಳಿಸಲಾಗುವುದೋ ಅಥವಾ ಅವರಿಗೆ ಬಡ್ತಿ ನೀಡುತ್ತಾರೋ ಎಂದು ಕ್ರಾಸ್ಟೊ ಪ್ರಶ್ನಿಸಿದ್ದಾರೆ.

ಕೆಟ್ಟ ಸಾಮಾಜಿಕ ಮತ್ತು ರಾಜಕೀಯ ಸಂಸ್ಕೃತಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಾರಣರಾಗಿದ್ದಾರೆ ಎಂದು ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಶುಕ್ರವಾರ ಆರೋಪಿಸಿದ್ದಾರೆ.

## ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿ: ಡ್ಯಾನಿಶ್ ಅಲಿ

ರಮೇಶ್ ಬಿಧೂಡಿ ಅವರು ಸದನದಲ್ಲಿ ಆಕ್ಷೇಪಾರ್ಹ ಭಾಷೆ ಬಳಸಿದ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಬೇಕು ಮತ್ತು ತನಿಖೆ ನಡೆಸಬೇಕು ಎಂದು ಕೋರಿ ಡ್ಯಾನಿಷ್ ಅಲಿ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ.

ಆಕ್ಷೇಪಾರ್ಹ ಪದಗಳನ್ನು ಅವರು ಪತ್ರದಲ್ಲಿ ಪಟ್ಟಿ ಮಾಡಿದ್ದಾರೆ.

'ಬಿಧೂಡಿ ತಮ್ಮ ಭಾಷಣದಲ್ಲಿ ನನ್ನ ವಿರುದ್ಧ ಕೆಟ್ಟ ಪದಗಳನ್ನು ಬಳಸಿ ನಿಂದಿಸಿದ್ದಾರೆ. ಇದು ದುರದೃಷ್ಟಕರ. ಸ್ಪೀಕರ್ ಆಗಿ ನಿಮ್ಮ ನಾಯಕತ್ವದಲ್ಲಿ ಹೊಸ ಸಂಸತ್ ಭವನದಲ್ಲಿ ಇದು ನಡೆದಿರುವುದು ಈ ರಾಷ್ಟ್ರದ ಅಲ್ಪಸಂಖ್ಯಾತ ಸದಸ್ಯನಾಗಿ ಮತ್ತು ಚುನಾಯಿತ ಸಂಸತ್ ಸದಸ್ಯನಾಗಿ ನನ್ನ ಮನಸ್ಸಿಗೆ ನೋವು ಉಂಟು ಮಾಡಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ದೇಶದ ವಾತಾವರಣವು ಮತ್ತಷ್ಟು ಹಾಳಾಗದಂತೆ, ಅನುಭವಿ ಸದಸ್ಯರಲ್ಲಿ ಶಿಸ್ತು ಕಾಪಾಡುವಂತೆ ಮಾಡಲು ಇದು ಏಕೈಕ ಮಾರ್ಗವಾಗಿದೆ. ಈ ವಿಷಯದ ಬಗ್ಗೆ ತನಿಖೆಗೆ ಆದೇಶಿಸಬೇಕು ಎಂದು ಮನವಿ ಮಾಡಿದ್ದಾರೆ.

ಬಿಜೆಪಿ ಸಂಸದ ರಮೇಶ್ ಬಿಧೂಡಿ ಮತ್ತು ಬಿಎಸ್‌ಪಿಯ ಡ್ಯಾನಿಶ್ ಅಲಿ ನಡುವೆ ವಾಗ್ವಾದ ನಡೆಯಿತು–ಪಿಟಿಐ ಚಿತ್ರ

> ಬಿಧೂಡಿ ಹೇಳಿಕೆಯು ಸಂಸತ್ತಿನ ಎಲ್ಲಾ ಸದಸ್ಯರಿಗೆ ಮಾಡಿದ ಅವಮಾನ. ಅವರನ್ನು ಲೋಕಸಭೆಯಿಂದ ಅಮಾನತುಗೊಳಿಸಬೇಕು. ರಾಜನಾಥ್ ಸಿಂಗ್ ಕ್ಷಮೆಯಾಚನೆ ಕಣ್ಣೊರೆಸುವ ತಂತ್ರವಾಗಿದೆ
> **ಜೈರಾಂ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಮುಸ್ಲಿಮರು, ಒಬಿಸಿಗಳನ್ನು ನಿಂದಿಸುವುದು ಬಿಜೆಪಿ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಭಾರತೀಯ ಮುಸ್ಲಿಮರು ತಮ್ಮ ಸ್ವಂತ ನೆಲದಲ್ಲಿ ಭಯದ ಸ್ಥಿತಿಯಲ್ಲಿ ಬದುಕುವಂತೆ ನರೇಂದ್ರ ಮೋದಿ ಮಾಡಿದ್ದಾರೆ.
> **ಮಹುವಾ ಮೊಯಿತ್ರಾ,** ಸಂಸದೆ, ತೃಣಮೂಲ ಕಾಂಗ್ರೆಸ್

> ಮಣಿಪುರ ಹಿಂಸಾಚಾರ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದಕ್ಕೆ ನನ್ನನ್ನು ಅಮಾನತು ಮಾಡಲಾಯಿತು. ಅಲಿ ಅವರನ್ನು ನಿಂದಿಸಿದ ಸಂಸದನ ವಿರುದ್ಧ ಬಿಜೆಪಿ ಯಾವ ಕ್ರಮ ಕೈಗೊಳ್ಳಲಿದೆ?
> **ಸಂಜಯ್ ಸಿಂಗ್,** ಎಎಪಿ ನಾಯಕ

> ಪಕ್ಷದ ಸಂಸದ ಡ್ಯಾನಿಶ್ ಅಲಿ ವಿರುದ್ಧ ಲೋಕಸಭೆಯಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿದ ರಮೇಶ್ ಬಿಧೂಡಿ ವಿರುದ್ಧ ಬಿಜೆಪಿ ಇನ್ನೂ ಸೂಕ್ತ ಕ್ರಮ ಕೈಗೊಳ್ಳದಿರುವುದು ದುರದೃಷ್ಟಕರ
> **ಮಾಯಾವತಿ,** ಬಿಎಸ್‌ಪಿ ಮುಖ್ಯಸ್ಥೆ

## ಸುದ್ದಿ 2 ನಿಮಿಷ

### ಕೊಯಮತ್ತೂರಿನಿಂದ ಸ್ಪರ್ಧಿಸಲು ಕಮಲ್ ಒಲವು

**ಚೆನ್ನೈ:** ಮುಂದಿನ ವರ್ಷ ನಡೆಯಲಿರುವ ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಕೊಯಮತ್ತೂರು ಕ್ಷೇತ್ರದಿಂದ ಸ್ಪರ್ಧಿಸುವ ಒಲವನ್ನು ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷದ ಮುಖ್ಯಸ್ಥ ಹಾಗೂ ಚಿತ್ರ ನಟ ಕಮಲ್ ಹಾಸನ್ ಅವರು ಶುಕ್ರವಾರ ವ್ಯಕ್ತಪಡಿಸಿದ್ದಾರೆ.

ಪಕ್ಷದ ಕಾರ್ಯಕರ್ತರ ಜೊತೆ ಮಾತನಾಡಿದ ಅವರು, 'ನನ್ನ 'ವಿಕ್ರಂ' ಸಿನಿಮಾ ನೋಡಲು ಬರುವ ಜನ, ನನಗೆ ಮತ ಹಾಕಲು ಯಾಕೆ ಬರಲಾರರು' ಎಂದಿದ್ದಾರೆ.

ಕಮಲ್ ಅವರು ಸ್ಪರ್ಧೆಗೆ ಒಲವು ತೋರಿರುವುದು, ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಒಕ್ಕೂಟಕ್ಕೆ ಎಂಎನ್‌ಎಂ ಸೇರ್ಪಡೆಯಾಗುವ ಸಾಧ್ಯತೆಯ ಬಗ್ಗೆ ಚರ್ಚೆ ಹುಟ್ಟುಹಾಕಿದೆ.

2021ರ ಚುನಾವಣೆಯಲ್ಲಿ ಕೊಯಮತ್ತೂರು (ದಕ್ಷಿಣ) ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಮಲ್ ಹಾಸನ್ ಅವರು ಕಡಿಮೆ ಅಂತರದ ಮತಗಳಿಂದ ಸೋತಿದ್ದರು.

2019ರ ಸಾರ್ವತ್ರಿಕ ಚುನಾವಣೆಯಲ್ಲಿ ಎಂಎನ್‌ಎಂ ಅಭ್ಯರ್ಥಿಗಳು 1ಲಕ್ಷಕ್ಕೂ ಅಧಿಕ ಮತಗಳನ್ನು ಪಡೆದಿದ್ದ ಕ್ಷೇತ್ರಗಳಲ್ಲಿ ಕೊಯಮತ್ತೂರು ಕೂಡ ಒಂದಾಗಿದೆ.

### 'ಸೆ.25ರಿಂದ ನೈಋತ್ಯ ಮುಂಗಾರು ಕ್ಷೀಣ'

**ನವದೆಹಲಿ (ಪಿಟಿಐ):** ನೈಋತ್ಯ ಮುಂಗಾರು ಸೆಪ್ಟೆಂಬರ್ 25ರಿಂದ ತೀವ್ರತೆ ಕಳೆದುಕೊಳ್ಳಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ತಿಳಿಸಿದೆ.

ಸಾಮಾನ್ಯವಾಗಿ ಜೂನ್ 1ರಿಂದ ಕೇರಳದ ಮೂಲಕ ನೈಋತ್ಯ ಮುಂಗಾರಿನ ಪ್ರವೇಶವಾಗುತ್ತದೆ. ಜುಲೈ 8ರ ವೇಳೆಗೆ ದೇಶದಾದ್ಯಂತ ಆವರಿಸುತ್ತದೆ. ಸೆಪ್ಟೆಂಬರ್ 17ರ ವೇಳೆಗೆ ವಾಯವ್ಯ ಭಾರತದಿಂದ ಕ್ಷೀಣಿಸಲು ಆರಂಭಿಸಿ, ಅಕ್ಟೋಬರ್ 15ರ ವೇಳೆಗೆ ಸಂಪೂರ್ಣವಾಗಿ ತೀವ್ರತೆ ಕಳೆದುಕೊಳ್ಳುತ್ತದೆ.

'ವಾಯವ್ಯ ಮತ್ತು ಸುತ್ತಮುತ್ತಲಿನ ಪಶ್ಚಿಮ-ಕೇಂದ್ರ ಭಾರತದಲ್ಲಿ ಮುಂದಿನ ಐದು ದಿನ ಕಡಿಮೆ ಮಳೆ ಇರಲಿದೆ. ನೈಋತ್ಯ ಮುಂಗಾರು ಪಶ್ಚಿಮ ರಾಜಸ್ಥಾನ ಪ್ರದೇಶಗಳಲ್ಲಿ ಕ್ಷೀಣಿಸಲು ಅನುಕೂಲಕರ ವಾತಾವರಣ ಇರಲಿದೆ' ಎಂದು ಐಎಂಡಿ ತಿಳಿಸಿದೆ.

## ಸಂಕ್ಷಿಪ್ತ ಸುದ್ದಿ

### 'ಅಭಿಷೇಕ್ ಬ್ಯಾನರ್ಜಿ ವಿರುದ್ಧ ಬಲವಂತದ ಕ್ರಮ ಬೇಡ'

**ಕೋಲ್ಕತ್ತ(ಪಿಟಿಐ):** ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಟಿಎಂಸಿ ನಾಯಕ ಅಭಿಷೇಕ್‌ಬ್ಯಾನರ್ಜಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಕಲ್ಕತ್ತ ಹೈಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿ ತೀರ್ಥಂಕರ್ ಘೋಷ್ ಅವರಿದ್ದ ಏಕಸದಸ್ಯ ಪೀಠವು ಅರ್ಜಿ ವಿಚಾರಣೆ ನಡೆಸಿತು.

ಬ್ಯಾನರ್ಜಿ ವಿರುದ್ಧ ಇ.ಡಿ ದಾಖಲಿಸಿರುವ ಇಸಿಐಆರ್ ಅನ್ನು (ಇ.ಡಿ ದಾಖಲಿಸುವ ಇಸಿಐಆರ್, ಎಫ್‌ಐಆರ್‌ಗೆ ಸಮ) ರದ್ದುಗೊಳಿಸಲು ನಿರಾಕರಿಸಿದ ನ್ಯಾಯಪೀಠ, ಇಸಿಐಆರ್ ಆಧರಿಸಿ ಬ್ಯಾನರ್ಜಿ ವಿರುದ್ಧ ಬಲವಂತದ ಕ್ರಮ ತೆಗೆದುಕೊಳ್ಳದಂತೆ ನಿರ್ದೇಶನ ನೀಡಿತು.

### ತೇಜಸ್ವಿಗೆ 2ನೇ ಬಾರಿ ಸಮನ್ಸ್

**ಅಹಮದಾಬಾದ್ (ಪಿಟಿಐ):** ಇಲ್ಲಿನ ಮೆಟ್ರೊಪಾಲಿಟನ್ ನ್ಯಾಯಾಲಯವು ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಬಿಹಾರದ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರಿಗೆ ಶುಕ್ರವಾರ ಎರಡನೇ ಸಮನ್ಸ್ ಜಾರಿ ಮಾಡಿದೆ.

ಕೆಲವು ಗೊಂದಲಗಳಿಂದಾಗಿ ಮೊದಲ ಸಮನ್ಸ್ ತೇಜಸ್ವಿ ಅವರಿಗೆ ತಲುಪಿಲ್ಲ. ಈ ಕಾರಣಕ್ಕೆ ಹೆಚ್ಚುವರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಡಿ.ಜೆ. ಪರ್ಮಾರ್ ಅವರು ಎರಡನೇ ಸಮನ್ಸ್ ಜಾರಿ ಮಾಡಿದರು. ಈ ಸಮನ್ಸ್ ಪ್ರಕಾರ, ಆರ್‌ಜೆಡಿ ನಾಯಕರೂ ಆದ ತೇಜಸ್ವಿ ಅವರು ಅಕ್ಟೋಬರ್ 13ರಂದು ನ್ಯಾಯಾಲಯಕ್ಕೆ ಹಾಜರಾಗಬೇಕಿದೆ.

ತೇಜಸ್ವಿ ಅವರು ಇದೇ ವರ್ಷದ ಮಾರ್ಚ್ 21ರಂದು ಪಟ್ನಾದಲ್ಲಿ ಮಾಧ್ಯಮಗಳ ಮುಂದೆ 'ಗುಜರಾತಿಗಳು ಮಾತ್ರ ವಂಚಕರಾಗಬಲ್ಲರು' ಎಂದು ಮಾನಹಾನಿಕರ ಹೇಳಿಕೆ ನೀಡಿದ್ದಾರೆ ಎಂದು ಅಹಮದಾಬಾದ್‌ನ ಸಾಮಾಜಿಕ ಕಾರ್ಯಕರ್ತ ಮತ್ತು ಉದ್ಯಮಿ ಹರೇಶ್ ಮೆಹ್ತಾ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು.

### ನಿಗದಿಗಿಂತ ಹೆಚ್ಚು ಕಾಲ ಕಲಾಪ

**ನವದೆಹಲಿ (ಪಿಟಿಐ):** ಸಂಸತ್‌ನ ವಿಶೇಷ ಅಧಿವೇಶನದ ವೇಳೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ನಿಗದಿತ ಅವಧಿಗಿಂತ ಹೆಚ್ಚು ಕಾಲ ಕಲಾಪ ನಡೆದಿದೆ ಎಂದು 'ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್' ಸಂಸ್ಥೆ ಹೇಳಿದೆ.

17ನೇ ಲೋಕಸಭೆಯಲ್ಲಿ ಕಲಾಪವನ್ನು ಮುಂದೂಡುವ ಮೂಲಕ ಸಮಯ ವ್ಯರ್ಥವಾಗದ ಏಕೈಕ ಅಧಿವೇಶನ ಇದಾಗಿದೆ ಎಂದಿದೆ.

ಲೋಕಸಭೆಯಲ್ಲಿ 22 ಗಂಟೆ 45 ನಿಮಿಷಗಳ ನಿಗದಿತ ಅವಧಿಗಿಂತ, ಎಂಟು ಗಂಟೆಗೂ ಹೆಚ್ಚು ಕಾಲ ಕಲಾಪ ನಡೆದಿದೆ. ರಾಜ್ಯಸಭೆಯಲ್ಲಿ ನಿಗದಿತ ಅವಧಿ 21 ಗಂಟೆ 45 ನಿಮಿಷವಾಗಿದ್ದರೂ, 27 ಗಂಟೆ 44 ನಿಮಿಷ ಕಲಾಪ ನಡೆದಿದೆ ಎಂದು ಸಂಸ್ಥೆ ತಿಳಿಸಿದೆ.

ನಿಗದಿತ ವೇಳಾಪಟ್ಟಿಯ ಪ್ರಕಾರ ಶುಕ್ರವಾರ ಅಂತ್ಯಗೊಳ್ಳಬೇಕಾಗಿದ್ದ ಅಧಿವೇಶನವು ಒಂದು ದಿನ ಮೊದಲೇ ಅಂತ್ಯಗೊಂಡಿದೆ. ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅಂಗೀಕಾರ ಪಡೆಯಲಾಗಿದೆ. ಅಲ್ಲದೆ ಚಂದ್ರಯಾನ-3 ಯಶಸ್ಸು, ಸಂಸತ್ತಿನ 75 ವರ್ಷದ ಸಾಧನೆ ಕುರಿತೂ ಚರ್ಚೆ ನಡೆದಿದೆ.

ಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಮಸೀದಿ: ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ

# ಸಮೀಕ್ಷೆ ಅರ್ಜಿ ವಿಚಾರಣೆಗೆ 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಉತ್ತರ ಪ್ರದೇಶದ ಮಥುರಾದಲ್ಲಿರುವ ಕೃಷ್ಣ ಜನ್ಮಭೂಮಿ - ಈದ್ಗಾ ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆಗೆ ನಿರ್ದೇಶನ ನೀಡುವಂತೆ ಕೋರಿ 'ಕೃಷ್ಣ ಜನ್ಮಭೂಮಿ ಮುಕ್ತಿ ನಿರ್ಮಾಣ್ ಟ್ರಸ್ಟ್' ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು, ಟ್ರಸ್ಟ್‌ನ ಅರ್ಜಿಯನ್ನು ವಜಾಗೊಳಿಸಿತು.

ಆಯುಕ್ತರ ನೇಮಕಾತಿಗೆ ಸಂಬಂಧಿಸಿದಂತೆ ಸಿಪಿಸಿ ಆದೇಶ 26 ನಿಯಮ 11ರ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯ ಬಗ್ಗೆ ಅಲಹಾಬಾದ್ ಹೈಕೋರ್ಟ್ ಇನ್ನೂ ನಿರ್ಧರಿಸಿಲ್ಲ ಎಂಬುದನ್ನು ನ್ಯಾಯಪೀಠವು ಪರಿಗಣನೆಗೆ ತೆಗೆದುಕೊಂಡಿದೆ.

'ಈ ಪ್ರಕರಣದಲ್ಲಿ ಆದೇಶ ನೀಡುವುದು ವಿಚಾರಣಾ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಲಾಗದು. ಅಲ್ಲದೇ, ಪ್ರಕರಣವನ್ನು ವರ್ಗಾಯಿಸಿದ ನಂತರ ನ್ಯಾಯಾಲಯದ ವ್ಯಾಪ್ತಿಗೆ ಸಂಬಂಧಿಸಿ ಹೈಕೋರ್ಟ್ ಮಾತ್ರ ಪರಿಷ್ಕರಣೆ ಮಾಡಬಹುದು ಎಂದು ಒತ್ತಾಯಿಸಲಾಗದು' ಎಂದು ನ್ಯಾಯಪೀಠ ಹೇಳಿತು.

'ಅರ್ಜಿಯು ಸಮರ್ಥನೀಯವೇ ಅಥವಾ ಅಲ್ಲವೇ ಹಾಗೂ ಇತರ ವಿಷಯಗಳನ್ನು ಹೈಕೋರ್ಟ್ ನಿರ್ಧರಿಸಲಿರುವ ಕಾರಣ, ಅರ್ಜಿದಾರರು ಹೈಕೋರ್ಟ್‌ಗೇ ಹೋಗಲಿ' ಎಂದು ಹೇಳಿತು.

'ಏಕಸದಸ್ಯ ನ್ಯಾಯಪೀಠ ನೀಡಿರುವ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ನೀವೇಕೆ ಸುಪ್ರೀಂಕೋರ್ಟ್ ಕದ ತಟ್ಟಿದಿರಿ' ಎಂದು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಗೌರವ್ ಭಾಟಿಯಾ ಅವರನ್ನು ಪೀಠವು ಪ್ರಶ್ನಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲ ಭಾಟಿಯಾ, 'ಅರ್ಜಿಯನ್ನು ಹೈಕೋರ್ಟ್‌ಗೆ ವರ್ಗಾಯಿಸಿದ ನಂತರ, ವಿಚಾರಣಾ ನ್ಯಾಯಾಲಯ ಆದೇಶ ಹೊರಡಿಸಬಾರದಿತ್ತು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಒಂದು ವೇಳೆ, ವೈಜ್ಞಾನಿಕ ಸಮೀಕ್ಷೆ ನಡೆಸಬೇಕು ಎಂದು ಹೈಕೋರ್ಟ್‌ಗೆ ಅನಿಸಿದಲ್ಲಿ ಅದು ನಿಮ್ಮ ಅರ್ಜಿಗೆ ತಡೆ ನೀಡುತ್ತದೆ. ಅಲ್ಲದೇ, ವಿಚಾರಣಾ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯಲ್ಲಿಯೇ ಆದೇಶ ನೀಡಿದೆ' ಎಂದು ನ್ಯಾಯಪೀಠವು ಭಾಟಿಯಾ ಅವರನ್ನು ಉದ್ದೇಶಿಸಿ ಹೇಳಿತು.

ಮಸೀದಿ ನಿರ್ವಹಣಾ ಸಮಿತಿ ಹಾಗೂ ಉತ್ತರ ಪ್ರದೇಶ ಸುನ್ನಿ ಕೇಂದ್ರೀಯ ವಕ್ಫ್ ಮಂಡಳಿಯ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೂ ಮುನ್ನ, ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ಕೋರಿ ತಾನು ಸಲ್ಲಿಸಿರುವ ಅರ್ಜಿಯನ್ನು ಇತ್ಯರ್ಥಪಡಿಸುವಂತೆ ಮಥುರಾ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಿಗೆ ನಿರ್ದೇಶನ ನೀಡುವಂತೆ ಕೋರಿ ಶ್ರೀಕೃಷ್ಣ ಜನ್ಮಭೂಮಿ ಮುಕ್ತಿ ನಿರ್ಮಾಣ ಟ್ರಸ್ಟ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ಅಲಹಾಬಾದ್ ಹೈಕೋರ್ಟ್ ಜುಲೈನಲ್ಲಿ ಆದೇಶಿಸಿತ್ತು.

### ಸನಾತನ ಧರ್ಮ: ಉದಯನಿಧಿಗೆ ನೋಟಿಸ್

**ನವದೆಹಲಿ (ಪಿಟಿಐ):** 'ಸನಾತನ ಧರ್ಮ' ಕುರಿತು ಹೇಳಿಕೆ ನೀಡಿರುವ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಕೋರಿದ್ದ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ತಮಿಳುನಾಡು ಸರ್ಕಾರ ಮತ್ತು ಉದಯನಿಧಿ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ನ್ಯಾಯಮೂರ್ತಿ ಅನಿರುದ್ಧ ಬೋಸ್ ಮತ್ತು ಬೇಲಾ ಎಂ.ತ್ರಿವೇದಿ ಅವರನ್ನು ಒಳಗೊಂಡ ನ್ಯಾಯಪೀಠವು ಈ ಸಂಬಂಧ ನೋಟಿಸ್ ಜಾರಿ ಮಾಡಿದೆ.

'ಸನಾತನ ಧರ್ಮ ನಿರ್ಮೂಲನೆ ಮಾಡಬೇಕು' ಎಂಬ ಹೇಳಿಕೆ ನೀಡಿದ ಉದಯನಿಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಮದ್ರಾಸ್ ಹೈಕೋರ್ಟ್ ವಕೀಲ ಬಿ.ಜಗನ್ನಾಥ ಎಂಬುವರು ಕೋರ್ಟ್ ಮೆಟ್ಟಿಲೇರಿದ್ದರು.

'ಸೆ.2ರಂದು ನಡೆದ 'ಸನಾತನ ಧರ್ಮ ನಿರ್ಮೂಲನಾ ಸಮಾವೇಶ'ದಲ್ಲಿ ರಾಜ್ಯದ ಸಚಿವರು ಭಾಗವಹಿಸಿರುವುದನ್ನು 'ಅಸಾಂವಿಧಾನಿಕ' ಎಂದು ಘೋಷಣೆ ಮಾಡಬೇಕು. ಈ ಕುರಿತು ಸಿಬಿಐ ತನಿಖೆಗೆ ಸೂಚಿಸಬೇಕು' ಎಂದೂ ಅವರು ಅರ್ಜಿಯಲ್ಲಿ ಕೋರಿದ್ದರು.

## 'ವೈವಾಹಿಕ ಅತ್ಯಾಚಾರ: ಅಕ್ಟೋಬರ್‌ನಲ್ಲಿ ವಿಚಾರಣೆ'

**ನವದೆಹಲಿ (ಪಿಟಿಐ):** ವೈವಾಹಿಕ ಅತ್ಯಾಚಾರ ವಿಷಯಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಅಕ್ಟೋಬರ್ ಮಧ್ಯದಲ್ಲಿ ಅರಂಭಿಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಮುಖ್ಯನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠವು, ಈ ವಿಷಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ಆರಂಭಿಸಬೇಕು ಎಂದು ವಕೀಲೆ ಕರುಣಾ ನಂದಿ ಅವರು ಮಾಡಿದ ಮನವಿಯನ್ನು ಪರಿಗಣಿಸಿ, ಈ ನಿರ್ಧಾರ ಪ್ರಕಟಿಸಿತು.

'ಸಂವಿಧಾನ ಪೀಠದ ಮುಂದೆ ಹಲವು ಅರ್ಜಿಗಳ ವಿಚಾರಣೆ ನಡೆಯುತ್ತಿದೆ. ಈ ಅರ್ಜಿಗಳ ವಿಚಾರಣೆ ಪೂರ್ಣಗೊಂಡ ನಂತರ ವೈವಾಹಿಕ ಅತ್ಯಾಚಾರ ಕುರಿತ ಅರ್ಜಿಗಳನ್ನು ವಿಚಾರಣಾ ಪಟ್ಟಿಗೆ ಸೇರಿಸಲಾಗುವುದು' ಎಂದು ನ್ಯಾಯಪೀಠ ಹೇಳಿತು.

'ಈ ವಿಚಾರವಾಗಿ ವಾದ ಮಂಡನೆಗೆ ಎಷ್ಟು ದಿನಗಳು ಅಗತ್ಯ' ಎಂದು ಮೆಹ್ತಾ ಹಾಗೂ ಅರ್ಜಿದಾರರನ್ನು ನ್ಯಾಯಪೀಠ ಪ್ರಶ್ನಿಸಿತು.

'ಈ ವಿಷಯವು ಸಾಮಾಜಿಕವಾಗಿ ಪರಿಣಾಮ ಬೀರುವ ಕಾರಣ, ವಾದ ಮಂಡನೆಗೆ ನನಗೆ ಎರಡು ದಿನಗಳು ಬೇಕು' ಎಂದು ಮೆಹ್ತಾ ತಿಳಿಸಿದರೆ, ತಮಗೆ ಮೂರು ದಿನ ಅಗತ್ಯ ಇದೆ' ಎಂದು ಅರ್ಜಿದಾರರ ಪರ ವಕೀಲರು ಹೇಳಿದರು.

ಮಣಿಪುರದಲ್ಲಿ ಶಸ್ತ್ರಾಸ್ತ್ರ ಮರುವಶ: ಕೇಂದ್ರ ಸರ್ಕಾರ ಮಾಹಿತಿ

# 'ಸುಪ್ರೀಂ'ಗೆ ವಸ್ತುಸ್ಥಿತಿ ವರದಿ ಸಲ್ಲಿಕೆ

**ನವದೆಹಲಿ (ಪಿಟಿಐ):** ಜನಾಂಗೀಯ ಹಿಂಸಾಚಾರಕ್ಕೆ ಒಳಗಾಗಿರುವ ಮಣಿಪುರದಲ್ಲಿ ದಂಗೆಕೋರರು ಲೂಟಿ ಮಾಡಿದ್ದ ಶಸ್ತ್ರಾಸ್ತ್ರಗಳನ್ನು 'ಎಲ್ಲ ಮೂಲ'ಗಳಿಂದ ವಶಕ್ಕೆ ಪಡೆಯಲಾಗಿದೆ ಎಂದು ಅಲ್ಲಿನ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ವರದಿಯಲ್ಲಿ ಹೇಳಲಾಗಿದೆ.

'ಈ ವಿಷಯ ಕುರಿತ ವರದಿಯನ್ನು ನ್ಯಾಯಮೂರ್ತಿಗಳಿಗಷ್ಟೇ ಸಲ್ಲಿಸಲಾಗಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠಕ್ಕೆ ಶುಕ್ರವಾರ ತಿಳಿಸಿದರು.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿದ್ದಾರೆ.

ಇದೇ ವಿಷಯಕ್ಕೆ ಸಂಬಂಧಿಸಿ ಸಲ್ಲಿಸಲಾಗಿರುವ ಮತ್ತೊಂದು ಪ್ರಮಾಣಪತ್ರ ಕುರಿತಂತೆಯೂ ಮೆಹ್ತಾ ಅವರು ನ್ಯಾಯಪೀಠದ ಗಮನಕ್ಕೆ ತಂದರು.

'ಇಲ್ಲಿ ಚರ್ಚೆಯಾಗಿರುವ ಎಲ್ಲ ವಿಷಯಗಳನ್ನು ಸುಪ್ರೀಂ ಕೋರ್ಟ್ ನೇಮಕ ಮಾಡಿರುವ ಸಮಿತಿಯ ಗಮನಕ್ಕೂ ತರಲಾಗಿದ್ದು, ಸಮಿತಿಯು ಪರಿಶೀಲನೆ ನಡೆಸುತ್ತಿದೆ' ಎಂದರು.

ಅರ್ಜಿದಾರರ ಪರ ಹಾಜರಿದ್ದ ವಕೀಲೆ ವೃಂದಾ ಗ್ರೋವರ್, 'ಮೇಯಲ್ಲಿ ಮಣಿಪುರದಲ್ಲಿ ಇಬ್ಬರು ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿತ್ತು. ಈ ಮಹಿಳೆಯರ ಮೃತದೇಹಗಳನ್ನು ಅವರ ಕುಟುಂಬಗಳಿಗೆ ಈವರೆಗೂ ಹಸ್ತಾಂತರಿಸಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ, 'ಸುಪ್ರೀಂ ಕೋರ್ಟ್ ನೇಮಕ ಮಾಡಿರುವ ಸಮಿತಿಗೆ ಈ ವಿಷಯದ ಅರಿವಿದ್ದು, ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿದೆ' ಎಂದರು.

ವಾದ-ಪ್ರತಿವಾದಗಳನ್ನು ಆಗಲಿಸಿದ ನ್ಯಾಯಪೀಠ, ವಿಚಾರಣೆಯನ್ನು 25ಕ್ಕೆ ಮುಂದೂಡಿತು.

**ಕೋರಿಕೆ:** ಮಣಿಪುರದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದ ವೇಳೆ, ಮಹಿಳೆಯರು ಹಾಗೂ ಮಕ್ಕಳ ವಿರುದ್ಧದ ಲೈಂಗಿಕ ಹಿಂಸೆ ಕುರಿತು 11 ಎಫ್‌ಐಆರ್‌ಗಳು ದಾಖಲಾಗಿದ್ದವು. ಇವುಗಳನ್ನು ಸಿಬಿಐಗೆ ವರ್ಗಾಯಿಸಲಾಗಿತ್ತು. ಈ ಎಫ್‌ಐಆರ್‌ಗಳ ಕುರಿತು ಕೈಗೊಂಡ ತನಿಖೆಯ ಮಾಹಿತಿ ನೀಡುವಂತೆ ಸಿಬಿಐಗೆ ಸೂಚಿಸಬೇಕು ಎಂದು ವಿಚಾರಣೆ ವೇಳೆ ನ್ಯಾಯಪೀಠಕ್ಕೆ ಕೋರಲಾಯಿತು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಐಪಿಎಸ್ ಅಧಿಕಾರಿ ದತ್ತಾತ್ರೇಯ ಪಡಸಲಗಿಕರ್ ಅವರನ್ನು ನೇಮಕ ಮಾಡಲಾಗಿದ್ದು, ಕ್ರಿಮಿನಲ್ ಪ್ರಕರಣಗಳ ತನಿಖೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ' ಎಂದು ಹೇಳಿತು.

'ಪಡಸಲಗಿಕರ್ ಅವರಿಗೆ ಅಧಿಕಾರ ಸ್ವೀಕರಿಸಲು, ಪರಿಸ್ಥಿತಿಯ ಅವಲೋಕನ ನಡೆಸಲು ಸಮಯಾವಕಾಶ ನೀಡಬೇಕು. ನಂತರ, ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಅವರನ್ನು ಕೇಳಬಹುದು' ಎಂದೂ ನ್ಯಾಯಪೀಠ ಹೇಳಿತು.

'ಪಡಸಲಗಿಕರ್ ಅವರು ಮಹಾರಾಷ್ಟ್ರದ ಮಾಜಿ ಡಿಐಜಿ. ಮಹಾರಾಷ್ಟ್ರದಲ್ಲಿ ಬಹಳ ಗೌರವಾನ್ವಿತ ಅಧಿಕಾರಿಯಾಗಿರುವ ಅವರು, ಸ್ವತಃ ಮಣಿಪುರಕ್ಕೆ ಭೇಟಿ ನೀಡಿ, ತನಿಖೆಯ ಮೇಲ್ವಿಚಾರಣೆ ನಡೆಸಿದ್ದಾರೆ' ಎಂದು ಸಿಜೆಐ ಹೇಳಿದರು.

# ಮಹಿಳಾ ಮೀಸಲು: ಯುಪಿಎ ಅವಧಿಯಲ್ಲಿ ಒಬಿಸಿ ಕೋಟಾ ಇಲ್ಲದ್ದಕ್ಕೆ ವಿಷಾದ

**ನವದೆಹಲಿ:** ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ 13 ವರ್ಷಗಳ ಹಿಂದೆ ರಾಜ್ಯಸಭೆಯಲ್ಲಿ ಅಂಗೀಕರಿಸಿದ್ದ ಮಹಿಳಾ ಮೀಸಲು ಮಸೂದೆಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿ ಕಲ್ಪಿಸಿಸದೆ ಇರುವುದಕ್ಕೆ ವಿಷಾದವಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಲೋಕಸಭೆ ಹಾಗೂ ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿಡುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರ ಮಂಡಿಸಿದ ಬೆನ್ನಲ್ಲೇ ಮಸೂದೆಯಲ್ಲಿ ಒಬಿಸಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿಲ್ಲ ಎಂದು ಕಾಂಗ್ರೆಸ್ ತಕರಾರು ಎತ್ತಿತ್ತು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಜಾತಿ ಗಣತಿಗೆ ಒತ್ತಾಯಿಸುತ್ತಿರುವ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಗಮನ ಬೇರೆಡೆ ಸೆಳೆಯುವ ಉದ್ದೇಶದಿಂದ, ಜನಗಣತಿ ಮತ್ತು ಕ್ಷೇತ್ರಗಳ ಮರುವಿಂಗಡಣೆ ನಂತರ ಮಹಿಳಾ ಮೀಸಲಾತಿ ಮಸೂದೆ ಜಾರಿ ಮಾಡು ವುದಾಗಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹೇಳುತ್ತಿದೆ' ಎಂದು ಹೇಳಿದರು.

ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಈ ಹಿಂದೆ ಯುಪಿಎ ಸರ್ಕಾರ ರಾಜ್ಯಸಭೆಯಲ್ಲಿ ಅಂಗೀಕರಿಸಿದ್ದ ಮಸೂದೆಯು ಒಬಿಸಿ ಮೀಸಲಾತಿಯನ್ನು ಒಳಗೊಂಡಿರಲಿಲ್ಲ ಎಂಬ ಬಗ್ಗೆ ಶೇ 100ರಷ್ಟು ವಿಷಾದವಿದೆ' ಎಂದು ಹೇಳಿದರು.

'ನೂತನ ಮಸೂದೆಯನ್ನು 'ಇವತ್ತೂ' ಜಾರಿ ಮಾಡಬಹುದು, ಇದು ಅವರು ಬಿಂಬಿಸಿರುವಷ್ಟು ಸಂಕೀರ್ಣ ವಿಷಯ ಅಲ್ಲ. ಆದರೆ, ಅದನ್ನು ಈಗ ಜಾರಿ ಮಾಡುವುದಿಲ್ಲ. ಒಂದು ವೇಳೆ ಅನುಷ್ಠಾನಗೊಂಡರೂ ಹತ್ತು ವರ್ಷಗಳ ನಂತರವಷ್ಟೆ. ಇದನ್ನು ದೇಶದ ಮಹಿಳೆಯರು ಅರ್ಥಮಾಡಿಕೊಳ್ಳಬೇಕು' ಎಂದು ಹೇಳಿದರು.

ಇದೇ ವೇಳೆ, 'ಹತ್ತು ವರ್ಷಗಳ ನಂತರ ಅಲ್ಲ, ಈ ಕೂಡಲೇ ಮಸೂದೆಯನ್ನು ಜಾರಿ ಮಾಡಬೇಕು' ಎಂದೂ ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

'ಕೇಂದ್ರ ಸರ್ಕಾರದಲ್ಲಿರುವ 90 ಕಾರ್ಯದರ್ಶಿಗಳಲ್ಲಿ ಕೇವಲ ಮೂರು ಮಂದಿ ಮಾತ್ರ ಒಬಿಸಿಗೆ ಸೇರಿದ್ದಾರೆ. ಇವರು ಬಜೆಟ್‌ನಲ್ಲಿ ಶೇಕಡ 5ರಷ್ಟನ್ನು ಮಾತ್ರ ನಿಯಂತ್ರಿಸುತ್ತಾರೆ. ಹಾಗಿದ್ದರೆ ಒಬಿಸಿ ಜನಸಂಖ್ಯೆ ಶೇ 5ರಷ್ಟು ಮಾತ್ರ ಇದೆಯೇ? ಇದಕ್ಕೆ ಉತ್ತರವನ್ನು ಜಾತಿ ಜನಗಣತಿ ಮೂಲಕ ಪಡೆಯಬೇಕಾಗುತ್ತದೆ' ಎಂದರು.

ಕಾಂಗ್ರೆಸ್ ಅವಧಿಯಲ್ಲಿ ಒಬಿಸಿ ಪ್ರಾತಿನಿಧ್ಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಆಗಲೂ ಒಬಿಸಿ ಪ್ರಾತಿನಿಧ್ಯ ಅಷ್ಟಾಗಿ ಇರಲಿಲ್ಲ. ಬೇರೆಯವರೂ ಅದೇ ತಪ್ಪನ್ನು ಮುಂದುವರಿಸಬೇಕು ಎಂಬುದು ಇದರರ್ಥ ಅಲ್ಲ' ಎಂದರು.

**ನಿಲುವು ಬದಲಾಗಿಲ್ಲ:** ಮೀಸಲಾತಿ ಕುರಿತ ನಿಲುವಿನ ಬದಲಾವಣೆಗೆ ಕಾರಣ ಏನು ಎಂಬ ಪ್ರಶ್ನೆಗೆ 'ನಾವು ನಮ್ಮ ನಿಲುವನ್ನು ಬದಲಾಯಿಸಿಲ್ಲ. ನಾವು ಜಾತಿ ಗಣತಿ ನಡೆಸಿದ್ದೆವು. ಆದರೆ ದತ್ತಾಂಶ ಬಿಡುಗಡೆ ಮಾಡಲು ಸಾಧ್ಯವಾಗಿರಲಿಲ್ಲ. ಈಗಲಾದರೂ ಅದನ್ನು ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ಮಹಿಳಾ ಮೀಸಲಾತಿ ಮಸೂದೆ • ಸನ್ಮಾನ ಸಮಾರಂಭದಲ್ಲಿ ಪ್ರಧಾನಿ ಮೋದಿ ಹೇಳಿಕೆ

# 'ಸ್ಥಿರ ಸರ್ಕಾರದಿಂದಾಗಿ ಮಸೂದೆ ಅಂಗೀಕಾರ'

**ನವದೆಹಲಿ (ಪಿಟಿಐ):** ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆ ಕುರಿತಂತೆ ಮೂರು ದಶಕಗಳಿಗೂ ಹೆಚ್ಚು ಕಾಲ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ. ಆದರೆ, ಪ್ರಚಂಡ ಬಹುಮತ ಹೊಂದಿದ ಹಾಗೂ ನಿರ್ಣಾಯಕ ಸರ್ಕಾರವೊಂದು ಕೇಂದ್ರದಲ್ಲಿ ಅಧಿಕಾರದಲ್ಲಿ ಇರುವುದರಿಂದಾಗಿಯೇ ಈ ಮಸೂದೆಯನ್ನು ಅಂಗೀಕರಿಸಲು ಸಾಧ್ಯವಾಯಿತು ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಮಸೂದೆಗೆಸಂಸತ್‌ನಲ್ಲಿಅಂಗೀಕಾರ ದೊರೆತ ಹಿನ್ನೆಲೆಯಲ್ಲಿ ಬಿಜೆಪಿಯ ಮಹಿಳಾ ಮೋರ್ಚಾವತಿಯಿಂದ ಪಕ್ಷದ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಇದು ಸಾಮಾನ್ಯ ಮಸೂದೆಯಲ್ಲ. ಹೊಸ ಪ್ರಜಾಸತ್ತಾತ್ಮಕ ಬದ್ಧತೆ ಕುರಿತು ನವಭಾರತ ಮಾಡಿರುವ ಘೋಷಣೆಯಾಗಿದೆ' ಎಂದು ಮೋದಿ ಬಣ್ಣಿಸಿದರು.

'ಬಿಹಾರದ ಆರ್‌ಎಲ್‌ಡಿ, ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷವು ಶಾಸನಸಭೆಗಳಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಪ್ರತಿಗಳನ್ನು ಹರಿದುಹಾಕಿದ್ದವು. ಆದರೆ, ತಮ್ಮ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಈ ಹತ್ತು ವರ್ಷಗಳ ಅವಧಿಯಲ್ಲಿ ಮಹಿಳೆಯರು ಶಕ್ತಿಶಾಲಿಗಳಾಗಿ ಹೊರಹೊಮ್ಮಿದ್ದಾರೆ. ಹೀಗಾಗಿಯೇ ಆರ್‌ಎಲ್‌ಡಿ, ಎಸ್‌ಪಿ ಸೇರಿದಂತೆ ಹಲವಾರು ಪ್ರಾದೇಶಿಕ ಪಕ್ಷಗಳು ಈಗ ಮಸೂದೆಯನ್ನು ಬೆಂಬಲಿಸಬೇಕಾಯಿತು' ಎಂದು ಮೋದಿ ಹೇಳಿದರು.

ಮಹಿಳಾ ಮೀಸಲಾತಿ ಮಸೂದೆಗೆ ಸಂಸತ್‌ನಲ್ಲಿ ಅಂಗೀಕಾರ ದೊರೆತ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿರುವ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ನಾರಿ ಶಕ್ತಿ ವಂದನ–ಅಭಿನಂದನ ಕಾರ್ಯಕ್ರಮ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸನ್ಮಾನಿಸಲಾಯಿತು –ಪಿಟಿಐ ಚಿತ್ರ

> ದೇಶದ ಅದೃಷ್ಟವನ್ನೇ ಬದಲಿಸುವಂತಹ ಶಕ್ತಿ ಕೆಲ ನಿರ್ಧಾರಗಳಿಗೆ ಇರುತ್ತದೆ. ಮಹಿಳೆಯರಿಗೆ ಮೀಸಲಾತಿ ಒದಗಿಸುವ ಉದ್ದೇಶಿತ ಈ ಕಾನೂನು ಇಂತಹ ನಿರ್ಧಾರಗಳಲ್ಲೊಂದು
> **ನರೇಂದ್ರ ಮೋದಿ,** ಪ್ರಧಾನಿ

'ಈ ಮಸೂದೆಯನ್ನು ಮಂಡಿಸುವ ಮುನ್ನ, ನನ್ನ ಸರ್ಕಾರ ಹಲವಾರು ಯೋಜನೆಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಕ್ರಮ ತೆಗೆದುಕೊಂಡಿತ್ತು. ಇದು ಮಹಿಳೆಯರ ಆತ್ಮವಿಶ್ವಾಸ ಹೆಚ್ಚಿಸಿತ್ತು. ಈ ಕಾರಣಕ್ಕಾಗಿಯೇ ಪ್ರತಿಯೊಂದು ಪಕ್ಷ ಮಸೂದೆಯನ್ನು ಬೆಂಬಲಿಸಬೇಕಾಯಿತು' ಎಂದರು.

'ಎಲ್ಲ ಹಂತಗಳಲ್ಲಿಯೂ ಮಹಿಳೆಯರನ್ನು ಸಶಕ್ತಗೊಳಿಸಲು ನಾವು ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರದ ಮುದ್ರೆ ಪಡೆಯುವಲ್ಲಿ ಯಾವುದೇ ವ್ಯಕ್ತಿಯ ರಾಜಕೀಯ ಹಿತಾಸಕ್ತಿಯು ಅಡ್ಡಿಯಾಗುವುದಕ್ಕೆ ನಾವು ಅವಕಾಶ ನೀಡಲಿಲ್ಲ' ಎಂದರು.

'ಈ ಹಿಂದೆಯೆಲ್ಲಾ, ಸಂಸತ್‌ನಲ್ಲಿ ಈ ಮಸೂದೆಯು ಮಂಡನೆಯಾದ ಸಂದರ್ಭಗಳಲ್ಲಿ ಔಪಚಾರಿಕ ಪ್ರಕ್ರಿಯೆಗಳನ್ನುನೆರವೇರಿಸಲಾಗುತ್ತಿತ್ತು.ಮಸೂದೆಯನ್ನು ಅಂಗೀಕರಿಸುವ ವಿಚಾರವಾಗಿ ಪ್ರಯತ್ನಗಳು ನಡೆಯುತ್ತಿರಲಿಲ್ಲ. ಮಹಿಳೆಯರನ್ನು ಅವಮಾನಿಸುವಂತಹ ಪ್ರಯತ್ನಗಳೂ ನಡೆದಿದ್ದವು' ಎಂದು ವಿಪಕ್ಷಗಳ ವಿರುದ್ಧ ಪ್ರಧಾನಿ ಮೋದಿ ಪರೋಕ್ಷ ಟೀಕಾಪ್ರಹಾರ ನಡೆಸಿದರು.

'ಈ ಮಸೂದೆಯನ್ನು ಅಂಗೀಕರಿಸುವಂತಹ ಅವಕಾಶ ದೊರೆತಿದ್ದು ಬಿಜೆಪಿಯ ಅದೃಷ್ಟ. ಪಕ್ಷವು ಕಳೆದ ಮೂರು ದಶಕಗಳಿಂದ ಹೊಂದಿದ್ದ ಬದ್ಧತೆಗೆ ಈಗ ಪ್ರತಿಫಲ ಸಿಕ್ಕಂತಾಗಿದೆ' ಎಂದೂ ಹೇಳಿದರು.

# ನಾನು ದೇಶ ವಿರೋಧಿ ಅಲ್ಲ: ಮೀರ್ವೈಜ್ ಉಮರ್

**ಶ್ರೀನಗರ:** 'ಕಾಶ್ಮೀರವು ಮಾನವೀಯ ವಿಚಾರವಾಗಿದೆ' ಎಂದು ಹುರಿಯತ್ ಮುಖ್ಯಸ್ಥ ಮೀರ್ವೈಜ್ ಉಮರ್ ಫಾರೂಕ್ ಹೇಳಿದ್ದಾರೆ. 'ಶಾಂತಿ ಸ್ಥಾಪನೆ ಪರವಾಗಿ ಇದ್ದರೂ ನನ್ನನ್ನು ರಾಷ್ಟ್ರ ವಿರೋಧಿ, ಶಾಂತಿ ಸ್ಥಾಪನೆ ವಿರೋಧಿ ಮತ್ತು ಪ್ರತ್ಯೇಕತಾವಾದಿ ಎಂದು ಬಿಂಬಿಸಲಾಗಿತ್ತು' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನಾಲ್ಕು ವರ್ಷಗಳ ಗೃಹಬಂಧನದಿಂದ ಶುಕ್ರವಾರ ಮುಕ್ತರಾಗಿರುವ ಮೀರ್ವೈಜ್, ಶ್ರೀನಗರದಲ್ಲಿರುವ ಐತಿಹಾಸಿಕ ಜಾಮಿಯಾ ಮಸೀದಿಯಲ್ಲಿ ಮೊದಲ ಧರ್ಮೋಪದೇಶ ನೀಡಿದರು.

'ಉಕ್ರೇನ್–ರಷ್ಯಾ ಯುದ್ಧ ವಿಚಾರಕ್ಕೆ ಸಂಬಂಧಿಸಿ ಪ್ರಸ್ತುತ ಸನ್ನಿವೇಶವು ಯುದ್ಧದ ಸಮಯವಲ್ಲ ಎಂದು ಹೇಳಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಕ್ಕು ಇದೆ. ನಾವು ಸಹ ಮಾತುಕತೆ ಮೂಲಕ ಜಮ್ಮು-ಕಾಶ್ಮೀರ ಕುರಿತು ತೀರ್ಮಾನ ಕೈಗೊಳ್ಳಲು ಒತ್ತಾಯಿಸುತ್ತಿದ್ದೇವೆ. ಶಾಂತಿ ಮಾರ್ಗದಲ್ಲಿ ನಡೆದಿದ್ದಕ್ಕಾಗಿ ನಾವು ಹಲವು ಕಠಿಣ ಸನ್ನಿವೇಶನಗಳನ್ನು ಎದುರಿಸಬೇಕಾಯಿತು. ಆದಾಗ್ಯೂ, ನಮ್ಮನ್ನು ಪ್ರತ್ಯೇಕತಾದಿಗಳು, ದೇಶ ವಿರೋಧಿ ಮತ್ತು ಶಾಂತಿ ಸ್ಥಾಪನೆಯ ವಿರೋಧಿಗಳು ಎಂಬ ಹಣೆಪಟ್ಟಿ ಕಟ್ಟಲಾಯಿತು. ನಮಗೆ ಯಾವುದೇ ವೈಯಕ್ತಿಕ ಆಕಾಂಕ್ಷೆ ಇಲ್ಲ. ಆದರೆ, ಜಮ್ಮು-ಕಾಶ್ಮೀರ ಕುರಿತು ಶಾಂತಿಯುತ ತೀರ್ಮಾನವಷ್ಟೇ ಬೇಕು' ಎಂದಿದ್ದಾರೆ.

'2019ರ ಆಗಸ್ಟ್ ಐದರಂದು ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿ, ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜನೆ ಮಾಡಿದ ಬಳಿಕ ಜನರು ಕಷ್ಟದ ಪರಿಸ್ಥಿತಿಗೆ ದೂಡಲ್ಪಟ್ಟರು. ನನಗೆ ಜನರ ಪರವಾಗಿ ಧ್ವನಿಯೆತ್ತುವ ಜವಾಬ್ದಾರಿ ಇದೆ. ಹುರಿಯತ್ ಕಾನ್ಫರೆನ್ಸ್ ಜನರ ಪರವಾಗಿ ನಿರಂತರವಾಗಿ ಧ್ವನಿಯೆತ್ತಿತ್ತು. ಆದರೆ, ಮಾಧ್ಯಮ ನಮ್ಮ ಹೇಳಿಕೆಗಳನ್ನು ಪ್ರಸಾರ ಮಾಡುವುದನ್ನು ನಿಲ್ಲಿಸಿತು. ಇದು ನಾವೆಲ್ಲರೂ ಸಹನಶೀಲವಾಗಿರುವ ಸಮಯವಾಗಿದ್ದು, ದೇವರಲ್ಲಿ ನಂಬಿಕೆಯಿಡುವಂತೆ ನನ್ನ ಜನರಿಗೆ ಹೇಳಬೇಕಿದೆ' ಎಂದರು.

ನೀರಜ್ ಚೋಪ್ರಾ, ಸಿಂಧು, ಲವ್ಲಿನಾ ಮೇಲೆ ಭರವಸೆ • ಚೆಸ್, ಕ್ರಿಕೆಟ್, ಕುಸ್ತಿಯಲ್ಲಿ ಚಿನ್ನದ ನಿರೀಕ್ಷೆ • ಇಂದು ಉದ್ಘಾಟನೆ

# ಭಾರತಕ್ಕೆ 'ಪದಕ ಶತಕ'ದ ಕನಸು

**ಪ್ರಸಕ್ತ ಕೂಟದ ವಿಶೇಷಗಳು**

**11,975** ಭಾಗವಹಿಸುತ್ತಿರುವ ಅಥ್ಲೀಟ್‌ಗಳು

**45** ಸ್ಪರ್ಧಿಸುತ್ತಿರುವ ದೇಶಗಳು

**481** ಚಿನ್ನದ ಪದಕಗಳನ್ನು ಗೆಲ್ಲುವ ಅವಕಾಶ

**40** ಕ್ರೀಡೆಗಳು

**5** ನಗರಗಳಲ್ಲಿ ಕ್ರೀಡಾಕೂಟ

**655** ಕಣಕ್ಕಿಳಿಯಲಿರುವ ಭಾರತದ ಸ್ಪರ್ಧಿಗಳು

**686** ಆತಿಥೇಯ ಚೀನಾ ತಂಡದಲ್ಲಿರುವ ಕ್ರೀಡಾಪಟುಗಳು

**₹11,620** ಕೋಟಿ ಕೂಟಕ್ಕಾಗಿ ಚೀನಾ ವಿನಿಯೋಗಿಸಿರುವ ಮೊತ್ತ

**ಹಾಂಗ್‌ಝೌ (ಪಿಟಿಐ):** ಒಲಿಂಪಿಕ್ ಚಾಂಪಿಯನ್ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರ ನಾಯಕತ್ವದ ಭಾರತವು ಶನಿವಾರದಿಂದ ಆರಂಭವಾಗಲಿರುವ 19ನೇ ಏಷ್ಯನ್ ಕ್ರೀಡಾಕೂಟದಲ್ಲಿ ಪದಕಗಳ ಶತಕ ದಾಖಲಿಸಲು ಸಜ್ಜಾಗಿದೆ.

ಹೋದ ವರ್ಷವೇ ಈ ಕೂಟ ನಡೆಯಬೇಕಿತ್ತು. ಆದರೆ ಕೋವಿಡ್ ಬಿಕ್ಕಟ್ಟಿನ ಕಾರಣ ಈ ವರ್ಷಕ್ಕೆ ಮುಂದೂಡಲಾಗಿತ್ತು.. ಇದೀಗ ಕೂಟವನ್ನು ಯಶಸ್ವಿಗೊಳಿಸಲು ಆತಿಥೇಯ ಚೀನಾ ದೇಶವೂ ಸರ್ವಸನ್ನದ್ಧವಾಗಿದೆ.

ಈ ಬಾರಿ ಒಟ್ಟು 39 ಕ್ರೀಡೆಗಳಲ್ಲಿ ಭಾರತದ 655 ಕ್ರೀಡಾಪಟುಗಳು ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಲಿದ್ದಾರೆ. 2018ರಲ್ಲಿ ಜಕಾರ್ತದಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತಂಡವು 70 ಪದಕಗಳನ್ನು (16 ಚಿನ್ನ, 23 ಬೆಳ್ಳಿ ಹಾಗೂ 31 ಕಂಚು) ಜಯಿಸಿತ್ತು. ಈ ಬಾರಿ ನೂರರ ಗಡಿ ದಾಟುವ ಆತ್ಮವಿಶ್ವಾಸದಲ್ಲಿ ಭಾರತ ತಂಡವಿದೆ.

2021ರಲ್ಲಿ ಟೋಕಿಯೊದಲ್ಲಿ ನಡೆದಿದ್ದ ಒಲಿಂಪಿಕ್ ಕೂಟದಲ್ಲಿ ಭಾರತ ಅಮೋಘ ಪ್ರದರ್ಶನ ನೀಡಿತ್ತು. ಮುಂದಿನ ವರ್ಷ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಿಟ್ಟಿಸಲು ಏಷ್ಯನ್ ಕ್ರೀಡಾಕೂಟದಲ್ಲಿ ಅವಕಾಶವಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತದ ಕ್ರೀಡಾಪಟುಗಳು ಟ್ರ್ಯಾಕ್ ಮತ್ತು ಫೀಲ್ಡ್, ಈಜು, ಕುಸ್ತಿ, ಶೂಟಿಂಗ್, ಬಾಕ್ಸಿಂಗ್ ಮತ್ತಿತರ ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಅದರಿಂದಾಗಿ ಕಳೆದ ಬಾರಿಗಿಂತ ಈ ಸಲ ಹೆಚ್ಚು ಪದಕ ಗಳಿಕೆಯಾಗುವ ನಿರೀಕ್ಷೆ ಇದೆ.

ಹೋದ ಬಾರಿ ಟ್ರ್ಯಾಕ್ ಹಾಗೂ ಫೀಲ್ಡ್‌ನಲ್ಲಿ 20 ಪದಕ ಜಯಿಸಿದ್ದ ತಂಡವು ಈ ಬಾರಿ 25 ಪದಕ ಗೆಲ್ಲುವ ಭರವಸೆ ಇದೆ. ಎಲ್ಲ ಕ್ರೀಡೆಗಳಲ್ಲಿಯೂ ಸೇರಿಸಿ 20ಕ್ಕಿಂತ ಹೆಚ್ಚು ಚಿನ್ನದ ಪದಕಗಳು ಒಲಿಯುವ ಸಾಧ್ಯತೆ ಇದೆ.

**ಐವರು ಒಲಿಂಪಿಕ್ ಪದಕವಿಜೇತರು:** ಇದೇ ಮೊದಲ ಬಾರಿಗೆ ಏಷ್ಯನ್ ಕೂಟದಲ್ಲಿ ಭಾರತ ತಂಡದಲ್ಲಿ ಐವರು ಒಲಿಂಪಿಕ್ ಪದಕವಿಜೇತರು ಇದ್ದಾರೆ. ಟೋಕಿಯೊ ಒಲಿಂಪಿಕ್ ಚಿನ್ನದ ಪದಕ ವಿಜೇತ ನೀರಜ್ ಈಚೆಗಷ್ಟೇ ವಿಶ್ವ ಅಥ್ಲೆಟಿಕ್ಸ್‌ನಲ್ಲಿಯೂ ಸ್ವರ್ಣ ಸಂಭ್ರಮ ಆಚರಿಸಿದ್ದರು. ಡೈಮಂಡ್ ಲೀಗ್‌ನಲ್ಲಿಯೂ ಅಮೋಘ ಪ್ರದರ್ಶನ ನೀಡಿ ದ್ದರು. ಇದರಿಂದಾಗಿ ಅವರು ಇಲ್ಲಿಯೂ ಚಿನ್ನ ಗೆಲ್ಲುವ ನೆಚ್ಚಿನ ಅಥ್ಲೀಟ್ ಆಗಿದ್ದಾರೆ.

ಅವರಲ್ಲದೇ ವೇಟ್‌ಲಿಫ್ಟರ್ ಮೀರಾ ಬಾಯಿ ಚಾನು, ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು, ಕುಸ್ತಿಪಟು ಬಜರಂಗ್ ಪೂನಿಯಾ, ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಕಣದಲ್ಲಿದ್ದಾರೆ.

ಅಲ್ಲದೇ ಹೋದ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಭಾರತ ಪುರುಷರ ಹಾಕಿ ತಂಡದ ಬಹುತೇಕ ಆಟಗಾರರೂ ಇಲ್ಲಿದ್ದಾರೆ. ಹಾಕಿ ಕ್ರೀಡೆಯಲ್ಲಿ ಭಾರತದ ಪುರುಷ ಹಾಗೂ ಮಹಿಳಾ ತಂಡಗಳು ಚಿನ್ನದ ಮೇಲೆ ಕಣ್ಣಿಟ್ಟಿವೆ. ಕಬಡ್ಡಿಯಲ್ಲಿಯೂ ಎರಡೂ ತಂಡಗಳು ಚಿನ್ನದ ಪದಕ ಜಯಿಸುವ ಸಾಧ್ಯತೆಗಳು ಹೆಚ್ಚಿವೆ.

ಈ ಬಾರಿ ಚೆಸ್, ಆರ್ಚರಿ ಮತ್ತು ಕ್ರಿಕೆಟ್ ಕ್ರೀಡೆಗಳಲ್ಲಿಯೂ ಭಾರತಕ್ಕೆ ಚಿನ್ನದ ಗರಿ ಲಭಿಸುವ ನಿರೀಕ್ಷೆ ಇದೆ. ಕಳೆದ ಬಾರಿ ಎಂಟು ಪದಕ ಗೆದ್ದಿದ್ದ ಶೂಟರ್‌ಗಳು ಈ ಬಾರಿಯೂ ವಿಶ್ವಾಸ ಮೂಡಿಸಿದ್ದಾರೆ. ಮಹಿಳೆಯರ ಬಾಕ್ಸಿಂಗ್‌ನಲ್ಲಿ ನಿಖತ್ ಜರೀನ್ ಮತ್ತು ಲವ್ಲೀನಾ ಮೇಲೆ ಅಪಾರ ನಿರೀಕ್ಷೆ ಇದೆ. ಬ್ಯಾಡ್ಮಿಂಟನ್‌ನಲ್ಲಿ ಪಿ.ವಿ. ಸಿಂಧು ಲಯಕ್ಕೆ ಮರಳಿದರೆ ಪದಕ ಖಚಿತ. ಉಳಿದಂತೆ ಲಕ್ಷ್ಯ ಸೇನ್, ಪ್ರಣಯ್, ಕಿದಂಬಿ ಶ್ರೀಕಾಂತ್, ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಗಾಯತ್ರಿ ಗೋಪಿಚಂದ್–ತ್ರಿಷಾ ಜೋಳಿ ಅವರಿಂದ ಚಿನ್ನದ ನಿರೀಕ್ಷೆ ಇದೆ. ಫುಟ್‌ಬಾಲ್‌ನಲ್ಲಿ ಸುನಿಲ್ ಚೆಟ್ರಿ ಬಳಗವೂ ಫೈನಲ್‌ವರೆಗೆ ಸಾಗುವ ಭರವಸೆ ಇದೆ.

ಪ್ರತಿ ಬಾರಿಯಂತೆ ಚೀನಾ ಈ ಸಲವೂ ಪದಕ ಜಯದಲ್ಲಿ ಕಠಿಣ ಪೈಪೋಟಿಯೊಡ್ಡಲಿದೆ. ಈ ತಂಡದಲ್ಲಿ 437 ಮಹಿಳಾ ಅಥ್ಲೀಟ್‌ಗಳೂ ಸೇರಿ 886 ಮಂದಿ ಇದ್ದಾರೆ. 2010ರಲ್ಲಿ ಚೀನಾ ತಂಡದಲ್ಲಿ 977 ಕ್ರೀಡಾಪಟುಗಳಿದ್ದರು. ದಕ್ಷಿಣ ಕೊರಿಯಾ 867 ಅಥ್ಲೀಟ್‌ಗಳನ್ನು ಕಣಕ್ಕಿಳಿಸುತ್ತಿದೆ. ಬಲಾಢ್ಯ ದೇಶಗಳಾದ ಜಪಾನ್, ಇಂಡೊನೇಷ್ಯಾ, ಇರಾನ್ ಹಾಗೂ ಮಲೇಷ್ಯಾ ತಂಡಗಳ ಪೈಪೋಟಿಯನ್ನು ಭಾರತವು ಎದುರಿಸಿ ನಿಂತು ನೂರರ ಕನಸು ನನಸುಗೊಳಿಸಿಕೊಳ್ಳುವ ಸವಾಲು ಇದೆ.

## ಹಸಿರು ಕ್ರೀಡಾಕೂಟ!

ಒಲಿಂಪಿಕ್ ಸ್ಪೋರ್ಟ್ಸ್ ಸೆಂಟರ್ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ಉದ್ಘಾಟನೆ ಕಾರ್ಯಕ್ರಮ ನಡೆಯಲಿದೆ.

ಭಾಗವಹಿಸಿರುವ ತಂಡಗಳ ಪಥಸಂಚಲನ, ಚೀನಾ ದೇಶದ ಸಾಂಸ್ಕೃತಿಕ ತಂಡಗಳ ಕಾರ್ಯಕ್ರಮ, ಜನಪದ ನೃತ್ಯ, ಗಾಯನಗಳು ರಂಗೇರಲಿವೆ. ಚೀನಾದ ಸುಪ್ರಸಿದ್ಧ ಸಮರ ಕಲೆಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿಕೊಂಡು ವಿನೂತನ ಕಾರ್ಯಕ್ರಮಗಳೂ ನಡೆಯಲಿವೆ.

1990ರಲ್ಲಿ ಬೀಜಿಂಗ್ ಮತ್ತು 2010ರಲ್ಲಿ ಗುವಾಂಗ್‌ಝೌ ನಗರಗಳಲ್ಲಿ ಏಷ್ಯಾ ಕ್ರೀಡಾಕೂಟ ನಡೆದಿತ್ತು. 2008ರಲ್ಲಿ ಬೀಜಿಂಗ್‌ನಲ್ಲಿ ಒಲಿಂಪಿಕ್ ಕೂಡ ಆಯೋಜನೆಗೊಂಡಿತ್ತು. ಚೀನಾ ದೇಶವು ಇದೀಗ ಮೂರನೇ ಬಾರಿ ಏಷ್ಯನ್ ಕ್ರೀಡಾಕೂಟ ನಡೆಸಲಿದೆ. ಈ ಬಾರಿ ಹಸಿರು ವಿದ್ಯುತ್ ಸಂದೇಶವನ್ನು ನೀಡಲಾಗುತ್ತಿದೆ. ಅಲ್ಲದೇ ಈ ಕೂಟವನ್ನು ಇಂಗಾಲಮುಕ್ತ ಹಸಿರು ಏಷ್ಯನ್ ಗೇಮ್ಸ್ ಎಂದು ಘೋಷಿಸಲಾಗಿದೆ.

ನೀರಜ್ ಚೋಪ್ರಾ

ಲವ್ಲಿನಾ ಬೊರ್ಗೊಹೈನ್

**ಭಾರತಕ್ಕೆ ದೊರೆತ ಪದಕಗಳ ವಿವರ**

| ವರ್ಷ | ಸ್ಥಳ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1951 | ನವದೆಹಲಿ | 15 | 16 | 20 | 51 |
| 1954 | ಮನಿಲಾ | 5 | 4 | 8 | 17 |
| 1958 | ಟೋಕಿಯೊ | 5 | 4 | 4 | 13 |
| 1962 | ಜಕಾರ್ತ | 10 | 13 | 10 | 33 |
| 1966 | ಬ್ಯಾಂಕಾಕ್ | 7 | 3 | 11 | 21 |
| 1970 | ಬ್ಯಾಂಕಾಕ್ | 6 | 9 | 10 | 25 |
| 1974 | ಟೆಹರಾನ್ | 4 | 12 | 12 | 28 |
| 1978 | ಬ್ಯಾಂಕಾಕ್ | 11 | 11 | 6 | 28 |
| 1982 | ನವದೆಹಲಿ | 13 | 19 | 25 | 57 |
| 1986 | ಸೋಲ್ | 5 | 9 | 23 | 37 |
| 1990 | ಬೀಜಿಂಗ್ | 1 | 8 | 14 | 23 |
| 1994 | ಹಿರೋಷಿಮಾ | 4 | 3 | 16 | 23 |
| 1998 | ಬ್ಯಾಂಕಾಕ್ | 7 | 11 | 17 | 35 |
| 2002 | ಬೂಸಾನ್ | 11 | 12 | 13 | 36 |
| 2006 | ದೋಹಾ | 10 | 17 | 26 | 53 |
| 2010 | ಗುವಾಂಗ್‌ಝೌ | 14 | 17 | 34 | 65 |
| 2014 | ಇಂಚಿಯಾನ್ | 11 | 10 | 36 | 57 |
| 2018 | ಜಕಾರ್ತ ಮತ್ತು ಪಾಲೆಂಬಾಂಗ್ | 16 | 23 | 31 | 70 |

**ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಸಂಜೆ 4.30**

ಪಿ.ವಿ. ಸಿಂಧು

ಭಾರತದ ಚೆಸ್ ಆಟಗಾರ್ತಿ ಕೊನೇರು ಹಂಪಿ ಮತ್ತು ತಂಡದ ಇತರರು ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಶುಕ್ರವಾರ ಹಾಂಗ್‌ಝೌಗೆ ತೆರಳಿದರು –ಪಿಟಿಐ ಚಿತ್ರ

## ಟಿಟಿ: ಭಾರತ ತಂಡ ಶುಭಾರಂಭ

**ಹಾಂಗ್‌ಝೌ (ಪಿಟಿಐ):** ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಟೇಬಲ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ಪುರುಷರ ತಂಡದವರು ಶುಕ್ರವಾರ ನಡೆದ ಎರಡೂ ಪಂದ್ಯಗಳನ್ನು ಗೆದ್ದರು. ಮೊದಲ ಪಂದ್ಯದಲ್ಲಿ 3–0 ಯಿಂದ ಯೆಮನ್ ತಂಡವನ್ನು ಮಣಿಸಿ ಶುಭಾರಂಭ ಮಾಡಿದರೆ, ಎರಡನೇ ಪಂದ್ಯದಲ್ಲಿ 3–1 ರಿಂದ ಸಿಂಗಪುರ ವಿರುದ್ಧ ಜಯ ಸಾಧಿಸಿದರು.

ಅನುಭವಿ ಶರತ್ ಕಮಲ್, ಜಿ.ಸತ್ಯನ್ ಮತ್ತು ಹರ್ಮೀತ್ ದೇಸಾಯಿ ಅವರು ತಮ್ಮ ಎದುರಾಳಿಗಳನ್ನು ಸುಲಭವಾಗಿ ಮಣಿಸಿ, ಯೆಮನ್ ವಿರುದ್ಧ ಭಾರತದ ಗೆಲುವಿಗೆ ಕಾರಣರಾದರು.

ಮೊದಲು ಕಣಕ್ಕಿಳಿದ ಸತ್ಯನ್ 11–3, 11–2, 11–6 ರಿಂದ ಅಲಿ ಒಮರ್ ಅಹ್ಮದ್ ಅವರನ್ನು ಕೇವಲ 14 ನಿಮಿಷಗಳಲ್ಲಿ ಸೋಲಿಸಿದರು. ತಮ್ಮ ಕೊನೆಯ ಏಷ್ಯನ್ ಗೇಮ್ಸ್‌ನಲ್ಲಿ ಆಡುತ್ತಿರುವ 41 ವರ್ಷದ ಶರತ್ ಕಮಲ್ 11–3, 11–4, 11–6 ರಿಂದ ಇಬ್ರಾಹಿಂ ಅಬ್ದುಲ್‌ಹಕೀಂ ವಿರುದ್ಧ ಗೆದ್ದು 2–0 ಮುನ್ನಡೆ ತಂದಿತ್ತರು.

ಭಾರತದ ಅಗ್ರ ರ್‍ಯಾಂಕ್‌ನ ಆಟಗಾರ ಹರ್ಮೀತ್ ಮೂರನೇ ಸಿಂಗಲ್ಸ್‌ನಲ್ಲಿ 11–1, 11–1, 11–7 ರಿಂದ ಮಗ್ದ್ ಅಹ್ಮದ್ ಅಲಿ ಎದುರು ಸುಲಭ ಜಯ ಸಾಧಿಸಿದರು.

ಸಿಂಗಪುರ ಎದುರು ಸತ್ಯನ್ ತಮ್ಮ ಎರಡೂ ಪಂದ್ಯಗಳನ್ನು ಗೆದ್ದರು. ಹರ್ಮೀತ್ ಕೂಡಾ ಜಯ ಸಾಧಿಸಿದರೆ, ಶರತ್ ಕಮಲ್ ಅವರು ಝು ಯು ಕ್ಲಾರೆನ್ಸ್ ಎದುರು ಪರಾಭವಗೊಂಡರು. ಮಹಿಳೆಯರು ತಮ್ಮ ಮೊದಲ ಪಂದ್ಯದಲ್ಲಿ 3–2 ರಿಂದ ಸಿಂಗಪುರ ಎದುರು ಪ್ರಯಾಸದ ಗೆಲುವು ಸಾಧಿಸಿದರು.

## ಏಷ್ಯನ್ ಗೇಮ್ಸ್‌ನಲ್ಲಿ ಇಂದು

**ಮಹಿಳೆಯರ ಟೇಬಲ್ ಟೆನಿಸ್:** ಬೆಳಿಗ್ಗೆ 10- ಭಾರತ– ನೇಪಾಲ (ಗುಂಪು ಎಫ್)

**ಪುರುಷರ ಟೇಬಲ್ ಟೆನಿಸ್:** ಮಧ್ಯಾಹ್ನ 12- ಭಾರತ– ತಜಕಿಸ್ತಾನ (ಗುಂಪು ಎಫ್)

**ಸೇಲಿಂಗ್ ಸ್ಪರ್ಧೆ:** ಬೆಳಿಗ್ಗೆ 11ರಿಂದ- ಮಹಿಳೆಯರ ವಿಂಡ್ ಸರ್ಫಿಂಗ್, ಮಹಿಳೆಯರ ಸ್ಕಿಫ್, ಪುರುಷರ ವಿಂಡ್ ಸರ್ಫಿಂಗ್, ಪುರುಷರ ಸ್ಕಿಫ್

## 1951 ರಲ್ಲಿ ಆರಂಭ

ಏಷ್ಯಾದ ಕ್ರೀಡಾಪಟುಗಳಿಗೆ ಸಾಮರ್ಥ್ಯ ತೋರಿಸಲು ವೇದಿಕೆಯಾಗಿರುವ ಏಷ್ಯನ್ ಕ್ರೀಡಾಕೂಟ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ. 1951 ರಲ್ಲಿ ನಡೆದಿದ್ದ ಮೊದಲ ಕೂಟಕ್ಕೆ ನವದೆಹಲಿ ಆತಿಥ್ಯ ವಹಿಸಿತ್ತು. ಅದಕ್ಕೂ ಮುನ್ನ 'ಫಾರ್ ಈಸ್ಟರ್ನ್ ಚಾಂಪಿಯನ್‌ಷಿಪ್ ಗೇಮ್ಸ್' ಎಂಬ ಹೆಸರಿನಲ್ಲಿ ಕ್ರೀಡಾಕೂಟ ಆಯೋಜನೆಯಾಗುತ್ತಿತ್ತು. 1913 ರಲ್ಲಿ ಆರಂಭವಾದ ಈ ಕ್ರೀಡಾಕೂಟ 1934ರಲ್ಲಿ ಮೊಟಕುಗೊಂಡಿತು.

2ನೇ ವಿಶ್ವಯುದ್ಧದ ಬಳಿಕ ಏಷ್ಯಾದ ಹಲವು ದೇಶಗಳು ಸ್ವತಂತ್ರಗೊಂಡವು. ಫಾರ್ ಈಸ್ಟರ್ನ್ ಗೇಮ್ಸ್ ಮತ್ತೆ ಆರಂಭಿಸಲು ಚೀನಾ, ಫಿಲಿಪ್ಪೀನ್ಸ್ ಉತ್ಸುಕತೆ ತೋರಿದವು. 1948ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಈ ಬಗ್ಗೆ ಚರ್ಚೆಗಳು ನಡೆದವು. ಆದರೆ ಫಾರ್ ಈಸ್ಟರ್ನ್ ಗೇಮ್ಸ್ ಬದಲು, ಒಲಿಂಪಿಕ್ಸ್‌ನಂತೆಯೇ ಏಷ್ಯಾದ ದೇಶಗಳಿಗಾಗಿ ಕ್ರೀಡಾಕೂಟ ಆಯೋಜಿಸುವ ಚಿಂತನೆ ಈ ವೇಳೆ ಮೂಡಿತು. 1949 ರಲ್ಲಿ ಏಷ್ಯನ್ ಅಥ್ಲೆಟಿಕ್ ಫೆಡರೇಷನ್ ಅಸ್ತಿತ್ವಕ್ಕೆ ಬಂತು. 1951 ರಲ್ಲಿ ನವದೆಹಲಿಯಲ್ಲಿ ಮೊದಲ ಏಷ್ಯನ್ ಕ್ರೀಡಾಕೂಟ ನಡೆಸಲು ನಿರ್ಧರಿಸಲಾಯಿತು.

ಮೊದಲ ಏಷ್ಯನ್ ಗೇಮ್ಸ್‌ನಲ್ಲಿ 11 ದೇಶಗಳ ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ನಂತರದ ವರ್ಷಗಳಲ್ಲಿ ಪಾಲ್ಗೊಳ್ಳುವ ದೇಶಗಳ ಸಂಖ್ಯೆ ಹೆಚ್ಚಿತು. 2006ರ ಕೂಟದಿಂದ ಇಲ್ಲಿಯವರೆಗೆ 45 ದೇಶಗಳು ಈ ಕೂಟದಲ್ಲಿ ಭಾಗವಹಿಸುತ್ತಿವೆ.

ವಾಲಿಬಾಲ್: ತೈಪೆ ವಿರುದ್ಧ ನೇರ ಸೆಟ್‌ಗಳ ಜಯ

## ಎಂಟರ ಘಟ್ಟಕ್ಕೆ ಭಾರತ

**ಹಾಂಗ್‌ಝೌ (ಪಿಟಿಐ):** ಸ್ಫೂರ್ತಿಯುತ ಪ್ರದರ್ಶನ ಮುಂದುವರಿಸಿದ ಭಾರತ ವಾಲಿಬಾಲ್ ಪುರುಷರ ತಂಡ ಶುಕ್ರವಾರ 3–0 ಯಿಂದ ಚೀನಾ ತೈಪೆ ತಂಡವನ್ನು ಸೋಲಿಸಿ ಏಷ್ಯನ್ ಗೇಮ್ಸ್ ಸ್ಪರ್ಧೆಯ ಕ್ವಾರ್ಟರ್‌ಫೈನಲ್ ತಲುಪಿತು. ಭಾರತ ಭಾನುವಾರ ನಡೆಯುವ ಪಂದ್ಯದಲ್ಲಿ ಜಪಾನ್ ಅಥವಾ ಕಜಕಸ್ತಾನ ತಂಡವನ್ನು ಎದುರಿಸಲಿದೆ.

ಭಾರತ ಒಂದು ಗಂಟೆ 25 ನಿಮಿಷಗಳ ಕಾಲ ನಡೆದ ಸೆಣಸಾಟದಲ್ಲಿ 25–22, 25–22, 25–21 ರಿಂದ ತೈಪೆ ತಂಡವನ್ನು ಸೋಲಿಸಿತು.

'ಅವರದು (ತೈಪೆ) ಅನುಭವಿ ತಂಡ. ವೇಗವಾಗಿ ಆಡುತ್ತಾರೆ. ಮೊದಲ ಎರಡು ಸೆಟ್‌ಗಳಲ್ಲಿ ಮುನ್ನಡೆಯನ್ನೂ ಪಡೆದಿದ್ದರು. ಆದರೆ ನಾವು ಸಕಾಲದಲ್ಲಿ ಅವರನ್ನು ಹಿಂದೆಹಾಕಿ ಮತ್ತೆ ಮುನ್ನಡೆ ಪಡೆದೆವು' ಎಂದು ತಂಡದ ನಾಯಕ ವಿನೀತ್ ಪಂದ್ಯದ ನಂತರ ಸುದ್ದಿಗಾರರಿಗೆ ತಿಳಿಸಿದರು.

ಮೊದಲ ಸೆಟ್‌ನ ಬಹುತೇಕ ಸಮಯ ಹಿಂದಿದ್ದ ಭಾರತ ಕೊನೆಗೂ 21–21ರಲ್ಲಿ ಸಮ ಮಾಡಿಕೊಂಡಿತು. ಈ ಹಂತದಲ್ಲಿ ಎರಿನ್ ವರ್ಗಿಸ್ ಮತ್ತು ಅಶ್ವಲ್ ರೈ ಮುನ್ನಡೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಎರಡನೇ ಸೆಟ್‌ನಲ್ಲೂ ಉತ್ತಮ ಹೋರಾಟ ಕಂಡುಬಂದು ಸ್ಕೋರ್ ಒಂದು ಹಂತದಲ್ಲಿ 17–17 ಸಮನಾಗಿತ್ತು. ಆದರೆ ನಿರ್ಣಾಯಕ ಸಂದರ್ಭದಲ್ಲಿ ಭಾರತ ಬೆನ್ನುಬೆನ್ನಿಗೆ ಪಾಯಿಂಟ್ ಕಲೆಹಾಕಿತು. ಮೂರನೇ ಸೆಟ್‌ನಲ್ಲಿ ಭಾರತ ಸಕಾರಾತ್ಮಕ ಆರಂಭ ಮಾಡಿ 10–4ರಲ್ಲಿ ಉತ್ತಮ ಮುನ್ನಡೆ ಹೊಂದಿತ್ತು. ಆದರೆ ತೈಪೆ ಆಟಗಾರರು ಪ್ರತಿಹೋರಾಟ ನೀಡಿ ಹಿನ್ನಡೆಯನ್ನು 10–12ಕ್ಕೆ ಇಳಿಸಿದರು. ಸ್ಕೋರ್ ಒಂದು ಹಂತದಲ್ಲಿ 14–14ರಲ್ಲಿ ಸಮನಾಗಿತ್ತು. ಆದರೆ ಭಾರತ ಮತ್ತೆ 21–18ರಲ್ಲಿ ಮುನ್ನಡೆ ಸಾಧಿಸಿತಲ್ಲದೇ, ಅಂತಿಮವಾಗಿ 25–21ರಲ್ಲಿ 3ನೇ ಸೆಟ್‌ನಲ್ಲೂ ಜಯಗಳಿಸಿತು.

'ಪಾಕಿಸ್ತಾನವೂ ಅವರನ್ನು (ತೈಪೆ) 3–0ಯಿಂದ ಸೋಲಿಸಿತ್ತು. ಹೀಗಾಗಿ ನಾವು ಅವರನ್ನು ಸೋಲಿಸಲೇಬೇಕಾದ ಒತ್ತಡದಲ್ಲಿದ್ದೆವು' ಎಂದು ಸಹಾಯಕ ಕೋಚ್ ಜೈದೀಪ್ ಸರ್ಕಾರ್ ಹೇಳಿದರು.

'ಕೊರಿಯಾ ಮತ್ತು ಚೀನಾ ತೈಪೆ ತಂಡಗಳ ಮೇಲೆ ಬೆನ್ನುಬೆನ್ನಿಗೆ ಗಳಿಸಿದ ಜಯಗಳಿಂದ ಭಾರತ ಈಗ ಜಪಾನ್ ತಂಡವನ್ನು ವಿಶ್ವಾಸದಿಂದ ಎದುರಿಸಲು ಸಜ್ಜಾಗಿದೆ' ಎಂದರು.

**ಭಾರತ ಹೆಚ್ಚು ಪದಕ ಗೆದ್ದ ಕ್ರೀಡೆಗಳು**

| ಕ್ರೀಡೆ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಅಥ್ಲೆಟಿಕ್ಸ್ | 79 | 88 | 87 | 254 |
| ಕುಸ್ತಿ | 11 | 14 | 34 | 59 |
| ಶೂಟಿಂಗ್ | 9 | 21 | 28 | 58 |
| ಬಾಕ್ಸಿಂಗ್ | 9 | 16 | 32 | 57 |
| ಟೆನಿಸ್ | 9 | 6 | 17 | 32 |




**2018ರ ಏಷ್ಯನ್ ಗೇಮ್ಸ್‌ನಲ್ಲಿ ದೇಶಗಳ ಪದಕ ಸಾಧನೆ**

| ರ್‍ಯಾಂಕ್ | ದೇಶ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|---|
| 1 | ಚೀನಾ | 132 | 92 | 65 | 289 |
| 2 | ಜಪಾನ್ | 75 | 56 | 74 | 205 |
| 3 | ದಕ್ಷಿಣ ಕೊರಿಯಾ | 49 | 58 | 70 | 117 |
| 4 | ಇಂಡೊನೇಷ್ಯಾ | 31 | 24 | 43 | 98 |
| 5 | ಉಜ್ಬೇಕಿಸ್ತಾನ | 21 | 24 | 25 | 70 |
| 6 | ಇರಾನ್ | 20 | 20 | 22 | 62 |
| 7 | ಚೀನಾ ತೈಪೆ | 17 | 19 | 31 | 67 |
| 8 | ಭಾರತ | 16 | 24 | 30 | 70 |
| 9 | ಕಜಕಿಸ್ತಾನ | 15 | 17 | 44 | 76 |
| 10 | ಉತ್ತರ ಕೊರಿಯಾ | 12 | 12 | 13 | 37 |
| ಉಳಿದ 27 ರಾಷ್ಟ್ರಗಳು | | 79 | 118 | 206 | 403 |
| ಒಟ್ಟು (37 ರಾಷ್ಟ್ರ) | | 467 | 464 | 623 | 1554 |

ಏಷ್ಯನ್ ಗೇಮ್ಸ್ ಮ್ಯಾಸ್ಕಟ್‌ಗಳ ಮುಂದೆ ಯುವತಿಯೊಬ್ಬಳು ಫೋಟೊಗೆ ಪೋಸ್ ನೀಡಿದರು –ಎಎಫ್‌ಪಿ ಚಿತ್ರ

## ಮಹಿಳಾ ಕ್ರಿಕೆಟ್: ಸೆಮಿಗೆ ಲಂಕಾ, ಬಾಂಗ್ಲಾ

**ಹಾಂಗ್‌ಝೌ (ಎಎಫ್‌ಪಿ):** ಏಷ್ಯನ್ ಗೇಮ್ಸ್ ಮಹಿಳಾ ಕ್ರಿಕೆಟ್ ಕ್ವಾರ್ಟರ್‌ಫೈನಲ್ ಪಂದ್ಯಗಳು ಶುಕ್ರವಾರವೂ ಮಳೆಯ ಆಟ ಕಂಡವು. 15 ಓವರುಗಳಿಗೆ ಮೊಟಕುಗೊಂಡ ಪಂದ್ಯದಲ್ಲಿ ಶ್ರೀಲಂಕಾ ಎಂಟು ವಿಕೆಟ್‌ಗಳಿಂದ ಥಾಯ್ಲೆಂಡ್ ತಂಡವನ್ನು ಸೋಲಿಸಿತು. ಆದರೆ ಬಾಂಗ್ಲಾದೇಶ ಮತ್ತು ಹಾಂಗ್‌ಕಾಂಗ್ ನಡುವಣ ಪಂದ್ಯ ಒಂದೂ ಎಸೆತ ಕಾಣದೇ ಮಳೆಗೆ ಕೊಚ್ಚಿಹೋಯಿತು.

ಶ್ರೀಲಂಕಾ ಸೆಮಿಫೈನಲ್‌ಗೆ ಮುನ್ನಡೆಯಿತು. ಬಾಂಗ್ಲಾದೇಶ ವಿಶ್ವ ರ್‍ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನದಲ್ಲಿರುವ ಕಾರಣ ಆ ತಂಡವೂ ನಾಲ್ಕರ ಹಂತಕ್ಕೆ ಲಗ್ಗೆಯಿಟ್ಟಿತು. ಶ್ರೀಲಂಕಾ 15 ಓವರುಗಳಲ್ಲಿ 79 ರನ್‌ಗಳ ಗುರಿ ಎದುರಿಸಿತ್ತು. ರುಮೇಶ ರತ್ನಾಯಕೆ ತರಬೇತಿಯ ತಂಡ 25 ಎಸೆತಗಳಿರುವಂತೆ ಎರಡು ವಿಕೆಟ್ ನಷ್ಟದಲ್ಲಿ ಗುರಿ ತಲುಪಿತು. ಇದಕ್ಕೆ ಮೊದಲು ಥಾಯ್ಲೆಂಡ್ 15 ಓವರುಗಳಲ್ಲಿ 7 ವಿಕೆಟ್‌ಗೆ 78 ರನ್ ಗಳಿಸಿತ್ತು.

ಫೈನಲ್ ಪಂದ್ಯ ಸೋಮವಾರ ನಡೆಯಲಿದೆ. ಪುರುಷರ ಕ್ರಿಕೆಟ್ ಸೆ. 27 ರಂದು ಆರಂಭವಾಗಲಿದೆ.

## ಕರ್ನಾಟಕಕ್ಕೆ ಮಣಿದ ಏಷ್ಯನ್ ಗೇಮ್ಸ್ ಕ್ರಿಕೆಟ್ ತಂಡ

ಭಾಂಡಗೆ

**ಬೆಂಗಳೂರು:** ಮನೋಜ್ ಭಾಂಡಗೆ ಅವರ ಬೌಲಿಂಗ್ ದಾಳಿ (15 ಕ್ಕೆ4) ಮತ್ತು ಮನೀಷ್ ಪಾಂಡೆ ಅವರ ಅಜೇಯ ಅರ್ಧಶತಕದ ನೆರವಿನಿಂದ ಕರ್ನಾಟಕ ತಂಡ, ಶುಕ್ರವಾರ ಇಲ್ಲಿ ನಡೆದ ಅಭ್ಯಾಸ ಪಂದ್ಯದಲ್ಲಿ ಏಷ್ಯನ್ ಕ್ರೀಡಾಕೂಟಕ್ಕೆ ತೆರಳಲಿರುವ ಭಾರತ ಟಿ–20 ಕ್ರಿಕೆಟ್ ತಂಡದ ವಿರುದ್ಧ ನಾಲ್ಕು ವಿಕೆಟ್‌ಗಳ ಜಯಪಡೆಯಿತು.

ಮಧ್ಯಮ ವೇಗಿ ಭಾಂಡಗೆ 4 ಓವರುಗಳಲ್ಲಿ 15 ರನ್ನಿತ್ತು 4 ವಿಕೆಟ್‌ಗಳನ್ನು ಪಡೆದರು. ವಾಸುಕಿ ಕೌಶಿಕ್ ಮತ್ತು ಶುಭಾಂಗ್ ಹೆಗ್ಡೆ ಅವರು ತಲಾ ಮೂರು ವಿಕೆಟ್ ಪಡೆದು ಇಂಡಿಯಾ ಇಲೆವೆನ್ ತಂಡವನ್ನು 20 ಓವರುಗಳಲ್ಲಿ 133 ರನ್‌ಗಳಿಗೆ ಉರುಳಿಸಿದರು.

ಇದಕ್ಕೆ ಉತ್ತರವಾಗಿ ಕರ್ನಾಟಕ ತಂಡ ಐದು ಎಸೆತಗಳು ಉಳಿದಿರುವಂತೆ ಆರು ವಿಕೆಟ್ ನಷ್ಟದಲ್ಲಿ ಗೆಲುವು ಸಾಧಿಸಿತು. ಪಾಂಡೆ 40 ಎಸೆತಗಳಲ್ಲಿ ಔಟಾಗದೇ 52 ರನ್ ಹೊಡೆದರು. ಆರಂಭ ಆಟಗಾರ ಎಲ್.ಆರ್.ಚೇತನ್ 29 ರನ್ ಗಳಿಸಿದರು.

ಭಾರತ ಇಲೆವೆನ್ ತಂಡದ ಪರ ಪ್ರಭಸಿಮ್ರನ್ ಸಿಂಗ್ 31 ಎಸೆತಗಳಲ್ಲಿ 49 ರನ್ ಗಳಿಸಿದರೆ, ಯಶಸ್ವಿ ಜೈಸ್ವಾಲ್ 17 ಎಸೆತಗಳಲ್ಲಿ 31 ರನ್ ಸಿಡಿಸಿದರು. ಆದರೆ ಯುವ ಆಟಗಾರರಾದ ರಾಹುಲ್ ತ್ರಿಪಾಠಿ (6), ಜೀತೇಶ್ ಶರ್ಮಾ (2), ರಿಂಕು ಸಿಂಗ್ (5), ಶಿವಂ ದುಬೆ (0) ಅವರು ವಿಫಲರಾದರು.

**ಸಂಕ್ಷಿಪ್ತ ಸ್ಕೋರುಗಳು:** ಭಾರತ: 20 ಓವರುಗಳಲ್ಲಿ 133 (ಪ್ರಭಸಿಮ್ರನ್ ಸಿಂಗ್ 49, ಯಶಸ್ವಿ ಜೈಸ್ವಾಲ್ 31; ಮನೋಜ್ ಭಾಂಡಗೆ 15ಕ್ಕೆ4, ಶುಭಾಂಗ್ ಹೆಗ್ಡೆ 17ಕ್ಕೆ3); ಕರ್ನಾಟಕ: 19.1 ಓವರುಗಳಲ್ಲಿ 4 ವಿಕೆಟ್‌ಗೆ 136 (ಮನೀಷ್ ಪಾಂಡೆ ಔಟಾಗದೇ 52, ಎಲ್.ಆರ್.ಚೇತನ್ 29).

**ಫಲಿತಾಂಶ:** ಕರ್ನಾಟಕ ತಂಡಕ್ಕೆ 6 ವಿಕೆಟ್ ಜಯ

ಮೂವರು ವುಶು ಸ್ಪರ್ಧಿಗಳಿಗೆ ವೀಸಾ ನಕಾರ • ಕೇಂದ್ರ ಸಚಿವ ಅನುರಾಗ್ ಚೀನಾ ಪ್ರವಾಸ ರದ್ದು

## ಚೀನಾ ಕ್ರಮಕ್ಕೆ ಭಾರತ ಪ್ರತಿಭಟನೆ

**ನವದೆಹಲಿ:** ಹಾಂಗ್ ಝೌ ಏಷ್ಯನ್ ಗೇಮ್ಸ್‌ಗೆ ಭಾರತ ವುಶು ತಂಡದಲ್ಲಿದ್ದ ಅರುಣಾಚಲ ಪ್ರದೇಶದ ಮೂವರು ಮಹಿಳಾ ಸ್ಪರ್ಧಿಗಳಿಗೆ ವೀಸಾ ನಿರಾಕರಿಸಿರುವ ಚೀನಾದ ಕ್ರಮವನ್ನು ಭಾರತ ಶುಕ್ರವಾರ ಬಲವಾಗಿ ಖಂಡಿಸಿದೆ. ಪ್ರತಿಭಟನೆಯಾಗಿ ಹಾಂಗ್ ಝೌ ಕ್ರೀಡಾಕೂಟಕ್ಕೆ ತೆರಳಬೇಕಿದ್ದ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಚೀನಾ ಪ್ರವಾಸವನ್ನು ರದ್ದುಗೊಳಿಸಿದ್ದಾರೆ.

ಮಹಿಳಾ ವುಶು ಪಟುಗಳಾದ ನ್ಯೇಮನ್ ವಾಂಗ್ಸು, ಒನಿಲು ತೇಗಾ ಮತ್ತು ಮೆಪುಂಗ್ ಲಮ್ಗು ಅವರಿಗೆ ಚೀನಾ ಮಾನ್ಯತಾ ಪತ್ರ (ಇದನ್ನು ವೀಸಾ ಆಗಿ ಪರಿಗಣಿಸಲಾಗುತ್ತದೆ) ನೀಡಿಲ್ಲ.

**ಪ್ರತಿಭಟನೆ ದಾಖಲು:** ವೀಸಾ ನಿರಾಕರಣೆಗೆ ಸಂಬಂಧಿಸಿ ಕೇಂದ್ರ ಸರ್ಕಾರ ತನ್ನ ಉಗ್ರ ಪ್ರತಿಭಟನೆಯನ್ನು ದಾಖಲಿಸಿದೆ. ತನ್ನ ಹಿತಾಸಕ್ತಿಗಳ ರಕ್ಷಣೆಗೆ 'ಸೂಕ್ತ ಕ್ರಮಗಳನ್ನು' ಕೈಗೊಳ್ಳುವ ಅಧಿಕಾರವನ್ನು ಸರ್ಕಾರ ಹೊಂದಿದೆ ಎಂದೂ ಹೇಳಿದೆ.

ಚೀನಾದ ಈ ತಾರತಮ್ಯದ ಧೋರಣೆಯನ್ನು ಪ್ರತಿಭಟಿಸಿ ಕ್ರೀಡಾ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು ಉದ್ದೇಶಿತ ಚೀನಾ ಭೇಟಿಯನ್ನು ರದ್ದುಗೊಳಿಸಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ.

ಚೀನಾ ಕ್ರಮವು ಕ್ರೀಡಾಪಟುಗಳನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸುವ ರೀತಿಯಲ್ಲಿದೆ. ಈ ಧೋರಣೆಯು ಕ್ರೀಡಾಕೂಟದ ಆಶಯಕ್ಕೆ ವಿರುದ್ಧವಾಗಿದೆ ಮತ್ತು ಸದಸ್ಯ ರಾಷ್ಟ್ರಗಳ ಕ್ರೀಡಾಪಟುಗಳ ವಿರುದ್ಧ ತಾರತಮ್ಯ ಮಾಡುವಂತಿಲ್ಲ ಎಂಬ ನಿಯಮ ಉಲ್ಲಂಘಿಸಿದೆ' ಎಂದು ಟೀಕಿಸಿದ್ದಾರೆ.

'ಏಷ್ಯನ್ ಕ್ರೀಡಾಕೂಟಕ್ಕೆ ತೆರಳಬೇಕಿದ್ದ ಮೂವರು ವುಶು ಪಟುಗಳಿಗೆ ಮಾನ್ಯತೆ ನಿರಾಕರಿಸಿರುವ ವಿಷಯದಲ್ಲಿ ಚೀನಾ ಅಧಿಕಾರಿಗಳ ಜೊತೆ ಸತತ ಸಂಪರ್ಕದಲ್ಲಿದ್ದೇವೆ' ಎಂದು ಏಷ್ಯಾ ಒಲಿಂಪಿಕ್ ಕೌನ್ಸಿಲ್ (ಒಸಿಎ) ಹಂಗಾಮಿ ಅಧ್ಯಕ್ಷ ರಣಧೀರ್ ಸಿಂಗ್ ಹಾಂಗ್‌ಝೌನಲ್ಲಿ ತಿಳಿಸಿದ್ದಾರೆ.

ವೀಸಾ ನಿರಾಕರಣೆಗೆ ಒಳಗಾಗಿರುವ ಮೂವರು ಸ್ಪರ್ಧಿಗಳು, ಇತರ ಎಂಟು ಮಂದಿ ವುಶು ಸ್ಪರ್ಧಿಗಳ ಜೊತೆ ಶುಕ್ರವಾರ ರಾತ್ರಿ ವಿಮಾನದಲ್ಲಿ ಚೀನಾಕ್ಕೆ ತೆರಳಬೇಕಾಗಿತ್ತು. ಆದರೆ ಅವರ ಮಾನ್ಯತಾ ಪತ್ರ ಡೌನ್‌ಲೋಡ್ ಆಗದ ಕಾರಣ ಅನುಮತಿ ಸಿಗದೇ ಉಳಿಯಬೇಕಾಗಿದೆ. ಶನಿವಾರ ಏಷ್ಯನ್ ಕ್ರೀಡಾಕೂಟದ ಉದ್ಘಾಟನೆ ನಿಗದಿಯಾಗಿದೆ.

'ನಾವು ಕ್ರೀಡಾಕೂಟದ ಕಾರ್ಯಪಡೆ ಜೊತೆ ಗುರುವಾರ ಸಭೆ ನಡೆಸಿದ್ದೆವು. ಅಲ್ಲಿ ಈ ವಿಷಯ ಚರ್ಚಿಸಿದ್ದೇವೆ. ಅವರೂ (ಕಾರ್ಯಪಡೆ) ಸರ್ಕಾರದ ಜೊತೆ ಈ ವಿಷಯ ಚರ್ಚಿಸಲಿದ್ದಾರೆ. ನಾವೂ ಸರ್ಕಾರದ ಜೊತೆ ಚರ್ಚಿಸುತ್ತೇವೆ' ಎಂದು ಹಿರಿಯ ಆಡಳಿತಗಾರ ರಣಧೀರ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವುಶು ಕ್ರೀಡೆಯು ಸಮರ ಕಲೆ (ಮಾರ್ಷಲ್ ಆರ್ಟ್ಸ್)ಯಾಗಿದ್ದು, ಚೀನಾ ಮೂಲದ್ದು ಎನ್ನಲಾಗುತ್ತಿದೆ.

'ವೀಸಾ ನಿರಾಕರಣೆ ವಿಷಯ ಗುರುವಾರವಷ್ಟೇ ನಮ್ಮ ಗಮನಕ್ಕೆ ಬಂದಿದೆ. ಕ್ರೀಡಾಕೂಟದ ಸಂಘಟನಾ ಸಮಿತಿಯ ಜೊತೆ ನಾವು ವಿಷಯ ಎತ್ತಿದ್ದೇವೆ. ಪರಿಹಾರ ಕಂಡುಕೊಳ್ಳಲು ಯತ್ನಿಸುತ್ತಿದ್ದೇವೆ. ನಂತರ ಈ ಬಗ್ಗೆ ಮಾಹಿತಿ ನೀಡುತ್ತೇವೆ' ಎಂದು ಒಸಿಎನ ಹಂಗಾಮಿ ಮಹಾ ನಿರ್ದೇಶಕ ವಿನೋದ್ ತಿವಾರಿ ತಿಳಿಸಿದರು.

ಇನ್ನೊಂದೆಡೆ, 'ಚೀನಾ ಪ್ರವೇಶಿಸಲು ಭಾರತದ ಅಥ್ಲೀಟುಗಳಿಗೆ ವೀಸಾ ನೀಡಲಾಗಿದೆ' ಎಂದು ಒಲಿಂಪಿಕ್ ಕೌನ್ಸಿಲ್‌ನ ಎಥಿಕ್ಸ್ ಸಮಿತಿ ಅಧ್ಯಕ್ಷ ವೀ ಜಿಝೋಂಗ್ ತಿಳಿಸಿದರು. 'ಚೀನಾ ಪ್ರವೇಶಕ್ಕೆ ಈಗಾಗಲೇ ವೀಸಾ ನೀಡಲಾಗಿದೆ. ಚೀನಾ ಯಾವುದೇ ವೀಸಾ ನಿರಾಕರಿಸಿಲ್ಲ. ಚೀನಾ ಸರ್ಕಾರದ ನಿಯಮಾವಳಿಗಳ ಪ್ರಕಾರ ನಾವು ಬೇರೆ ಬೇರೆ ರೀತಿಯ ವೀಸಾ ನೀಡಬಹುದಾಗಿದೆ. ನಮ್ಮಲ್ಲಿ ಅರೈವಲ್ ವೀಸಾ, ಪೇಪರ್ ವೀಸಾ ಮತ್ತು ಪಾಸ್‌ಪೋರ್ಟ್ ಅನ್ನೇ ವೀಸಾ ರೀತಿ ಬಳಸುವ ವ್ಯವಸ್ಥೆಯೂ ಇದೆ' ಎಂದರು.

### ಇದೇ ಮೊದಲಲ್ಲ

ಚೀನಾದ ಈ ವರ್ತನೆ ಇದೇ ಮೊದಲನೆಯದಲ್ಲ. ಕಳೆದ ಜುಲೈನಲ್ಲಿ ಅದೇ ದೇಶದ ಚೆಂಗ್ಡುವಿನಲ್ಲಿ ನಡೆದ ವಿಶ್ವ ಯುನಿವರ್ಸಿಟಿ ಕ್ರೀಡಾಕೂಟದಲ್ಲಿ ಭಾಗವಹಿಸಲು ತೆರಳಬೇಕಿದ್ದ ಅರುಣಾಚಲ ಪ್ರದೇಶದ ಮೂವರು ವುಶುಪಟುಗಳಿಗೆ ಚೀನಾ 'ಸ್ಟೇಪಲ್ಡ್ ವೀಸಾ' ನೀಡಿತ್ತು. ಇದಕ್ಕೆ ಪ್ರತಿಭಟನೆ ರೂಪದಲ್ಲಿ ಭಾರತ ಉಳಿದ ವುಶು ಸ್ಪರ್ಧಿಗಳನ್ನು ಹಿಂದಕ್ಕೆ ಕರೆಸಿಕೊಂಡಿತ್ತು.

### ರಿಜಿಜು ಖಂಡನೆ

ವುಶು ಪಟುಗಳಿಗೆ ವೀಸಾ ನಿರಾಕರಿಸಿ ರುವ ಚೀನಾದ ಕ್ರಮವನ್ನು ಕೇಂದ್ರ ಸಚಿವ ಕಿರಣ್ ರಿಜಿಜು ತೀವ್ರವಾಗಿ ಖಂಡಿಸಿದ್ದಾರೆ. 'ಈಶಾನ್ಯ ಭಾರತದ ಅರುಣಾಚಲಪ್ರದೇಶ ವಿವಾದಿತ ಪ್ರದೇಶವಲ್ಲ. ಅದು ಭಾರತದ ಅವಿಭಾಜ್ಯ ಅಂಗ. ಚೀನಾದ ವಾದವನ್ನು ಅರುಣಾಚಲ ಪ್ರದೇಶ ಉಗ್ರವಾಗಿ ವಿರೋಧಿ ಸುತ್ತದೆ' ಎಂದು ಅರುಣಾಚಲ ಪ್ರದೇಶದ ಸಂಸದ ಕಿರಣ್ ರಿಜಿಜು ಹೇಳಿದ್ದಾರೆ.

## ಸಂಪರ್ಕಕ್ಕೆ ಸಿಗದ ಮೇಪುಂಗ್ ಲಮ್ಗು

**ನವದೆಹಲಿ (ಪಿಟಿಐ):** ವೀಸಾ ನಿರಾಕರಣೆಗೆ ಒಳಗಾದ ವುಶು ಮಹಿಳಾ ಸ್ಪರ್ಧಿ ಮೇಪುಂಗ್ ಲಮ್ಗು ಶುಕ್ರವಾರ ನಾಪತ್ತೆಯಾಗಿದ್ದು ಅವರು ಯಾರ ಸಂಪರ್ಕಕ್ಕೂ ಸಿಗುತ್ತಿಲ್ಲ. ಅರುಣಾಚಲ ಪ್ರದೇಶದಲ್ಲಿರುವ ಅವರ ಕುಟುಂಬ ಸದಸ್ಯರು ಆತಂಕಕ್ಕೆ ಒಳಗಾಗಿದ್ದಾರೆ.

ಹಾಂಗ್‌ಝೌ ಏಷ್ಯನ್ ಗೇಮ್ಸ್‌ಗೆ ಅರುಣಾಚಲ ಪ್ರದೇಶದ ಮೂವರು ಸ್ಪರ್ಧಿಗಳಿಗೆ ಚೀನಾ ವೀಸಾ ನಿರಾಕರಿಸಿದ್ದು ಅವರಲ್ಲಿ 20 ವರ್ಷದ ಲಮ್ಗು ಒಬ್ಬರು. ಗುರುವಾರ ವೀಸಾ ಸುದ್ದಿ ಗೊತ್ತಾಗುತ್ತಿದ್ದಂತೆ, ಅವರಿಗೆ ಸೋದರ ಗಾಂಧಿ ಲಮ್ಗು ಕರೆ ಮಾಡಿದ್ದಾಗ ಅವರು ಒಂದೇ ಸಮನೆ ಅಳುತ್ತಿದ್ದರು. 'ಅವರು ನಮ್ಮ ಕರೆಗಳನ್ನು ತೆಗೆದುಕೊಳ್ಳುತ್ತಿಲ್ಲ. ಈಗ ಸ್ವಿಚ್ಡ್ ಆಫ್ ಸಂದೇಶ ಬರುತ್ತಿದೆ. ನಮಗೆ ತುಂಬಾ ಚಿಂತೆಯಾಗಿದೆ. ಆತುರದ ಕ್ರಮಕ್ಕೆ ಮುಂದಾಗಲಿಕ್ಕಿಲ್ಲ ಎಂಬ ಭರವಸೆಯಲ್ಲಿದ್ದೇವೆ' ಎಂದು ಇಟಾನಗರದಲ್ಲಿ ವೈದ್ಯರಾಗಿರುವ ಗಾಂಧಿ ಪಿಟಿಐಗೆ ತಿಳಿಸಿದರು.

ಮೇಪುಂಗ್ ಪೋಷಕರು ಇಟಾನಗರದಿಂದ ದೂರದ ಸೆಪ್ಪಾದಲ್ಲಿ ನೆಲೆಸಿದ್ದಾರೆ. ಅಲ್ಲಿ ದೂರವಾಣಿ ಸೌಲಭ್ಯವೂ ಸರಿಯಾಗಿಲ್ಲ. ಅವರು ಕಂಗಾಲಾಗುತ್ತಾರೆ ಎನ್ನುವ ಕಾರಣ ಅವರಿಗೆ ವಿಷಯ ತಿಳಿಸಿಲ್ಲ ಎಂದು ಗಾಂಧಿ ಹೇಳಿದರು.

ಆದೀಶ್ವರ್ ®
ಎಲೆಕ್ಟ್ರೋ ವರ್ಲ್ಡ್
gadget for every budget!
COUNT
BIG SCREEN
EXPERIENCE THE WORLD CUP MATCHES ON
BIGGER SCREENS
BRING HOME
Haier UHD/4K
43
SPECIAL PRICE ₹30,990/-
LG Life's Good UHD/4K
43
SPECIAL PRICE ₹35,990/-
SONY UHD/4K
55
EMI ₹2,999/- ONWARDS
INSTANT CASH BACK UPTO ₹20,000/-
32 HD LED TV
32
SPECIAL PRICE ₹8,990/- ONWARDS
BUMPER PRIZE
1 Kg GOLD
Worth ₹ 51 Lakhs
1 WINNER
1st PRIZE
10 CARS
Maruthi Espresso Car
Worth ₹4.25 LAKHS
10 WINNERS
2nd PRIZE
100 BIKES
Honda Bike
Worth ₹75,000
100 WINNERS
LG Life's Good
FROST FREE REFRIGERATORS
260 Ltr.
GET INSTANT CASH BACK ₹2,500/- ON CC & DC
EMI ₹1,873/- ONWARDS
THE BEST OFFERS FROM THE BEST
Haier BOTTOM MOUNTED REFRIGERATOR
237 Ltr.
GET INSTANT CASH BACK ₹2,000/- ON CC & DC
SPECIAL PRICE ₹27,990/-
Whirlpool CBU REFRIGERATOR
340 Ltr.
GET INSTANT CASH BACK ₹3,500/- ON CC & DC
SPECIAL PRICE ₹32,990/-
LG Life's Good Haier SIDE BY SIDE REFRIGERATOR
GET INSTANT CASH BACK ₹12,000/- ON CC & DC
EMI ₹3,490/- ONWARDS
ANNIVERSARY SPECIAL DEALS ON WIDE RANGE OF KITCHEN APPLIANCES
FEMME MIXER GRINDER (3 JAR)
Pigeon
5 YEAR WARRANTY ON MOTOR
52% DISCOUNT
MRP ₹5,795/-
SPECIAL PRICE ₹2,799/-
EUREKA FORBES AO Smith HAVELLS LG pureit BRITA
RO WATER PURIFIER
ZERO DOWN PAYMENT
10% CASH BACK
SPECIAL PRICE ₹13,990/- ONWARDS
Butterfly Good for a lifetime
FOOD PROCESSOR
INDUCTION COOKTOP
FREE +
KETTLE
SPECIAL PRICE ₹11,490/-
WORTH ₹5,048/-
Butterfly FABER Preethi Pigeon
GLASS TOP GAS STOVE
2 BURNER ₹1,790/-
3 BURNER ₹3,890/-
4 BURNER ₹4,290/-
Haier AO Smith HAVELLS V-GUARD
WATER HEATER
FREE PIPE & INSTALLATION
3 Liters ₹3,490/-
15 Liters ₹7,790/-
25 Liters ₹8,790/-
ಬೆಂಗಳೂರು
LG SHOPPE
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

# ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್®

*gadget for every budget!*

DOWN BEGINS

# THE STADIUM

## BIG DEALS BIGGER SAVINGS

## BIG OFFERS

LG Life's Good UHD/4K 55 — SPECIAL PRICE ₹51,990/-

Haier UHD/4K 55 — SPECIAL PRICE ₹41,990/-

BPL Happy Little Things UHD/4K 43 — SPECIAL PRICE ₹28,990/-

ON CREDIT & DEBIT CARD EMI — LED TV, REFRIGERATOR, WASHING MACHINE, & AIR-CONDITIONER

Smart TV 32 — SPECIAL PRICE ₹10,490/-

3rd PRIZE — 1,000 LED TV'S — 40" LED TV — Worth ₹29,990 — 1,000 WINNERS

4th PRIZE — 10,000 GIFTS — Surprize Gifts — Worth ₹999 — 10,000 WINNERS

ON EVERY PURCHASE OF ₹3,500/- GET LUCKY DRAW COUPON & CHANCE TO WIN 5.68 CRORE WORTH PRIZES

LG Life's Good TOP LOAD WASHING MACHINE — 7.5 Kg. — GET INSTANT CASH BACK ₹1,500/- ON CC & DC — EMI ₹1,799/- ONWARDS

## APPLIANCES BRAND

Haier FRONT LOAD WASHING MACHINE — 9 Kg. — GET INSTANT CASH BACK ₹4,500/- ON CC & DC — SPECIAL PRICE ₹36,990/-

LG Life's Good FRONT LOAD WASHING MACHINE — 8 Kg. — FREE ARIEL MATIC LIQUID — GET INSTANT CASH BACK ₹4,500/- ON CC & DC — SPECIAL PRICE ₹35,990/-

Whirlpool CORPORATION FRONT LOAD WASHING MACHINE — 7 Kg. — FREE VIP SALSA STROLLY WORTH ₹8,990/- — GET INSTANT CASH BACK ₹2,000/- ON CC & DC — SPECIAL PRICE ₹30,990/-

## TRIPLE DHAMAKA | Buy Any Smart Phone Get BT NECK BAND + PACK OF SMILE + COUPON

iPhone 15 — NOW AVAILABLE

OnePlus NORD CE LITE @ ₹19,999/-* UNDER EXCHANGE + TRIPLE Offer

mi NOTE 12 5G @ ₹10,999/-* UNDER EXCHANGE + TRIPLE Offer

vivo Y100 5G @ ₹21,999/-* UNDER EXCHANGE + TRIPLE Offer

SAMSUNG A34 5G @ ₹27,999/-* UNDER EXCHANGE + TRIPLE Offer

oppo RENO 10 5G @ ₹29,999/-* UNDER EXCHANGE + TRIPLE Offer

ಚನ್ನಪಟ್ಟಣ — PH : 9036593446 / 9036593447
ಶಿರಸಿ — PH : 9591997260, 9731306569
ಕೋಲಾರ — 9731306635/9731306574, 08152-467397
ಬೆಳಗಾವಿ — 0831 4215241 / 42, 9731306717, 9731306713
ಬಳ್ಳಾರಿ — Ph : 08392-242330 / 337, 9731306742 / 9731331684
ಚಿತ್ರದುರ್ಗ — 08194-224224, 9686446883
ದಾವಣಗೆರೆ — 08192-233626/27, 9731306633 / 6712
ಶಿವಮೊಗ್ಗ — PH : 08182-402100 / 9731306698
ತಿಪಟೂರು — Ph : 08134-250104/304, 9686680758 / 9731306552
ತುಮಕೂರು — Ph : 0816-4021031, 9731306549 / 9591997270
ಕುಣಿಗಲ್ — 08132 - 221901 / 221902, 97313 06663
ಯಾದಗಿರಿ — Ph : 08173/251779/759, 8861002260
ಮಂಡ್ಯ — 08232406100/08232406200, 9513599861 / 7349609274
ಗೋಣಿಕೊಪ್ಪ — 7702770314/7702770353
ಕೊಪ್ಪಳ — 08539 221931/32, 9731306645
ಬೀದರ್ — 08482-226800/01, 9513499863
ಕಲಬುರ್ಗಿ — Ph 08472-227556, 9108023816
ಕೆ.ಆರ್. ನಗರ — 08223295855/66 9731306715
ಚನ್ನರಾಯಪಟ್ಟಣ — 08176253312 / 295256, 9513499855
ವಿರಾಜಪೇಟೆ — 9963998352, 08274-295542 /255542
ವಿಜಯಪುರ — 9353907691 / 9606865996
ಸಿಂಧನೂರ್ — 08535-222254, 9731306673 / 9731306672
ಕುಶಾಲನಗರ — 9591997262/9591997263
ಚಿಕ್ಕಮಗಳೂರು — Ph : 08262 - 239944 / 45, 9963998358, 9963998365
ಶಹಾಪೂರ — 9513499858, 08479-240565,244565
ತೊಕ್ಕೊಟ್ಟು — 0824-2956565, 9731306621
ಗೋಕಾಕ್ — Ph 08332-295053 / 9731306721
ಮೈಸೂರು 5 ಸ್ಟೋರ್ಸ್
ಕುವೆಂಪುನಗರ — ಅಕ್ಷಯ ಭಂಡಾರ — Ph : 0821-2343705/6, 9731306587
ಹಿನ್‌ಕಲ್ — ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ — Ph. 0821-4852733 / 4851773, 8861007297
ಉದಯಗಿರಿ — ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ — Ph : 0821-2457860/50, 8861007304/9731306653
ಜೆ.ಪಿ ನಗರ — 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ — ಟೀಚರ್ಸ್ ಲೇಔಟ್, (ಕಾವೇರಿ ಸರ್ಕಲ್) — 8861002262/8861002263

Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.

HELPLINE 080 - 408 33 999 | Shop Online @ www.adishwarestore.com

STREAMLINE

ಕ್ರಿಕೆಟ್: ಶಮಿಗೆ 5 ವಿಕೆಟ್; ಗಿಲ್–ಋತುರಾಜ್ ಶತಕದ ಜೊತೆಯಾಟ; ಆಸ್ಟ್ರೇಲಿಯಾಗೆ ನಿರಾಶೆ

# ರಾಹುಲ್ ಬಳಗದ ಶುಭಾರಂಭ

ಮೊಹಾಲಿ (ಪಿಟಿಐ): ಐದು ವಿಕೆಟ್‌ಗಳ ಗೊಂಚಲು ಗಳಿಸಿದ ಮೊಹಮ್ಮದ್ ಶಮಿ ಸಾಧನೆಯು ವ್ಯರ್ಥವಾಗದಂತೆ ಭಾರತದ ಬ್ಯಾಟರ್‌ಗಳು ನೋಡಿಕೊಂಡರು.

ಅರ್ಧಶತಕಗಳ ಮೂಲಕ ಋತುರಾಜ್ ಗಾಯಕವಾಡ ಹಾಗೂ ಶುಭಮನ್ ಗಿಲ್ ಗಟ್ಟಿ ಅಡಿಪಾಯ ಹಾಕಿದರು. ಅದರ ಮೇಲೆ ನಾಯಕ ಕೆ.ಎಲ್. ರಾಹುಲ್ ಮತ್ತು ಅಂತೂ ಇಂತೂ ಲಯ ಕಂಡುಕೊಂಡ ಸೂರ್ಯಕುಮಾರ್ ಯಾದವ್ ಗೆಲುವಿನ ಸೌಧ ಕಟ್ಟಿದರು. ಇದರಿಂದಾಗಿ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಭಾರತ ತಂಡವು 5 ವಿಕೆಟ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಪಂಜಾಬ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಮಿ (51ಕ್ಕೆ5) ಪರಿಣಾಮಕಾರಿ ದಾಳಿಯ ಮುಂದೆ ಆಸ್ಟ್ರೇಲಿಯಾ ತಂಡವು 50 ಓವರ್‌ಗಳಲ್ಲಿ 276 ರನ್ ಗಳಿಸಿತು. ಆತಿಥೇಯ ತಂಡವು 48.4 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 281 ರನ್ ಗಳಿಸಿ ಗೆದ್ದಿತು.

ಶಮಿ ಪ್ರವಾಸಿ ಬಳಗದ ಪ್ರಮುಖ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ದೊಡ್ಡದಾಗಿ ಬೆಳೆಯಬಹುದಾಗಿದ್ದ ಜೊತೆಯಾಟಗಳನ್ನು ಮುರಿದರು. ಇದರಿಂದಾಗಿ ಪ್ಯಾಟ್ ಕಮಿನ್ಸ್ ಬಳಗಕ್ಕೆ 300 ರನ್‌ಗಳಿಗಿಂತ ಹೆಚ್ಚಿನ ಮೊತ್ತ ಪೇರಿಸಲು ಸಾಧ್ಯವಾಗಲಿಲ್ಲ.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಋತುರಾಜ್ (71; 77ಎ) ಮತ್ತು ಶುಭಮನ್ (74; 63ಎ) ಉತ್ತಮ ಅಡಿಪಾಯ ಹಾಕಿದರು. ಮೊದಲ ವಿಕೆಟ್‌ಗೆ142 ರನ್ ಪೇರಿಸಿದರು. ಏಷ್ಯಾ ಕಪ್ ಟೂರ್ನಿಯಲ್ಲಿ ಉತ್ತಮವಾಗಿ ಆಡಿದ್ದ ಗಿಲ್ ಇಲ್ಲಿಯೂ ತಮ್ಮ ಲಯ ಮುಂದುವರಿಸಿದರು. ಏಷ್ಯನ್ ಗೇಮ್ಸ್‌ನಲ್ಲಿ ತಂಡವನ್ನು ಮುನ್ನಡೆಸಲಿರುವ ಋತುರಾಜ್ ಕೂಡ ಮಿಂಚಿದರು.

ಮೊಹಮ್ಮದ್ ಶಮಿಯನ್ನು ಅಭಿನಂದಿಸಿದ ಕೆ.ಎಲ್‌. ರಾಹುಲ್ –ಎಎಫ್‌ಪಿ ಚಿತ್ರ

ಆದರೆ ಶ್ರೇಯಸ್ ಅಯ್ಯರ್ ಮತ್ತೊಮ್ಮೆ ವಿಫಲರಾದರು. ಹಂಗಾಮಿ ನಾಯಕ ಕೆ.ಎಲ್. ರಾಹುಲ್ (ಅಜೇಯ 58; 63ಎ) ಮತ್ತು ಸೂರ್ಯಕುಮಾರ್ ಯಾದವ್ (50; 49ಎ) ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು. ಇದರಿಂದಾಗಿ ಜಯದ ಹಾದಿ ಸುಲಭವಾಯಿತು.

**ವಾರ್ನರ್ ಅರ್ಧಶತಕ:** ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ (52; 53ಎ, 4X6, 6X2) ಅರ್ಧಶತಕದ ಕಾಣಿಕೆ ನೀಡಿದರು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳೂ ದಿಟ್ಟ ಆಟವಾಡಿದರೂ ದೊಡ್ಡ ಇನಿಂಗ್ಸ್ ಕಟ್ಟುವಲ್ಲಿ ವಿಫಲರಾದರು.

ಮೊದಲ ಓವರ್‌ನಲ್ಲಿಯೇ ಶಮಿ ಎಸೆತದಲ್ಲಿ ಮಿಚೆಲ್ ಮಾರ್ಷ್ (4 ರನ್) ಔಟಾದರು. ವಾರ್ನರ್ ಮತ್ತು ಸ್ಟೀವನ್ ಸ್ಮಿತ್ (41;60ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 94 ರನ್ ಸೇರಿಸಿದರು. ಈ ಹಂತದಲ್ಲಿ ಜೊತೆಗೂಡಿದ ಮಾರ್ನಸ್ ಲಾಬುಷೇನ್ (39; 49ಎ) ಹಾಗೂ ಕ್ಯಾಮರಾನ್ ಗ್ರೀನ್ (31; 52ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 47 ರನ್ ಸೇರಿಸಿದರು. ಇವರಿಬ್ಬರೂ ರಕ್ಷಣಾತ್ಮಕವಾಗಿ ಆಡಿದ್ದರಿಂದ ರನ್ ಗಳಿಕೆ ವೇಗ ಕಡಿಮೆಯಾಗಿತ್ತು.

ಇವರಿಬ್ಬರೂ ಔಟಾದ ನಂತರ ಕ್ರೀಸ್‌ಗೆ ಬಂದ ಜೋಶ್ ಇಂಗ್ಲಿಸ್ ಮತ್ತು ಮಾರ್ಕಸ್ ಸ್ಟೊಯಿನಿಸ್ ಬೀಸಾಟವಾಡಿದರು. ಕೊನೆ ಹಂತದಲ್ಲಿ ಪ್ಯಾಟ್ ಕಮಿನ್ಸ್ ಕೂಡ 9 ಎಸೆತಗಳಲ್ಲಿ 21 ರನ್ ಗಳಿಸಿದರು.

## ಸ್ಕೋರ್ ಕಾರ್ಡ್

**ಆಸ್ಟ್ರೇಲಿಯಾ: 276 (50 ಓವರ್)**
ಮಾರ್ಷ್ ಸಿ ಗಿಲ್ ಬಿ ಶಮಿ 4 (4 ಎ., 4X1)
ವಾರ್ನರ್ ಸಿ ಗಿಲ್ ಬಿ ಜಡೇಜ 52 (53 ಎ., 4X6, 6X2)
ಸ್ಮಿತ್ ಬಿ ಶಮಿ 41 (60 ಎ., 4X3, 6X1)
ಲಾಬುಷೇನ್ ಸ್ಟಂಪ್ ರಾಹುಲ್ ಬಿ ಅಶ್ವಿನ್ 39 (49 ಎ., 4X3)
ಗ್ರೀನ್ ರನೌಟ್ (ರಾಹುಲ್/ ಅಯ್ಯರ್/ ಯಾದವ್) 31 (52 ಎ., 4X3)
ಇಂಗ್ಲಿಸ್ ಸಿ ಅಯ್ಯರ್ ಬಿ ಬೂಮ್ರಾ 45 (45 ಎ., 4X3, 6X2)
ಸ್ಟೊಯಿನಿಸ್ ಬಿ ಶಮಿ 29 (21 ಎ., 4X5)
ಶಾರ್ಟ್ ಸಿ ಯಾದವ್ ಬಿ ಶಮಿ 2 (4 ಎ)
ಕಮಿನ್ಸ್ ಔಟಾಗದೆ 21 (9 ಎ., 4X2, 6X1)
ಅಬಾಟ್ ಬಿ ಶಮಿ 2 (2 ಎ)
ಜಂಪಾ ರನೌಟ್ (ಯಾದವ್/ ಜಡೇಜ/ ರಾಹುಲ್) 2 (2 ಎ)
**ಇತರೆ:** 8 (ಬೈ 4, ಲೆಗ್‌ಬೈ 2, ನೋಬಾಲ್ 1, ವೈಡ್ 1)
**ವಿಕೆಟ್ ಪತನ:** 1–4 (ಮಿಚೆಲ್ ಮಾರ್ಷ್; 0.4), 2–98 (ಡೇವಿಡ್ ವಾರ್ನರ್; 18.2), 3–112 (ಸ್ಟೀವ್ ಸ್ಮಿತ್; 21.3), 4–157 (ಮಾರ್ನಸ್ ಲಾಬುಷೇನ್; 32.4), 5–186 (ಕ್ಯಾಮೆರಾನ್ ಗ್ರೀನ್; 39.3), 6–248 (ಮಾರ್ಕಸ್ ಸ್ಟೊಯಿನಿಸ್; 46.4), 7–250 (ಜೋಶ್ ಇಂಗ್ಲಿಸ್; 47.2), 8–254 (ಮ್ಯಾಥ್ಯೂ ಶಾರ್ಟ್; 48.2), 9–256 (ಸೀನ್ ಅಬಾಟ್; 48.4), 10–276 (ಆ್ಯಡಮ್ ಜಂಪಾ; 49.6)
**ಬೌಲಿಂಗ್:** ಮೊಹಮ್ಮದ್ ಶಮಿ 10–1–51–5, ಜಸ್‌ಪ್ರೀತ್ ಬೂಮ್ರಾ 10–2–43–1, ಶಾರ್ದೂಲ್ ಠಾಕೂರ್ 10–0–78–0, ಆರ್.ಅಶ್ವಿನ್ 10–0–47–1, ರವೀಂದ್ರ ಜಡೇಜ 10–0–51–1

**ಭಾರತ: 5ಕ್ಕೆ 281 (48.4 ಓವರ್)**
ಋತುರಾಜ್ ಎಲ್‌ಬಿಡಬ್ಲ್ಯು ಬಿ ಜಂಪಾ 71 (77 ಎ., 4X10)
ಗಿಲ್ ಬಿ ಜಂಪಾ 74 (63 ಎ., 4X6, 6X2)
ಅಯ್ಯರ್ ರನೌಟ್ (ಗ್ರೀನ್/ ಇಂಗ್ಲಿಸ್) 3 (8 ಎ)
ರಾಹುಲ್ ಔಟಾಗದೆ 58 (63 ಎ., 4X4, 6X1)
ಇಶಾನ್ ಸಿ ಇಂಗ್ಲಿಸ್ ಬಿ ಕಮಿನ್ಸ್ 18 (26 ಎ., 4X2)
ಸೂರ್ಯಕುಮಾರ್ ಸಿ ಮಾರ್ಷ್ ಬಿ ಅಬಾಟ್ 50 (49 ಎ., 4X5, 6X1)
ಜಡೇಜ ಔಟಾಗದೆ 3 (6 ಎ)
**ಇತರೆ:** 4 (ಲೆಗ್‌ಬೈ–1, ವೈಡ್–3)
**ವಿಕೆಟ್ ಪತನ:** 1–142 (ಋತುರಾಜ್ ಗಾಯಕವಾಡ; 21.4), 2–148 (ಶ್ರೇಯಸ್ ಅಯ್ಯರ್; 23.4), 3–151 (ಶುಭಮನ್ ಗಿಲ್; 2.3), 4–185 (ಇಶಾನ್ ಕಿಶನ್; 32.3), 5–265 (ಸೂರ್ಯಕುಮಾರ್ ಯಾದವ್; 46.4)
**ಬೌಲಿಂಗ್:** ಪ್ಯಾಟ್ ಕಮಿನ್ಸ್ 10–0–44–1, ಮಾರ್ಕಸ್ ಸ್ಟೊಯಿನಿಸ್ 5–0–40–0, ಸೀನ್ ಅಬಾಟ್ 9.4–1–56–1, ಕ್ಯಾಮೆರಾನ್ ಗ್ರೀನ್ 6–0–44–0, ಮ್ಯಾಥ್ಯೂ ಶಾರ್ಟ್ 8–0–39–0, ಆ್ಯಡಂ ಜಂಪಾ 10–0–57–2

**ಫಲಿತಾಂಶ: ಭಾರತಕ್ಕೆ 5 ವಿಕೆಟ್ ಗೆಲುವು**

## ಕ್ರಿಕೆಟ್: ಮೂರು ಮಾದರಿಗಳಲ್ಲೂ ಭಾರತಕ್ಕೆ ಅಗ್ರಸ್ಥಾನ

ಮೊಹಾಲಿ: ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಜಯಿಸಿದ ಭಾರತ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಏಕದಿನ ಕ್ರಿಕೆಟ್ ರ‍್ಯಾಂಕ್‌ನಲ್ಲಿ ಅಗ್ರಸ್ಥಾನಕ್ಕೇರಿತು.

ಭಾರತ ತಂಡವು ಈಗಾಗಲೇ ಟೆಸ್ಟ್ ಮತ್ತು ಟಿ20 ಮಾದರಿಗಳಲ್ಲಿಯೂ ಅಗ್ರಸ್ಥಾನದಲ್ಲಿದೆ. ಈಗ ಎಲ್ಲ ಮೂರು ವಿಭಾಗಗಳಲ್ಲಿಯೂ ಮೊದಲ ಸ್ಥಾನಕ್ಕೇರಿದ ಸಾಧನೆ ಮಾಡಿದೆ.

ಏಕದಿನ ಮಾದರಿಯಲ್ಲಿ ಭಾರತವು 116 ಅಂಕಗಳನ್ನು ಗಳಿಸಿದೆ. ಇದರೊಂದಿಗೆ ಪಾಕಿಸ್ತಾನ (115) ತಂಡವನ್ನು ಹಿಂದಿಕ್ಕಿದೆ. ಆಸ್ಟ್ರೇಲಿಯಾ (111) ಮೂರನೇ ಸ್ಥಾನದಲ್ಲಿದೆ. ಈಚೆಗೆ ಭಾರತ ತಂಡವು ಏಷ್ಯಾ ಕಪ್ ಕೂಡ ಜಯಿಸಿತ್ತು.

ಶುಕ್ರವಾರ ಪಂದ್ಯದ ನಂತರ ಭಾರತ ತಂಡವು ಅಗ್ರಸ್ಥಾನಕ್ಕೇರಿರುವ ವಿಷಯವನ್ನು ಐಸಿಸಿಯು ತನ್ನ ವೆಬ್‌ಸೈಟ್ ಮತ್ತು ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿ ಪ್ರಕಟಿಸಿತು.

ಆರಂಭಿಕ ಬ್ಯಾಟರ್ ಗಿಲ್ ಅವರು ಏಕದಿನ ಮಾದರಿಯ ಬ್ಯಾಟರ್‌ಗಳ ವಿಭಾಗದಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಬಿಲ್ ಅನುಮೋದನೆ!

## ವಿಶ್ವಕಪ್ ವಿಜೇತರಿಗೆ ₹ 33 ಕೋಟಿ

ದುಬೈ (ಪಿಟಿಐ): ಮುಂಬರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗುವ ತಂಡ ₹ 33 ಕೋಟಿ ನಗದು ಬಹುಮಾನ ತನ್ನದಾಗಿಸಿಕೊಳ್ಳಲಿದೆ. 'ರನ್ನರ್ ಅಪ್' ತಂಡಕ್ಕೆ ₹ 16 ಕೋಟಿ ಲಭಿಸಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ತಿಳಿಸಿದೆ.

ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಭಾರತದಲ್ಲಿ ನಡೆಯಲಿರುವ ಟೂರ್ನಿಯ ಬಹುಮಾನ ಮೊತ್ತ ಹಾಗೂ ಪ್ರೋತ್ಸಾಹಧನದ ವಿವರಗಳನ್ನು ಐಸಿಸಿ ಶುಕ್ರವಾರ ಪ್ರಕಟಿಸಿದೆ. ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸುವ ಎರಡು ತಂಡಗಳಿಗೆ ತಲಾ ₹ 6 ಕೋಟಿ ಲಭಿಸಲಿವೆ.

ನಾಕೌಟ್ ಹಂತ ಪ್ರವೇಶಿಸಲು ವಿಫಲವಾಗುವ ಇತರ ಆರು ತಂಡಗಳು ತಲಾ ₹ 82 ಲಕ್ಷ ಹಾಗೂ ಲೀಗ್ ಹಂತದಲ್ಲಿ ತಂಡಗಳು ಪ್ರತಿಯೊಂದು ಗೆಲುವಿಗೆ ತಲಾ ₹ 33 ಲಕ್ಷ ಪ್ರೋತ್ಸಾಹಧನ ಗಳಿಸಲಿವೆ.

ಐಸಿಸಿಯು ಈ ಬಾರಿಯ ಟೂರ್ನಿಯಲ್ಲಿ ಒಟ್ಟು ₹ 83 ಕೋಟಿ ಮೊತ್ತವನ್ನು ಬಹುಮಾನ ಮತ್ತು ಪ್ರೋತ್ಸಾಹಧನ ರೂಪದಲ್ಲಿ ತಂಡಗಳಿಗೆ ಹಂಚಿಕೆ ಮಾಡಲಿದೆ.

ವಿಶ್ವಕಪ್ ಟೂರ್ನಿ ಅ.5 ರಿಂದ ನ. 19ರ ವರೆಗೆ ನಡೆಯಲಿದೆ. ಆತಿಥೇಯ ಭಾರತ, ಅಫ್ಗಾನಿಸ್ತಾನ, ಆಸ್ಟ್ರೇಲಿಯಾ, ಬಾಂಗ್ಲಾದೇಶ, ಇಂಗ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಶ್ರೀಲಂಕಾ ಮತ್ತು ನೆದರ್ಲೆಂಡ್ಸ್ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ.

## ಫುಟ್‌ಬಾಲ್: ಫೈನಲ್‌ಗೆ ಕರ್ನಾಟಕ

ಬೆಳಗಾವಿ: ಟಿ.ಕರಿಷ್ಮಾ ಲೂಯಿಸ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ 13 ವರ್ಷದ ಒಳಗಿನವರ ಸಬ್ ಜೂನಿಯರ್ ರಾಷ್ಟ್ರೀಯ ಬಾಲಕಿಯರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಎರಡನೇ ಗುಂಪು ಹಂತದ ಪಂದ್ಯದಲ್ಲಿ ಉತ್ತರ ಪ್ರದೇಶ ವಿರುದ್ಧ 4–1 ಗೋಲು ಗಳಿಂದ ಜಯಿಸಿ, ಫೈನಲ್ ಪ್ರವೇಶಿಸಿತು.

4ನೇ ನಿಮಿಷದಲ್ಲೇ ನಾಯಕಿ ಅಂಜಲಿ ಪಟೇಲ್ ಮೊದಲ ಗೋಲು ಗಳಿಸಿದ್ದರಿಂದ ಉತ್ತರ ಪ್ರದೇಶ ಆರಂಭಿಕ ಮುನ್ನಡೆ ಗಳಿಸಿತ್ತು. ಪಂದ್ಯದ ಮೇಲೆ ಬಿಗಿ ಹಿಡಿತ ಸಾಧಿಸಿತ್ತು.

34ನೇ ನಿಮಿಷದಲ್ಲಿ ಟಿ.ಕರಿಷ್ಮಾ ಗೋಲು ಬಾರಿಸಿ, ಕರ್ನಾಟಕ ತಂಡದ ಖಾತೆ ತೆರೆದರು. ನಂತರ ಎರಡೂ ತಂಡಗಳು ಸಮಬಲದ ಪೈಪೋಟಿ ನೀಡಿದ್ದರಿಂದ ಪಂದ್ಯ ಕುತೂಹಲ ಮೂಡಿಸಿತ್ತು.

ಎಚ್.ಯಾಶಿಕಾ (45ನೇ ನಿ), ಕರಿಷ್ಮಾ(52ನೇ ನಿ) ಮತ್ತು ರಿಯಾನಾ ಲಿಜ್ ಜಾಕೋಬ್ (67ನೇ ನಿ) 22 ನಿಮಿಷಗಳ ಅವಧಿಯಲ್ಲೇ 3 ಗೋಲು ಗಳಿಸಿದ್ದರಿಂದ ಪಂದ್ಯ ಕರ್ನಾಟಕದತ್ತ ವಾಲಿತು. ಸತತ ಮೂರನೇ ಪಂದ್ಯದಲ್ಲಿ ಗೆದ್ದು ಬೀಗಿತು.

**ದೆಹಲಿ ಫೈನಲ್‌ಗೆ:** ಮತ್ತೊಂದು ಪಂದ್ಯದಲ್ಲಿ 2–1 ಗೋಲುಗಳಿಂದ ದೆಹಲಿ ತಂಡವು ಒಡಿಶಾ ವಿರುದ್ಧ ಗೆದ್ದು, ಫೈನಲ್ ಪ್ರವೇಶಿಸಿತು. ಸೆ.24ರಂದು ನಡೆಯುವ ಫೈನಲ್ ಪಂದ್ಯದಲ್ಲಿ ಕರ್ನಾಟಕ– ದೆಹಲಿ ತಂಡಗಳು ಸೆಣಸಲಿವೆ.

ಕರ್ನಾಟಕ –ಉತ್ತರ ಪ್ರದೇಶ ಆಟಗಾರ್ತಿಯರ ಪೈಪೋಟಿ

## ಎಚ್‌ಎಎಲ್ ಎಫ್‌ಸಿ ಜಯಭೇರಿ

ಬೆಂಗಳೂರು: ವಿ. ಶ್ರೇಯಸ್ ಅವರ ಆಟದ ಬಲದಿಂದ ಎಚ್‌ಎಎಲ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 2–1ರಿಂದ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಶ್ರೇಯಸ್ (20, 22ನೇ) ಎರಡು ಗೋಲು ಗಳಿಸಿದರೆ, ಚಿಕ್ಕಮಗಳೂರು ತಂಡದ ಪರ ಪ್ರಫುಲ್ ಕುಮಾರ್ (86ನೇ) ಒಂದು ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 4–1ರಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ವಿರುದ್ಧ ಜಯ ಸಾಧಿಸಿತು. ಕೊಡಗು ತಂಡದ ಶ್ಲೋಕ್ ತಿವಾರಿ (36, 90 + 4ನೇ) ಎರಡು ಬಾರಿ ಚೆಂಡನ್ನು ಗುರಿ ಸೇರಿಸಿದರೆ, ರೊಮಾರಿಯೊ ನಜರೆತ್ (48ನೇ), ಅಲೆಕ್ಸ್ ಕೊಂತೌಜಮ್ (68ನೇ) ತಲಾ ಒಂದು ಗೋಲು ಗಳಿಸಿದರು. ಎಎಸ್‌ಸಿ ಪರ ಏಕೈಕ ಗೋಲನ್ನು ದಿಲೋನ್ ಖಾರ್ಕಾ (60ನೇ) ತಂದಿತ್ತರು.

## ಕ್ರಿಕೆಟ್: ಭಾರತಕ್ಕೆ ಮೊದಲ ಎದುರಾಳಿ ಬಾಂಗ್ಲಾದೇಶ

ದುಬೈ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡ, ಮುಂದಿನ ವರ್ಷ ನಡೆಯಲಿರುವ 19 ವರ್ಷದೊಳಗಿನವರ ವಿಶ್ವ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ತನ್ನ ಮೊದಲ ಪಂದ್ಯವನ್ನು ಜ.14 ರಂದು ಬಾಂಗ್ಲಾ ದೇಶ ತಂಡದ ವಿರುದ್ಧ ಆಡಲಿದೆ. ಶ್ರೀಲಂಕಾದಲ್ಲಿ ಜ. 13 ರಿಂದ ಫೆ. 4ರ ವರೆಗೆ ಈ ಟೂರ್ನಿ ನಡೆಯಲಿದೆ.

ಒಟ್ಟು 16 ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿದ್ದು, ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ ಕೊಲಂಬೊದಲ್ಲಿ ಜಿಂಬಾಬ್ವೆ ತಂಡವನ್ನು ಎದುರಿಸಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶುಕ್ರವಾರ ತಿಳಿಸಿದೆ.

ಕಳೆದ ವರ್ಷ ವೆಸ್ಟ್ ಇಂಡೀಸ್‌ನಲ್ಲಿ ನಡೆದ ಟೂರ್ನಿಯಲ್ಲಿ ಸೇರಿದಂತೆ ಭಾರತ ಒಟ್ಟು ಐದು ಬಾರಿ ಚಾಂಪಿಯನ್ ಆಗಿದೆ.

## ಭಾರತದ ತಪ್ಪು ನಕ್ಷೆ ಪ್ರಕಟ: ಕ್ಷಮೆಯಾಚನೆ

ಗ್ರೇಟರ್ ನೋಯ್ಡಾ (ಪಿಟಿಐ): ಭಾರತದಲ್ಲಿ ಇದೇ ಮೊದಲ ಬಾರಿ ನಡೆಯುತ್ತಿರುವ ಮೋಟೊಜಿಪಿ ರೇಸ್‌ಗೆ (ಗ್ರ್ಯಾನ್‌ಪ್ರಿ ಮೋಟರ್‌ಸೈಕಲ್ ರೇಸಿಂಗ್) ಮುನ್ನ ವಿವಾದ ತಲೆದೋರಿದೆ.

ಇಲ್ಲಿನ ಬುದ್ಧ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ಶುಕ್ರವಾರ ನಡೆದ ಅಭ್ಯಾಸದ ಅವಧಿಯ ನೇರ ಪ್ರಸಾರದ ವೇಳೆ ಭಾರತದ ನಕ್ಷೆಯನ್ನು ತಪ್ಪಾಗಿ ತೋರಿಸಲಾಗಿದೆ. ನಕ್ಷೆಯಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಭೂಪ್ರದೇಶ ಇರಲಿಲ್ಲ.

ಈ ತಪ್ಪು ಅರಿವಿಗೆ ಬರುತ್ತಿದ್ದಂತೆಯೇ ಮೋಟೊಜಿಪಿ ಸಂಘಟಕರು ಕ್ಷಮೆಯಾಚಿಸಿದ್ದಾರೆ. 'ಅಭ್ಯಾಸದ ಅವಧಿಯ ನೇರ ಪ್ರಸಾರದ ವೇಳೆ ತೋರಿಸಲಾದ ನಕ್ಷೆಗೆ ಸಂಬಂಧಿಸಿದಂತೆ ಭಾರತದಲ್ಲಿನ ನಮ್ಮ ಅಭಿಮಾನಿಗಳ ಕ್ಷಮೆಯಾಚಿಸುತ್ತೇವೆ. ರೇಸ್‌ಗೆ ಆತಿಥ್ಯ ವಹಿಸಿರುವ ದೇಶಕ್ಕೆ ಬೆಂಬಲ ಮತ್ತು ಮೆಚ್ಚುಗೆ ವ್ಯಕ್ತಪಡಿಸುವುದು ನಮ್ಮ ಉದ್ದೇಶವಾಗಿತ್ತೇ ಹೊರತು ಅನ್ಯ ಉದ್ದೇಶ ಇರಲಿಲ್ಲ' ಎಂದು 'ಎಕ್ಸ್'ನಲ್ಲಿ ಪ್ರಕಟಿಸಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

**ವಿಷಾದನೀಯ:** 'ಭಾರತದ ನಕ್ಷೆಯನ್ನು ತಪ್ಪಾಗಿ ಪ್ರಕಟಿಸಿರುವುದು ಅತ್ಯಂತ ವಿಷಾದನೀಯ. ಮೋಟೊಜಿಪಿ ಸಂಘಟಕರು ಈ ಪ್ರಮಾದಕ್ಕೆ ಕ್ಷಮೆಯಾಚಿಸಿರುವುದು ನಮ್ಮ ಗಮನಕ್ಕೆ ಬಂದಿದೆ' ಎಂದು ಫೆಡರೇಷನ್ ಆಫ್ ಮೋಟರ್ ಸ್ಪೋರ್ಟ್ಸ್ ಕ್ಲಬ್ಸ್ ಆಫ್ ಇಂಡಿಯಾ (ಎಫ್‌ಎಂಎಸ್‌ಸಿಐ) ಅಧ್ಯಕ್ಷ ಅಕ್ಬರ್ ಇಬ್ರಾಹಿಂ ಪ್ರತಿಕ್ರಿಯಿಸಿದ್ದಾರೆ.

## ವಿಶ್ವಕಪ್: ಪಾಕ್‌ಗೆ ಬಾಬರ್ ನಾಯಕ

ಲಾಹೋರ್ (ಪಿಟಿಐ): ಮುಂಬರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಬಾಬರ್ ಆಜಂ ನಾಯಕತ್ವದ ಪಾಕಿಸ್ತಾನ ತಂಡವನ್ನು ಪ್ರಕಟಿಸಲಾಗಿದ್ದು, ಭುಜದ ಗಾಯದಿಂದ ಬಳಲುತ್ತಿರುವ ವೇಗದ ಬೌಲರ್ ನಸೀಮ್ ಶಾ ಅಲಭ್ಯರಾಗಿದ್ದಾರೆ.

ನಸೀಂ ಬದಲಿಗೆ ಅನುಭವಿ ಮಧ್ಯಮ ವೇಗಿ ಹಸನ್ ಅಲಿ ಅವರನ್ನು ತಂಡಕ್ಕೆ ಸೇರಿಸಲಾಗಿದೆ ಎಂದು ಪಾಕ್ ತಂಡ ಆಯ್ಕೆ ಸಮಿತಿ ಮುಖ್ಯಸ್ಥ ಇಂಜಮಾಮ್ ಉಲ್ ಹಕ್ ತಿಳಿಸಿದ್ದಾರೆ.

20 ವರ್ಷದ ನಸೀಮ್ ಅವರು ಏಷ್ಯಾಕಪ್ ಟೂರ್ನಿಯಲ್ಲಿ ಭಾರತ ವಿರುದ್ಧದ ಪಂದ್ಯದ ವೇಳೆ ಭುಜದ ಗಾಯಕ್ಕೆ ಒಳಗಾಗಿದ್ದರು. ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದು, ಮೂರ್ನಾಲ್ಕು ತಿಂಗಳಲ್ಲಿ ಚೇತರಿಸಿಕೊಳ್ಳುವ ನಿರೀಕ್ಷೆಯಿದೆ. ವಿಶ್ವಕಪ್ ಬಳಿಕ ಆಸ್ಟ್ರೇಲಿಯಾ ಪ್ರವಾಸಕ್ಕೂ ಲಭ್ಯವಾಗುವುದು ಅನುಮಾನ.

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

# PROPERTY CORNER

ಕ್ಲಾಸಿಫೈಡ್ಸ್

BDA APPROVED

MELROSE

ARK GLOBAL

## Greek-themed Luxury Villa Plots

**Budigere Cross, Nimbekaipura,** 1 km off the Bangalore - Tirupati Highway



Actual Price starts from ₹ ~~6500~~/sqft

Special Offer Price ₹ 6250/per sqft *Selected plots only

RERA no: ACK/KA/RERA/1251/310/PR/220523/007127
Email: dasthagir@taapasiprojects.com / melrosebyarkglobal.com

For more details Contact **76768 44444**

ನಿಮ್ಮ ಕನಸಿನ ನಿವೇಶನವನ್ನು ನಿಮ್ಮದಾಗಿಸಿಕೊಳ್ಳಿ..!!

**Man ENCLAVE**

ಚಿನ್ನಕುರ್ಚಿ
ಸ್ಪಾಟ್ ಬುಕ್ಕಿಂಗ್ ಮಾಡಿದವರಿಗೆ 100 ಗ್ರಾಂ ಬೆಳ್ಳಿಯ ಲಕ್ಷ್ಮಿ ವಿಗ್ರಹ ಉಚಿತ

VP Panchayat Approved

ಪ್ರಾರಂಭಿಕ ಬೆಲೆ ₹ 1499/-

ಕನಕಪುರ ರಸ್ತೆ ಇಂದ ಕೇವಲ 5 kms
ಕುಂಬಳಗೋಡುನಿಂದ ಕೇವಲ 7 kms

ಅಳತೆ 20×30, 20×40, 30×30, 30×40

ಸಂಪರ್ಕಕ್ಕಾಗಿ ಕೇಂದ್ರೀಕೃತವಾಗಿದೆ
ವಿವೇಕಾನಂದ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಇಂದ 5 ನಿಮಿಷ
ಬಿಜಿಎಸ್ ರೆಸಿಡೆನಿಯಲ್ ಶಾಲೆ ಮತ್ತು ಡಿಪಿಎಸ್ ಕೆ ಗೊಲ್ಲಹಳ್ಳಿ ಇಂದ 10 ನಿಮಿಷ
ದಯಾನಂದ ಸಾಗರ್ ಕಾಲೇಜು ಅಫ್ ಇಂಜಿನಿಯರಿಂಗ್ ನಿಂದ 10 ನಿಮಿಷ
ಸಿಲ್ಕ್ ಇನ್ಸಿಟ್ಯೂಟ್ ಮೆಟ್ರೋ ನಿಂದ 15 ನಿಮಿಷ

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ.

ಬ್ಯಾಂಕ್ ಗಳಿಂದ ಸಾಲ ಲಭ್ಯವಿದೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ **63601 92136**

PRM/KA/RERA/1251/472/PR/181122/002177

CREDAI

capstone LIFE

## Ready to move?

3 BHK, 1.37 Cr Onwards*

Judicial Layout, Off Bellary Road.

FLOWING TREE
LUXURY RESIDENCES

www.capstonelife.in

Special Price Offer till 30th Sept 2023

8088 850 850

## SITES FOR SALE

ಮಾಗಡಿ ರೋಡ್, ಕಿತ್ತನಹಳ್ಳಿ ಹತ್ತಿರ

20x30 ರೂ. 7 ಲಕ್ಷಕ್ಕೆ

ನೆಲಮಂಗಲ ಹತ್ತಿರ DC CONVERSION

Rs. 1349/- Per Sqft.

Contact: 8880660099

## COMMERCIAL RENT

HRBR 4th Block
EF 50x80 (4,000 sq.ft)
with 1,000sqft House
(in as is where is condition) - highly suitable for a upmarket outdoor Café/ Restaurant/ Bar cum Restaurant/ mini function Hall/ etc. Very near to Altius Hospital.
**Rent ₹3.0L x Advance ₹45L.**
Brokers kindly excuse.
**Kamal 9845496364**

## Divine Euphoria

AGRICULTURAL
**Farmland FOR Sale**
@ KANAKAPURA
600+ CUSTOMERS
65+ COTTAGES BUILT
•Fully Developed •Swimming Pool •Clubhouse
•Children Play area •Temple •Meditation Center
•Birds & Animals •Adventure Sports
Rs. 14.5 Lakhs
78921 54461-77605 74999
www.divineeuphoria.co.in

## REAL ESTATE SELLING

### Sites

### Anjanapura

**SITE FOR** SALE ANJANAPURA 30X40 N/F 7TH BLOCK NEAR BDA COMPLEX, CENTRALPARK GENUINE BUYERS :9880776950

**SALE BDA** Anjanapura 8th Block 40x60 west Facing Near BDA complex 40 Feet Road. 9620041313/ 9945373839

### Banashankari

**BANASHANKARI 6TH** STAGE- ANJANAPURA BDA- Available/ Wanted 20x30 30x40 40x60 50x80 Sites 'BRINDAVAN ASSOCIATES'- 9980863245

**BANASHANKARI 6TH** Stage 5th Block North East Corner 850 Square feet BDA Action Site For Sale Price, 60 Lakhs Slightly Negotiable. Contact: 9845298419

**BSK-6TH STAGE** 7th Block 50x80 Site For Sale in Good Location Near Proposal BDA Complex (Agents Excuse) Call:9845555666

**40X60, 30X40** Available Sale, Both Sites East Face in Banashankari 6th Stage. Call: MANOJ: 9731410616

**SALE BSK** 6th stage 9th Block 30x40 East Facing 9th Block 65 and 20x30 48 lakh & 4th Block 40x60 west 1.85Cr negotiable 9945373839, 9620041313

**BANASHANKARI 6TH** Stage, 40x60, 60' Road. 20x30,30x40,North Near 100' Road .RV College :9916817739

### Basaweshwaranagar

**BASAVESHWARANAGAR BEAUTIFUL** Location South Facing 40x60 BDA SITE FOR SALE. Contact: 9945079777

### Electronic City

**"ELECTRONIC-CITY 30X40** DC.conversion Gated Community 38sites Sale-total 1.5acres with-Basic Amenities,Bank Loan Available,near VIBGYOR School, 1.75kms from Hosa Road, Metro Station. 9108283841/ 9448670671"

### Girinagar

**SITE FOR** SALE 42X60, West Facing, Girinagar 2nd phase, BBMP A Khata. Contact: 9449239789.

### General

**EAGLETON RESORTS,** BIDADI SITE 80X120, ES CORNER CLOSE GOLF GROUND CLEAR DOCUMENTS RS. 2.70Cr: 9845065084

### Intl Airport Road

**FOR SALE** Near International Airport, Kannur 40x60, BDA, North, opposite Park, Next to upcoming Manyata Tech Park 2, Kanaka Shree Layout, Price. 10,250/- Per. Sqft Contact: 7019661699. Brokers excuse.

### J P Nagar

**JPNAGAR 2NDPHASE,BDA30X50,RS. 3.50CR,40X60,RS.** 21000/- Residential OldHome Nr_WoodiesHotel_3rd Phase60x90,Commercial 80'Road_30000/- 9845600007

**SALE BDA** JP Nagar 8th phase 2nd Block West facing 60 feet 40x60 also 9th phase 3rd Block East 40x60 good location 9945373839/ 9620041313

### Kanakapura Road

**KANAKAPURA ROAD Attached to Narayananagar 1st Block,Bagegowda Layout,30x50,North, S/E, Corner BBMP A'Khata Rs.12600/- 9845704509**

**40X60 EAST** Facing Site Sale, Nitesh Rio (Adjacent to Vakil Garden City). Kanakapura Road. 9901244511.

### Kempegowda Layout

**KEMPEGOWDA LAYOUT,** BDA COMMERCIAL/ RESIDENTIAL SITE FOR SALE 30X40, 40X60, 50X80 CONTACT KUMAR: 9945119449

### Magadi Road

**MAGADI ROAD-** 600+480 sqft Kadabagere Cross, DC Conversion, E-Katha, Shivani Greens. Contact: 9845044335

### Mysore

**MUDA NORTH** East Corner 240 Sqft Semi Commercial Site For Sale Vijaynagar For 18.5 Lakhs Owner: 9606866368

### Nagarabhavi

**"NAGARABHAVI 'D'GROUP** Layout 30x40 West facing Semi-commercial Site 40 feet Road. 9164089633/ 9663226688"

**SITE FOR** SALE NAGARABHAVI D_Group Layout, BDA Khatha 30x50 West Facing. Good Location. 8105688602.

### Tumkur Road

**30X40 SITE** sale (2 side road) Kirloskar layout, Hesaraghata main road, opposite Sapthagiri college. 9620480363.

### Vishweshwariah Layout

**VISHVESWARAIAH LAYOUT** 6th Block BDA 30x30 Corner Site and BHARATHNAGAR 30x50 NF 40ft Road: 9964971895

**VISHWESHWARAIAH LAYOUT** BDA 6th Block 60 feet Road Commercial Site 50x80 East Facing Near 100 feet Road 80% White.Call: 6360050356

**SALE 30X40** VISHVESWARAIAH LAYOUT 4th Block South Facing Owner 80 lakh Negotiable 9945373839, 9620041313

**"VISVESHWARAIAH LAYOUT** 4th Block 50x80 North facing, near upcoming BDA Complex, 40 feet Road. 9731615921/ 9164089633"

**BDA VISHWESHWARAYA** Layout, 6th Block 30x40 WF, 9000/- Sft, Negotiable, 30x40 N/F 7500/- Sft. 9108507222

***30X40 N/F** Site for Sale* VISHVESHWARAIAH LAYOUT 8th Block Rs.10500/Sqt Negotiable, Direct Owner meeting. Call:9591013777

***30X45 NORTH** Facing*, *40x60 E/F* opp 40 feet-Road behind 100 Feet Road Vishveswaraiah Layout. 7411994069

**AVAILABLE BDA** SITE 30X40 Visveswaraiah Layout 2nd Block 7500/- Psft AND 6th Block 8500/- 9844603127

### Yelahanka

**PRIME PLOTS** DC Conversion Ekatha Ready Construction Bank Loan Available Rajankunte-To Hesaraghatta Mainroad: 9036207777 9611146463

### Bangalore North

**50'X50' DC** Converted Panchayat Khata Gated Community W/F Plot Sathanur Bangalore 3300/- PSft Call: 8050492849

### Lalbagh

**PRIME SITE For_Sale in Lalbagh Fort Road next_to Mantri Apartment 35x70 Interested Contact: 9341248702 Chandrashekar.**

### Sadashiva Nagar

**CLEAR TITLE** Site for sale at Sadashivanagar/ Rajmahal VilasExtension 3120 sq ft. Contact. 9844005550

### Vidyaranyapura

**NTI SOCIETY** Vidyaranyapura North East Corner 40X60 Site Top Location For Sale Contact: 9738111222 9341260828

## Flat

### Isro Layout

**3/4 BHK** New Luxurious Flats Sale, Fully Furnished, Italian Marble, Cauvery, Security, Car parking. 70L/90L. 9945224058, 6360501159.

### Kumaraswamy Layout

**3-BHK E/F** A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

### Kanakapura Road

**3-BHK-FLAT SALE** 1575-Sqft N/F Full Interiors 70Lakhs Off KANAKAPURA ROAD KONANKUNTE Near Junior Delhi Public School- 9343722162

### Rajajinagar

**PURVA BLUEBELLE** Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

### Vijayanagar

**3-BHK FLAT:** Area 1400 sqft; Price Rs.8000 per sqft (negotiable) at Saraswathinagar, Vijayanagar, Bengaluru. (Broker excuse)- 9900144793

### West

**3BHK, FLAT** for sale, west, 4th floor, gated community beside MVJ Engg college, Channa Sandra main road, Kadugodi 9393023536.

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

## House

### J P Nagar

**SALE J.P.NAGAR** 2nd Phase 30x40 old House Excellent Location (South) BDA Clear_Titles Contact Reddy: 9880226644

### Koramangala

**CHANCE PROPERTY** 30X40 NORTH 3FLOOR HOUSE ONLY SITE COST, 40X70 CORNER BEAUTIFUL BANGALOW ONLY SITE COST 9845104222 9945118192

**SALE STAND_ALONE** Buildings with Steady Income (20X30, 22X30 40X40) in Koramangala, Prime Locations. 9945188322

### Rajarajeshwari Nagar

**SALE: BRAND** New Ready occupation Independent House- WF- 30'x40' GF 1BHK, Parking, FF, SF & TF. 5BHK Triplex, all amenities, Italian Marble/ All Teak, Main Door NF, Krishna Garden, RR.Nagar. 2.63 Cr. (Negotiable). Ph: 98451-82419

### Vishweshwariah Layout

**SALE BDA** 30x40 Independent, North Facing, (G + 4), 5 BHK, 5000 Sqft, 8th Block, Sir. M.V. Layout. 7760623953.

## Industrial & Factory

### Mysore

**INDUSTRIAL LAND** FOR SALE 4-14 Acres Industrial Converted Land at KIADB Industrial Area, Kadakola, Mysore, 8150912415, 9986239629

## Residential/ Commercial

### Multiple Locations

**BASVESHAWARNAGER 40×60,** 30×50 Rajajinagar 45×90, 40×62 Sadashivanagar 200×120,40×60 Mahalakshmi layout 40×60,30×50 Sale- 8660075308.

## General

### South

**CONTACT FOR** Rental House, Home Sites for Purchase, Residential & Commercial Properties in & around Banashankari 2nd Stage, Jayanagar, Basavangudi. Contact: 9535184028

DH DECCAN HERALD The Power of Good

ಪ್ರಜಾವಾಣಿ

**Classifieds**
More value, more impact

REAL ESTATE

The 1st thing to do when *Selling/Buying your Property*

#1
PLACE YOUR AD HERE

www.dhclassifieds.com BOOK NOW

Book your ad with us now! For more details contact:
+91 9845114560 | +91 9731810277 | +91 9900428036| +91 9901641752 | +91 9886213331 | 080-45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಡಿಎಸ್-ಮ್ಯಾಕ್ಸ್ ಅಪಾರ್ಟ್‌ಮೆಂಟ್‌ಗಳು
www.dsmaxproperties.com

DS MAX ®
ISO 9001:2015 COMPANY

Transform Your Dreams
Into A PERMANENT
# ADDRESS

As your trusted builder, I recognize that a home is far more than mere bricks and concrete, but a place that holds emotions and memories that define our existence. My unwavering attention to detail reflects my commitment to creating a living experience that surpasses your expectations. You can be assured of exceptional quality and an unparalleled lifestyle.

Welcome to the DS-MAX Family
The World of Everlasting Joy.

**Dr K V SATISH**
CHAIRMAN, DS-MAX GROUP.

PRM/KA/RERA/1251/309/PR/060923/006244

**OFF TUMKUR ROAD** NEAR HIMALAYA WELLNESS COMPANY

DS-MAX SKYSANJEEVINI | 2 & 3-BHK | 207 UNITS | BMRDA APPROVED | G + 9 FLOORS | ₹ 32.58 - 55.57 Lakhs*

**8880 465 465**

## 1, 2 & 3-BHK APARTMENTS
**FOR SALE IN VARIOUS LOCATIONS.**

PRM/KA/RERA/1251/308/PR/201201/003733
**ELECTRONIC CITY**
HOSA ROAD JUNCTION
₹ 45.00 - 50.62 Lakhs*
9164 045 000

PRM/KA/RERA/1251/308/PR/290122/004660
**SARJAPURA**
SARJAPUR - ATTIBELE ROAD
₹ 33.88 - 43.57 Lakhs*
9164 122 000

PRM/KA/RERA/1251/309/PR/220223/005748
**THANISANDRA**
5 MINS. FROM KNSIT
₹ 45.00 - 58.41 Lakhs*
8880 461 461

PRM/KA/RERA/1251/310/PR/150223/005721
**MYSORE ROAD**
NR. R R DENTAL COLLEGE
₹ 42.80 - 71.85 Lakhs*
8088 445 445

**HENNUR ROAD**
DODDAGUBBI, NR. DECATHLON
₹ 32.58 - 79.60 Lakhs*
8880 003 003

PRM/KA/RERA/1251/446/PR/210312/004002
**K R PURAM**
NEAR GARDEN CITY UNIV.
₹ 46.55 - 65.85 Lakhs*
8880 438 000

PRM/KA/RERA/1251/310/PR/190328/002502
**KENGERI**
NEAR HOYSALA CIRCLE
₹ 79.04 Lakhs*
8880 759 759

PRM/KA/RERA/1251/446/PR/110722/005059
**BEGUR**
10 MINS. SILK BOARD
₹ 36.72 - 52.29 Lakhs*
8880 472 472

PRM/KA/RERA/1251/308/PR/280222/004739
**CHANDAPURA**
10 MIN. TO NARAYANA HOSP.
₹ 32.02 - 43.40 Lakhs*
8880 013 310

PRM/KA/RERA/1251/309/PR/211209/004576
**YELAHANKA**
ISRO LAYOUT PHASE II
₹ 47.25 - 67.50 Lakhs*
8880 758 758

*T & C Apply

**WE** DELIVER MORE THAN WE **PROMISE.**

**Call : 8880 427 000**

Interiors Modification | Facility Management Services
Rental Assistance | Upgrade Assistance | Resale Assistance

DS-MAX
# A HOME to Live
A HOME TO MAKE A LIVING

- Home Maker Programme
- Flat-Patni Contest
- Refer a Land
- Refer a Home
- Stay Connected Membership Programme
- Channel Partner
- Career Opportunities
- Refer us for FMS (Residential or Commercial complexes)
- Refer us for Home Interiors

Scan the QR Code to know more: VAS Page
**Call : 9164 043 000**

**Disclaimer:** Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations.
Visit : www.rera.karnataka.gov.in

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಇಶಾ ಸೆರೀನ್
ISHA SERENE

ANNCIYA VENTURES

# VILLAS FOR SALE

ADJACENT TO
## ATTIBELE
PLOTS ALSO AVAILABLE

## 3 BHK
## Customised Villa

₹ 72 LAKHS

SCAN TO REACH
SCAN FOR VIDEO

90% BANK LOAN

Including 1200 Sq. Ft. Land Area
STRR & RERA Approved
Possession within 10 months

PRM/KA/RERA/1251/308/PR/091122/005431

BOOK NOW
87 22 77 77 88 | 90 19 89 55 89

## REAL ESTATE SELLING

### Agricultural Land

#### Ramanagar

**AGRICULTURAL LAND** Sale near Ramanagar 3.5km from by-pass (0.5Km Mudroad)3Acres with Mango Trees, 60lakhs P.Acer Contact-9900115519

### Commercial Building

#### Malleshwaram

**FULLY FURNISHED** 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call: 9663001940/ 9845358544.

#### Mysore Road

**MYSORE ROAD** Cross Near Chamrajpet Anantharamaiah Compound G +3 (Built-up area 5600 sqft) Commercial New Building with lift available for Sale. Contact: 9845173914.

### Commercial Land

#### Rajajinagar

**"RAJAJINAGAR PRIME-COMMERCIAL** Site 45x85, Dr.Rajkumar Road East Ideal for Hotels,Lodging, Showrooms 10crore Genuine buyers Call: 9845286505"

### Commerical

#### Basaveshwaranagar

**COMMERCIAL NORTH** East Corner, Fully Developed Area 2230 Sft, Near Pushpanjali Theater, Shivanagar Bangalore: 9343782958

#### Gandhi Bazar

**SALE- TENANTED** COMMERCIAL BUILDING @ Prime Location- Gandhi Bazar. 3600 Sqft. 12.8Crores. 7411255535 brokers excuse

#### J C Road

✓ **SALE: PRIME** Commercial Site JC Road 45'x37' Clear Title. A Khata, Rs 18800/- for Immediate Registration. 9845036855, 9845044179

#### Vijayanagar

**40×60 WEST FACING** Commercial Site with building for Sale in Vijayanagar. Prime Location. Close to Metro Station. Contact: 9019939128. (Brokers Excuse).

### Industrial & Factory

#### Multiple Locations

**WANTED LANDS** for Joint venture and Outrate purchase for layout and apartment projects owners. 8618987855

## REAL ESTATE BUYING

### Farm House/ Land/ Resorts

#### Mysore

**FOR BUYING** & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

### Sites

#### Anjanapura

**WANTED BDA** Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 Phase Immediate Settlement. genuine Sellers Contact: 9902038118, 9449060605

**WANTED BDA** Site any measurement Anjanapura, Banashankari 6th Stage, JP.Nagar 8th/ 9th Phase, Narayana Nagar. Contact: 9845298419

#### Banashankari

**BDASITES WANTED** Arkavathy,Anjanapura, Banashankari 6th-Stage,Kempegowda Vishweswaraiah Any BDA Layout, Contact: 9845062822, 8660751654

#### Multiple Locations

**ANJANAPURA-ARKAVATHI,** Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

#### Tumkur Road

**WANTED SITE** MEI Layout M.S Ramaiah Enclave, Soundarya Layout, Hesaraghatta Main Road. 9880779326. Brokers Excuse.

#### Vishweshwariah Layout

***BUYING/ SELLING*** 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

#### Mysore

**WANTED MYSORE** MUDA Sites Vijayanagara 1st, 2nd, 3rd, 4th Stage Dattagalli any MUDA Katha immediately settlement genuine sellers Contact: 9902038118/ 7338328728

## BUILDERS ESSENTIAL

### Building Contractors

**KANTHI CONSTRUCTION** We Construct your Dream House. Premium Quality, Reasonable Price, Timely Completion: 9880785589/ 9066487178

### Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## RENTAL PROPERTIES

### Accommodation Available

#### Commercial

**FOR RENT COMMERCIAL BUILDING** Property on Magrath Road Near Garuda Mall 3500 Sq. ft Fully Furnished. Independent Unit on 1st Floor. Basement Parking Call - 9242286495

**SEVEN BEDROOMS,** Two Kitchen, Two Halls in Two Floors Two CarParking For Rent in SiddharthaNagar, Mysore Suitable: Residential/ Commercials Like BANK, IT COMPANIES, HOSPITALS IAS ACADEMY, OFFICE etc. Rent Rs. One Lakh: 7975999568

### Industrial And Factory

**HAROHALLI, LAND** measuring 21500 sqft East facing, 1 KM to Harohalli Industrial Estate- Rent Rs. 40000/- negotiable. Lease 35 Lakhs for 3 years. 9845663826

## JOB OPPORTUNITIES

### Teachers/ Professors

**APS EDUCATIONAL TRUST®**
Estd.1935
INVITES APPLICATIONS FROM THE ELIGIBLE CANDIDATES



| | |
|---|---|
| **APS COLLEGE OF ENGINEERING**<br>Anantha Gnana Gangothri Campus, Somanahalli, Kanakapura Road, Bengaluru – 560082.<br>(Recognized by AICTE, New Delhi, Affiliated to VTU, Belgavi, Accredited by NAAC)<br>E-mail ID: apsceoffice@gmail.com<br>Contact - 8548940123, 8548936789, 9448452508 | 1. Professors, Assistant & Associate Professors in the Department of CSE: ISE: ECE: Mathematics: Chemistry<br>Qualification: Ph.D. preferably<br>2. Instructor in the Department of Physics : Chemistry : Mathematics<br>Qualification: B.Sc.<br>3. Attenders<br>Qualification : Secondary Education |
| **APS COLLEGE OF COMMERCE**<br>N.R.Colony, Bangalore-560 019<br>E-mail : apscommercecollege@gmail.com<br>Phone: 080-26611786 Mob:9620839765 | 1. Assistant & Associate Professor in the Department of Commerce – UG and PG Courses. Qualification:Ph.D.<br>2. Assistant Professor – in the Department of English.<br>Qualification: Post Graduation with NET<br>3.Physical Education Director –<br>Qualification: M. PED. |
| **APS TRUST OFFICE**<br>N.R.Colony, Bangalore-560 019<br>E-mail ID : apsedutrust@gmail.com<br>Ph: 080-26602586 Mob:9886446401 | The Administration Officer -<br>Retired KAS Officers / Retired in Educational Institutions. |

The interested candidates may apply on or before 30th September 2023 to the respective Head of Institution.

### Drivers

**WANTED EXPERIENCED** Heavy Driving License holders to Supply Water by Tankers in Bangalore. Contact:- 9448171416

### Part-Time Jobs

**TOP MNC** Company Licensed By Central Govt. Retired/ VRS Persons 2nd Career Opportunity Age above 45 Years 35K to 40K: 7019215243/ 9886641282

### Overseas

**AUSTRALIA PR** with Family. Graduates, Minimum 1 year experience, age under 45 years eligible with Family. 99% success rate. Send CV dir.caanwings@gmail.com or 7701887676 Whatsapp/Call.

## EDUCATIONAL

### General

**ONE SITTING** 10th, 12th, B.A B.Com B.Sc MA M.Com M.Sc B.Ed BBA BCA MBA MCA, Nursing, Pharmacy, Dip. in Vet, B.Tech from Recognized University in India (For Discontinued) Call- 9148147233

## BUSINESS

### Business Offers

#### Machinery & Tools

**USED MACHINES FOR SALE**

Factory Printer Useful For Offset & Web Offset Printing, 2015 -MODEL RICOH PRO C5100S WITH LARGE CAPACITY TRAY- MULTI COLOR 300GSM, upto 13inch x 25inch Duplex upto 250 GSM
info.sketchmatrix@gmail.com
90032 58681
98407 68362

## PERSONAL

### Change of Name

**I, NO.14623272A,** Rank- Hon.Naib.Sub. Name: C AROKIA DOSS S/o. S.Chennappan R/a#798, 26th cross, L.R.Nagar, Vivekanagar Post, Bengaluru- 560047 have changed my minor daughter Name from A. SERIN DASS to A. SHREEN DASS (DOB: 30.9.2005) vide`affidavit dated:13.9.2023 before`Notary L.Gopalakrishna Bangalore

**CHANGE OF NAME**
I, **ADITI**, residing at A-302, Goyalco Orchid Lakeview, Bellandur, Bangalore, have changed my name to **ADITI MANCHANDA** vide affidavit dated 22-09-2023, before Notary P Nanjunda, Bangalore. Henceforth I shall be called **ADITI MANCHANDA** only.

**CHANGE OF NAME**
I, **LATHA BALAJI** W/o. Balaji Nagarajan R/a #51, 1st Main, 4th Cross, S Annaiah Reddy Layout, Dodda Banasawadi, Bengaluru-560043 have changed my minor Son's Name from **MITHUN SHREE KRISHNA** to **MITHUN SHREE KRISHNA BALAJI** (DOB: 27.10.2005) vide affidavit dated 22.09.2023 before Notary Uday Kumar K, Bangalore.

**I, PAVITRA** HULLUR resident of No. 42, 11th Main, BTM layout 1st Stage, Bangalore-560029 have changed my name to SYEDA MUSKAAN Vide Affidavit dated 21.09.2023 sworn before advocate and notary C.N. Balasubramanyam, Bangalore

## PUBLIC NOTICE

**PUBLIC NOTICE**
My client Sri.Girish.L and Harish.L are intending to purchase the schedule property from its owner Sri. Shivananjappa.H.B for a valid consideration. If any persons having any claims, right, title, interest, whatsoever over the schedule property may forward their objections to the undersigned in writing, within SEVEN days from the date of this notice. Failing which it will be deemed that there are no claims, right, title or interest by anybody and my clients will proceed with the completion of sale transaction and will get register the absolute sale deed of the schedule property in their names.

**SCHEDULE PROPERTY**
All that piece and parcel of the residential immovable property bearing No.5, BBMP PID No.41-148-05, (old house list No.1 in khatha No.26/2), Avalahalli Village, Uttarahalli Hobli, Bengaluru South Taluk, now coming under the jurisdiction of Bruhat Bengaluru Mahanagara Palike, ward No.158- Deepanjalinagar Ward, Bengaluru, situated at 11th Cross, 50 feet Road, Girinaga III Phase, BSK III Stage, Bengaluru, measuring East to West 61 feet and North to South (45+40)/2 feet, totally measuring 2592.5 square feet, together with residential building measuring 2200 square feet comprising of Ground, First and Second Floors constructed with RCC Roofing, ceramic flooring, jungle wood doors and windows with amenities and bounded on: East by : Road, West by : Property No.3 belongs to Smt.Puttamma, North by: Private Property, South by: Property No.2.
Bangalore
21-09-2023

**V.N.SIMHA** Advocate,
No. 38/15, W.A.T. Street,
Basavanagudi, Bangalore-560 004. Ph: 9845549487

PUBLIC NOTICE
To Place your Classified Ads Contact
9731810277

DH DECCAN HERALD
MATRIMONY ಪ್ರಜಾವಾಣಿ
Classifieds
More value, more impact
www.dhclassifieds.com
BOOK NOW
The Right Life Partner Is Just An Ad Away!
Book your ad with us now!
For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164